ವಿಶ್ವವಾಣಿ

ವಿಶ್ವಾಸವೇ ವಿಶ್ವ

ಒನ್ ಬ್ಯಾಟಲ್ ಆಫ್ಟರ್ ಅನದರ್‌ಗೆ ಆಸ್ಕರ್

98ನೇ ಆಸ್ಕರ್ ಪ್ರಶಸ್ತಿ ಪ್ರಧಾನ ಸಮಾರಂಭ ಸೋಮವಾರ ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ನಡೆಯಿತು. ಒನ್ ಬ್ಯಾಟಲ್ ಆಫ್ಟರ್ ಅನದರ್ ಚಿತ್ರಕ್ಕೆ ಶ್ರೇಷ್ಠ ಸಿನಿಮಾ ಪ್ರಶಸ್ತಿ ಲಭಿಸಿತು. ನಿರ್ದೇಶಕ ಪೌಲ್ ಥಾಮಸ್ ಆ್ಯಂಡರ್ಸನ್‌ಗೆ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ ನೀಡಲಾಗಿದೆ. ಸಿನ್ನರ್ಸ್ ಚಿತ್ರದಲ್ಲಿನ ಅಭಿನಯಕ್ಕಾಗಿ ಮೈಕೆಲ್ ಬಿ. ಜೋರ್ಡಾನ್ ಶ್ರೇಷ್ಠ ನಟ ಪ್ರಶಸ್ತಿ ಪಡೆದಿದ್ದಾರೆ.

ಸೊಂಪಾದ ಪುಟಗಳು

ಭರ್ತಿ ಜತೆ ಖಾಲಿ ಹುದ್ದೆ ಬಗ್ಗೆಯೂ ಗಮನಿಸಿ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಮಕ್ಕಳು ನಮ್ಮ ಕನಸನ್ನು ಪೂರೈಸಲು ಹುಟ್ಟಿಲ್ಲ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಜೀವನ ಅನ್ನೋದು ಒಂದು ಸಿನಿಮಾ ಇದ್ದ ಹಾಗೆ. ನಾವು ಹೀರೋ ಅಂದುಕೊಂಡಿರುತ್ತೇವೆ, ಆದರೆ ಪರಿಸ್ಥಿತಿ ನಮ್ಮನ್ನು ಸೈಡ್ ಆಕ್ಟರ್ ಮಾಡಿಬಿಡುತ್ತದೆ. ಏನೇ ಇರಲಿ ನಟಿಸುವುದನ್ನು ಮಾತ್ರ ಬಿಡಬಾರದು.

ವಕ್ರತುಂಡೋಕ್ತಿ



ಎಲ್ಲಿ ಮೊಬೈಲ್ ತನ್ನಷ್ಟಕ್ಕೆ ವೈ-ಫೈಗೆ ಕನೆಕ್ಟ್ ಆಗುವುದೋ ಆ ನೆಮ್ಮದಿ ತಾಣವನ್ನು ಮನೆ ಎಂದುಕೊಳ್ಳಬಹುದು.

ಇಂದು ದೆಹಲಿಗೆ ಡಿಕೆ

ಬೆಂಗಳೂರು: ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ದೆಹಲಿಗೆ ಪ್ರಯಾಣ ಬೆಳಸಲಿದ್ದಾರೆ. ಮಂಗಳವಾರ ಬೆಳಗ್ಗೆ ಬೆಂಗಳೂರಿನಿಂದ ದೆಹಲಿಗೆ ತೆರಳಲಿರುವ ಅವರು, ಮಧ್ಯಾಹ್ನ 2 ಗಂಟೆಗೆ ರಾಜ್ಯ ನೀರಾವರಿ ವಿವಾದಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡುತ್ತಿರುವ ಕಾನೂನು ತಜ್ಞರೊಂದಿಗೆ ಸಭೆ ನಡೆಸಲಿದ್ದಾರೆ.

ಆರೆಸ್ಸೆಸ್ ನಿರ್ಬಂಧ ಕೋರಿ ಟ್ರಂಪ್ ಸರಕಾರಕ್ಕೆ ವರದಿ

ದೆಹಲಿ: ಭಾರತದ ಬೃಹತ್ ಸಂಘಟನೆ ಆರ್‌ಎಸ್‌ಎಸ್ ಮೇಲೆ ನಿರ್ಬಂಧ ಹೇರಬೇಕೆಂದು ಅಮೆರಿಕದ ಧಾರ್ಮಿಕ ಸ್ವಾತಂತ್ರ್ಯಗಳ ಆಯೋಗದಲ್ಲಿ ವಾರ್ಷಿಕ ವರದಿಯಲ್ಲಿ ತಿಳಿಸಲಾಗಿದೆ. ಇದರ ವಿರುದ್ಧ ಕೇಂದ್ರ ವಿದೇಶಾಂಗ ಸಚಿವಾಲಯ ಕೆಂಡಕಾರಿದೆ. ಆರ್‌ಎಸ್‌ಎಸ್ ಕುರಿತು ಪಕ್ಷಪಾತ ತೋರುವುದರ ಬದಲು, ಆ ದೇಶದಲ್ಲಿ ಹಿಂದೂ ದೇಗುಲಗಳ ಮೇಲಿನ ದಾಳಿ ತಡೆಯಲು ಆದ್ಯತೆ ನೀಡಬೇಕು, ತಪ್ಪು ಮೂಲಗಳಿಂದ ಮಾಹಿತಿ ಪಡೆಯಬಾರದು ಎಂದು ಸಚಿವಾಲಯ ಹೇಳಿದೆ.

ಕಾಳಸಂತೆಯಲ್ಲಿ ಅಕ್ರಮ ತಡೆಗೆ ಕೇಂದ್ರ ಕ್ರಮ, ಗ್ರಾಹಕರಿಗೆ ಪೀಕಲಾಟ
ತೈಲ ಕಂಪನಿ, ಆಧಾರ್ ಫೇಸ್ ಐಡಿ ಆ್ಯಪ್ ಬಳಸಿ ಕೆವೈಸಿ ಮಾಡಿ: ಸೂಚನೆ

ಸಿಲಿಂಡರ್ ಪಡೆಯಲು ಇನ್ನು ಇ-ಕೆವೈಸಿ ಕಡ್ಡಾಯ

ದೆಹಲಿ: ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಜಂಟಿ ದಾಳಿ ನಡೆಸುತ್ತಿರುವುದರಿಂದ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಅನಿಲ ಸಿಲಿಂಡರ್ ಕೊರತೆ ಕಂಡುಬಂದಿದೆ. ಹಲವಾರು ಹೋಟೆಲ್‌ಗಳು ಕಾರ್ಯಾಚರಣೆ ಸ್ಥಗಿತ ಮಾಡಿವೆ. ಇನ್ನು ಕೆಲವೆಡೆ ಕಾಳಸಂತೆಯಲ್ಲಿ ಅಕ್ರಮವಾಗಿ ಸಿಲಿಂಡರ್ ಗುಡ್ಡೆ ಹಾಕಿಕೊಂಡು ಭಾರೀ ದರಕ್ಕೆ ಮಾರಲಾಗುತ್ತಿದೆ. ಇದನ್ನು ತಡೆಯಲು ಕೇಂದ್ರ ಸರಕಾರ ಗ್ರಾಹಕರು ಬಯೋಮೆಟ್ರಿಕ್-ಆಧಾರ್ ಇ-ಕೆವೈಸಿಯನ್ನು ಕಡ್ಡಾಯ ಮಾಡಿದೆ. ಇದನ್ನು ಆಧಾರ್ ಫೇಸ್ ಐಡಿ ಮತ್ತು ತಾವು ಸಿಲಿಂಡರ್ ಪಡೆಯುವ ಕಂಪನಿಗಳ ಮೊಬೈಲ್ ಆ್ಯಪ್ ಬಳಸಿ ಮನೆಯಲ್ಲೇ ಗ್ರಾಹಕರು ಮಾಡಬಹುದು ಎಂದು ಕೇಂದ್ರ ಸರಕಾರ ತಿಳಿಸಿದೆ. ಇದರಿಂದ ಗ್ರಾಹಕರಿಗೆ ಹೊಸ ತಲೆನೋವು ಶುರುವಾಗಿದೆ. → 4

ಹೇಗೆ ಮಾಡಬೇಕು?

- ಇದಕ್ಕೆಂದೇ ಕೇಂದ್ರ ಸರಕಾರ ಒಂದು ಕ್ಯೂಆರ್ ಕೋಡ್ ಬಿಡುಗಡೆ ಮಾಡಿದೆ. ಅದನ್ನು ಸ್ಕ್ಯಾನ್ ಮಾಡಬಹುದು
- https://pmuy.gov.in/e-kyc.html ಈ ವೆಬ್ ಸೈಟ್‌ನಿಂದ ಮಾಹಿತಿ ಪಡೆಯಿರಿ
- ಅನಿಲ ಪೂರೈಕೆ ಕಂಪನಿಗಳಾದ ಐಒಸಿಎಲ್, ಬಿಪಿಸಿಎಲ್ ಅಥವಾ ಎಚ್‌ಪಿಸಿಎಲ್ ಮತ್ತು ಆಧಾರ್ ಫೇಸ್ ಐಡಿ ಮೊಬೈಲ್ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು
- ಯಶಸ್ವಿಯಾಗಿ ವೆರಿಫಿಕೇಶನ್ ಮುಗಿಸಿದ ನಂತರ, ಎಲ್‌ಪಿಜಿ ಖಾತೆಗಳನ್ನು ಅಧಿಕೃತಗೊಳಿಸಲಾಗುತ್ತದೆ. ಆಗ ಸಿಲಿಂಡರ್ ಪೂರೈಕೆ ಸರಾಗವಾಗುತ್ತದೆ

ಎಲ್‌ಪಿಜಿ ಹೊತ್ತ 2 ಹಡಗು ಭಾರತಕ್ಕೆ

ಇರಾನ್‌ನ ಹೊರ್ಮುಜ್ ಜಲಸಂಧಿಯಿಂದ ಎರಡು ದಿನಗಳ ಅವಧಿಯಲ್ಲೇ 92,700 ಟನ್ ಎಲ್‌ಪಿಜಿ ತುಂಬಿಕೊಂಡು 2 ಅನಿಲ ಸಾಗಣೆ ನೌಕೆಗಳಾದ ಶಿವಾಲಿಕ್ ಮತ್ತು ನಂದಾ ದೇವಿ ಭಾರತಕ್ಕೆ ಬಂದು ಸೇರಿವೆ.

ಹೋಟೆಲ್‌ಗಳಿಗೂ ಶೇ.20 ಸಿಲಿಂಡರ್

ರಾಜ್ಯದ ಆಹಾರ ಸಚಿವ ಮುನಿಯಪ್ಪ , ಇನ್ನೂ ಕೆಲವು ದಿನ ಪೂರ್ಣ ಪ್ರಮಾಣದಲ್ಲಿ ಹೋಟೆಲ್‌ಗಳಿಗೆ ಸಿಲಿಂಡರ್ ಪೂರೈಕೆ ಕಷ್ಟ ಎಂದಿದ್ದಾರೆ. ಈ ಮಧ್ಯೆ ಶೇ.20 ಸಿಲಿಂಡರ್ ಪೂರೈಕೆಗೆ ಅನುಮತಿ ಸಿಕ್ಕಿದೆ ಎಂದು ಹೋಟೆಲ್ ಸಂಘ ಹೇಳಿದೆ.

ಬಿಹಾರ, ಒಡಿಶಾ, ಹರಿಯಾಣದಲ್ಲಿ ಕುದುರೆ ವ್ಯಾಪಾರ
ಬಿಹಾರ ಸಿಎಂ ನಿತೀಶ್, ಬಿಜೆಪಿ ಅಧ್ಯಕ್ಷ ನವೀನ್ ರಾಜ್ಯಸಭೆಗೆ
ಎನ್‌ಸಿಪಿ ನಾಯಕ ಶರದ್, ಕೇಂದ್ರ ಸಚಿವ ಅಠಾವಳೆ ಆಯ್ಕೆ

ರಾಜ್ಯಸಭಾ ಚುನಾವಣೆ ಅಡ್ಡಮತದಾನ; ಗದ್ದಲ

ದೆಹಲಿ: 37 ರಾಜ್ಯಸಭಾ ಸ್ಥಾನಗಳಿಗೆ ಸೋಮವಾರ ನಿಗದಿಯಾಗಿದ್ದ ಚುನಾವಣೆಯಲ್ಲಿ 26 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆದರೆ ಉಳಿದ 11 ಅಭ್ಯರ್ಥಿಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ವ್ಯಾಪಕ ಅಡ್ಡ ಮತದಾನ ನಡೆದಿದ್ದು, ಒಡಿಶಾದಲ್ಲಿ ಬಿಜೆಡಿ-ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿಗೆ ಸೋಲಾಗಿದೆ. ಹರಿಯಾಣದಲ್ಲಿ ಮತ ಎಣಿಕೆ ಪ್ರಕ್ರಿಯೆಯನ್ನು ತಡೆ ಹಿಡಿಯಲಾಗಿದೆ.

ಬಿಹಾರ ಸಿಎಂ ನಿತೀಶ್ ಕುಮಾರ್ (ಜೆಡಿಯು), ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಕೇಂದ್ರ ಸಚಿವ ರಾಮನಾಥ್ ಠಾಕೂರ್ (ಜೆಡಿಯು), ಆರ್‌ಎಲ್‌ಎಂ ಅಧ್ಯಕ್ಷ ಉಪೇಂದ್ರ ಕುಶ್ವಾಹಾ ಮತ್ತು ಬಿಜೆಪಿ ಮಾಜಿ ಶಾಸಕ ಶಿವೇಶ್ ಕುಮಾರ್ (ಬಿಜೆಪಿ) ಗೆಲುವು ಸಾಧಿಸಿ ರಾಜ್ಯ ಸಭೆ ಪ್ರವೇಶಿಸಿದ್ದಾರೆ.

ಇದರೊಂದಿಗೆ ರಾಜ್ಯಸಭೆಯಲ್ಲಿ ಎನ್‌ಡಿಎ ಬಲ ಮತ್ತಷ್ಟು ವೃದ್ಧಿಯಾಗಿದೆ. ಕುದುರೆ ವ್ಯಾಪಾರ ತಪ್ಪಿಸಲು ಕರ್ನಾಟಕಕ್ಕೆ ಆಗಮಿಸಿದ ಒಡಿಶಾದ ಎಂಟು ಮಂದಿ ಕಾಂಗ್ರೆಸ್ ಶಾಸಕರು ಪಕ್ಷದ ಬೆಂಬಲಿತ ಅಭ್ಯರ್ಥಿಗೆ ಮತದಾನ ಮಾಡಿದರೂ, ಮೂವರು ಶಾಸಕರು ಬಿಜೆಪಿ ಬೆಂಬಲಿತ ಬಿಜೆಪಿ ಬೆಂಬಲಿತ ಉದ್ಯಮಿ ದಿಲೀಪ್ ರಾಯ್ ಪರ ಮತ ಚಲಾಯಿಸಿದರು. → 4

ಒಡಿಶಾದಲ್ಲಿ ಅಡ್ಡಡ್ಡ ಮತದಾನ: ಬಿಜೆಡಿ, ಕಾಂಗ್ರೆಸ್‌ಗೆ ಮುಖಭಂಗ

ಒಡಿಶಾದಲ್ಲಿ ಪ್ರಧಾನ ಪ್ರತಿಪಕ್ಷ ಬಿಜೆಡಿ ಮತ್ತು ಕಾಂಗ್ರೆಸ್ ಪಕ್ಷದ ತೀವ್ರ ಪ್ರಯತ್ನಗಳ ನಡುವೆಯೂ ಬಿಜೆಪಿ ಬೆಂಬಲಿತ ಅಭ್ಯರ್ಥಿ ಪರ ಅಡ್ಡ ಮತದಾನ ನಡೆಯುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಕಾಂಗ್ರೆಸ್‌ನ ಸೋಫಿಯಾ ಫಿರ್ದೌಸ್, ದಾಶರಥಿ ಗಮಾಂಗ್ ಮತ್ತು ರಮೇಶ್ ಚಂದ್ರ ಜೆನಾ ಅವರು ರೇ ಅವರನ್ನು ಬೆಂಬಲಿಸಿ ಮತದಾನ ಮಾಡಿದರು. ಬಿಜೆಡಿ ಶಾಸಕರಲ್ಲಿ ದೇಬಿ ರಂಜನ್ ತ್ರಿಪಾಠಿ, ಸೌವಿಕ್ ಬಿಸ್ವಾಲ್, ಚಕ್ರಮಣಿ ಕನ್ಹರ್, ಸುಬಾಸಿನಿ ಜೆನಾ, ನಬಾ ಕಿಶೋರ್ ಮಲ್ಲಿಕ್ ಮತ್ತು ರಾಮಕಾಂತ್ ಭೋಯ್ ಮತ್ತು ಅಮಾನತುಗೊಂಡ ಇಬ್ಬರು ಶಾಸಕರು ದಿಲೀಪ್ ರಾಯ್ ಪರ ಮತದಾನ ಮಾಡಿದರು.

ಐಸಿಯುನಲ್ಲಿ ಚಿಕಿತ್ಸೆ ನೀಡುತ್ತಿರುವಾಗಲೇ ಕಾಣಿಸಿದ ಬೆಂಕಿ
11 ಮಂದಿಗೆ ಗಾಯ, ತಲಾ 25 ಲಕ್ಷ ರುಪಾಯಿ ಪರಿಹಾರ

ಒಡಿಶಾ ಆಸ್ಪತ್ರೆಯಲ್ಲಿ ಅಗ್ನಿ ದುರಂತ: 10 ಮಂದಿ ಸಾವು

ಭುವನೇಶ್ವರ: ಒಡಿಶಾದ ಕಟಕ್‌ನಲ್ಲಿರುವ ಎಸ್‌ಸಿಬಿ ವೈದ್ಯಕೀಯ ಕಾಲೇಜಿನಲ್ಲಿ ಭಾನುವಾರ ತಡರಾತ್ರಿ ಬೆಂಕಿ ಅವಘಡ ಸಂಭವಿಸಿ, 10 ರೋಗಿಗಳು ಸಾವನ್ನಪ್ಪಿದ್ದಾರೆ. ಘಟನೆ ಇಡೀ ರಾಜ್ಯದಲ್ಲಿ ದಿಗ್ಭ್ರಮೆ ಮೂಡಿಸಿದೆ. ಕನಿಷ್ಠ 11 ಆಸ್ಪತ್ರೆ ಸಿಬ್ಬಂದಿಗೆ ಸುಟ್ಟ ಗಾಯಗಳಾಗಿವೆ. ರೋಗಿಗಳನ್ನು ರಕ್ಷಿಸುವ ಸಂದರ್ಭದಲ್ಲಿ ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ತಿಳಿಸಿದ್ದಾರೆ.

ಕಾಲೇಜು ಮತ್ತು ಐಸಿಯುನಲ್ಲಿ ಮಧ್ಯ ರಾತ್ರಿ 2:30ಕ್ಕೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ಆ ವೇಳೆ ಅಲ್ಲಿ ಗಂಭೀರ ಸ್ಥಿತಿಯಲ್ಲಿರುವ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಎಸ್‌ಸಿಬಿ ಆಸ್ಪತ್ರೆ ಒಡಿಶಾದಲ್ಲಿ ಸರ್ಕಾರಿ ಸ್ವಾಮ್ಯದ ಪ್ರಮುಖ ವೈದ್ಯಕೀಯ ಸೌಲಭ್ಯವಾಗಿದೆ. ಒಡಿಶಾ

ಮುಖ್ಯಮಂತ್ರಿಗಳು ಆರೋಗ್ಯ ಸಚಿವ ಮುಖೇಶ್ ಮಹಾಲಿಂಗ್ ಅವ ರೊಂದಿಗೆ ಆಸ್ಪತ್ರೆಗೆ ಭೇಟಿ ನೀಡಿ ಪರಿಸ್ಥಿತಿ ಯನ್ನು ಪರಿಶೀಲಿಸಿದ್ದಾರೆ. ಐಸಿಯುಗಳು ಮತ್ತು ವಾರ್ಡ್‌ಗಳಿಗೆ ಸ್ಥಳಾಂತರಿಸುವಾಗ ಗಂಭೀರ ಸ್ಥಿತಿಯಲ್ಲಿದ್ದ ಏಳು ರೋಗಿಗಳು ಸಾವನ್ನಪ್ಪಿದರು. ಇನ್ನೂ ಮೂವರು ರೋಗಿ ಗಳು ನಂತರ ಸಾವನ್ನಪ್ಪಿದರು.

ದಡ ಸೇರಿಸು ತಂದೆ ಕಥಾ ಸಂಕಲನಕ್ಕೆ ನುಗಡೋಣಿಗೆ ಪುರಸ್ಕಾರ
ಪೆರ್ನಾಲ್‌ರ ಕೊಂಕಣಿ ಕಾವ್ಯಂ: ರುಪಾಂ ಆನಿ ರೂಪಕಾಂಗೆ ಗೌರವ

ನುಗಡೋಣಿ, ಪೆರ್ನಾಲ್‌ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗರಿಮೆ

ದೆಹಲಿ: ಕನ್ನಡ ಸಾಹಿತ್ಯ ಜಗತ್ತಿಗೆ ಇನ್ನೊಂದು ಗೌರವ ಲಭಿಸಿದೆ. ರಾಜ್ಯದ ಖ್ಯಾತ ಸಾಹಿತಿ ಅಮರೇಶ ನುಗಡೋಣಿ ಅವರ 'ದಡ ಸೇರಿಸು ತಂದೆ' ಕಥಾ ಸಂಕಲನಕ್ಕೆ 2025ನೇ ಸಾಲಿನ ಪ್ರತಿಷ್ಠಿತ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕನ್ನಡದ ಸಣ್ಣ ಕಥಾ ಲೋಕಕ್ಕೆ ಮತ್ತೊಂದು ರಾಷ್ಟ್ರಮಟ್ಟದ ಮನ್ನಣೆ ಸಿಕ್ಕಿದೆ. ರಾಜ್ಯದ ಖ್ಯಾತ ಕೊಂಕಣಿ ಸಾಹಿತಿ ಮತ್ತು ಪತ್ರಕರ್ತ ಹೆನ್ರಿ ಮೆಂಡೋನ್ಸಾ (ಎಚ್.ಎಂ. ಪೆರ್ನಾಲ್) ಅವರ ವಿಮರ್ಶಾ ಕೃತಿ 'ಕೊಂಕಣಿ ಕಾವ್ಯಂ: ರುಪಾಂ ಆನಿ ರೂಪಕಾಂ'ಗೂ ಪ್ರಶಸ್ತಿ ಲಭಿ ಸಿದೆ. ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು 1,00,000 ರು. ನಗದು ಬಹುಮಾನ, ಪ್ರಶಸ್ತಿಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ.

ದಡ ಸೇರಿಸು ತಂದೆ ಅಮರೇಶ ನುಗಡೋಣಿ ಅವರ 6ನೇ ಕಥಾ ಸಂಕಲನವಾ ಗಿದ್ದು, ಇದರಲ್ಲಿ ಒಟ್ಟು ಎಂಟು ಕಥೆಗಳಿವೆ. ಈ ಕೃತಿಯು ಇಂದಿನ ಗ್ರಾಮೀಣ ಭಾರತದ ಜ್ವಲಂತ ಸಮಸ್ಯೆಗಳಿಗೆ ಕನ್ನಡಿ ಹಿಡಿದಿದೆ. ಹಳ್ಳಿಗಳಲ್ಲಿ ನಡೆಯುತ್ತಿರುವ ಮರ್ಯಾದಾ ಹತ್ಯೆಗಳು



ನುಗಡೋಣಿ

ಪೆರ್ನಾಲ್

ಮತ್ತು ಗುಂಪು ಹಿಂಸಾಚಾರದ ಕ್ರೌರ್ಯವನ್ನು ಇಲ್ಲಿ ಅತ್ಯಂತ ನೈಜವಾಗಿ ಚಿತ್ರಿಸಲಾಗಿದೆ. ಬದುಕಿನ ವೈವಿಧ್ಯತೆ ಹಾಗೂ ಸಮಕಾಲೀನ ಸಮಾಜದ ವಿಘಟನೆಗಳನ್ನು ಈ ಸಂಕಲನವು ಓದುಗರ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ರಾಜ್ಯದ ನಾಲ್ಕನೇ ಕೊಂಕಣಿ ಸಾಹಿತಿ ಎಚ್.ಎಂ. ಪೆರ್ನಾಲ್. ಮೂಲತಃ ಉಡುಪಿ ಜಿಲ್ಲೆಯ ಪೆರ್ನಾಲ್ ಗ್ರಾಮದವರಾದ ಇವರು ಮಂಗಳೂರಿನವರು. ಸುಮಾರು 750ಕ್ಕೂ ಹೆಚ್ಚು ಕವನಗಳು, 100ಕ್ಕೂ ಅಧಿಕ ಸಣ್ಣ ಕಥೆಗಳು ಹಾಗೂ 2,000ಕ್ಕಿಂತ ಹೆಚ್ಚು ಲೇಖನ ಬರೆದಿದ್ದಾರೆ.

ಕುತೂಹಲ ಮೂಡಿಸಿದ್ದ ಸಿದ್ದು ಭೋಜನಕೂಟ

ಕೇರಳ ಚುನಾವಣೆಗೆ ಸಜ್ಜಾಗಿ ಸಚಿವರಿಗೆ ಸಿಎಂ ಸೂಚನೆ

ಬೆಂಗಳೂರು: ರಾಜ್ಯ ರಾಜಕೀಯ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭೋಜನ ಕೂಟದಲ್ಲಿ ನೆರೆ ರಾಜ್ಯ ಕೇರಳ ವಿಧಾನಸಭಾ ಚುನಾವಣೆಯೇ ಬಹುಚರ್ಚಿತ ವಿಷಯವಾಗಿತ್ತು ಎಂದು ತಿಳಿದುಬಂದಿದೆ. ಸೋಮವಾರ ನಡೆದ ಔತಣಕೂಟದಲ್ಲಿ, ನೆರೆ ರಾಜ್ಯ ಕೇರಳ ವಿಧಾನಸಭಾ ಚುನಾವಣಾ ದಿನಾಂಕ ಘೋಷಣೆಯಾಗಿದ್ದು, ಈ ರಾಜ್ಯವನ್ನು ಗೆಲ್ಲಬೇಕೆಂಬ ಉತ್ಸಾಹದಲ್ಲಿ ಹೈಕಮಾಂಡ್ ಇದೆ. ಇದಕ್ಕೆ ರಾಜ್ಯ ಕಾಂಗ್ರೆಸ್ ನಾಯಕರು ಸಹಕರಿಸಬೇಕು ಎಂದು ಕೇಳಿಕೊಳ್ಳಲಾಗಿದೆ ಎನ್ನಲಾಗಿದೆ.

ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಕೆ.ಸಿ.ವೇಣುಗೋಪಾಲ್‌ಗೆ ಕೇರಳ ಪ್ರತಿಷ್ಠೆಯ ರಾಜ್ಯವಾಗಿರುವುದರಿಂದ, ಈ ರಾಜ್ಯದ ಜವಾಬ್ದಾರಿ ಕರ್ನಾಟಕದ ನಾಯಕರಿಗೆ ನೀಡಲಾಗಿದೆ. ಆದ್ದರಿಂದ ಡಿನ್ನರ್ ಮೀಟ್‌ನಲ್ಲಿ ಕೇರಳ ವಿಧಾನಸಭಾ ಚುನಾವಣೆಯ ಜವಾಬ್ದಾರಿ, ಸಂಪನ್ಮೂಲ ಕ್ರೋಢೀಕರಣ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

ಇದರೊಂದಿಗೆ ರಾಜ್ಯ ರಾಜಕೀಯ, ಸಂಪುಟ ಪುನಾರಚನೆ, ಒಳ ಮೀಸಲು ಸೇರಿದಂತೆ ವಿವಿಧ ವಿಷಯಗಳು ಪ್ರಸ್ತಾಪಿಸಲಾಗಿದೆ ಎಂದು ಹೇಳಲಾಗಿದೆ. ಆಯ್ದ ಸಚಿವರನ್ನು ಮಾತ್ರ ಡಿನ್ನರ್‌ಗೆ ಮುಖ್ಯಮಂತ್ರಿಗಳು ಕರೆದಿದ್ದರಿಂದ, ಭಾರಿ ಕುತೂಹಲಕ್ಕೆ ಕಾರಣವಾಗಿತ್ತು.

ಅಕ್ರಮ ಹಣ ವರ್ಗಾವಣೆ ಆರೋಪ: ತಪಾಸಣೆ

ಮಂತ್ರಿ ಮೇಲೆ ಇಡಿ ದಾಳಿ

ಬೆಂಗಳೂರು: ನಗರದ ಪ್ರಸಿದ್ಧ ರಿಯಲ್ ಎಸ್ಟೇಟ್ ಸಂಸ್ಥೆಯಾದ ಮಂತ್ರಿ ಡೆವಲಪರ್ಸ್ ಮೇಲೆ ಜಾರಿ ನಿರ್ದೇಶನಾಲಯ ಅಧಿಕಾರಿಗಳು ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ಆರಂಭಿಸಿದ್ದಾರೆ. ಅಕ್ರಮ ಹಣ ವರ್ಗಾವಣೆ ಆರೋಪದ ಹಿನ್ನೆಲೆ ಇ.ಡಿ ಅಧಿಕಾರಿಗಳು ಸಂಸ್ಥೆಯ ಕಚೇರಿ ಹಾಗೂ ಸಂಸ್ಥಾಪಕ ಸುನಿಲ್ ಮಂತ್ರಿ ನಿವಾಸಗಳಲ್ಲಿ ಶೋಧ ನಡೆಸಿದ್ದಾರೆ. 1999ರಲ್ಲಿ ಸ್ಥಾಪನೆಯಾದ ಮಂತ್ರಿ ಡೆವಲಪರ್ಸ್ ಸಂಸ್ಥೆ ಬೆಂಗಳೂರು ಕೇಂದ್ರ ಕಚೇರಿಯೊಂದಿಗೆ ಚೆನ್ನೈ, ಹೈದರಾಬಾದ್ ಮತ್ತು ಪುಣೆ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ವಸತಿ, ವಾಣಿಜ್ಯ, ರಿಟೇಲ್ ಹಾಗೂ ಇತರೆ ಕ್ಷೇತ್ರಗಳಲ್ಲಿ ಹಲವು ಯೋಜನೆಗಳನ್ನು ಸಂಸ್ಥೆ

ಕೈಗೊಂಡಿದೆ. ಇದೀಗ ಬೆಂಗಳೂರಿನ ವಿಠ್ಠಲ ಮಲ್ಯ ರಸ್ತೆಯಲ್ಲಿರುವ ಕಚೇರಿ ಹಾಗೂ ಸಂಸ್ಥಾಪಕರ ಮನೆ ಮೇಲೂ ದಾಳಿ ನಡೆಸಿದೆ.

ಚುನಾವಣೆಗೆ ಮುನ್ನ ಪ.ಬಂಗಾಳ ಮುಖ್ಯ ಕಾರ್ಯದರ್ಶಿ ಔಟ್

ಕೋಲ್ಕತಾ: ಪಶ್ಚಿಮ ಬಂಗಾಳ ಚುನಾವಣೆ

ದಿನಾಂಕ ಘೋಷಣೆಯಾದ ಬೆನ್ನಲ್ಲೇ, ರಾಜ್ಯದ ಆಡಳಿತದಲ್ಲಿ ದಿಢೀರ್ ಬೆಳವಣಿಗೆ ನಡೆದಿದೆ. ರಾಜ್ಯದ ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ ಮತ್ತು ಗೃಹ ಕಾರ್ಯದರ್ಶಿ ಜಗದೀಶ್ ಪ್ರಸಾದ್ ಮೀನಾ ಅವರನ್ನು ಹುದ್ದೆಯಿಂದ ತೆರವುಗೊಳಿಸಲಾಗಿದೆ. ರಾಜ್ಯದಲ್ಲಿ ಮುಕ್ತ ಮತ್ತು ಶಾಂತಿಯುತ ಚುನಾವಣೆಗಳನ್ನು ನಡೆಸಲು, ನಿಷ್ಪಕ್ಷಪಾತವನ್ನು ಎತ್ತಿ ಹಿಡಿಯುವ ಹಿತದೃಷ್ಟಿಯಿಂದ ಆಯೋಗವು ಈ ಕಠಿಣ ಕ್ರಮವನ್ನು ತೆಗೆದುಕೊಂಡಿದೆ.

ಶಾಸಕರ ಪ್ರಶ್ನೆಗೆ ಉತ್ತರಿಸಬೇಕಾದ ಸಚಿವರೇ ಗೈರು, ಕೆರಳಿದ ಯು.ಟಿ ಖಾದರ್
ಪೀಠ ಬಿಟ್ಟು ಹೊರ ನಡೆದ ಸ್ಪೀಕರ್, ಸಿಎಂ ಮನವೊಲಿಕೆ ಬಳಿಕ ಸದನಕ್ಕೆ ವಾಪಸ್

ವಿಧಾನಸಭಾಧ್ಯಕ್ಷರಿಂದಲೇ ಸಭಾತ್ಯಾಗ!

ವಿಶ್ವವಾಣಿ ಸುದ್ದಿಮನೆ, ವಿಧಾನಸಭೆ

ಸಾಮಾನ್ಯವಾಗಿ ವಿಧಾನಸಭೆಯಲ್ಲಿ ಏನೇ ಗದ್ದಲವಾದರೂ ಶಾಂತವಾಗಿರಬೇಕಾದವರು ಸಭಾಧ್ಯಕ್ಷರು. ಸೋಮವಾರ ಸರಕಾರದ ನಡೆ ವಿರುದ್ಧ ಆಕ್ರೋಶ ಹೊರಹಾಕಿ ಸಭಾಧ್ಯಕ್ಷ ಯು.ಟಿ.ಖಾದರ್ ಸದನದಿಂದಲೇ ಹೊರ ನಡೆದ ಅಪರೂಪದ ಘಟನೆಗೆ ವಿಧಾನಸಭೆ ಸಾಕ್ಷಿಯಾಯಿತು.

ಸದನದಲ್ಲಿ ಶಾಸಕರ ಪ್ರಶ್ನೆಗೆ ಉತ್ತರಿಸಲು ಆಸಕ್ತಿ ತೋರದೇ ಸಚಿವರು ಗೈರಾಗುತ್ತಿರುವುದರಿಂದ ಬೇಸತ್ತು ಸಿಟ್ಟಿನಿಂದ ಯು.ಟಿ. ಖಾದರ್ ಪೀಠದಿಂದ ನಿರ್ಗಮಿಸಿದರು. ಪ್ರಶ್ನೋತ್ತರ ಕಲಾಪದ ಬಳಿಕ ಲಿಖಿತರೂಪದ ಉತ್ತರಗಳನ್ನು

ಮನವೊಲಿಸಿ ಕರೆತಂದ ಸಿಎಂ ಸಿದ್ದು

ಬಳಿಕ ಸ್ಪೀಕರ್ ಜತೆ ಸಿಎಂ ಸಿದ್ದರಾಮಯ್ಯ, ಪ್ರತಿಪಕ್ಷ ನಾಯಕ ಆರ್.ಅಶೋಕ, ಸಚಿವರಾದ ಸತೀಶ್ ಜಾರಕಿಹೊಳಿ, ಡಾ. ಜಿ. ಪರಮೇಶ್ವರ್, ಎಚ್.ಕೆ. ಪಾಟೀಲ್ ಸೇರಿದಂತೆ ಹಲವರು ಚರ್ಚೆ ನಡೆಸಿದರು. ಈ ವೇಳೆ, ಸಚಿವರು ಸದನ ಸೂಕ್ತ ರೀತಿಯಲ್ಲಿ ನಡೆಸಲು ನಮ್ಮಿಂದ ಸಂಪೂರ್ಣ ಸಹಕಾರ ನಿಡುವುದಾಗಿ ಭರವಸೆ ನೀಡಿದರು. ಮನವೊಲಿಕೆ ಬಳಿಕ ಮತ್ತೆ ಕಲಾಪವನ್ನು ಸ್ಪೀಕರ್ ಪುನಾರಂಭಿಸಿದರು.

ಸಚಿವ ಜಿ.ಪರಮೇಶ್ವರ ಮಂಡಿಸಿದರು. ಲಿಖಿತ ರೂಪದ 230 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಉತ್ತರ ಮಂಡನೆಯಾಗಿದೆ ಎಂದರು. ಈ ವೇಳೆ ಮಧ್ಯಪ್ರವೇಶ ಮಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ, ಸದನದಲ್ಲಿ ಕೇವಲ ಶೇ.15ರಷ್ಟು ಮಾತ್ರ ಹಾಜರಾಗಿದ್ದಾರೆ. 4ನೇ ಬಾರಿ ಈ ವಿಷಯ ಪ್ರಸ್ತಾಪ ಆಗುತ್ತಿದೆ. ಯಾರೂ ಭಾಗಿ ಆಗುತ್ತಿಲ್ಲ. → 4

ತೈಲ ಕಂಪನಿಗಳ ಸಭೆ ಬಳಿಕ ಮುನಿಯಪ್ಪ ಸ್ಪಷ್ಟನೆ | ಆಸ್ಪತ್ರೆ, ರೈಲ್ವೆ ಕ್ಯಾಂಟಿನ್‌ಗಳಿಗೆ ಶೇ.100 ರಷ್ಟು ಸಿಲಿಂಡರ್

ಹೋಟೆಲ್ ಮಾಲೀಕರಿಗೆ ಸದ್ಯಕ್ಕಿಲ್ಲ ರಿಲೀಫ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಧ್ಯಪ್ರಾಚ್ಯದಿಂದ ಅನಿಲ ಹೊತ್ತು ದೇಶದ ಗಡಿಗೆ ಹಡಗುಗಳು ಆಗಮಿಸಿದ್ದರೂ, ಸದ್ಯಕ್ಕೆ ಹೋಟೆಲ್ ಮಾಲೀಕರಿಗೆ ಪೂರ್ಣ ಪ್ರಮಾಣದಲ್ಲಿ ರಿಲೀಫ್ ಸಿಗುವುದು ಅನುಮಾನ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಆಹಾರ ಸಚಿವ ಮುನಿಯಪ್ಪ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಕೇಂದ್ರ ಸರಕಾರ ಜಾರಿಗೊಳಿಸಿರುವ ಆದೇಶದ ಅನ್ವಯ ರಾಜ್ಯದಲ್ಲಿ ಆದ್ಯತಾ ಕ್ಷೇತ್ರಗಳನ್ನು ಗುರುತಿಸಿ, ಯಾವ ಕ್ಷೇತ್ರಕ್ಕೆ ನಿತ್ಯ ಎಷ್ಟು ವಾಣಿಜ್ಯ ಸಿಲಿಂಡರ್ ನೀಡಬೇಕು ಎನ್ನುವ ಬಗ್ಗೆ ಚರ್ಚೆ ನಡೆಸಲಾಗಿದೆ. ಇದರಲ್ಲಿ ಹೋಟೆಲ್ ಉದ್ಯಮ ಮೂರನೇ ಆದ್ಯತಾ ಕ್ಷೇತ್ರವಾಗಿರುವುದರಿಂದ ಅಗತ್ಯವಿರುವಷ್ಟು ಸಿಲಿಂಡರ್ ಒದಗಿಸಲು ಸಾಧ್ಯವಿಲ್ಲ ಎನ್ನುವ ತೀರ್ಮಾನಕ್ಕೆ ಬರಲಾಗಿದೆ. ಸಭೆಯಲ್ಲಿ ತೈಲ ಕಂಪನಿಗಳು ನೀಡಿದ ಅಂಕಿ-ಅಂಶ ಆಧಾರದಲ್ಲಿ ಹೋಟೆಲ್‌ಗಳಿಗೆ ನಿತ್ಯ ಸಾವಿರ ಸಿಲಿಂಡರ್ ಸಿಗಲಿದೆ. ಅಲ್ಲಿಯ ವರೆಗೆ ಎಲೆಕ್ಟ್ರಿಕ್ ಸ್ಟೌವ್ ಬಳಕೆ ಅನಿವಾರ್ಯ ಎನ್ನುವ ಮಾತುಗಳು ಸ್ವತಃ ಸಚಿವರು ಹೇಳಿದ್ದಾರೆ.

ಸಭೆಯ ಬಳಿಕ ಈ ಬಗ್ಗೆ ಮಾತನಾಡಿದ ಸಚಿವ ಮುನಿಯಪ್ಪ, ಗ್ಯಾಸ್ ಪೂರೈಕೆ ಸಂಬಂಧ ಸುದೀರ್ಘ ಸಭೆಯಾಗಿದೆ. ವಿನಾಕಾರಣ ಆತಂಕಕ್ಕೆ ಒಳಗಾಗಬಾರದು ಎಂದು ಗ್ರಾಹಕರಲ್ಲಿ ಮನವಿ ಮಾಡುತ್ತೇವೆ. ಗ್ಯಾಸ್ ಡಬಲ್ ಬುಕ್ಕಿಂಗ್ ಬೇಡ. ಮಿತವ್ಯಯದಲ್ಲಿ ಬಳಕೆ ಮಾಡಿ. ಹಡಗುಗಳ ಆರಂಭವಾಗಿದೆ. ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆಗಳು, ಏರ್‌ಲೈನ್, ರೈಲ್ವೆ ಕ್ಯಾಂಟಿನ್‌ಗಳಿಗೆ ಶೇ.100ರಷ್ಟು ಸಿಲಿಂಡರ್ ನೀಡಲು ಒಪ್ಪಿಗೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಶೀಘ್ರದಲ್ಲಿಯೇ ಹೋಟೆಲ್‌ಗಳೂ ಅನಿಲ ಪೂರೈಕೆ: ಶೀಘ್ರದಲ್ಲೇ ಹೋಟೆಲ್‌ಗಳಿಗೂ ಅಡುಗೆ ಅನಿಲ ಪೂರೈಕೆ ಮಾಡುತ್ತೇವೆ. ಹಡಗುಗಳ ಮೂಲಕ ಅನಿಲ ಸರಬರಾಜು ಆಗುತ್ತಿದ್ದು, ಮುಂದಿನ ಒಂದೆರಡು ವಾರದಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಬರಲಿದೆ. ರಾಜ್ಯದಲ್ಲಿ ಒಂದು ದಿನಕ್ಕೆ 850 ಮೆಟ್ರಿಕ್ ಟನ್ ಗ್ಯಾಸ್ ಪೂರೈಕೆ ಆಗುತ್ತಿದ್ದು, ಬಳಕೆಯ ಪ್ರಮಾಣ ಅಧಿಕವಾಗಿದೆ. ಈ ಸಂದರ್ಭದಲ್ಲಿ ಮಿತವ್ಯಯವಾಗಿ ಬಳಸಬೇಕು. ರಾಜ್ಯದಲ್ಲಿ ಎಲ್‌ಪಿಜಿ ವಿತರಣೆ ಪ್ರತಿ ರಾಜ್ಯದ ಬಳಕೆ ಆಧಾರದ ಮೇಲೆ ಕೇಂದ್ರದಿಂದ ನಿರ್ಧರಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಆದ್ಯತಾ ನೀತಿ ಪ್ರಕಟ

ಕೇಂದ್ರ ಸರಕಾರ ಬಿಡುಗಡೆಗೊಳಿಸಿದ್ದ ಮಾರ್ಗಸೂಚಿ ಅನ್ವಯ ಕರ್ನಾಟಕ ಸರಕಾರವೂ ಆದ್ಯತಾ ವಿತರಣಾ ನೀತಿಯನ್ನು ಬಹಿರಂಗಪಡಿಸಿದೆ. ಇದರನ್ವಯ ದಿನಕ್ಕೆ ಕರ್ನಾಟಕದಲ್ಲಿ ಸರಾಸರಿ 44 ಸಾವಿರ ವಾಣಿಜ್ಯ ಸಿಲಿಂಡರ್‌ಗಳು ಬಳಕೆಯಾಗುತ್ತಿದ್ದು, ಸದ್ಯ 7,000 ಸಿಲಿಂಡರ್‌ಗಳನ್ನು ನಿಯಂತ್ರಿತ ವಿತರಣೆಗೆ ಮೀಸಲಿಡಲಾಗಿದೆ. ನಿಯಮದ ಪ್ರಕಾರ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿ ವಸತಿ ನಿಲಯಗಳು ಮತ್ತು ಆಸ್ಪತ್ರೆಗಳು ಮೊದಲ ಆದ್ಯತೆಯಲ್ಲಿ ಸಿಲಿಂಡರ್ ಪಡೆಯಲಿದ್ದು, ನಂತರ ಸರಕಾರಿ ಸ್ವಾಮ್ಯದ ಕ್ಯಾಂಟೀನ್‌ಗಳು, ವಿಮಾನ ನಿಲ್ದಾಣ, ರೈಲು ಹಾಗೂ ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳಿಗೆ ವಿತರಣೆ ಮಾಡಲಾಗುತ್ತದೆ. ಹೋಟೆಲ್, ಢಾಬಾ ಮತ್ತು ಕೈಗಾರಿಕಾ ಕ್ಯಾಂಟಿನ್‌ಗಳಿಗೆ ಮೂರನೇ ಆದ್ಯತೆ ನೀಡಲಾಗಿದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ಮಾಹಿತಿ ನೀಡಿದರು.

50 ಸಾವಿರ ಹಫ್ತಾಕ್ಕಾಗಿ ಮಕ್ಕಳ ಕಣ್ಣೆದುರೇ ತಂದೆಯ ಕೊಲೆ

ಬೆಂಗಳೂರು: ಐವತ್ತು ಸಾವಿರ ರುಪಾಯಿ ಹಣಕ್ಕಾಗಿ ಮಕ್ಕಳ ಕಣ್ಣೆದುರೇ ತಂದೆಯನ್ನು ಹೊಡೆದು ಭೀಕರವಾಗಿ ಕೊಲೆ ಮಾಡಿರುವ ಘಟನೆ ಭಾನುವಾರ ತಡರಾತ್ರಿ ವಿಲ್ಸನ್ ಗಾರ್ಡನ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬಡಾ ಮಖಾನ್ ರಸ್ತೆಯಲ್ಲಿ ಈ ಪ್ರಕರಣ ನಡೆದಿದ್ದು, ಮೆಕ್ಯಾನಿಕ್ ಆಗಿದ್ದ ರಶೀದ್ ಪಾಷಾ (45) ಕೊಲೆಗೀಡಾದ ವ್ಯಕ್ತಿ. ಮೂವರು ಕಿಡಿಗೇಡಿಗಳಿಂದ ಕೃತ್ಯ ನಡೆದಿದ್ದು, ಅವರ ಪತ್ತೆ ಕಾರ್ಯ ಮುಂದುವರಿದಿದೆ ಎಂದು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ತಿಳಿಸಿದ್ದಾರೆ. ಅಂಗಡಿಗೆ ಹೊಸ ಮೋಲ್ಡ್ ಹಾಕಿಸಿದ್ದ ರಶೀದ್ ಬಳಿ ಸ್ಥಳೀಯ ಕೆಲ ಕಿಡಿಗೇಡಿಗಳು ಭಾನುವಾರ ಬೆಳಗ್ಗೆ ಬಂದು ಐವತ್ತು ಸಾವಿರ ರುಪಾಯಿ ತಮಗೆ ಕೊಡುವಂತೆ ಪೀಡಿಸಿದ್ದರು. ಆದರೆ ಹಣ ನೀಡಲು ರಶೀದ್ ನಿರಾಕರಿಸಿದಾಗ ಮಾತಿನ ಚಕಮಕಿ ನಡೆದಿದೆ. ಅದೇ ಜಿದ್ದಿನಲ್ಲಿ ರಾತ್ರಿ 8.30ರ ಸುಮಾರಿಗೆ ಮತ್ತೆ ಬಂದ ಮೂವರು ಆರೋಪಿಗಳ ಗ್ಯಾಂಗ್, ರಶೀದ್ ಅವರ ಇಬ್ಬರು ಮಕ್ಕಳ ಮುಂದೆಯೇ ಬ್ಯಾಟ್ ಮತ್ತು ದೊಣ್ಣೆಯಿಂದ ಮನಸೋಯಿಚ್ಛೆ ಹಲ್ಲೆ ನಡೆಸಿದ್ದಾರೆ. ಹೀಗಾಗಿ ತೀವ್ರವಾಗಿ ಗಾಯಗೊಂಡಿದ್ದ ರಶೀದ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ.ಹಕೇ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸ್ಥಳದಲ್ಲಿ ಪರಿಸ್ಥಿತಿ ಉದ್ವಿಗ್ನಗೊಳ್ಳದಂತೆ ಒಂದು ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾಗಿತ್ತು. ನನ್ನ ಅಣ್ಣ ಕಷ್ಟಪಟ್ಟು ದುಡಿಯುತ್ತಿದ್ದ ವ್ಯಕ್ತಿ. ಕೇವಲ ಹಣಕ್ಕಾಗಿ ಇಬ್ಬರು ಮಕ್ಕಳ ಕಣ್ಣೆದುರೇ ಆತನನ್ನು ಹತ್ಯೆಗೈಯಲಾಗಿದೆ. ನಮಗೆ ನ್ಯಾಯ ಬೇಕು. ಎಂದು ಮೃತನ ಸಹೋದರ ನದೀಂ ಪಾಷಾ ತಿಳಿಸಿದ್ದಾರೆ.

IN THE COURT OF THE Ist ADDL. SENIOR CIVIL JUDGE BANGALORE RURAL, AT BANGALORE
G&WC No. 33 of 2026

BETWEEN: MRS. AKANSHA KHANNA
Aged about 36 years, W/o. Sandeep V. R
D/o. Mr. Rajesh Khanna, R/a. No. WJ1902,
Purva Palm Beach Apartments, Kyalasanahalli,
Kothanur, BBMP (North) Bengaluru - 560 077
..PETITIONER

AND: MR. SANDEEP V. R, Aged about 43 years,
S/o Mr. N. Varadarajan, R/a. No. WJ1902,
Purva Palm Beach Apartments, Kyalasanahalli,
Kothanur, BBMP (North), Bengaluru - 560 077.
....RESPONDENT

NOTICE TO RESPONDENT

WHEREAS, the petitioner has filed the petition to be appointed as sole guardian, and for grant of sole and permanent custody of the minor child Master Atharv Sandeep and also to restrain the respondent or his relatives not to take away the minor child from the Jurisdiction of this Honorable Court without permission/orders and also that the respondent or his family members or agents not take custody of the minor child without order from this Honorable Court. Therefore, this notice to you is published directing you to appear before the Court of 1 Addl, Senior Civil Judge, Bangalore **on 28-04-2026 at 11:00 A.M.** If you fail to appear before this Hon'ble Court on that date personally you will be placed exparte and the above case will be disposed of in accordance with law.

Given under my hand and seal of the Court on **16.03.2026**

By the Order of the Court, CHIEF MINISTERIAL OFFICER
Senior Civil Judge Court Bengaluru Rural Dist, Bengaluru

ನಮೂನೆ ಸಂ. ಯುಆರ್‌ಸಿ-2
ಭಾಗ-1ರ ಅಧ್ಯಾಯ 21ರಡಿ ನೋಂದಣಿ ಬಗ್ಗೆ ಸೂಚನೆ ನೀಡುವ ಬಗ್ಗೆ ಜಾಹೀರಾತು
[ಸೆಕ್ಷನ್ 374(ಬಿ)ರ ಕಂಪನಿ ಕಾಯಿದೆ, 2013ರ ನಿಯಮ 4(1)ರ ಕಂಪನಿಗಳಿಗೆ ಸಂಬಂಧಪಟ್ಟಂತೆ (ಅಧಿಕೃತ ನೋಂದಣಿಯಾಗಲು) ನಿಯಮಗಳು, 2014]

1. ಈ ಮೂಲಕ ಸೂಚನೆ ನೀಡುವುದೇನೆಂದರೆ, ಸೀಮಿತ ಬಾಧ್ಯತಾ ಪಾಲುದಾರಿಕಾ ಕಾಯಿದೆ, 2008 ರ ಅಡಿ ನೋಂದಾಯಿತವಾಗಿದ್ದು, ಷೇರುಗಳಿಂದ ನಿಯಮಿತವಾದ ಕಂಪನಿಯನ್ನಾಗಿ, ಕಂಪನಿಗಳ ಕಾಯ್ದೆ 2013ರ ಚಾಪ್ಟರ್ 21ರ ಭಾಗ 1 ರ ಅಡಿಯಲ್ಲಿ **"ಮೈಸರ್ಜ್ ಹೆಲ್ತ್ ಸರ್ವೀಸಸ್ LLP (LLPN:AAC-7897)"** ಒಂದು ಪಾಲುದಾರಿಕಾ ಸಂಸ್ಥೆಯನ್ನು ಇಂದಿನಿಂದ ಹದಿನೈದು ದಿನಗಳ ನಂತರ ಹಾಗೂ ಮೂವತ್ತು ದಿನಗಳ ಒಳಗಾಗಿ ಎಂಬುದಾಗಿ ನೋಂದಣಿ ಮಾಡಬಹುದು ಎಂಬುದಾಗಿ **ರಿಜಿಸ್ಟ್ರಾರ್ ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೇಸರ್, ಜಿಲ್ಲೆ ಗುರಂಗಾವ್ (ಹರ್ಯಾಣ), ಪಿನ್‌ಕೋಡ್ – 122050** ಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 366 ಉಪಪ್ರಕರಣ(2)ರ ಅನುಸಾರ ಅರ್ಜಿಯೊಂದನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.
2. **ಕಂಪನಿಯ ಮುಖ್ಯ ಉದ್ದೇಶಗಳು ಈ ರೀತಿಯಾಗಿವೆ.**
ಎ) ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು, ಮೆಡಿಕೇರ್, ಆರೋಗ್ಯ ರಕ್ಷಣೆ, ರೋಗನಿರ್ಣಯ, ಆರೋಗ್ಯ ಸಹಾಯಗಳು ಮತ್ತು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವುದು, ಖರೀದಿಸುವುದು, ಗುತ್ತಿಗೆ ನೀಡುವುದು ಅಥವಾ ಸ್ವಾಧೀನಪಡಿಸಿಕೊಳ್ಳುವುದು, ಸ್ಥಾಪಿಸುವುದು, ನಿರ್ವಹಿಸುವುದು, ನಡೆಸುವುದು, ನಿರ್ವಹಿಸುವುದು ಅಥವಾ ಉತ್ತೇಜನ ನೀಡುವುದು ಮತ್ತು ರೋಗಗಳ ರೋಗನಿರ್ಣಯ, ತಿಳುವಳಿಕೆ ಮತ್ತು ತಡೆಗಟ್ಟುವಿಕೆ ಮತ್ತು ಚಿಕಿತ್ಸೆಯ ಹೊಸ ವಿಧಾನಗಳ ಆವಿಷ್ಕಾರ, ಸುಧಾರಣೆ ಅಥವಾ ಅಭಿವೃದ್ಧಿಗಾಗಿ ಸೌಲಭ್ಯಗಳನ್ನು ಒದಗಿಸುವುದು, ಪ್ರೋತ್ಸಾಹಿಸುವುದು, ಪ್ರಾರಂಭಿಸುವುದು ಅಥವಾ ಉತ್ತೇಜಿಸುವುದು ಮತ್ತು ಸರ್ಕಾರಕ್ಕಾಗಿ ಅಥವಾ ಸ್ಥಳೀಯ ಪ್ರಾಧಿಕಾರಗಳು, ನಿಗಮಗಳು, ಸಮಾಜಗಳು, ಟ್ರಸ್ಟ್‌ಗಳು, ಕಂಪನಿಗಳು, ಸಂಸ್ಥೆಗಳು ಮತ್ತು ಇತರ ವ್ಯಕ್ತಿಗಳು ಸೇರಿದಂತೆ ಯಾವುದೇ ಇತರ ವ್ಯಕ್ತಿಗಾಗಿ ಆಸ್ಪತ್ರೆಗಳು ಮತ್ತು/ಅಥವಾ ಇತರ ಕಟ್ಟಡಗಳ ವಿನ್ಯಾಸ ಮತ್ತು ನಿರ್ಮಾಣವನ್ನು ಕೈಗೊಳ್ಳುವುದು.
ಬಿ) ಎಲ್ಲಾ ರೀತಿಯ ಮತ್ತು ವಿಧದ ಜೆನೆರಿಕ್ ಮತ್ತು ಪೇಟೆಂಟ್/ಪೇಟೆಂಟ್ ರಹಿತ ಔಷಧಿಗಳು, ಔಷಧಗಳು, ಮಿಶ್ರಣಗಳು, ಸೂತ್ರೀಕರಣಗಳು, ಮಾತ್ರೆಗಳು, ಮಾತ್ರೆಗಳು, ಪುಡಿಗಳು, ಔಷಧಗಳು ಮತ್ತು ವೈದ್ಯಕೀಯ ಉತ್ಪನ್ನಗಳು, ಸೂಜಿಗಳು, ಸಿರಿಂಜ್‌ಗಳು, ಇಂಜೆಕ್ಟೇಬಲ್‌ಗಳು, ಲಸಿಕೆಗಳು, ಸೆರಾ, ಇಮ್ಯುನೊಜೆನ್‌ಗಳು, ರಾಸಾಯನಿಕಗಳು ಮತ್ತು ಶಸ್ತ್ರಚಿಕಿತ್ಸಾ ಡ್ರೆಸ್ಸಿಂಗ್‌ಗಳು, ಕಿಟ್‌ಗಳು ಮತ್ತು ಉಪಕರಣಗಳನ್ನು ಖರೀದಿಸಲು, ಮಾರಾಟ ಮಾಡಲು, ಸರಬರಾಜು ಮಾಡಲು, ಸಂಗ್ರಹಿಸಲು, ದಾಸ್ತಾನು ಮಾಡಲು, ನಿರ್ವಹಿಸಲು ಅಥವಾ ಬೇರೆ ರೀತಿಯಲ್ಲಿ ವ್ಯವಹರಿಸಲು ಮತ್ತು ರೋಗನಿರ್ಣಯ ಕೇಂದ್ರಗಳನ್ನು ಸ್ವಾಧೀನಪಡಿಸಿಕೊಳ್ಳಲು/ ಸ್ಥಾಪಿಸಲು/ ನಿರ್ವಹಿಸಲು ಮತ್ತು ನಿರ್ವಹಿಸಲು.
ಸಿ) ಎಲ್ಲಾ ವೈದ್ಯಕೀಯ ವಿಜ್ಞಾನಗಳು ಮತ್ತು ಚಿಕಿತ್ಸೆಗಳ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವ ಮೂಲಕ ವೈದ್ಯಕೀಯ ಮತ್ತು ಕ್ಲಿನಿಕಲ್ ಸಂಶೋಧನೆಗಳನ್ನು ಕೈಗೊಳ್ಳುವುದು ಮತ್ತು ಆಸ್ಪತ್ರೆಗಳು, ಆರೋಗ್ಯ ರಕ್ಷಣಾ ಕೇಂದ್ರಗಳು ಮತ್ತು ವೈದ್ಯಕೀಯ ಉಪಕರಣಗಳನ್ನು ತಯಾರಿಸಲು ಸೌಲಭ್ಯಗಳನ್ನು ಸ್ಥಾಪಿಸಲು ಉತ್ತೇಜಿಸಲು, ಸಹಾಯ ಮಾಡಲು ಅಥವಾ ತೊಡಗಿಸಿಕೊಳ್ಳಲು ಅಗತ್ಯವಿರುವ ಕ್ಲಿನಿಕಲ್ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಸೇರಿದಂತೆ ಎಲ್ಲಾ ರೀತಿಯ ಸಂಶೋಧನೆಗಳನ್ನು ಕೈಗೊಳ್ಳುವುದು, ಉತ್ತೇಜಿಸುವುದು ಅಥವಾ ತೊಡಗಿಸಿಕೊಳ್ಳುವುದು
ಡಿ) ವೈದ್ಯಕೀಯ ಶಿಕ್ಷಣ ಮತ್ತು ನಿರ್ವಹಣಾ ತರಬೇತಿಯನ್ನು ನೀಡಲು ಶಿಕ್ಷಣ ಸಂಸ್ಥೆಗಳು, ಶಾಲೆಗಳು, ಕಾಲೇಜುಗಳು, ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು, ನಡೆಸುವುದು, ಉತ್ತೇಜನ ನೀಡುವುದು ಮತ್ತು ಅವುಗಳಲ್ಲಿ ಹೂಡಿಕೆ ಮಾಡುವುದು ಸೇರಿದಂತೆ ಆರೋಗ್ಯ ಮತ್ತು ಆಸ್ಪತ್ರೆ ನಿರ್ವಹಣೆ ತರಬೇತಿ ಮತ್ತು ಅಭಿವೃದ್ಧಿ, ಔಷಧೀಯ ನಿರ್ವಹಣೆ, ಆತಿಥ್ಯ, ಕೌಶಲ್ಯ ಮತ್ತು ಸಾಮರ್ಥ್ಯ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು, ವೃತ್ತಿಪರರ ತರಬೇತಿ ಮತ್ತು ಪ್ರಮಾಣೀಕರಣ ಸೇರಿದಂತೆ ವೈದ್ಯಕೀಯ, ನರ್ಸಿಂಗ್, ಮತ್ತು ಸಂಬಂಧಿತ ಔಷಧಿಗಳು ಮತ್ತು ಔಷಧಾಲಯ ಮತ್ತು ಸಂಬಂಧಿತ ವೈದ್ಯಕೀಯ ಆಡಳಿತ ಮತ್ತು ಅಂತಹ ವೈದ್ಯಕೀಯ ಸಂಸ್ಥೆಗಳ ನಿರ್ವಹಣೆ ಸೇರಿದಂತೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವುದು.
3. ಪ್ರಸ್ತಾವಿತ ಕಂಪನಿಯ ಕರಡು ಪತ್ರ ಮತ್ತು ನಿರ್ಧರಿತ ಆರ್ಟಿಕಲ್ ಅಫ್ ಅಸೋಸಿಯೇಶನ್‌ನ ನಕಲನ್ನು **101, ಗ್ರೀನ್ ಜ್ಯಾಸಲ್ ಅಪಾರ್ಟ್‌ಮೆಂಟ್ಸ್, 40 ಸೈಂಟ್ ಜಾನ್ಸ್ ರಸ್ತೆ, ಹಲಸೂರು, ಸಿವನ್ ಚೆಟ್ಟಿ ಗಾರ್ಡನ್ಸ್, ಬೆಂಗಳೂರು, ಬೆಂಗಳೂರು ಉತ್ತರ, ಕರ್ನಾಟಕ, ಭಾರತ –560042** ಇಲ್ಲಿ ಪರಿಶೀಲಿಸಬಹುದು.
4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು **ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8 ಸೆಕ್ಟರ್ –5, ಐಎಂಟಿ ಮಾನೇಸರ್, ಜಿಲ್ಲೆ – ಗುರಗಾಂವ್ (ಹರ್ಯಾಣ), ಪಿನ್ ಕೋಡ್ – 122050** ಈ ವಿಳಾಸಕ್ಕೆ ಈ ಸೂಚನೆ ಪ್ರಕಟವಾದ ಇಪ್ಪತ್ತೊಂದು ದಿನಗಳ ಒಳಗಾಗಿ ಲಿಖಿತ ಮೂಲಕ ಹಾಗೂ ಒಂದು ಪ್ರತಿಯನ್ನು ನೋಂದಾಯಿತ ಕಚೇರಿಗೆ ಕಳುಹಿಸಬಹುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಮೈಸರ್ಜ್ ಹೆಲ್ತ್ ಸರ್ವೀಸಸ್ LLP ಪರವಾಗಿ
ಸಹಿ/–
ದಿನಾಂಕ : 17.03.2026
ಸ್ಥಳ : ಬೆಂಗಳೂರು
1. ಮನೀಶ್ ಜೋಶಿ (ನಿಯೋಜಿತ ಪಾಲುದಾರ)
2. ವಸೀಂ ಮುಸ್ತಾಕ್ ದರ್ (ನಿಯೋಜಿತ ಪಾಲುದಾರ)

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ,
ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯಿತಿ, ಬೆಂಗಳೂರು ನಗರ ಜಿಲ್ಲೆ,
ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ
ಟೆಂಡರ್ ಪ್ರಕಟಣೆ ಸಂಖ್ಯೆ: ಹಾ.ನಾ.ಗ್ರಾ.ಪಂ.ಟೆಂ.ಪ್ರ.ಸಂ.: 03/2025–26 ದಿನಾಂಕ; 16/03/2026

ಟೆಂಡರ್ ಪ್ರಕಟಣೆ

ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಹಾಲನಾಯಕನಹಳ್ಳಿ, ಬೆಂಗಳೂರು ಪೂರ್ವ ತಾಲ್ಲೂಕು ಇವರು 2025–26 ನೇ ಸಾಲಿನ ವರ್ಗ–1 ರ ನಿಧಿಯ ಕ್ರಿಯಾಯೋಜನೆ ಕ್ರ.ಸಂ.178 ಕ್ಕೆ ಸಂಬಂಧಿಸಿದಂತೆ ಆಸಕ್ತ ಸಂಸ್ಥೆಯಿಂದ ಈ ಕೆಳಕಂಡ ವಿಷಯದ ಬಗ್ಗೆ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ಇ.ಎಂ.ಡಿ ಮೊತ್ತ	ಖಾಲಿ ಟೆಂಡರ್ ಫಾರಂ ಬೆಲೆ
01	ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಿಸುವುದು	ರೂ.10,000=00	ರೂ.500=00
	MATERIAL NAME	QUANTITY	
	a) Boys Uniform	1	
	b) Girls Skirt School Uniform	1	

1. ಟೆಂಡರ್ ಫಾರಂ ವಿತರಣೆ : 17/03/2026 ರಿಂದ 20/03/2026
2. ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ : 24/03/2026 ಮಧ್ಯಾಹ್ನ 2.00 ಗಂಟೆಯವರೆಗೆ
3. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 24/03/2026 ಮಧ್ಯಾಹ್ನ 3.00 ಗಂಟೆಗೆ
4. ಹೆಚ್ಚಿನ ಮಾಹಿತಿಗೆ ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯವನ್ನು ಸಂಪರ್ಕಿಸುವುದು.
5. ಮೇಲ್ಕಂಡ ಟೆಂಡರ್‌ನ್ನು ಅಂಗೀಕರಿಸುವ / ತಿರಸ್ಕರಿಸುವ / ಮಾರ್ಪಡಿಸುವ ಹಾಗೂ ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– **ಆಡಳಿತಾಧಿಕಾರಿ ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಬೆಂಗಳೂರು ಪೂರ್ವ ತಾಲ್ಲೂಕು, ಬೆಂ.ನ.ಜಿಲ್ಲೆ**

ಸಹಿ/– **ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಬೆಂಗಳೂರು ಪೂರ್ವ ತಾಲ್ಲೂಕು, ಬೆಂ.ನ.ಜಿಲ್ಲೆ**

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ,
ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯಿತಿ, ಬೆಂಗಳೂರು ನಗರ ಜಿಲ್ಲೆ,
ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ
ಟೆಂಡರ್ ಪ್ರಕಟಣೆ ಸಂಖ್ಯೆ: ಹಾ.ನಾ.ಗ್ರಾ.ಪಂ.ಟೆಂ.ಪ್ರ.ಸಂ.: 02/2025–26 ದಿನಾಂಕ; 16/03/2026

ಟೆಂಡರ್ ಪ್ರಕಟಣೆ

ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಹಾಲನಾಯಕನಹಳ್ಳಿ, ಬೆಂಗಳೂರು ಪೂರ್ವ ತಾಲ್ಲೂಕು ಇವರು 2025–26 ನೇ ಸಾಲಿನ ಆರೋಗ್ಯ ಉಪಕರ ಕ್ರಿಯಾಯೋಜನೆಯ ಕ್ರ.ಸಂ.02ಕ್ಕೆ ಸಂಬಂಧಿಸಿದಂತೆ ಆಸಕ್ತ ಸಂಸ್ಥೆಯಿಂದ ಈ ಕೆಳಕಂಡ ವಿಷಯದ ಬಗ್ಗೆ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ಇ.ಎಂ.ಡಿ ಮೊತ್ತ	ಖಾಲಿ ಟೆಂಡರ್ ಫಾರಂ ಬೆಲೆ
01	ಹಾಲನಾಯಕನಹಳ್ಳಿ ಗ್ರಾಮ ಎ.ಕೃಷ್ಣಪ್ಪನಗರದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಂಬ್ಯುಲೆನ್ಸ್‌ಗೆ ಆಂಬ್ಯುಲೆನ್ಸ್ ಒಳಗಿನ Medical ಉಪಕರಣಗಳನ್ನು ಖರೀದಿಸುವುದು.	ರೂ.10,000=00	ರೂ.500=00
	ಉಪಕರಣಗಳ ವಿವರ	ಸಂಖ್ಯೆ (Qty)	
	a) JUMBO CYLINDER	3 (20LTS)	
	b) PORTABLE CYLINDER	1(5LTS)	
	c) MULTI PARA MONITOR	1	
	d) STRETCHER	2	
	e) SCOOP STRETCHER f) WHEEL CHAIR	2 1 (FOLDBLE DOOR ATTACHED)	
	g) FIRE EXTINGUISHER	2	
	h) BP APPARATUS	2	
	I) UPS	1	
	j) STETHOSCOPE	2	
	k) PULSE OXYMETER	1	
	l) AMBU BAG	1 (CHILD AND ADULT)	
	m) SUCTION MACHINE	1	
	n) NEBULIZER(ADULT CHILD AND NEONATAL MASK)	1	
	o) SPLINTS(SHORT LEG AND LONG LEG)	1	
	p) C"COLLAR(S,M,L)	1	
	q) SYRENGE LOADER	1	
	r) DIGITAL THERMOMETER	4	
	s) THERMAL SCANNER	2	
	t) PULSE OXYMETER	5	
	u) PEN TORCH	5	
	v) GLUCOMETER STRIPS	1 100	
	w) FIRE EXTINGUISHER	5	
	x) NASAL CANNULA	10	
	y) OXYGEN MASKS - ADULT PAEDIATRIC	5 5	
	z) SPINE BOARD - ADULT PAEDIATRIC	1 1	
	aa) Head immobiliser - Adult Paediatric	1 1	
	bb) Bandages and dressings	5 Bundle	
	cc) Mackintosh sheets (rubber sheets)	50	

1. ಟೆಂಡರ್ ಫಾರಂ ವಿತರಣೆ : 17/03/2026 ರಿಂದ 20/03/2026
2. ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ :24/03/2026 ಮಧ್ಯಾಹ್ನ 2.00 ಗಂಟೆಯವರೆಗೆ
3. ಟೆಂಡರ್ಗಳನ್ನು ತೆರೆಯುವ ದಿನಾಂಕ: 24/03/2026 ಮಧ್ಯಾಹ್ನ 3.00 ಗಂಟೆಗೆ
4. ಹೆಚ್ಚಿನ ಮಾಹಿತಿಗೆ ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯವನ್ನು ಸಂಪರ್ಕಿಸುವುದು.
5. ಮೇಲ್ಕಂಡ ಟೆಂಡರ್ನ್ನು ಅಂಗೀಕರಿಸುವ / ತಿರಸ್ಕರಿಸುವ / ಮಾರ್ಪಡಿಸುವ ಹಾಗೂ ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– **ಆಡಳಿತಾಧಿಕಾರಿ ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಬೆಂಗಳೂರು ಪೂರ್ವ ತಾಲ್ಲೂಕು, ಬೆಂ.ನ.ಜಿಲ್ಲೆ**

ಸಹಿ/– **ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಬೆಂಗಳೂರು ಪೂರ್ವ ತಾಲ್ಲೂಕು, ಬೆಂ.ನ.ಜಿಲ್ಲೆ**

ಮದ್ಯ ವ್ಯಸನಿ ಗಂಡನಿಂದ ಹೆಂಡತಿಯ ಹತ್ಯೆ

ಬೆಂಗಳೂರು: ಗಂಡನೇ ತನ್ನ ಹೆಂಡತಿಯ ಕತ್ತು ಕುಯ್ದು ಬರ್ಬರವಾಗಿ ಕೊಲೆ ಮಾಡಿದ ಘಟನೆ ಬೆಳಕಿಗೆ ಬಂದಿದೆ.

ನಾಗರಾಜ್ ಮತ್ತು ತನ್ನ ಹೆಂಡತಿ ಗೌರಮ್ಮ (45) ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಮೂಲದವರು. ಜೀವನೋಪಾಯಕ್ಕಾಗಿ ಬೆಂಗಳೂರಿಗೆ ವಲಸೆ ಬಂದಿದ್ದರು. ನಾಗರಾಜ್ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ, ಗೌರಮ್ಮ ಮನೆಗೆಲಸ ಮಾಡಿಕೊಂಡು ಕುಟುಂಬವನ್ನು ಸಾಗಿಸುತ್ತಿದ್ದರು. ಈ ದಂಪತಿಗೆ ಮೂವರು ಮಕ್ಕಳಿದ್ದು, ಅವರು ಕ್ಯಾಟರಿಂಗ್ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ನಾಗರಾಜ್ ಪ್ರತಿದಿನ ಕುಡಿದ ನಶೆಯಲ್ಲಿ ಮನೆಗೆ ಬಂದು ಹೆಂಡತಿಯ ಜತೆ ಗಲಾಟೆ ಮಾಡುತ್ತಿದ್ದ. ಭಾನುವಾರ ರಾತ್ರಿ ಕೂಡ ಮದ್ಯಪಾನ ಮಾಡಿ ಮನೆಗೆ ಬಂದ ನಾಗರಾಜ್, ಗಲಾಟೆಯ ವೇಳೆ ತನ್ನ ಹೆಂಡತಿ ಗೌರಮ್ಮ ಅವರ ಕತ್ತು ಕೊಯ್ದು ಬರ್ಬರವಾಗಿ ಕೊಲೆ ಮಾಡಿದ್ದಾನೆ. ರಕ್ತದಲ್ಲಿ ಮಡುವಿನಲ್ಲಿ ಬಿದ್ದಿದ್ದ ಗೌರಮ್ಮನ ದೃಶ್ಯ ಕಂಡು ಸ್ಥಳೀಯರು ಬೆಚ್ಚಿಬಿದ್ದಿದ್ದಾರೆ. ಕೊಲೆ ಮಾಡಿದ ಬಳಿಕ ನಾಗರಾಜ್ ಸ್ಥಳದಿಂದ ಪರಾರಿಯಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಮೈಕೋ ಲೇಔಟ್ ಪೊಲೀಸರು ಆರೋಪಿಗಾಗಿ ಶೋಧ ನಡೆಸುತ್ತಿದ್ದಾರೆ.

ಕೆನರಾ ಬ್ಯಾಂಕ್ Canara Bank SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ,
ಬೆಂಗಳೂರು–560001. ದೂ: 080-25310066
ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಎಆರ್‌ಎಂ–I ಶಾಖೆ ಕೆನರಾ ಬ್ಯಾಂಕ್, ಬೆಂಗಳೂರು,** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ : 10.04.2026 ರಂದು (ಬೆಳಗ್ಗೆ 10.30 ರಿಂದ 11.00ರವರೆಗೆ)** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗತಕ್ಕ ಮೊಬಲಗು: **ರೂ.53,49,65,366.73 (ರೂಪಾಯಿಗಳು ಐವತ್ತಮೂರು ಕೋಟಿ ನಲವತ್ತೊಂಭತ್ತು ಲಕ್ಷದ ಅರವತ್ತೈದು ಸಾವಿರದ ಮುನ್ನೂರ ಅರವತ್ತಾರು ಮತ್ತು ಎಪ್ಪತ್ತಮೂರು ಪೈಸೆ ಮಾತ್ರ)** ಜೊತೆಗೆ **ದಿನಾಂಕ 11.03.2026**ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ ಬೆಂಗಳೂರು** ರವರಿಂದ **ಸಾಲಗಾರರಾದ: (1) ಮೆ॥ ಅಂಬಿಕಾ ಎಲೆಕ್ಟ್ರಾನಿಕ್ಸ್,** ನೆಲಮಹಡಿ, ನಂ.952, ಎ ಸುಂದರ್ ಮಹಲ್, 14ನೇ ಕ್ರಾಸ್, ಹೊಸಕೆರೆಹಳ್ಳಿ ಗಿರಿನಗರ, ಬೆಂಗಳೂರು–560085 **(2) ಶ್ರೀ.ರಮೇಶ್ ಐತಾಳ್** ಬಿನ್ ಶ್ರೀ.ಕೆ.ವೆಂಕಟರಾಮನ್ ಐತಾಳ್, 85, ಯುಕ್ತಿ, ಅವಲಹಳ್ಳಿ, 3ನೇ ಹಂತ, ಗಿರಿನಗರ, ಬೆಂಗಳೂರು–560055 **(3) ಶ್ರೀ.ಕೆ.ಶಾಂತರಾಂ ಹೊಳ್ಳ** ಬಿನ್ ಅಚುತ್ ಹೊಳ್ಳ, ಬಿ 202, ಅಶ್ವಿನಿ ಅಪಾರ್ಟ್‌ಮೆಂಟ್, 14 ರಿಂಗ್ ರಸ್ತೆ, ಬನಶಂಕರಿ, 2ನೇ ಹಂತ, ಬೆಂಗಳೂರು–560070, **(4) ಶ್ರೀ.ಕೆ.ವಿ.ಆರ್. ಸೋಮಯಾಜಿ,** 97, 3ನೇ ಮೈನ್, 4ನೇ ಫೇಸ್, ಜೆ.ಪಿ.ನಗರ, ಸಾರಕ್ಕಿ ಡಾಲರ್ ಕಾಲೋನಿ, ಬೆಂಗಳೂರು–560078 **(5) ಶ್ರೀಮತಿ. ಕೆ.ವೀಣಾ** ಕೋಂ ಶ್ರೀ.ಕೆ.ವಿ.ಆರ್. ಸೋಮಯಾಜಿ, 97, 3ನೇ ಮೈನ್, 4ನೇ ಫೇಸ್, ಜೆ.ಪಿ.ನಗರ, ಸಾರಕ್ಕಿ ಡಾಲರ್ ಕಾಲೋನಿ, ಬೆಂಗಳೂರು–560078 **(6) ಶ್ರೀ.ಸದಾನಂದ ಮೈಯಾ** ಬಿನ್ ಲೇಟ್ ಪಿವೈಎನ್ ಮೈಯಾ, 342/20, ಶಾಂತಲ, 1ನೇ ಬಿ ಮೈನ್ ರಸ್ತೆ, ಜಯನಗರ ವೆಸ್ಟ್, ಬೆಂಗಳೂರು–82. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 09.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.
(₹. ಲಕ್ಷಗಳಲ್ಲಿ)

ಲಾಟ್ ನಂ	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ವಾಸಯೋಗ್ಯ ನಿವೇಶನ ನಂ.5, ಸರ್ವೆ ನಂ. 29/13 ರಲ್ಲಿ ರಚಿಸಲ್ಪಟ್ಟಿದ್ದು, ಮಾಯಗಾನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ವಿ.ಪಿ.ಖಾತಾ ನಂ. 571–5–29/13, ವಿಸ್ತೀರ್ಣ 8000 ಚದರ ಅಡಿ, ಆಸ್ತಿಯು ಶ್ರೀ.ರಮೇಶ್ ಐತಾಳ್ ಮತ್ತು ಕೆ.ಶಾಂತರಾಮ ಹೊಳ್ಳ ರವರುಗಳ ಹೆಸರಿನಲ್ಲಿದೆ. ಪ್ರದೇಶದ ವಿಸ್ತೀರ್ಣ 8000 ಚ.ಅಡಿ. **Coordinates of the property, Latitude- 12.8062193N, Longitude- 77.3170495E**	₹. 120.00	₹. 12.00	₹. 1.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: (www.canarabank.com) ಅಥವಾ M/s PSB Alliance (https://baanknet.com/) ಅಥವಾ ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ದೂರವಾಣಿ ಸಂಖ್ಯೆ: 080–25310066, 9483544116, 8508442767 ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 13.03.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, (ಹಿಂದಿನ ಕಂಟೋನ್ಮೆಂಟ್ ಶಾಖೆ), ಕೆನರಾ ಬ್ಯಾಂಕ್ ಬೆಂಗಳೂರು, ಎಆರ್‌ಎಂ–1 ಶಾಖೆ (2366)** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 02.04.2026 (ಬೆಳಗ್ಗೆ 11.30 ರಿಂದ ಮಧ್ಯಾಹ್ನ 12.30 ರವರೆಗೆ)** ರಂದು ಸ್ವತ್ತನ್ನು **"ಹೇಗಿದೆಯೋ ಹಾಗೆ", "ಏನಿದೆಯೊ ಹಾಗೆ", ಏನೇ ಇದ್ದರೂ",** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 3,29,49,554.33 ಜೊತೆಗೆ ದಿನಾಂಕ: 11.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: (1) **ನಾರಾಯಣಸ್ವಾಮಿ ಎಂ** ಬಿನ್ ಮುನಿವೆಂಕಟಪ್ಪ, (2) **ಸಂದೀಪ್ ಎಂ ಎನ್** ಬಿನ್ ನಾರಾಯಣಸ್ವಾಮಿ, (3) **ಚೈತ್ರ ಎಂ ಎನ್** D/o ನಾರಾಯಣಸ್ವಾಮಿ, (4) **ಭವಾನಿ ಎಂ ಎನ್** D/o ನಾರಾಯಣಸ್ವಾಮಿ, (5) **ಸೌಮ್ಯ ಎಂ ಎನ್** D/o ನಾರಾಯಣಸ್ವಾಮಿ, (6) **ಅನುಷಾ ಎಂ ಎನ್** D/o ನಾರಾಯಣಸ್ವಾಮಿ, **ಇವರೆಲ್ಲರ ವಿಳಾಸ:** ಮಾಸ್ತೇನಹಳ್ಳಿ (ಗ್ರಾಮ) , ಶ್ರೀನಿವಾಸಪುರ (ತಾಲ್ಲೂಕು), ಕೋಲಾರ (ಜಿಲ್ಲೆ)–563135. (7) **ಗೋಪಾಲಕೃಷ್ಣೇಗೌಡ** ಬಿನ್ ಮುನಿಯಪ್ಪ ವಿಳಾಸ ಸಿ ಒ ನಗರ, 02 wr dsr apts, ನಾಗೊಂಡನಹಳ್ಳಿ ವೈಟ್‌ಫೀಲ್ಡ್, ಇಮ್ಮಡಿಹಳ್ಳಿ ಬಿ.ಓ ಬೆಂಗಳೂರು ನಗರ–560066. (8) **ಸೌಭಾಗ್ಯ ಎಂ ಆರ್** ಕೋಂ ನಾಗರಾಜೇಗೌಡ, ಮಾಸ್ತೇನಹಳ್ಳಿ (ಗ್ರಾಮ), ಶ್ರೀನಿವಾಸಪುರ (ತಾಲ್ಲೂಕು), ಕೋಲಾರ (ಜಿಲ್ಲೆ)–563135. **ಮತ್ತೊಂದು ವಿಳಾಸ:** ಅಮ್ಮೇರಹಳ್ಳಿ (ಗ್ರಾಮ), ಕೊಂಡರಾಜನಹಳ್ಳಿ (ಪೋಸ್ಟ್), ಕಸಬಾ ಹೋಬಳಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ–563102. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 30.03.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.
(₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	(1) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಕೃಷಿ ಭೂಮಿಯು 5 ಎಕರೆ, ಸರ್ವೆ ನಂ.6/13, ಮಾಸ್ತೇನಹಳ್ಳಿ ಗ್ರಾಮ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಸ್ವಂತ ಆಸ್ತಿ ಮತ್ತು ಆಸ್ತಿ 6/ಪಿ3–ಪಿ1, ಪಶ್ಚಿಮಕ್ಕೆ: ಕೆ ಚಂದ್ರಮತಿ ಮತ್ತು ಎಂ ಪಿ ನಾರಾಯಣಗೌಡರವರ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ವೆಂಕಟೇಶಪ್ಪರವರ ಆಸ್ತಿ. (2) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಕೃಷಿ ಭೂಮಿಯು 5 ಎಕರೆ, ಸರ್ವೆ ನಂ.6/ಪಿ3–ಪಿ1, ಮಾಸ್ತೇನಹಳ್ಳಿ ಗ್ರಾಮ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಶಾಮಲಮ್ಮ ಮತ್ತು ಹೆಚ್ ನಾರಾಯಣಗೌಡರವರ ಆಸ್ತಿ, ಪಶ್ಚಿಮಕ್ಕೆ: ಸ್ವಂತ ಆಸ್ತಿ ಮತ್ತು ಆಸ್ತಿ ನಂ.6/13 ಬ್ಲಾಕ್, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ವೆಂಕಟೇಶಪ್ಪರವರ ಆಸ್ತಿ.	ರೂ. 420.00	ರೂ. 42.00	ರೂ. 1.00	20.03.2026 ಬೆಳಿಗ್ಗೆ 10.00 ರಿಂದ ಸಂಜೆ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ
2	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಮನೆಯ ಕಟ್ಟಡದ ನಂ.25, ಇ–ಖಾತಾ ನಂ.151901102400100030, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 24.384 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 27.1272 ಮೀಟರ್‌ಗಳು, ಮಾಸ್ತೇನಹಳ್ಳಿ ಗ್ರಾಮ, ವೆಲಗಲಬುರ್ರೆ ಅಂಚೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಭದ್ರಪ್ಪ ಅವರ ಆಸ್ತಿ, ಪಶ್ಚಿಮಕ್ಕೆ: ನಾರಾಯಣಸ್ವಾಮಿ ಅವರ ಆಸ್ತಿ, ಉತ್ತರಕ್ಕೆ: ಎಸ್ ನಾರಾಯಣಸ್ವಾಮಿ ಅವರ ಆಸ್ತಿ, ದಕ್ಷಿಣಕ್ಕೆ: ಜಿ ಎಂ ಎರಗಪ್ಪ ಅವರ ಆಸ್ತಿ.	ರೂ. 62.00	ರೂ. 6.20	ರೂ. 1.00	
3	(1) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ನಿವೇಶನ ನಂ.3, ಇ–ಖಾತಾ ನಂ. 151900703400320122, ಫಾರಂ ನಂ. 11ಎ, ಸರ್ಟಿಫಿಕೇಟ್ ನಂ. 3608562, ಖಾತಾ ನಂ. 54/87/3, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 18.288 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ : 12.192 ಮೀಟರ್‌ಗಳು, ಒಟ್ಟು ವಿಸ್ತೀರ್ಣ 222.97 ಚದರ ಮೀಟರ್‌ಗಳು, ಈ ಆಸ್ತಿಯು ಅಮ್ಮೇರಹಳ್ಳಿ ಗ್ರಾಮ, ಕೊಂಡರಾಜನಹಳ್ಳಿ ಗ್ರಾಮ ಪಂಚಾಯತ್, ಕಸಬಾ ಹೋಬಳಿ, ಕೋಲಾರದಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : 30 ಅಡಿ ರಸ್ತೆ, ಪಶ್ಚಿಮಕ್ಕೆ : ಜೆ. ಮುನಿಸ್ವಾಮಿ ರವರ ಆಸ್ತಿ, ಉತ್ತರಕ್ಕೆ : ನಿವೇಶನ ನಂ.04, ದಕ್ಷಿಣಕ್ಕೆ : ನಿವೇಶನ ನಂ. 01 ಮತ್ತು 02. (2) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ನಿವೇಶನ ನಂ.4, ಇ–ಖಾತಾ ನಂ. 151900703400320123, ಫಾರಂ ನಂ. 11ಎ, ಸರ್ಟಿಫಿಕೇಟ್ ನಂ. 3608562, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 18.288 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ : 12.192 ಮೀಟರ್‌ಗಳು, ಒಟ್ಟು ವಿಸ್ತೀರ್ಣ 222.97 ಚದರ ಮೀಟರ್‌ಗಳು, ಈ ಆಸ್ತಿಯು ಅಮ್ಮೇರಹಳ್ಳಿ ಗ್ರಾಮ, ಕೊಂಡರಾಜನಹಳ್ಳಿ ಗ್ರಾಮ ಪಂಚಾಯತ್, ಕಸಬಾ ಹೋಬಳಿ, ಕೋಲಾರದಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : 30 ಅಡಿ ರಸ್ತೆ, ಪಶ್ಚಿಮಕ್ಕೆ : ಜೆ. ಮುನಿಸ್ವಾಮಿ ರವರ ಆಸ್ತಿ, ಉತ್ತರಕ್ಕೆ : ನಿವೇಶನ ನಂ.05, ದಕ್ಷಿಣಕ್ಕೆ : ನಿವೇಶನ ನಂ. 03.	ರೂ. 190.00	ರೂ. 19.00	ರೂ. 1.00	
	ಒಟ್ಟು	ರೂ. 672.00			

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **080–25310066, 9483743156 ಮತ್ತು 9866977711, e-mail: cb2366@canarabank.com** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 16.03.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಸಿನಿಮೀಯ ಶೈಲಿ ಪೊಲೀಸ್‌ನ ಎತ್ತೊಯ್ದ ಕಿಡಿಗೇಡಿಯ ಬಂಧನ

ಬಾನೆಟ್ ಮೇಲೆ ಕಾನ್‌ಸ್ಟೇಬಲ್ ಪರದಾಟ

ಬೆಂಗಳೂರು: ಗುಟ್ಕಾ ವಸ್ತುಗಳನ್ನು ತಪಾಸಣೆ ನಡೆಸಲು ಮುಂದಾದ ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಒಬ್ಬರನ್ನು ಸಿನಿಮೀಯ ರೀತಿಯಲ್ಲಿ ಸುಮಾರು 4 ಕಿ.ಮೀ. ದೂರದವರೆಗೆ ಕಾರಿನ ಮುಂಭಾಗದ ಬಾನೆಟ್‌ನಲ್ಲಿ ಹೊತ್ತೊಯ್ದಿರುವ ಘಟನೆ ಬೆಂಗಳೂರು ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಘಟನೆ ಭಾನುವಾರ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ತಮಿಳುನಾಡಿನ ಹೊಸೂರು ಸಮೀಪದ ರಾಜ್ಯ ಗಡಿಭಾಗದ ಜುಜುವಾಡಿ ಪೊಲೀಸ್ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದರು. ನಂತರ ಕರ್ನಾಟಕದ ಬೆಂಗಳೂರಿನಿಂದ ನಿಷೇಧಿತ ಗುಟ್ಕಾ ವಸ್ತುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಐಷಾರಾಮಿ ಕಾರನ್ನು ತಡೆದಿದ್ದಾರೆ. ಆಗ ಕಾರಿನಲ್ಲಿ ಬಂದವರು ಕಾರನ್ನು ನಿಲ್ಲಿಸುವ ಬದಲು ಹೆಡ್ ಕಾನ್‌ಸ್ಟೇಬಲ್ ರಾಜೀವ್ ಗಾಂಧಿ ಅವರನ್ನು ಕೆಡವಿದ್ದಾರೆ. ಆಗ ಅವರು ಕಾರಿನ ಮುಂಭಾಗದ ಬಾನೆಟ್ ಮೇಲೆ ಬಿದ್ದಿದ್ದಾರೆ. ಅದನ್ನೂ ಲೆಕ್ಕಿಸದ ಕಾರಿನ ಚಾಲಕ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು 4 ಕಿ.ಮೀ ದೂರದವರೆಗೆ ಓಡಿಸಿದ್ದಾರೆ. ಸಿನಿಮಾ ಶೈಲಿಯಲ್ಲೇ ನಡೆದಿರುವ ಈ ಘಟನೆಯಿಂದಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದ ಸಾರ್ವಜನಿಕರು ಹಾಗೂ ವಾಹನ ಸವಾರರಲ್ಲಿ ತೀವ್ರ ಆಘಾತ ಉಂಟು ಮಾಡಿದೆ.

ನಿಷೇಧಿತ ಗುಟ್ಕಾ ಮತ್ತು ಕರ್ನಾಟಕ ರಾಜ್ಯದ ಮದ್ಯದ ಬಾಟಲಿಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದಾರೆ. ತನಿಖೆ ನಡೆಸಿದಾಗ ಆತ ಹೊಸೂರು ಕಾಳಗುಂದ ಬಡಾವಣೆಯ ಯಾರಬ್ ಪಾಷಾ (34) ಎಂದು ತಿಳಿದು ಬಂದಿದೆ. ವಶಪಡಿಸಿಕೊಂಡ ಐಷಾರಾಮಿ ಕಾರನ್ನು ಪೊಲೀಸರು ತಪಾಸಣೆ ನಡೆಸಿದಾಗ 2,20,000 ಮೌಲ್ಯದ 390 ಕೆಜಿ ನಿಷೇಧಿತ ಗುಟ್ಕಾ ಹಾಗೂ 48 ಪ್ಯಾಕೆಟ್ ಕರ್ನಾಟಕ ಮದ್ಯ ಪತ್ತೆಯಾಗಿದೆ. ಎಲ್ಲವನ್ನೂ ಪೊಲೀಸರು ಜಪ್ತಿ ಮಾಡಿದ್ದಾರೆ.

ಕಾಲು ಮುರಿತ: ಪೇದೆಗೆ ಚಿಕಿತ್ಸೆ

ವಿಷಯ ತಿಳಿದು ಹೊಸೂರು ಸಿಪ್‌ಕಾಟ್ ಪೊಲೀಸ್ ಸೈಯದ್ ಮುಬಾರಕ್ ನೇತೃತ್ವದಲ್ಲಿ ಪೊಲೀಸರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರನ್ನು ಹಿಂಬಾಲಿಸಿದ್ದಾರೆ. ಬಳಿಕ ಹೊಸೂರು ದರ್ಗಾ ಪ್ರದೇಶದಲ್ಲಿ ಸಾರ್ವಜನಿಕರ ನೆರವಿನಿಂದ ಕಾರು ಸುತ್ತುವರೆದು ಹಿಡಿದಿದ್ದಾರೆ. ಆಗ ಕಾರಿನಲ್ಲಿದ್ದ ವ್ಯಕ್ತಿ ಮತ್ತೆ ಅಲ್ಲಿಯೇ ನಿಂತಿದ್ದ ಪೊಲೀಸರ ಮೇಲೆ ಕಾರು ಓಡಿಸಲು ಯತ್ನಿಸಿದ್ದು, ಈ ವೇಳೆ, ಕಾರಿನ ಮುಂಭಾಗ ಜಖಂಗೊಂಡಿದೆ. ಹೆಡ್ ಕಾನ್‌ಸ್ಟೇಬಲ್ ರಾಜೀವ್ ಗಾಂಧಿ ಅವರ ಕಾಲು ಮುರಿತವಾಗಿದೆ.

ಅಶಿಸ್ತು ತೋರಿರುವ ಸಚಿವರು ಕ್ಷಮೆಯಾಚಿಸಲಿ: ವಿಜಯೇಂದ್ರ

ವಿಧಾನಸಭೆ ಇತಿಹಾಸದಲ್ಲೇ ಕರಾಳ ಅಧ್ಯಾಯ

ಬೆಂಗಳೂರು: ಸಭಾಧ್ಯಕ್ಷರು ಕಾಂಗ್ರೆಸ್ ಸರಕಾರದ ಬೇಜವಾಬ್ದಾರಿತನಕ್ಕೆ ಬೇಸತ್ತು ಸದನದಿಂದ ಹೊರನಡೆದಿರುವುದು ವಿಧಾನಸಭೆ ಇತಿಹಾಸದಲ್ಲೇ ಕರಾಳ ಅಧ್ಯಾಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಈ ಕುರಿತು ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ವಿಧಾನ ಸಭೆಯ ಸಭಾಧ್ಯಕ್ಷರು ಸದನದಿಂದ ಹೊರನಡೆದಿರುವುದು ರಾಜ್ಯದಲ್ಲಿ ಆಡಳಿತ ಯಂತ್ರ ಎಷ್ಟು ನಿಷ್ಕ್ರಿಯಗೊಂಡಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಶಾಸಕರು ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡಲಾಗದಷ್ಟು ಅಸಮರ್ಥವಾಗಿರುವ ಕಾಂಗ್ರೆಸ್ ಸರಕಾರ ಶಾಸನಸಭೆಗೆ ಕನಿಷ್ಠ ಗೌರವ ನೀಡದೆ ತನ್ನದೇ ರಾಜಕೀಯದಲ್ಲಿ ಮುಳುಗಿದೆ. ಸಭಾಧ್ಯಕ್ಷರು ಈಗಾಗಲೇ ನಾಲ್ಕು ಬಾರಿ ಎಚ್ಚರಿಕೆ ನೀಡಿದರೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರು, ಸದನದಲ್ಲಿ ಸಭಾಧ್ಯಕ್ಷರ ಎಚ್ಚರಿಕೆಗೆ ಕವಡೆ ಕಾಸಿನ ಕಿಮ್ಮತ್ತನ್ನೂ ಕೂಡ ನೀಡುತ್ತಿಲ್ಲ. ಇದಕ್ಕೆ ಪೂರಕ ಎನ್ನುವಂತೆ ಸರಕಾರಿ ಅಧಿಕಾರಿಗಳು ಕೂಡ ಅಸಡ್ಡೆ ತೋರುತ್ತಿದ್ದಾರೆ. ಕಾಂಗ್ರೆಸ್ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಸಂವಿಧಾನದ ಆಶಯಗಳು ಜೀವಂತವಾಗಿವೆಯೇ ಎಂದು ಶಾಸಕರು ಮಾತ್ರವಲ್ಲ, ಜನರು ಕೂಡ ಕೇಳುವಂತಾಗಿದೆ. ಈ ಭ್ರಷ್ಟ ಕಾಂಗ್ರೆಸ್ ಸರಕಾರ ತನ್ನ ನಿಷ್ಕ್ರಿಯತೆಯಿಂದ ಕೇವಲ ಸಭಾಧ್ಯಕ್ಷರ ಪೀಠಕ್ಕೆ ಅವಮಾನ ಮಾಡುತ್ತಿಲ್ಲ, ಇದು ನಮ್ಮ ಪ್ರಜಾಪ್ರಭುತ್ವದ ದೇಗುಲಕ್ಕೆ ಮತ್ತು ರಾಜ್ಯದ 7 ಕೋಟಿ ಜನತೆಗೆ ಮಾಡಿದ ದ್ರೋಹ ಎಂದು ಟೀಕಿಸಿದ್ದಾರೆ.

ಜನರ ಸಮಸ್ಯೆಗಳಿಗೆ ಉತ್ತರಿಸಲಾಗದ ಸರಕಾರಕ್ಕೆ ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕಿಲ್ಲ. ಸಚಿವರು ಸದನಕ್ಕೆ ಬರುವುದಿಲ್ಲ, ಬಂದರೂ ಉತ್ತರ ತರುವುದಿಲ್ಲ. ಈ 'ಅಹಂಕಾರದ ಆಡಳಿತ' ನೋಡಿ ಶಾಸಕರಿರಲಿ, ಸಭಾಧ್ಯಕ್ಷರೇ ಬೇಸತ್ತಿದ್ದಾರೆ. ಈಗ ಮುಖ್ಯಮಂತ್ರಿಗಳು ಕೇವಲ ಸಂಧಾನ ಸಭೆ ನಡೆಸಿದರೆ ಸಾಲದು, ತಮ್ಮ ಸಚಿವರ ಅಶಿಸ್ತಿಗೆ ಜನತೆಯ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೆಟ್ಟ ಸರಕಾರದ ವಿರುದ್ಧ ಹೋರಾಟ ನಿರಂತರ

ಪ್ರಜಾಪ್ರಭುತ್ವದಲ್ಲಿ ಶಾಸಕಾಂಗವೇ ಸರ್ವೋಚ್ಚ, ಆದರೆ ಇಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ನೀಡುತ್ತಿರುವ ಅಗೌರವಕ್ಕೆ ಈ ಕಾಂಗ್ರೆಸ್ ಸರಕಾರ ಹೊಣೆ. ಈಗಲಾದರೂ ತನ್ನ ಕುಂಭಕರ್ಣ ನಿದ್ರೆಯಿಂದ ಎಚ್ಚೆತ್ತು ಲಿಖಿತ ಉತ್ತರಗಳನ್ನು ಸರಕಾರ ನೀಡಿ ಸಭಾಧ್ಯಕ್ಷರ ಪೀಠದ ಘನತೆ ಎತ್ತಿ ಹಿಡಿಯಲಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಪ್ರಶ್ನೆಗೆ ಉತ್ತರ ನೀಡದೆ ಸದನಕ್ಕೆ ಅಗೌರವ ತಂದಿರುವಂತಹ ಈ ಕಾಂಗ್ರೆಸ್ ಸರಕಾರದ ವಿರುದ್ಧ, ಇವರ ಕೆಟ್ಟ ಆಡಳಿತದ ವಿರುದ್ಧ ನಮ್ಮ ಹೋರಾಟ ನಿಲ್ಲದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿದರು.

ಮತದಾರರ ಪಟ್ಟಿ ಪರಿಷ್ಕರಣೆ ರಕ್ತರಹಿತ ರಾಜಕೀಯ ಕಗ್ಗೊಲೆ: ಪರಕಾಲ ಪ್ರಭಾಕರ್

ಎಸ್‌ಐಆರ್ ವಿರೋಧಿ ಸರ್ವಪಕ್ಷಗಳು ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಸಮಾಲೋಚನಾ ಸಭೆ ಆಯೋಜಿಸಲಾಗಿತ್ತು.

ಬೆಂಗಳೂರು: ಭಾರತ ಚುನಾವಣಾ ಆಯೋಗವು ದೇಶವ್ಯಾಪಿಯಾಗಿ ಜಾರಿಗೆ ತರಲು ಮುಂದಾಗಿರುವ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ರಕ್ತರಹಿತ ರಾಜಕೀಯ ಕಗ್ಗೊಲೆಯಂತಿದೆ ಎಂದು ರಾಜಕೀಯ ವಿಶ್ಲೇಷಕ ಪರಕಾಲ ಪ್ರಭಾಕರ್ ತಿಳಿಸಿದರು.

ನಗರದ ಶಾಸಕರ ಭವನದಲ್ಲಿ ಸೋಮವಾರ ಎಸ್‌ಐಆರ್ ವಿರೋಧಿ ಸರ್ವಪಕ್ಷಗಳು ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಆಯೋಜಿಸಲಾದ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರ ಸರಕಾರ ಚುನಾವಣಾ ಆಯೋಗದ ಮೂಲಕ ನಡೆಸುತ್ತಿರುವುದು ಕೇವಲ ಮತದಾರರ ಪಟ್ಟಿ ಪರಿಷ್ಕರಣೆ ಅಲ್ಲ, ಬದಲಾಗಿ ಆಯ್ದ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಮತದಾರರ ಪಟ್ಟಿಯಿಂದ ಕೈಬಿಡುವ ಪ್ರಕ್ರಿಯೆಯಾಗಿದೆ. ಈ ಹಿಂದೆ ಜನರು ಸರಕಾರವನ್ನು ಆಯ್ಕೆ ಮಾಡುತ್ತಿದ್ದರು. ಆದರೆ ಈಗ ಸರಕಾರವೇ ತನಗೆ ಬೇಕಾದ ಮತದಾರರನ್ನು ಆಯ್ಕೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದು ನಾಗರಿಕರ ರಾಜಕೀಯ ಹಕ್ಕಿನ ಮೇಲೆ ನಡೆಯುತ್ತಿರುವ ರಕ್ತರಹಿತ ಕಗ್ಗೊಲೆಯಾಗಿದೆ ಎಂದರು.

ಎಸ್‌ಐಆರ್ ಜಾರಿಯಾದರೆ ದೇಶದ ಸುಮಾರು 16.5 ಕೋಟಿ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆ ಇದೆ. ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಭವಿಷ್ಯದಲ್ಲಿ ದಕ್ಷಿಣ ಭಾರತದ ರಾಜ್ಯಗಳ ರಾಜಕೀಯ ಅಸ್ತಿತ್ವಕ್ಕೂ ಧಕ್ಕೆಯಾಗುವ ಸಾಧ್ಯತೆ ಇದೆ. ಉತ್ತರಭಾರತದ ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಲೋಕಸಭಾ ಸದಸ್ಯರ ಸಂಖ್ಯೆ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳ ಒಟ್ಟಾರೆ ಸದಸ್ಯರ ಸಂಖ್ಯೆಯನ್ನು ಮೀರುವ ಸಾಧ್ಯತೆ ಇದೆ. ಇದರಿಂದ ಕೆಲವೇ ರಾಜ್ಯಗಳು ದೇಶದ ರಾಜಕೀಯ ನಿರ್ಧಾರಗಳನ್ನು ಪ್ರಭಾವಿಸುವ ಪರಿಸ್ಥಿತಿ ಉಂಟಾಗಬಹುದು ಎಂದರು.

ಈ ವೇಳೆ ಶಾಸಕ ರಿಜ್ವಾನ್ ಅರ್ಷದ್, ವೀರಸಂಗಯ್ಯ, ಎನ್. ವೆಂಕಟೇಶ್, ಬಿ.ಟಿ. ಲಲಿತಾನಾಯಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಆಕ್ಷೇಪಣೆ ಅವಧಿ ಮಾ.20ಕ್ಕೆ ವಿಸ್ತರಣೆ

ಬೆಂಗಳೂರು: ಜಿಬಿಎ ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ಪರಿಷ್ಕೃತ ಕರಡು ಮತದಾರರ ಪಟ್ಟಿಯಲ್ಲಿ ನಾಗರಿಕರು ದೂರು ಮತ್ತು ಆಕ್ಷೇಪಣೆಗಳ ಸಲ್ಲಿಕೆಗೆ 20ನೇ ಮಾರ್ಚ್ 2026 ರವರೆಗೆ ಅವಧಿ ವಿಸ್ತರಿಸಲಾಗಿದೆ.ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ, ಜಿಬಿಎಯ 5 ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆ-2026ರ ಸಂಬಂಧ ವಾರ್ಡ್‌ವಾರು ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಮಾ.9.ರಂದು ಪ್ರಚಾರಪಡಿಸಲಾಗಿದೆ. ಕರಡು ಮತದಾರರ ಪಟ್ಟಿಯ ಪ್ರತಿಯನ್ನು ಎಲ್ಲಾ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಮತ್ತು ವಾರ್ಡ್ ಕಚೇರಿಯಲ್ಲೂ ಮತದಾರರ ವೀಕ್ಷಣೆಗೆ ಲಭ್ಯವಿರುತ್ತದೆ. ಅಲ್ಲದೆ, ಜಿಬಿಎ ವೆಬ್ ಸೈಟ್‌ನಲ್ಲಿಯೂ https://gba.karnataka.gov.in/electoral2026 ಲಭ್ಯವಿರುತ್ತದೆ. ಸರ್ಚ್ ಟೂಲ್ ಬೈ ನೇಮ್‌ನಡಿಯಲ್ಲಿ ತಮ್ಮ ಹೆಸರನ್ನು ಪರಿಶೀಲಿಸಿಕೊ ಳ್ಳಬಹುದು. ಪರಿಷ್ಕೃತ ಕರಡು ಮತದಾರರ ಪಟ್ಟಿಯ ಕುರಿತು ದೂರು ಮತ್ತು ಆಕ್ಷೇಪಣೆ ಸಲ್ಲಿಕೆಗೆ ಮಾರ್ಚ್ 20 ರ ತನಕ ಅವಕಾಶ ನೀಡಲಾಗಿದೆ. ಪರಿಷ್ಕೃತ ಕರಡು ಮತದಾರರ ಪಟ್ಟಿ ಪ್ರಚುರ ಪಡಿಸುವ ಕುರಿತು ಮಾಹಿತಿ ನೀಡಲು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ಕರೆಯಲಾಗಿತ್ತು. ಸದರಿ ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳು ದೂರು ಮತ್ತು ಆಕ್ಷೇಪಣೆ ಅವಧಿಯನ್ನು ವಿಸ್ತರಿಸಲು ಒಕ್ಕೊರಲಿನಿಂದ ಮನವಿ ಮಾಡಿದ್ದರು. ಆದ್ದರಿಂದ ವಿಸ್ತರಣೆ ಮಾಡಲಾಗಿದೆ.

ಪಾಟೀಲ್ ಕಾರ್ಯ ಶ್ಲಾಘನೀಯ: ಸುಧೀಂದ್ರ

ಬೆಂಗಳೂರು: ಕೆ.ಎಚ್ ಪಾಟೀಲ್ ಅವರು ನಡೆದು ಬಂದ ದಾರಿ, ಕೈಗೊಂಡ ಸಹಕಾರ ಕ್ಷೇತ್ರದಲ್ಲಿನ ಮಹತ್ವದ ಕಾರ್ಯಗಳು, ರೈತ ಹೋರಾಟಗಳು, ಸಹಕಾರ ತತ್ವದಲ್ಲಿನ ನಂಬಿಕೆಗಳು, ಮಹತ್ವಕಾಂಕ್ಷಿ ಯೋಜನೆಗಳು, ಮೌಲ್ಯಧಾರಿತ ರಾಜಕಾರಣ, ಸಾಧಿಸಬೇಕೆಂಬ ಛಲ, ಸಾಹಸ ಪ್ರವೃತ್ತಿ, ಸ್ಥಾಪಿಸಿದ ಕೈಗಾರಿಕೆಗಳು, ಅವರ ದೂರ ದೃಷ್ಟಿ ಚಿಂತನೆಗಳ ಕಾರ್ಯ ಶ್ಲಾಘನೀಯ ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್ .ಈ ಸುಧೀಂದ್ರ ತಿಳಿಸಿದರು.ಜ್ಞಾನ ಭಾರತಿಯ ಕಾನೂನು ಶಾಲೆಯ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಕೆ.ಎಚ್.ಪಾಟೀಲ್ ಅವರ 101ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪಾಟೀಲ್‌ರು ಅಂದು ಬ್ಯಾಂಕಿನಲ್ಲಿ ಕಾರಕೂನರಾಗಿ ವೃತ್ತಿಜೀವನ ಆರಂಭಿಸಿ, ಅದೇ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ 22ಕ್ಕೂ ಹೆಚ್ಚಿನ ಶಾಖೆಗಳನ್ನು ರಾಜ್ಯಾದ್ಯಂತ ಆರಂಭಿಸಲು ಕಾರಣ ಭೂತರಾಗಿದ್ದು, 1950ರಲ್ಲಿ ಸಹಕಾರಿ ಸಂಘದ ಅಧ್ಯಕ್ಷರಾಗಿ ಸಾರ್ವಜನಿಕ ಜೀವನ ಆರಂಭಿಸಿ, 1954 ರಲ್ಲಿ ಎಐಸಿಸಿ ಅಧಿವೇಶನದಲ್ಲಿ ಭಾಗವಹಿಸುವ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರು ಎಂದರು.

ಕಾಂಗ್ರೆಸ್ ಸರಕಾರ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದೆ । ಗ್ಯಾರಂಟಿಗಳಿಂದ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಣೆ

ಉಪಸಮರ ಗೆಲುವಿನಲ್ಲಿ ಮಹಿಳೆಯರ ಪಾತ್ರ ಅಪಾರ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯ ಗೆಲುವಿನಲ್ಲಿ ಕಾಂಗ್ರೆಸ್ ಮಹಿಳಾ ಸದಸ್ಯರ ಪಾತ್ರ ಮಹತ್ವವಾದುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ ಕಾರ್ಯಕಾರಿ ಸಭೆ ಮತ್ತು ತರಬೇತಿ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2013 ರಿಂದ 2018 ಮತ್ತು 2023ರಿಂದ ಕಾಂಗ್ರೆಸ್ ಸರಕಾರ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದೆ. ಪ್ರಮುಖ ಗ್ಯಾರಂಟಿಯೋಜನೆಗಳಲ್ಲಿ ಒಂದಾದ ಶಕ್ತಿಯೋಜನೆಯಿಂದ ಇದುವರೆಗೆ ಮಹಿಳೆಯರು 700 ಕೋಟಿ ಪ್ರಯಾಣಗಳನ್ನು ಕೈಗೊಂಡಿದ್ದಾರೆ. ಮಹಿಳಾ ಕೇಂದ್ರಿತ ಯೋಜನೆಗಳಿಂದ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲಾಗಿದೆ. ಸರಕಾರದ ಗ್ಯಾರಂಟಿಗಳಿಂದ ಮಹಿಳೆಯರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ 1.26 ಕೋಟಿ ಮಹಿಳೆಯರಿಗೆ ಮಾಸಿಕ 2000 ರು. ಗಳನ್ನು ನೀಡಲಾಗುತ್ತಿದ್ದು, ಇದರಿಂದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಸುಧಾರಿಸಿದೆ. ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ನಲ್ಲಿ 1 ಲಕ್ಷಕ್ಕೂ ಹೆಚ್ಚು ಮಹಿಳಾ ಸದಸ್ಯರು ಇದ್ದು, ಭವಿಷ್ಯದಲ್ಲಿ ಈ ಸಂಖ್ಯೆ 2 ಲಕ್ಷಗಳಿಗೆ ವೃದ್ಧಿಸಬೇಕು. ಉಪಚುನಾವಣೆ ಸಮೀಪಿಸುತ್ತಿರುವದರಿಂದ ಸರಕಾರ ಜನಪರ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮಹಿಳಾ ಸದಸ್ಯರ ಪಾತ್ರ ಮಹತ್ವದ್ದಾಗಿದೆ ಎಂದರು.

ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಮಹಿಳಾ ಸದಸ್ಯರ ಎರಡು ತಂಡಗಳನ್ನು ರಚಿಸಿ, ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕಳೆದ ಬಾರಿ ಚನ್ನಪಟ್ಟಣ, ಶಿಗ್ಗಾಂವ್, ಸಂಡೂರು ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಜಯಭೇರಿ ಸಾಧಿಸಿದೆ. ಈ ಬಾರಿಯೂ ಎರಡೂ ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಲೇಬೇಕಿದ್ದು , ಇದಕ್ಕಾಗಿ ಅಗತ್ಯ ಸಿದ್ಧತೆಗಳನ್ನು ಕಾಂಗ್ರೆಸ್ ಪಕ್ಷ ಮಾಡಿಕೊಂಡಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.


ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ವತಿಯಿಂದ ನಡೆದ ಕಾರ್ಯಕಾರಿ ಸಭೆ, ತರಬೇತಿ ಶಿಬಿರ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಗೌರವಿಸಲಾಯಿತು.

ಗುರಿಯಿಟ್ಟುಕೊಂಡು ಮಹಿಳೆಯರು ರಾಜಕೀಯಕ್ಕೆ ಬರಲಿ

ನಿಷ್ಠೆಯಿಂದ ಕೆಲಸ ಮಾಡಿದರೆ ಅಧಿಕಾರ ಮನೆ ಬಾಗಿಲಿಗೆ ಬರಲಿದೆ. ಇದಕ್ಕೆ ನಾನೇ ಉತ್ತಮ ಉದಾಹರಣೆ, ಮಹಿಳೆಯರು ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು. ಬೂತ್‌ಮಟ್ಟದಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಬಿಜೆಪಿಯಲ್ಲಿ ಆರ್‌ಎಸ್‌ಎಸ್ ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ. ಅದೇ ರೀತಿ ಮಹಿಳಾ ಕಾಂಗ್ರೆಸ್ ಘಟಕ ಕೂಡ ಪಕ್ಷದಲ್ಲಿ ಕೆಲಸ ಮಾಡುತ್ತಿದೆ. ಉತ್ತಮ ಕೆಲಸ ಮಾಡಿದರೆ ಅಧಿಕಾರ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಮುಂಬರುವ ಗ್ರಾಮ, ತಾಲುಕು, ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಎಲ್ಲಾ ವರ್ಗದವರನ್ನು ಗುರುತಿಸಿ ಟಿಕೆಟ್ ನೀಡಬೇಕು ಎಂದರು. ಸಂಘಟನೆಯಲ್ಲಿ ಒತ್ತು ನೀಡುವವರನ್ನು, ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿರುವವರನ್ನುಗುರುತಿಸಬೇಕು. ನಿಮ್ಮ ಅಕ್ಕಪಕ್ಕದ ಮನೆಯವರ ಮನಸ್ಸನ್ನು ಗೆದ್ದು, ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ಮಾಡಬೇಕು. ನಿಸ್ವಾರ್ಥದಿಂದ ಪಕ್ಷದಲ್ಲಿ ಕೆಲಸ ಮಾಡಬೇಕು ಎಂದರು.

ಆರ್ಥಿಕ ಸ್ವಾತಂತ್ರ್ಯದಿಂದ ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಸಮಾಜದಲ್ಲಿ ಲಿಂಗತಾರತಮ್ಯ ಮತ್ತು ಅಸಮಾನತೆ ನಿವಾರಣೆಯಾಗದೇ ಸ್ವಾತಂತ್ರ್ಯ ಸಾರ್ಥಕತೆಯಾಗದು. ಮಹಿಳೆಯರಲ್ಲಿ ನಾಯಕತ್ವದ ಗುಣ ಬಹಳ ಪ್ರಮುಖವಾಗಿದೆ. ಎಲ್ಲರಿಗೂ ಸಮಾನ ಅವಕಾಶ ದೊರೆತರೆ ಸಮಾನತೆಯನ್ನು ಸಾಧಿಸುವುದು ಸುಲಭವಾಗಿದೆ.

– ಸಿದ್ದರಾಮಯ್ಯ, ಸಿಎಂ

ಬಿಎಸ್‌ಆರ್‌ಪಿ ಮಲ್ಲಿಗೆ ಮಾರ್ಗದ ಕೆಲಸ ವಿಳಂಬ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ನಗರದ ಪ್ರಮುಖ ಯೋಜನೆಯಾದ ಬೆಂಗಳೂರು ಉಪನಗರ ರೈಲು ಯೋಜನೆಯ ಮಲ್ಲಿಗೆ ಮಾರ್ಗದ ಕಾಮಗಾರಿಯು ಸ್ಥಗಿತಗೊಂಡು ವರ್ಷಕ್ಕೂ ಹೆಚ್ಚು ಕಾಲವಾಗಿದ್ದು, ಕಾಮಗಾರಿ ಮುಂದುವರಿಸುವವರ ಮಾಹಿತಿ ದೊರೆಯದ ಹಿನ್ನೆಲೆ ಯೋಜನೆ ಮತ್ತಷ್ಟು ವಿಳಂಬವಾಗುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ.

ಬೆನ್ನಿಗಾನಹಳ್ಳಿ-ಚಿಕ್ಕಬಾಣಾವರ ಸಂಪರ್ಕಿಸಲಿರುವ 25.01 ಕಿ.ಮೀ. ನ ಈ ಕಾರಿಡಾರ್ ಕಾಮಗಾರಿಯಿಂದ ಎಲ್‌ಆ್ಯಂಡ್‌ಟಿ ಕಂಪನಿ ಹಿಂದೆ ಸರಿದಿದ್ದು, ಕೆ-ರೈಡ್ ಕಳೆದ ನವೆಂಬರ್‌ನಲ್ಲೇ ಈ ಯೋಜನೆ ಸಲುವಾಗಿ ಟೆಂಡರ್ ಕರೆದು ಫೆಬ್ರವರಿ ಮೊದಲ ವಾರದಲ್ಲೇ ಟೆಂಡರ್ ತೆರೆದು ಅಂತಿಮಗೊಳಿಸುವ ಪ್ರಕ್ರಿಯೆ ನಡೆಯಬೇಕಿತ್ತು. ಅಂದುಕೊಂಡಂತೆ ನಡೆದಿದ್ದರೆ ಈ ವೇಳೆಗೆ ಕಾರ್ಯಾದೇಶ ನೀಡಿರಬೇಕಿತ್ತು. ಆದರೆ ಪ್ರಕ್ರಿಯೆಯಿನ್ನೂ ನಡೆದಿಲ್ಲ. ಈ ನಡುವೆ, ಉಪನಗರ ರೈಲು ನಿಲ್ದಾಣಗಳ ಕಾಮಗಾರಿಯನ್ನು ಎನ್‌ಸಿಸಿ ಕಂಪನಿ ಚುರುಕುಗೊಳಿಸಿದ್ದು, ಯಶವಂತಪುರ, ಬೆನ್ನಿಗಾನಹಳ್ಳಿ, ಕಸ್ತೂರಿನಗರ, ಬಾಣಸವಾಡಿ ಸೇರಿದಂತೆ ಇತರೆಡೆ ನಿಲ್ದಾಣ ನಿರ್ಮಿಸಲಾಗುತ್ತಿದೆ. ಆದರೆ, ಇದರ ಜತೆಗೆ ಆಗಬೇಕಿದ್ದ ಟ್ರ್ಯಾಕ್ ಕಾಮಗಾರಿ ಹಿಂದುಳಿದಿದೆ. ಟ್ರ್ಯಾಕ್, ಸಿಗ್ನಲಿಂಗ್, ಟ್ರ್ಯಾಕ್ಷನ್, ವಿದ್ಯುತ್ ಸಂಪರ್ಕ ಸೇರಿ ಎಲ್ಲವೂ ಹೊಸ ಕಂಪನಿಗೆ ಕಾರ್ಯಾದೇಶದ ಬಳಿಕವೇ ಆರಂಭವಾಗಬೇಕಿದೆ.

ಹಲವು ಕಾಮಗಾರಿ ಅರ್ಧಕ್ಕೆ ಸ್ಥಗಿತ: ಕೆ-ರೈಡ್ ಮಾಹಿತಿಯಂತೆ ಬೆನ್ನಿಗಾನಹಳ್ಳಿ 160, ಹೆಬ್ಬಾಳ 144, ಯಶವಂತಪುರ 233 ಪಿಲ್ಲರ್ ಕಾಮಗಾರಿ ಮುಗಿದಿದ್ದು, ಇನ್ನಷ್ಟು ಬಾಕಿಯುಳಿದಿದೆ. ರೈಲ್ವೆ ಮಾರ್ಗದ ಗಡಿ ಗೋಡೆ 560 ಮೀ. ವ್ಯಾಪ್ತಿಯಲ್ಲಿ210 ಮೀ. ನಿರ್ಮಾಣವಾಗಿದ್ದು, 250 ಮೀ. ನಿರ್ಮಾಣವಾಗಬೇಕಿದೆ. ಪಿಯರ್ ಕ್ಯಾಪ್ ಜೋಡಣೆ ಕೆಲಸ ಬಾಕಿಯುಳಿದಿದ್ದು, 44 ಸಣ್ಣ ಸೇತುವೆಗಳ ನಿರ್ಮಾಣ ಪೈಕಿ 6 ಮುಗಿದಿವೆ. 21 ಅರ್ಧಕ್ಕೆ ನಿಂತಿವೆ. 20 ರೈಲ್ವೆ ಕೆಳಸೇತುವೆ ಪೈಕಿ 4 ಭಾಗಶಃ ಮುಗಿದರೆ, 8 ಎಲ್‌ಸಿ ತೆರವು ಹಾಗೂ ಸ್ವತ್ತುಗಳ ಸ್ಥಳಾಂತರ ಬಾಕಿ ಇದೆ. ಟ್ರ್ಯಾಕ್ ಕಾಮಗಾರಿ ಆರಂಭಿಸಲು ಕೆ-ರೈಡ್‌ಗೆ ಭೂಸ್ವಾಧೀನ , ಒತ್ತುವರಿ ತೆರವು ಸೇರಿ ಈ ಪ್ರದೇಶದಲ್ಲಿ ಇನ್ನಷ್ಟು ಹಿಡಿತ ಬೇಕು. ಹೀಗಾಗಿ, ಕಾರ್ಯಾದೇಶ ನೀಡಿಲ್ಲ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ಯೋಜನಾ ವೆಚ್ಚ 23,342 ಕೋಟಿ ರು.

ಆರಂಭಿಕವಾಗಿ 4 ಕಾರಿಡಾರ್ ಸೇರಿ ಯೋಜನಾ ಮೊತ್ತವನ್ನು 18,621 ಕೋಟಿ ರು. ಅಂದಾಜಿಸಲಾಗಿತ್ತು. ಆದರೆ, ಕೇಂದ್ರ ಸರಕಾರ 300 ರೈಲು ಬೋಗಿಗಳ ಖರೀದಿ ಬದಲು ಪಿಪಿಪಿ ಮಾದರಿಯಲ್ಲಿ ನಿಯೋಜಿಸಿಕೊಳ್ಳುವ ಸಲಹೆ ನೀಡಿತ್ತು. ಇದರಿಂದ ಯೋಜನಾ ಮೊತ್ತ 2,854 ಕೋಟಿ ರು. ಕಡಿಮೆಯಾಗಿ 15,767 ಕೋಟಿಗೆ ನಿರ್ಧಾರವಾಗಿತ್ತು. ಆದರೆ, ಪಿಪಿಪಿಯಡಿ ರೈಲು ಖರೀದಿ ಸಾಧ್ಯವಾಗಿಲ್ಲ. ಹೀಗಾಗಿ, 4,300 ಕೋಟಿ ರು. ಹೆಚ್ಚುವರಿ ಮೊತ್ತ ವ್ಯಯಿಸಿ ಬೋಗಿ ಖರೀದಿ ಮಾಡಬೇಕಿದೆ. ಸಿವಿಲ್ ಕಾಮಗಾರಿ ವಿಳಂಬದಿಂದ ಯೋಜನಾ ಮೊತ್ತ 23,342 ಕೋಟಿ ರು.ಗೆ ತಲುಪಬಹುದು ಎಂದು ಕೆ-ರೈಡ್ ಮೂಲಗಳು ಅಂದಾಜಿಸಿವೆ. ಜತೆಗೆ, ಒಟ್ಟಾರೆ ಬಿಎಸ್ ಆರ್‌ಪಿಯ 4 ಮಾರ್ಗ ಸೇರಿ ಯೋಜನೆ ಅನುಷ್ಠಾನ ಗಡುವು 2026 ರಿಂದ 2030 ಕ್ಕೆ ವಿಸ್ತರಣೆಗೊಂಡಿದೆ.

ಮಡಿವಾಳ ಸಮಾಜ ಎಸ್‌ಟಿ ಸೇರ್ಪಡೆಗೆ ಆಗ್ರಹ

ಬೆಂಗಳೂರು: ಮಡಿವಾಳ ಸಮಾಜ ಪರಿಶಿಷ್ಟ ಜಾತಿ ಸೇರ್ಪಡೆ ಮಾಡುವಂತೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪ್ರತಿಭಟನೆ ನಡೆಯಿತು.

ಜಗದ್ಗುರು ಡಾ.ಶ್ರೀ ಬಸವ ಮಾಚಿದೇವ ಸ್ವಾಮೀಜಿ, ಶ್ರೀ ಮುಕ್ತಾನಂದ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಪ್ರತಿಭಟನೆ ನಡೆಯಿತು. ಸಂಘದ ಅಧ್ಯಕ್ಷ ಎಂ.ಕೆ.ಹನುಮ ಂತಪ್ಪ, ಮಡಿವಾಳ ಸಮಾಜದ ಮುಖಂಡರಾದ ದೀಪಕ್ ವಿ.ದುರ್ಗೇಶ್ ಜಿ.ಮಡಿವಾಳ್, ಎಂ. ಚಂದ್ರಕಾಂತ್, ಕೆ.ಮಲ್ಲಯ್ಯ, ರಾಜು ತಲ್ಲೂರು, ಡಾ.ರವಿಕುಮಾರ್, ಎಚ್.ಎಸ್.ವೆಂಕಟೇಶ್ , ಪಿ.ರಂಗಸಾಮಯ್ಯ, ಸಂಗ ಮೇಶ್ ರವರು ಜಿಲ್ಲಾ ಅಧ್ಯಕ್ಷರು, ಸಾವಿರಾರು ಮಡಿವಾಳ ಸಮಾಜದವರು ಪ್ರತಿಭಟನೆಯಲ್ಲಿ ಪಾಲ್ಗೊಂ ಡಿದ್ದರು. ಅಧ್ಯಕ್ಷರಾದ ಎಂ.ಕೆ.ಹನುಮಂತಪ್ಪರವರು ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ನಮ್ಮ ಸಮಾಜಕ್ಕೆ ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಕೂಗು ಹಲವಾರು ದಶಕಗಳಿಂದ ಕೇಳಿ ಬರುತ್ತಿದೆ. ಆದರೆ ಈ ಬಗ್ಗೆ ನಮ್ಮಗೆ ಸಿಗಬೇಕಾದ ಸ್ಥಾನಮಾನವಾಗಲೀ ನಮ್ಮ ಬೇಡಿಕೆ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ಇಲ್ಲಿಯವರೆಗೆ ಬಂದಿರುವ ಯಾವುದೇ ಸರಕಾರಗಳು ಮಾಡಲೇ ಇಲ್ಲ. ನಮ್ಮ ಸಮಾಜಕ್ಕೆ ನಿಜವಾಗಿಯೂ ಸಿಗಬೇಕಾದ ಪರಿಶಿಷ್ಟ ಜಾತಿಯ ಹಕ್ಕಿನಿಂದ ನಾವು ಇಂದು ವಂಚಿತರಾಗಿದ್ದೇವೆ. ನಮಗೆ ನಿಜವಾಗಿಯೂ ಯಾವ ಹಕ್ಕು ಸಿಗಬೇಕು ಅದು ಸಿಗದೇ ಆ ಜಾಗದಲ್ಲಿ ಬಲಿಷ್ಠ ಜಾತಿಗಳು ಆಕ್ರಮಿಸಿಕೊಂಡು ನಮ್ಮ ಸಮಾಜ ಸಂಪೂರ್ಣವಾಗಿ ನಿರ್ಲಕ್ಷಿತವಾಗಿದೆ ಎಂದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಸರ್ವಿಸ್ ರಸ್ತೆ ಬುಲೆವಾರ್ಡ್ ಸರಿಯಾಗಿ ನಿರ್ವಹಿಸಿ

ಬೆಂಗಳೂರು: ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಕೆ.ಆರ್.ಪುರ ವಲಯದ ರಾಮಮೂರ್ತಿ ನಗರದಿಂದ ಬೆನ್ನಿಗಾನಹಳ್ಳಿವರೆಗೆ ಹೊರವರ್ತುಲ ರಸ್ತೆ ಸರ್ವಿಸ್ ರಸ್ತೆಯನ್ನು ಅಪರ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಪರಿಶೀಲಿಸಿದರು.

ಅಪರ ಆಯುಕ್ತರು ಪರಿಶೀಲನೆ ವೇಳೆ ರಸ್ತೆಯ ಗುಣಮಟ್ಟ, ಪಾದಚಾರಿ ಮಾರ್ಗದ ಸ್ಥಿತಿಗತಿ, ಬುಲೆವಾರ್ಡ್ ನಿರ್ವಹಣೆ ಹಾಗೂ ಚರಂಡಿ ವ್ಯವಸ್ಥೆಗಳ ಬಗ್ಗೆ ಸಮಗ್ರವಾಗಿ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದರು. ರಾಮ ಮೂರ್ತಿ ನಗರದಿಂದ ಬೆನ್ನಿಗಾನಹಳ್ಳಿವರೆಗಿನ ಹೊರವರ್ತುಲ ರಸ್ತೆಯಲ್ಲಿ ವಿವಿಧ ಕಡೆಗಳಲ್ಲಿ ಕಂಡುಬಂದ ರಸ್ತೆ ಗುಂಡಿಗಳನ್ನು ತಕ್ಷಣವೇ ಮುಚ್ಚುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಜತೆಗೆ ಹಾನಿಗೊಳಗಾದ ಪಾದಚಾರಿ ಮಾರ್ಗಗಳನ್ನು ದುರಸ್ತಿ ಮಾಡಿ ಪಾದಚಾರಿಗಳ ಸುರಕ್ಷಿತ ನಡಿಗೆಗೆ ಅವಕಾಶ ಕಲ್ಪಿಸುವಂತೆ ನಿರ್ದೇಶನ ನೀಡಿದರು.

ಹಾವೇರಿಯಲ್ಲಿ ಚಿನ್ನದ ನಿಕ್ಷೇಪ: ಜಿಎಸ್‌ಐ ಸಮೀಕ್ಷೆ

ಹಾವೇರಿ: ಜಿಲ್ಲೆಯ ಕೆಲ ಪ್ರದೇಶಗಳಲ್ಲಿ ಚಿನ್ನ ಹಾಗೂ ಇತರೆ ನೈಸರ್ಗಿಕ ಖನಿಜ ಸಂಪತ್ತು ಇರುವ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಭಾರತೀಯ ಭೂ ಸರ್ವೇಕ್ಷಣಾ ಸಂಸ್ಥೆ (ಜಿಎಸ್‌ಐ), ಖನಿಜಗಳ ನಿಕ್ಷೇಪ ಪತ್ತೆಗಾಗಿ ವಿಮಾನದ ಮೂಲಕ ಹುಡುಕಾಟ ಆರಂಭಿಸಿದೆ. ಕೇರಳದ ಪ್ರದೇಶಗಳಿಂದ ಹುಡುಕಾಟ ಆರಂಭಿಸಿರುವ ಜಿಎಸ್‌ಐ ಅಧಿಕಾರಿಗಳು, ಉಡುಪಿ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಯ ಮೂಲಕ ಹಾವೇರಿ ಜಿಲ್ಲೆಗೂ ಪ್ರವೇಶಿಸಿದ್ದಾರೆ. ವಿಮಾನದಲ್ಲಿರುವ ಉಪಕರಣಗಳ ಮೂಲಕ ಭೂಮಿ ಆಳದಲ್ಲಿರುವ ಖನಿಜ ಸಂಪತ್ತು ತಿಳಿಯಲು ಪ್ರಯತ್ನಿಸುತ್ತಿದ್ದಾರೆ. ಜಿಲ್ಲೆಯ ಹಿರೇಕೆರೂರು, ಬ್ಯಾಡಗಿ, ರಾಣೆಬೆನ್ನೂರು ಹಾಗೂ ಹಾವೇರಿ ತಾಲೂಕಿನ ಹಲವು ಕಡೆಗಳಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ.ಜಿಎಸ್‌ಐ ಸಮೀಕ್ಷೆ ಕಾರ್ಯ ನಡೆಯುತ್ತಿರುವುದರಿಂದ, ಭೂಮಿಯಿಂದ ಕಡಿಮೆ ಅಂತರದಲ್ಲಿ ವಿಮಾನ ಹಾರಾಟ ನಡೆಸುತ್ತಿದೆ. ಈ ವಿಮಾನ ಗಮನಿಸುತ್ತಿರುವ ಜನರು, ಇದು ಯಾವ ವಿಮಾನ. ಕೆಳಗಡೆ ಹಾರಾಟ ನಡೆಸುತ್ತಿ ದೆಯಲ್ಲ ಎಂದು ಅನುಮಾನ ವ್ಯಕ್ತಪಡಿಸುತ್ತಿ ದ್ದಾರೆ. ವಿಮಾನದ ಬಗ್ಗೆ ಜನರಲ್ಲೂ ಆತಂಕ ಶುರುವಾಗಿದೆ.

ಮಾರಂಬೀಡ ಗುಡ್ಡದ ಬಳಿ ನಿಕ್ಷೇಪ: ರಾಣೆಬೆನ್ನೂರು ತಾಲೂಕಿನ ಕಾಕೋಳದ ಗುಡ್ಡ ಹಾಗೂ ಹಾನಗಲ್ ತಾಲೂಕಿನ ಮಾರಂಬೀಡ ಗುಡ್ಡದ ಬಳಿ ಚಿನ್ನದ ನಿಕ್ಷೇಪ ಇರುವ ಬಗ್ಗೆ ಈ ಹಿಂದೆ ಸುದ್ದಿಗಳು ಹರಿದಾಡಿದ್ದವು. ಕೆಲ ಸಂಶೋಧಕರು, ಗುಡ್ಡಗಳಲ್ಲಿ ಸಂಶೋಧನೆ ಯನ್ನೂ ನಡೆಸಿದ್ದರು. ಆದರೆ, ಎಷ್ಟು ಪ್ರಮಾ ಣದಲ್ಲಿ ಚಿನ್ನವಿದೆ ಎಂಬುದು ಗೊತ್ತಾಗಿರಲಿಲ್ಲ. ಈಗ ಸಮೀಕ್ಷೆ ನಡೆಯುತ್ತಿರುವುದರಿಂದ, ಚಿನ್ನದ ನಿಕ್ಷೇಪದ ಬಗ್ಗೆ ಸ್ಪಷ್ಟ ಮಾಹಿತಿ ಸಿಗುವ ನಿರೀಕ್ಷೆಯಿದೆ.

ಟಿಕೆಟ್‌ಗಾಗಿ ಪಟ್ಟು ಹಿಡಿದ ಬಿಜೆಪಿ-ಕಾಂಗ್ರೆಸ್‌ನ ಹಲವರು | ಅನುಕಂಪ, ಅಭಿವೃದ್ಧಿ ಮಂತ್ರ ಪಠಿಸಲಿದೆಯಾ ಎಸ್‌ಎಸ್ ಕುಟುಂಬ

ದಾವಣಗೆರೆ ದಕ್ಷಿಣಾಧಿಪತಿ ಸ್ಥಾನಕ್ಕೆ ಭಾರೀ ಪೈಪೋಟಿ

ಗಣೇಶ್ ಕಮ್ಲಾಪುರ ದಾವಣಗೆರೆ

ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ದಾವಣಗೆರೆ ದಕ್ಷಿಣ ಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಕೊನೆಗೂ ದಿನಾಂಕ ಘೋಷಣೆಯಾಗಿದ್ದು, ಅಭ್ಯರ್ಥಿ ಆಯ್ಕೆ ಕಗ್ಗಂಟು ಎರಡೂ ಪಕ್ಷಗಳಲ್ಲಿ ಮುಂದುವರಿದಿದೆ.

ಮನೆಯೊಂದು ಮೂರು ಬಾಗಿಲು ಎಂಬಂತಿದ್ದ ಬಿಜೆಪಿ ಸದ್ಯಕ್ಕೆ ಒಗ್ಗಟ್ಟಿನ ಮಂತ್ರ ಜಪಿಸಿದ್ದು, ಕಾಂಗ್ರೆಸ್‌ನಲ್ಲಿ ಟಿಕೆಟ್ ಕಗ್ಗಂಟು ಬಗೆಹರಿದಂತಿಲ್ಲ. ಪ್ರಸ್ತುತ ಚುನಾವಣೆ ರಾಜಕೀಯ ಮುಖಂಡರಿಗೆ ಅಸ್ತಿತ್ವದ ಪ್ರಶ್ನೆಯಾಗಿದ್ದು, ಕಾಂಗ್ರೆಸ್‌ನಲ್ಲಿ ಎಸ್‌ಎಸ್ ಕುಟುಂಬ ಅನುಕಂಪದ ಆಧಾರ, ಅಭಿವೃದ್ಧಿ ಕಾರ್ಯ ಮುಂದಿಟ್ಟುಕೊಂಡು ಚುನಾವಣೆ ಬಯಸಿದೆ. ಇದೇ ಪಕ್ಷದ ಮುಸ್ಲಿಂ ಸಮುದಾಯ, ಈ ಭಾಗದಲ್ಲಿ ಗೆಲುನ ನಿರ್ಣಾಯಕರು ಮತ್ತು ಈವರೆಗೆ ನಿಷ್ಠರಾದ ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕೆಂಬ ಆಗ್ರಹ ಮುಂದಿಟ್ಟುಕೊಂಡು ಟಿಕೆಟ್ ಬಯಸಿದೆ. ಇನ್ನೂ ಬಿಜೆಪಿ ಹಾಗೂ ಜೆಡಿಎಸ್ ಹಿಂದುತ್ವ ನೆಲೆಯಲ್ಲಿ ದಕ್ಷಿಣದಲ್ಲಿ ಅಧಿಪತ್ಯ ಸ್ಥಾಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಮುಸ್ಲಿಂರಿಗೆ ಟಿಕೆಟ್ ಅಂದಿದ್ರು ಎಸ್‌ಎಸ್: ಶಾಸಕರ ನಿಧನದಿಂದ ತೆರವಾದ ಸ್ಥಾನಕ್ಕೆ ಅನುಕಂಪದ ಆಧಾರದಲ್ಲಿ ಅವರ ಮನೆಯ ಯಾರಿಗಾದರೂ ಒಬ್ಬರಿಗೆ ಟಿಕೆಟ್ ಕೊಡಬೇಕೆಂಬ ಸಿದ್ಧಾಂತ ಕಾಂಗ್ರೆಸ್ ಈವರೆಗೆ ನಡೆಸಿಕೊಂಡು ಬಂದಿದೆ. ಹೀಗಾಗಿ, ಎಸ್ ಎಸ್ ಕುಟುಂಬದಲ್ಲಿಯೇ ಟಿಕೆಟ್‌ಗಾಗಿ ಲಾಬಿ ನಡೆಯುತ್ತಿದ್ದು, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಸಹೋದರ ಎಸ್.ಎಸ್.ಗಣೇಶ್ ಸಹ ಟಿಕೆಟ್‌ಗಾಗಿ ತೆರೆಮರೆ ಕಸರತ್ತು ನಡೆಸುತ್ತಿದ್ದಾರೆ.

ಇನ್ನೊಂದೆಡೆ, ದಿ. ಶಾಮನೂರು ಶಿವಶಂಕರಪ್ಪ ಅವರು ಹಿಂದಿನ ಚುನಾವಣೆ ಸಂದರ್ಭ ಮುಂದಿನ ವಿಧಾನಸಭೆ ಚುನಾವಣೆಗೆ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಿ ಗೆಲ್ಲಿಸಿಕೊಂಡು ಬರಲಾಗುವುದು ಎಂದು ದಿ. ಶಿವಶಂಕರಪ್ಪ ಹೇಳಿದ್ದರೂ ಎಂಬ ಹೇಳಿಕೆಯನ್ನಿಟ್ಟುಕೊಂಡು ಅಲ್ಪಸಂಖ್ಯಾತರು ಸಹ ಕಾಂಗ್ರೆಸ್ ಟಿಕೆಟ್‌ಗಾಗಿ ಒತ್ತಾಯಿಸುತ್ತಿದ್ದು, ಅಬ್ದುಲ್ ಜಬ್ಬಾರ್ ಅವರ ಹೆಸರು ಪ್ರಸ್ತುತ ಮುನ್ನಲೆಯಲ್ಲಿದೆ. ಇವರ ಪರ ಸಚಿವ ಜಮೀರ್ ಅವರು ಸಹ ಟಿಕೆಟ್ ಲಾಬಿ ನಡೆಸಿದ್ದು, ಎಸ್‌ಎಸ್ ಮಲ್ಲಿಕಾರ್ಜುನ್ ಕೆಂಗಣ್ಣಿಗೆ ಗುರಿಯಾಗಿದೆ. ಜತೆಗೆ, ರಿಯ ಮುಖಂಡ ಸಾದಿಕ್ ಪೈಲ್ವಾನ್, ಯುವ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಸೈಯದ್ ಖಾಲಿದ್ ಹೆಸರು ಕೇಳಿ ಬರುತ್ತಿವೆ.

ತಣ್ಣಗಾದ ಭಿನ್ನಮತ, ಒಗ್ಗಟ್ಟಿನ ಮಂತ್ರ: ಇನ್ನೂ, ಬಿಜೆಪಿಯಲ್ಲಿ ಅಡಗಿದ್ದ ಭಿನ್ನರಾಗ ತುಸು ಮಟ್ಟಿಗೆ ಶಮನಗೊಂಡಿದ್ದು, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ್ ಹಾಗೂ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಬಣ ಇದೀಗ ಒಗ್ಗಟ್ಟಿನ ಮಂತ್ರ ಜಪಿಸಿದ್ದು, ಟಿಕೆಟ್ ಯಾರಿಗೆ ನೀಡಲಿ ಒಗ್ಗಟ್ಟಿನಿಂದ ಗೆಲ್ಲಿಸಿಕೊಂಡು ಬರುವ ಹೇಳಿಕೆ ನೀಡುತ್ತಿದ್ದಾರೆ. ಆದರೂ, ತಮ್ಮ ನೆಚ್ಚಿನ ಅಭ್ಯರ್ಥಿಗೇ ಟಿಕೆಟ್ ತರಬೇಕೆಂಬ ತೆರೆಮರೆಯ ಕಸರತ್ತು ಮಾತ್ರ ನಿಂತಿಲ್ಲ. ಈ ನಡುವೆ ಬೆಂಗಳೂರಿನಲ್ಲಿ ನಡೆದ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಸ್ವಾಭಿಮಾನಿ ಬಳಗದ ಜಿ.ಬಿ.ನಯ್‌ಕುಮಾರ್ ಹೆಸರು ಪ್ರಸ್ತಾಪವಾದ ನ್ನೆಲೆಯಲ್ಲಿ ಆತಂಕಗೊಂಡ ಜಿಲ್ಲಾ ಬಿಜೆಪಿ ನಾಯಕರು ತಮ್ಮತಮ್ಮೊಳಗೆ ಸಂಧಾನಸೂತ್ರ ಅನುಸರಿಸಿಕೊಂಡು ಒಮ್ಮತದ ಅಭ್ಯರ್ಥಿ ಆಯ್ಕೆಗೆ ಮುಂದಾಗಿದ್ದಾರೆ.

ಏ.9ಕ್ಕೆ ಚುನಾವಣೆ ದಿನಾಂಕ ಘೋಷಣೆಯಾಗಿದ್ದು, ಮಾ.16ರಿಂದಲೇ ನಾಮಪತ್ರ ಸಲ್ಲಿಕೆ ಆರಂಭಗೊಳ್ಳಲಿದೆ. ಮೇ.4ರಂದು ಚುನಾವಣಾ ಫಲಿತಾಂಶ ಪ್ರಕಟಗೊಳ್ಳಲಿದ್ದು, ದಕ್ಷಿಣಾಧಿಪತಿ ಯಾರಾಗಲಿದ್ದಾರೆ ಕಾದುನೋಡಬೇಕಿದೆ.

ಬಿಜೆಪಿಗೆ ಅನುಕೂಲಕರ ಸ್ಥಿತಿ?

ಪ್ರಸ್ತುತ ಮುಸ್ಲಿಂ ಸಮುದಾಯದವರೇ ನಿರ್ಣಾಯಕರಾಗಿರುವ ದಾವಣಗೆರೆ ದಕ್ಷಿಣದಲ್ಲಿ ಎಸ್ ಎಸ್ ಕುಟುಂಬಕ್ಕೆ ಟಿಕೆಟ್ ನೀಡಿದ್ದೇ ಆದರೆ ಮುಸ್ಲಿಂಮರು ಸಿಡಿದೇಳುವ ಸಾಧ್ಯತೆ ಇದೆ. ಅಥವಾ ಒಂದುವೇಳೆ ಅಲ್ಪಿಸಂಖ್ಯಾತರಿಗೆ ಟಿಕೆಟ್ ದಕ್ಕಿದ್ದಲ್ಲಿ ಇತರೆ ಸಮುದಾಯಗಳ ಮತಗಳು ಬಿಜೆಪಿಯತ್ತ ವಾಲುವ ಸಾಧ್ಯತೆ ಇರುವುದರಿಂದ ಈ ಬಾರಿ ಬಿಜೆಪಿಗೆ ಅನುಕೂಲಕರ ವಾತಾವರಣದೆ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ಯಾವ ಪಕ್ಷದಿಂದ ಯಾರೂ ಆಕಾಂಕ್ಷಿ?

ಬಿಜೆಪಿಯಿಂದ ಕಳೆದ ಬಾರಿ ಶಾಮನೂರು ವಿರುದ್ಧ ಸ್ಪರ್ಧಿಸಿ ಸೋತಿದ್ದ ಬಿ.ಜಿ.ಅಜಯಕುಮಾರ್, ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಟಿ.ಶ್ರೀನಿವಾಸ ದಾಸಕರಿಯಪ್ಪ, ರಾಜನಹಳ್ಳಿ ಶಿವಕುಮಾರ್, ದೇವರಮನಿ ಶಿವಕುಮಾರ್ ಇತರರು. ಕಾಂಗ್ರೆಸ್‌ನಿಂದ ಎಸ್‌ಎಸ್‌ಎಂ ಪುತ್ರ ಸಮರ್ಥ್, ಸಹೋದರ ಎಸ್.ಎಸ್. ಗಣೇಶ್, ಅಬ್ದುಲ್ ಜಬ್ಬಾರ್, ಸಾದಿಕ್ ಪೈಲ್ವಾನ್, ಸೈಯದ್ ಖಾಲಿದ್ ಇತರರು.

> ದಾವಣಗೆರೆ ಜಿಲ್ಲಾ ಬಿಜೆಪಿಯಲ್ಲಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿದ್ದವು. ಆದರೆ, ಅವನ್ನೆಲ್ಲಾ ಮರೆತು ಪಕ್ಷ ವರಿಷ್ಠರು ಸೂಚಿಸುವ ಅಭ್ಯರ್ಥಿ ಗೆಲ್ಲಿಸಿಕೊಂಡು ಬರುತ್ತೇವೆ. ಈ ಬಾರಿ ದಾವಣಗೆರೆ ದಕ್ಷಿಣದಲ್ಲಿ ಬಿಜೆಪಿ ಬಾವುಟ ಹಾರಿಸುವುದು ಶತಸಿದ್ಧ. ಅದಕ್ಕಾಗಿ ಈಗಾಗಲೇ ಬೂತ್ ಮಟ್ಟದಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ.
>
> -ಎಂ.ಪಿ.ರೇಣುಕಾಚಾರ್ಯ, ಮಾಜಿ ಸಚಿವ

> ಕಾಂಗ್ರೆಸ್‌ನ ಅಭಿವೃದ್ಧಿ ಕಾರ್ಯಗಳಿಂದ ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಪುನಃ ಅಧಿಪತ್ಯ ಸಾಧಿಸುತ್ತದೆ. ಟಿಕೆಟ್ ಚಾರದಲ್ಲಿ ಒಂದಿಷ್ಟು ಗೊಂದಲದ್ದರೂ ಅವೆಲ್ಲವನ್ನೂ ಸರಿಪಡಿಸಿಕೊಂಡು ಸೂಕ್ತ ಅಭ್ಯರ್ಥಿಯನ್ನು ನಿಲ್ಲಿಸಿ, ಗೆಲ್ಲಿಸಿಕೊಂಡು ಬರುತ್ತೇವೆ.
>
> -ಎಚ್.ಬಿ. ಮಂಜಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಧಾನಸಭಾಧ್ಯಕ್ಷರಿಂದಲೇ ಸಭಾತ್ಯಾಗ!

← ಮೊದಲ ಪುಟದಿಂದ

ಶೇ.50ರಷ್ಟು ಸಚಿವರು ಇರಬೇಕು ಎನ್ನುವ ಪಾಲನೆಯಾಗಿಲ್ಲ. ಐದನೇ ಬಾರಿ ವಾರ್ನಿಂಗ್ ಮಾಡಿ, ರೆಕಾರ್ಡ್ ಆಗಲಿ. ನೀವು ಹೇಳಿದರೂ ಯಾರೂ ಎಚ್ಚೆತ್ತುಕೊಂಡಿಲ್ಲ, ದೇವರ ತರ ಬಂದು ದೇವರ ತರ ಮನೆಗೆ ಹೋಗ್ತಾರೆ. ಸರಕಾರ ಸತ್ತುಹೋಗಿದೆ, ತಿಥಿ ಮಾಡಬೇಕು, ತಿಥಿ ಊಟಕ್ಕೆ ಹೋಗಬೇಕು ಎಂದು ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಸಚಿವರಿಗೆ ಗಂಭೀರತೆ ಇರಬೇಕು: ಸಚಿವರ ಅನುಪಸ್ಥಿತಿಗೆ ತೀವ್ರ ಬೇಸರ ವ್ಯಕ್ತಪಡಿಸಿದ ಸ್ಪೀಕರ್ ಯು.ಟಿ.ಖಾದರ್, ಶಾಸಕರ ಕ್ಷೇತ್ರದ ಸಮಸ್ಯೆಗೆ ನಾವು ಸದನ ನಡೆಸುತ್ತೇವೆ. ಮೂರು ತಿಂಗಳಿಗೊಮ್ಮೆ ಶಾಸಕರು ಸಭೆ ಸೇರಬೇಕು ಎಂದು ಅಧಿವೇಶನ ನಡೆಸುತ್ತೇವೆ. ಪ್ರಶ್ನೆ ಕೇಳಿದರೆ ಉತ್ತರ ಇರೋದಿಲ್ಲ. ಗಂಭೀರತೆಯಿಂದ ಇರಬೇಕು ಎಂದು ಹೇಳಿದ್ದೇನೆ. ಆದರೆ, ಯಾರೂ ಹಾಜರಾಗುತ್ತಿಲ್ಲ. ಈ ಬಗ್ಗೆ ಮೊನ್ನೆಯೇ ಮಂತ್ರಿಗಳು, ಸರಕಾರಕ್ಕೆ ಸ್ಪಷ್ಟವಾಗಿ ಹೇಳಿದ್ದೇವೆ ಎಂದರು.

ಸದನ ನಡೆಸುವುದು ಮಂತ್ರಿಗಳಿಗಾಗಿ ಅಲ್ಲ. ಶಾಸಕರ ಸಮಸ್ಯೆಗಳಿಗಾಗಿ ಎಲ್ಲ ಪಕ್ಷಗಳ ಶಾಸಕರೂ ಪ್ರಶ್ನೆಗಳನ್ನು ಕೇಳುತ್ತಾರೆ. ನಿಯಮಾವಳಿ ಪ್ರಕಾರ ಕೇಳಿದ ಪ್ರಶ್ನೆಗಳಿಗೆ ಸರಕಾರ ಉತ್ತರ ಕೊಡಲಿಲ್ಲ ಅಂದರೆ ಹೇಗೆ?, ಹಾಗಾದರೆ ಶಾಸಕರು ಸದನಕ್ಕೆ ಯಾಕೆ ಬರಬೇಕು ಹೇಳಿ? ಸರಿಯಾದ ಸಮಯಕ್ಕೆ ಮಂತ್ರಿಗಳು ಬರುವುದಿಲ್ಲ. ಹಿಂದೆಯೂ ಈ ಬಗ್ಗೆ ಸೂಚನೆ ನೀಡಿದ್ದೇನೆ. ಈಗಾಗಲೇ ನಾಲ್ಕು ಬಾರಿ ಸೂಚನೆ ನೀಡಿದ್ದೇನೆ. ಇಂದೂ ಸೇರಿ ಐದನೇ ಬಾರಿಯೂ ಸುಧಾರಿಸದಿದ್ದರೆ ಏನು ಮಾಡೋದು? ಸುಧಾರಣೆ ಕಾಣಲೇ ಇಲ್ಲ. ಸಚಿವರು ಹಾಗೂ ಕಾರ್ಯದರ್ಶಿಗಳು ಈ ಬಗ್ಗೆ ಸ್ಪಷ್ಟನೆ ನೀಡುವವರೆಗೆ ಸದನ ನಡೆಸಲ್ಲ ಎಂದು ಹೇಳಿ ಸ್ಪೀಕರ್ ಪೀಠದಿಂದ ಎದ್ದು ಹೊರ ಹೋದರು.

ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸೂಚನೆ: ಸಂಧಾನ ಸಭೆ ವೇಳೆ ಸಿಎಂ ಸಿದ್ದರಾಮಯ್ಯ ಅವರು, ಲಿಖಿತ ಉತ್ತರ ನೀಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆ ನಡೆಸಿದರು. ಅತಿ ಹೆಚ್ಚು ಉತ್ತರ ಬಾಕಿ ಉಳಿಸಿಕೊಂಡಿರುವ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸೂಚನೆ ನೀಡಿದರು. ಅದರಂತೆ ಸರಕಾರ ಮುಖ್ಯ ಕಾರ್ಯದರ್ಶಿ ಅವರು ಉತ್ತರ ನೀಡಿದಿರುವ ಸಂಬಂಧ ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ನೋಟಿಸ್ ನೀಡಿದ್ದು, ಸರಿಯಾಗಿ ಉತ್ತರ ನೀಡದಿರುವ ಇಲಾಖಾ ಅಧಿಕಾರಿಗಳ ತಲೆದಂಡವಾಗುವುದು ನಿಶ್ಚಿತವಾಗಿದೆ.

ಸಿಲಿಂಡರ್‌ಗೆ ಇ-ಕೆವೈಸಿ ಕಡ್ಡಾಯ

← ಮೊದಲ ಪುಟದಿಂದ

ದೇಶದ ಎಲ್ಲಾ ಎಲ್‌ಪಿಜಿ ಗ್ರಾಹಕರು ತಮ್ಮ ಬಯೊ ಮೆಟ್ರಿಕ್ ಆಧಾರ್ ದೃಢೀಕರಣವನ್ನು ಪೂರ್ಣಗೊಳಿಸು ವುದು ಕಡ್ಡಾಯ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿ ವಾಲಯ ತಿಳಿಸಿದೆ. ಈ ಕುರಿತು, ಎಲ್ಲಾ ಗ್ರಾಹಕರು ಬಯೊಮೆಟ್ರಿಕ್ ಆಧಾರ್ ದೃಢೀಕರಣ ವನ್ನು ಪೂರ್ಣಗೊಳಿಸಬೇಕಾಗುತ್ತದೆ. ಈಗ ನಿಮ್ಮ ಮನೆ ಯಿಂದಲೇ ತೈಲ ಕಂಪನಿಯ ಮೊಬೈಲ್ ಆ್ಯಪ್ ಮತ್ತು ಆಧಾರ್ ಫೇಸ್ ಆರ್ಡಿ ಅಪ್ಲಿಕೇಶನ್ ಬಳಸಿ' ಎಂದು ಎಕ್ಸ್ ಖಾತೆಯಲ್ಲಿ ತಿಳಿಸುವಂತೆ. ಎಲ್ ಪಿಜಿ ವಿತರಕರನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯಿರಿ ಎಂದಿರುವ ಕೇಂದ್ರ ಸರಕಾರ ಸಹಾಯ ವಾಣಿ ಸಂಖ್ಯೆಯನ್ನೂ ನೀಡಿದೆ.

ದುಬೈಗೆ ವಿಮಾನ ಪ್ರವೇಶ ನಿರ್ಬಂಧ

ಸತತವಾಗಿ ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇರಾನ್ ದಾಳಿ ನಡೆಸುತ್ತಿರುವುದರಿಂದ ಯುಎಇ ಸರಕಾರ, ದುಬೈನಿಂದ ಹೋಗುವ, ಅಲ್ಲಿಗೆ ಬರುವ ವಿಮಾನಗಳಿಗೆ ಸಂಪೂರ್ಣ ತಡೆ ನೀಡಿದೆ. ಇದರಿಂದ ಜಗತ್ತಿನಾದ್ಯಂತ ಲಕ್ಷಾಂತರ ಪ್ರವಾಸಿಗಳಿಗೆ ಸಮಸ್ಯೆಯಾಗಿದೆ.

ಅಡ್ಡಮತದಾನ; ಗದ್ದಲ

← ಮೊದಲ ಪುಟದಿಂದ

ಇವರೊಂದಿಗೆ ಬಿಜೆಡಿಯ ಇಬ್ಬರು ಶಾಸಕರೂ ಅಧಿಕೃತ ಅಭ್ಯರ್ಥಿ ದತ್ತೇಶ್ವರ ಹೋಟಾ ವಿರುದ್ಧ ಮತ ಚಲಾಯಿಸಿದರು. ಇದರೊಂದಿಗೆ ಮಾಜಿ ಕೇಂದ್ರ ಸಚಿವ, ಬಿಜೆಪಿ ಬೆಂಬಲಿತ ಅಭ್ಯರ್ಥಿ ದಿಲೀಪ್ ರಾಯ್ ನಾಲ್ಕನೇ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದರು. ಉಳಿದಂತೆ ಆಡಳಿತಾರೂಢ ಬಿಜೆಪಿಯ ಮನಮೋಹನ್ ಸಮಲ್, ಸುಜಿತ್ ಕುಮಾರ್, ಬಿಜೆಡಿಯಿಂದ ಸಂತೃಪ್ತ ಮಿಶ್ರಾ ಗೆಲುವು ಸಾಧಿಸಿದರು.ಬಿಹಾರದಲ್ಲಿ ಎನ್‌ಡಿಎಯಿಂದ ಸ್ಪರ್ಧಿಸಿದ್ದ ಐವರೂ ಆಯ್ಕೆಯಾಗಿದ್ದಾರೆ. ಪ್ರತಿಪಕ್ಷ ಮಹಾಘಟಬಂಧನ್‌ನ ನಾಲ್ವರು ಶಾಸಕರು ಮತದಾನಕ್ಕೆ ಗೈರಾಗಿದ್ದು ಮೈತ್ರಿಕೂಟ ತೀವ್ರ ಮುಖಭಂಗ ಅನುಭವಿಸಿದೆ. ಹರಿಯಾಣದಲ್ಲಿ ಪಾರದರ್ಶಕ ಮತ್ತು ಮುಕ್ತ ಚುನಾವಣೆ ಎಂಬ ಆಗಿಲ್ಲ ಎಂಬ ಆರೋಪದಡಿ ಮತ ಎಣಿಕೆ ಪ್ರಕ್ರಿಯೆಗೆ ತಡೆ ನೀಡಲಾಗಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೇಂದ್ರ ಚುನಾವಣೆ ಆಯುಕ್ತರಿಗೆ ಪತ್ರ ಬರೆದು ಸರಿಯಾಗಿ ಮುಕ್ತವಾಗಿ ನಡೆದಿಲ್ಲ ಎಂದು ಕಿಡಿಕಾರಿದ್ದಾರೆ.

ಮಹಾರಾಷ್ಟ್ರ (7), ತಮಿಳುನಾಡು (6), ಪ.ಬಂಗಾಳ (5), ಅಸ್ಸಾಂ (3), ತೆಲಂಗಾಣ (2), ಛತ್ತೀಸ್‌ಗಢ (2), ಹರ್ಯಾಣ (2), ಹಿಮಾಚಲಪ್ರದೇಶ (1)ಗಳು ಚುನಾವಣೆ ನಡೆದ ಇನ್ನಿತರ ರಾಜ್ಯಗಳು. ಈ ರಾಜ್ಯಗಳಿಂದ ಎನ್‌ಸಿಪಿ ನಾಯಕ ಶರದ್ ಪವಾರ್, ಕೇಂದ್ರ ಸಚಿವ ರಾಮದಾಸ್ ಅಠಾವಳೆ, ಕಾಂಗ್ರೆಸ್ ನಾಯಕ ಅಭಿಷೇಕ್ ಮನು ಸಿಂಘ್ವಿ, ತಮಿಳುನಾಡಿನ ತಂಬಿದುರೈ (ಎಐಎಡಿಎಂಕೆ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅವಿರೋಧವಾಗಿ ಆಯ್ಕೆಯಾದ 26 ಮಂದಿಯಲ್ಲಿ 7 ಬಿಜೆಪಿ, 5 ಕಾಂಗ್ರೆಸ್, 4 ಟಿಎಂಸಿ, 4 ಡಿಎಂಕೆ, ಶಿವಸೇನೆ, ಆರ್‌ಪಿಐ, ಎನ್‌ಸಿಪಿ, ಎನ್‌ಸಿಪಿ(ಎಸ್‌ಪಿ), ಎಐಎಡಿಎಂಕೆ, ಯುಪಿಪಿಎಲ್ ಪಕ್ಷದ ಒಬ್ಬರು ಸೇರಿದ್ದಾರೆ.

ಬಿಹಾರ: ಮರಿದುಬಿದ್ದ ಘಟಬಂಧ

ಬಿಹಾರದಲ್ಲಿ ಪ್ರತಿಪಕ್ಷ ಮಹಾಘಟಬಂಧನ್‌ನ ನಾಲ್ವರು ಶಾಸಕರು ಮತದಾನಕ್ಕೆ ಗೈರಾಗಿದ್ದು ಮೈತ್ರಿಕೂಟಕ್ಕೆ ತೀವ್ರ ಮುಜುಗರವನ್ನುಂಟು ಮಾಡಿದೆ. ಆರ್‌ಜೆಡಿಯ ಫೈಸಲ್ ರೆಹಮಾನ್, ಕಾಂಗ್ರೆಸ್ ಶಾಸಕರಾದ ಮನೋಹರ್ ಪ್ರಸಾದ್, ಸುರೇಂದ್ರ ಕುಶ್ವಾಹಾ, ಮನೋಜ್ ಬಿಸ್ವಾಸ್ ಗೈರಾದ ಶಾಸಕರು. ಇಡೀ ದಿನ ಈ ಶಾಸಕರು ತಮ್ಮ ನಾಯಕರ ಕೈಗೆ ಸಿಗಲಿಲ್ಲ. ಇವರ ಫೋನ್ ಕೂಡ ಸ್ವಿಚ್ ಆಫ್ ಆಗಿತ್ತು ಎಂದು ಮೂಲಗಳು ಹೇಳಿವೆ.

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/278675, ಫ್ಯಾಕ್ಸ : 08472/260776, ಇ ಮೇಲ್ itstaff_ulb_gulbarga@yahoo.com
No: KMP/TS-01/KKRDB MACRO/01/2025-26 ದಿನಾಂಕ: 16-03-2026
:: ಇ-ಪ್ರೊಕ್ಯುರಮೆಂಟ್ ಟೆಂಡರ ಪ್ರಕಟಣೆ ::

1) ಕಾಮಗಾರಿಯ ವಿವರ : 1. Improvements of Kotnoor (D) GDA Garden in Kalaburagi City. Rehabilition and Restoration of UGD in Zone-2 in Kalaburagi City. 2. Development of Maheboob Gulshan Garden in Kalaburagi City. 3. End toend paving at Shahbazar Naka to Aland check post and Janata Bazar Circle to Humnabad base (Super market area) (Continuation work of NCAP 2024-25), 4. Development of Rajiv Gandhi Theme park at Dariyapur in Kalaburagi City. 2) ಲೆಕ್ಕ ಶೀರ್ಷಿಕೆ: **2024-25 KKRDB MACRO & 2024-25 NCAP,** 3) ಟೆಂಡರಿಗಿಟ್ಟ ಮೊತ್ತ : **1)1,00,00,000.00, 2) 3,00,00,000.00, 3) 5,00,00,000.00, 4) 3,00,00,000.00,** 4) ಗುತ್ತಿಗೆದಾರರ ಅರ್ಹತೆ: **Class IV, II & above**, 5) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **30.03.206 ಬೆಳಿಗ್ಗೆ 11.00,** 6) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ: **16.04.2026 ಸಾಯಂಕಾಲ 4:30 ಗಂಟೆಯವರೆಗೆ** 7) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ: **17.04.2026 ಸಾಯಂಕಾಲ 4:35 ಗಂಟೆಯವರೆಗೆ,** 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ: **18.04.2026 ಬೆಳಿಗ್ಗೆ 11:30 ಗಂಟೆಗೆ,** 9) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: 1. ಟೆಂಡರ್ ಫಾರಂ ಬೆಲೆ ರೂ. As per e-portal EMD ಮೊತ್ತ ರೂ. 2,00,000.00, 2. ಟೆಂಡರ್ ಫಾರಂ ಬೆಲೆ ರೂ. As per e-portal EMD ಮೊತ್ತ ರೂ. 4,50,000.00, 3. ಟೆಂಡರ್ ಫಾರಂ ಬೆಲೆ ರೂ. As per e-portal EMD ಮೊತ್ತ ರೂ. 7,50,000.00, 4) ಟೆಂಡರ್ ಫಾರಂ ಬೆಲೆ ರೂ. As per e-portal EMD ಮೊತ್ತ ರೂ. 4,50,000.00, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ಮೋ. ನಂ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 9620341599, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/1182/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಗೃಹ ಮಂಡಳಿ
ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, 5ನೇ ಮಹಡಿ ಕಾವೇರಿ ಭವನ, ಬೆಂಗಳೂರು-560 009.
ನಂ.ಕಗೃಮಂ.ಸಕಾಇಂ.ಬೆಂನಜಿಯೋಕ/ಸಾ.ಪ್ರ/421/2025-26 ದಿನಾಂಕ:16-03-2026
ಸಾರ್ವಜನಿಕ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಬ್ಯಾಲಾಳು ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ವಸತಿ ಯೋಜನೆಯನ್ನು ಕೈಗೊಂಡು, ವಿವಿದ ವರ್ಗದ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ದಿನಾಂಕ 27.01.2025 ರಂದು ಇ-ಲಾಟರಿ ಮೂಲಕ ಹಂಚಿಕೆ ಮಾಡಿದ್ದು, ಅರ್ಜಿದಾರರು ನೀಡಿರುವ ವಿಳಾಸಕ್ಕೆ ಹಂಚಿಕೆ ತಿಳುವಳಿಕೆ ಪತ್ರವನ್ನು ರಿಜಿಸ್ಟರ್ ಅಂಚೆ ಸ್ವೀಕೃತಿಯ ಮೂಲಕ ಕಳುಹಿಸಲಾಗಿತ್ತು. ಅರ್ಜಿದಾರರು ಅವರು ನೀಡಿರುವ ವಿಳಾಸದಲ್ಲಿ ಲಭ್ಯವಿಲ್ಲವೆಂದ ಹಂಚಿಕೆ ತಿಳುವಳಿಕೆ ಪತ್ರವು ವಾಪಸ್ಸು ಬಂದಿರುತ್ತದೆ. ಅರ್ಜಿದಾರರು ನೀಡಿರುವ ದೂರವಾಣಿಗೆ ಹಲವಾರು ಬಾರಿ ಸಂಪರ್ಕಿಸಿದರೂ ಸಹ ಸಂಪರ್ಕ ಲಭ್ಯವಾಗುತ್ತಿಲ್ಲ. ಈಗಾಗಲೇ ಹಂಚಿಕೆಯಾಗಿರುವ ನಿವೇಶನಕ್ಕೆ ಹಣ ಪಾವತಿಸಲು ದಿನಾಂಕ 10.06.2025, 26.05.2025 ಮತ್ತು 27.05.2025 ಕೊನೆಯ ದಿನಾಂಕ ಆಗಿರುತ್ತದೆ.

ಈ ಕೆಳಕಂಡ ಅರ್ಜಿದಾರರು / ಹಂಚಿಕೆದಾರರು ಈ ಸಾರ್ವಜನಿಕ **ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ** ಕೆಳಗೆ ಸಹಿಮಾಡಿರುವ ಅಧಿಕಾರಿಗಳು ಅಥವಾ ಕಛೇರಿಯನ್ನು ಖುದ್ದು ಸಂಪರ್ಕಿಸಿ, ನಿಮ್ಮ ಹೆಸರಿಗೆ ಹಂಚಿಕೆಯಾಗಿರುವ ಮೂಲ ಹಂಚಿಕೆ ತಿಳುವಳಿಕೆ ಪತ್ರವನ್ನು ಪಡೆದು ಸದರಿ ನಿವೇಶನಕ್ಕೆ ಕರ್ನಾಟಕ ಗೃಹ ಮಂಡಳಿಯು ನಿಗಧಿಪಡಿಸಿರುವ ನಿವೇಶನದ ಬೆಲೆಯನ್ನು ಪಾವತಿಸಿ ಕೂಡಲೇ ನಿವೇಶನವನ್ನು ನಿಮ್ಮ ದಾಗಿಸಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ನಿಮ್ಮ ಹೆಸರಿಗೆ ಹಂಚಿಕೆಯಾಗಿರುವ ನಿವೇಶನದ ಹಂಚಿಕೆಯನ್ನು ರದ್ದುಗೊಳಿಸಲು ಕ್ರಮ ವಹಿಸಲಾಗುವುದು.

ಕ್ರ. ಸಂ.	ಅರ್ಜಿದಾರರ ಹೆಸರು	ಅರ್ಜಿ ಸಂಖ್ಯೆ	ಹಂಚಿಕೆಯಾಗಿರುವ ನಿವೇಶನ ಸಂಖ್ಯೆ	ಬ್ಲಾಕ್	ವರ್ಗ
01	V. ROHIT	LIG02016739	208	B-1	LIG
02	R. JAYASHREE	LIG00161722	1091	B-1	LIG
03	M. VINAYAGAM	LIG02016082	1053	B-1	LIG
04	KARESHANAIAH	HIG02016282	353	B-3	HIG-11
05	ANITHA E. N	HIG02016970	883	B-2	HIG-1
06	SRINIVASAN. N	HIG00161191	107	B-1	HIG-1
07	SUNIL MORARJI	HIG00161609	1152	B-1	HIG-I
08	B. L. VENKATESH	HIG02016968	117	B-1	HIG-1
09	REVANNA. R	EWS00086699	1214	B-1	EWS
10	NARAYANAPPA	EWS00086719	504	B-1	EWS
11	SHIVAKUMAR. D. S	EWS00091096	532	B-1	EWS
12	M. C. RAJENDRA PRASAD	EWS00086701	933	B-1	EWS

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **ಹಾಲೇಶಪ್ಪ ಎಸ್.ಎಲ್. ಸಹಾಯಕ ಕಾರ್ಯಪಾಲಕ ಅಭಿಯಂತರರು : 98456 00099. ಮಂಜುಳಾ. ಎಂ. ಸಹಾಯಕ ಕಂದಾಯ ಅಧಿಕಾರಿ: 99001 31116. ಸದಾನಂದಸ್ವಾಮಿ ಎನ್. ಕೇಸ್ ವರ್ಕರ್: 98803 26203.**

ಸಹಿ/- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, 5ನೇ ಮಹಡಿ ಕಾವೇರಿ ಭವನ, ಬೆಂಗಳೂರು.
DIPR/CP/RO6278/AAPL/2025-26

ಕರ್ನಾಟಕ ಸರ್ಕಾರ
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಯೋಜನಾ ವಿಭಾಗ,
1-11-264 ಎರಡನೇ ಮಹಡಿ ಎ.ಟಿ.ಎಂ. ಸರ್ಕಲ್, ನಿಜಲಿಂಗಪ್ಪ ಕಾಲೋನಿ ರಾಯಚೂರು-584101
e-mail: eekrrdarcr@gmail.com
ಸಂ.:ಕಾನಿಅ/ಯೋ.ವಿ.ರಾ/ಪಿ.ಬಿ/2025-26/935 ದಿನಾಂಕ:13.03.2026
ಅಲ್ಪಾವಧಿ ಟೆಂಡರ್ ಪ್ರಕಟಣೆ-01

ಕರ್ನಾಟಕ ರಾಜ್ಯದ ರಾಜ್ಯ ಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅಡಿಯಲ್ಲಿ ಮಸ್ಕಿ ವಿಧಾನ ಸಭಾ ಕ್ಷೇತ್ರದ ಕಾಮಗಾರಿಗಳನ್ನು KW-3, KW-4 ಮಾನದಂಡಗಳನ್ನು ಅನುಸರಿಸಿ ಐಟಂ ರೇಟ್ ದರಗಳನ್ನು KPPP ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.

ಟೆಂಡರ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ

1) **E.M.D.:** As per KPPP portal 2) **ಟೆಂಡರ್ ಇಂಡೆಂಟ್ ನಂಬರಗಳು:** KRRDA/2025-26/RD/WORK_INDENT331, KRRDA/2025-26/RD/WORK_INDENT332, KRRDA/2025-26/RD/WORK_INDENT334, KRRDA/2025-26/RD/WORK_INDENT335, KRRDA/2025-26/RD/WORK_INDENT338, KRRDA/2025-26/RD/WORK_INDENT339 , **3) e-procurement portal ನಲ್ಲಿ ಟೆಂಡರ್ ಬಿಡ್ ದಾಖಲಾತಿಗಳನ್ನು ನೋಡಬಹುದಾದ ದಿನಾಂಕ, Date of commencement of downloading of bidding document:** 16-03-2026 4) **ತಾಂತ್ರಿಕ ಬಿಡ್‌ಗಳನ್ನು online ಆನ್‌ಲೈನ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ, last date to submit bid on E-portal:** 30-03-2026 (17.00 Hours) 5) **ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:** 01-04-2026 (10:30 Hours) 6) **ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:** ನಂತರ ತಿಳಿಸಲಾಗುವುದು. 7) **ಟೆಂಡರ್ ಗುತ್ತಿಗೆದಾರರ ದರ್ಜೆ:** KPPP ತಂತ್ರಾಂಶದಲ್ಲಿ ಸೂಚಿಸಿದಂತೆ 8) **ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ** ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ ರಾಯಚೂರು 9) **ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡಬಹುದು:** https://www. kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು ಯೋಜನಾ ವಿಭಾಗ, ರಾಯಚೂರು.
DIP/RCR/765/KSMCA/768/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392-200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ-2/2025-26/2341 ದಿ:12.03.2026
ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲೂ-4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಏತ ನೀರಾವರಿ ಯೋಜನೆ -ಪ್ರಧಾನ ಕಾಮಗಾರಿಯಡಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ 01 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ **ರೂ. 112.93** ಲಕ್ಷಗಳಿರುತ್ತದೆ. ಟೆಂಡರ್‌ನ್ನು **ದಿನಾಂಕ: 12.03.2026** ರಿಂದ **ದಿನಾಂಕ: 20.03.2026 ರ ಸಂಜೆ 5.30** ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್ಡನ್ನು **ದಿನಾಂಕ: 23.03.2026 ರ ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್ಡನ್ನು **ದಿನಾಂಕ: 25.03.2026 ರ ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ
ಡಿಐಪಿಆರ್/ಬಳ್ಳಾರಿ/1144/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಆನೇಕಲ್ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ
ಜೆ.ಎಂ.ಎಫ್.ಸಿ.ಕೋರ್ಟ್ ಹತ್ತಿರ, ಅತ್ತಿಬೆಲೆ ರಸ್ತೆ, ಆನೇಕಲ್ ಟೌನ್, ಬೆಂಗಳೂರು-562106.
ದೂ: 080 27859232, ಇ-ಮೇಲ್: eotpanekal@rediffmail.com
ಸಂ: ಆ.ತಾ.ಪಂ/ಟೆಂಡರ್/03/2025-26 ದಿನಾಂಕ : 13.03.2026
ಟೆಂಡರ್ ಪ್ರಕಟಣೆ

2026-27ನೇ ಸಾಲಿನ ಅವಧಿಗೆ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಆನೇಕಲ್ ತಾಲ್ಲೂಕು ಪಂಚಾಯಿತಿಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಬೆರಳಚ್ಚುಗಾರರು-02, ವಾಹನ ಚಾಲಕರು-01, ಗ್ರೂಪ್ 'ಡಿ'-03, ಭಾರೀ ವಾಹನ ಚಾಲಕ-1, ಸಹಾಯಕರು(ಕ್ಲೀನರ್)1 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸೇವೆಯನ್ನು ಪಡೆಯಲು **https://kppp.karnataka.gov.in** ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.

Work Estimate Number

ಕ್ರ.ಸಂ	ವಿವರ	
1	ಇ-ಪ್ರೋಕ್ಯೂರ್ ಮೆಂಟ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಸಂ.ಆ.ತಾ.ಪಂ/ಟೆಂಡರ್/03/2025-26 ದಿನಾಂಕ: 13.03.2026
2	ಇ-ಟೆಂಡರ್(e-Procurment)ಗೆ ಸಂಬಂಧಿಸಿದ ದಾಖಲೆಗಳನ್ನು ಜಾಲಕ್ಕೆರವಾನಿಸಲು (upload) ಮಾಡಲು ಪ್ರಾರಂಭ ಮತ್ತುಅಂತಿಮ ದಿನಾಂಕ ಮತ್ತು ಸಮಯ	ದಿನಾಂಕ: 14.03.2026 ರಿಂದ 26.03.2026 ಸಂಜೆ 17-00 ಗಂಟೆಗೆ
3	ತಾಂತ್ರಿಕ ಬಿಡ್‌ತೆರೆಯುವ ಸ್ಥಳ, ದಿನಾಂಕ ಮತ್ತು ವೇಳೆ	ಇ-ಪೋರ್ಟಲ್ ನ ರೀತ್ಯಾ, ದಿನಾಂಕ: 26.03.2026, 11.30 ಗಂಟೆಗೆ
4	ಆರ್ಥಿಕ ಬಿಡ್ ತೆರೆಯುವ ಸ್ಥಳ, ದಿನಾಂಕ ಮತ್ತು ವೇಳೆ	ತಾಂತ್ರಿಕ ಬಿಡ್‌ನ ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ತೆರೆಯಲಾಗುವುದು.
5	ಸಂಪರ್ಕಿಸಬೇಕಾದ ವಿಳಾಸ ಮತ್ತುದೂರವಾಣಿ/ಮೊಬೈಲ್ ನಂಬರ್	ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಆನೇಕಲ್. ಮೊ.ಸಂಖ್ಯೆ: 7019757647

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆ ಇದ್ದಲ್ಲಿ ಸಾರ್ವತ್ರಿಕ ರಜೆ ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರೀಶಿಲಿಸುವುದು.

ಸಹಿ/- ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಆನೇಕಲ್
ವಾಸಾಸಂಇ/ವಾ.ಪ್ರ/6287/ಶಿರಡಿ ಸಾಯಿ/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU-495/4442/2025-26 ದಿನಾಂಕ: 16.03.2026
ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಶಿವಾನಂದ ಬಿ.ಆರ್. ಮತ್ತು ಇತರರು # 24/144 'ಎಫ್' ಬ್ಲಾಕ್, BDA MIG Flats, 2ನೇ ಹಂತ, ದೊಮ್ಮಲೂರು, ಬೆಂಗಳೂರು-560 071	ಯಲಹಂಕ	ಜಾಲ	ಬೆಟ್ಟ ಹಲಸೂರು	349/4	0ಎ-20 ಗುಂ	ವ್ಯವಸಾಯ	ವಾಣಿಜ್ಯ
					349/5	0ಎ-20 ಗುಂ		
					349/6	0ಎ-20 ಗುಂ		
					349/7	0ಎ-20 ಗುಂ		
					ಒಟ್ಟು	2ಎ-00 ಗುಂ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಪ್ರಶ್ನಿತ ಜಮೀನುಗಳಲ್ಲಿ ಕಟ್ಟಡ ಕಾಮಗಾರಿ ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ವಾಣಿಜ್ಯ ಕಟ್ಟಡದಿಂದ ಹತ್ತಿರದಲ್ಲಿ ಬಹುಪಯೋಗಿ ವಸ್ತುಗಳು ಕಡಿಮೆ ದರದಲ್ಲಿ ಲಭ್ಯವಾಗುತ್ತದೆ ಮತ್ತು ವಾಣಿಜ್ಯ ಮಳಿಗೆಗಳು ದೊರಕುತ್ತದೆ. ಸದರಿ ಜಾಗದಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ, ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ವಾಣಿಜ್ಯ ಚಟುವಟಿಕೆಗಳಿಂದ ಸ್ಥಳೀಯರಿಗೆ ನಿರಂತರವಾಗಿ ಉದ್ಯೋಗಗಳು ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಾಣಿಜ್ಯ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ ವನ್ಯಜೀವಿ ವಿಭಾಗ,
ಅರಣ್ಯ ಭವನ, ಅಶೋಕಪುರಂ, ಮೈಸೂರು
ದೂ: 0821-2481159, email:dcfwlmys@gmail.com
ದಿನಾಂಕ: 12.03.2026
ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ಪ್ರಕಾರ ಮೈಸೂರು ವನ್ಯಜೀವಿ ವಿಭಾಗದ ವ್ಯಾಪ್ತಿಯ ಮೇಲುಕೋಟೆ ವನ್ಯಜೀವಿ ವಲಯದಲ್ಲಿ ಕಲಾತ್ಮಕ ಆರ್ಚಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿವುಳ್ಳ ಸಂಸ್ಥೆ/ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಸ್ವೀಕರಿಸುವ ದಿ: 27.03.2026 ರಂದು 16.00 ಗಂಟೆಯವರೆಗೆ, ತಾಂತ್ರಿಕ ಬಿಡ್ಡುಗಳನ್ನು ತೆರೆಯಲು ದಿ: 30.03.2026 ರಂದು 16.10 ಗಂಟೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ಹಾಗೂ ಷರತ್ತುಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು
DIPR/DDMYS/1828/KSMCA/1032/2025-26

ಬಗರ್ ಹುಕುಂ: ಸಮಿತಿ ರಚನೆ

ವಿಧಾನಸಭೆ: ಭೂ ಮಂಜೂರಾತಿಗೆ ಸಂಬಂಧಪಟ್ಟಂತೆ ರಾಜ್ಯಾದ್ಯಂತ ವಿಧಾನಸಭಾ ಕ್ಷೇತ್ರವಾರು ಒಟ್ಟು 191 ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ರಚನೆ ಮಾಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಚಿಂಚೋಳಿಯ ಬಿಜೆಪಿ ಶಾಸಕ ಅವಿನಾಶ್ ಜಾಧವ್ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ತಾಲೂಕುವಾರು ಸಮಿತಿಗಳನ್ನು ರಚಿಸುವ ಬದಲಾಗಿ ವಿಧಾನಸಭಾ ಕ್ಷೇತ್ರವಾದ ಸಮಿತಿಗಳನ್ನು ರಚಿಸಲಾಗುತ್ತಿದೆ. ಇದೇ ಮೊದಲ ಬಾರಿಗೆ 175 ಸಮಿತಿಗಳನ್ನು ರಚಿಸಲಾಗಿದೆ. ಹೆಚ್ಚುವರಿ ಅರ್ಜಿಗಳಿರುವ ಕಡೆಗೆ ಹೆಚ್ಚುವರಿ ಸಮಿತಿ ರಚಿಸಲಾಗಿದೆ. ಒಟ್ಟು 191 ಸಮಿತಿಗಳು ಅಸ್ತಿತ್ವದಲ್ಲಿದೆ. ಬೈಂದೂರು ಮತ್ತು ತೀರ್ಥಹಳ್ಳಿ ಕ್ಷೇತ್ರದ ಸಮಿತಿಗಳು ಸಮಿತಿಗಳ ಕುರಿತು ನ್ಯಾಯಾಲಯದಲ್ಲಿ ಎಂದರು. ಅರ್ಜಿಗಳು ಲಭ್ಯ ಇರುವ ಎಲ್ಲಾ ಕಡೆಗಳನ್ನು ಸರಕಾರ ಬಹುತೇಕ ಸಮಿತಿಗಳನ್ನು ರಚಿಸಿದೆ. ಶಾಸಕ ಅವಿನಾಶ್ ಜಾದವ್, ಸಮಿತಿಗೆ ಸದಸ್ಯರನ್ನು ನೇಮಿಸಲು ಹೆಸರುಗಳನ್ನು ಶಿಫಾರಸು ಮಾಡುವಂತೆ ತಹಸೀಲ್ದಾರ್ ಅವರು ಪತ್ರ ಬರೆದಿದ್ದರು. ಅದರಂತೆ ಶಿಫಾರಸು ಮಾಡಲಾಗಿತ್ತು. ಇತ್ತೀಚಿಗೆ ಸಮಿತಿ ರಚನೆಯಾಗಿದೆ. ನಾವು ಶಿಫಾರಸು ಮಾಡಿದವರ ಬದಲಾಗಿ ಬೇರೆಯವರ ಹೆಸರುಗಳು ಸಮಿತಿಯಲ್ಲಿವೆ. ಇದು ತಮಗೆ ಮುಜುಗರ ಉಂಟುಮಾಡಿದೆ ಎಂದರು.

ಪ್ರತಿ ಜಿಲ್ಲೆಯಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ

ವಿಧಾನಸಭೆ: ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆಗೆ ಸರಕಾರ ಕ್ರಮ ತೆಗೆದುಕೊಳ್ಳಲಿದೆ ಎಂದು ಸಚಿವ ಶರಣ್ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯೆ ಆರತಿ ರಾವ್ ಪ್ರಶ್ನೆಗೆ ಉತ್ತರಿಸಿದ ಅವರು, ಮೈಸೂರು, ತುಮಕೂರಿನಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಆಗ್ತಿದೆ. ಕಟ್ಟಡ ಸಂಪೂರ್ಣ ಆಗಿ, ಉದ್ಘಾಟನೆ ಆಗಿದೆ. ಯಂತ್ರೋಪಕರಣಗಳ ಟೆಂಡರ್ ಕರೆಯಲಾಗಿದೆ. ಹುದ್ದೆಯ ನೇಮಕಾತಿ ಪ್ರಕ್ರಿಯೆಯೂ ನಡೆಯು ತ್ತಿದೆ. ಮುಖ್ಯಮಂತ್ರಿ ಅವರು ಪ್ರತಿ ಜಿಲ್ಲೆಯಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ ಘೋಷಣೆ ಮಾಡಿದ್ದಾರೆ. ಅದರಂತೆ ಪ್ರತಿ ರಾಜ್ಯದಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ ಮಾಡುತ್ತೇವೆ. ಶಿವಮೊಗ್ಗದಲ್ಲಿ ಕ್ಯಾನ್ಸರ್ ಆಸ್ಪತ್ರೆ ಮಾಡುತ್ತಿದ್ದೇವೆ. ಶಿವಮೊಗ್ಗದಲ್ಲಿ ಕೋರ್ಟ್ ಪ್ರಕರಣದಿಂದ ಸಮಸ್ಯೆ ಆಗಿತ್ತು. ಈಗ ಕೋರ್ಟ್ ಕೇಸ್ ಮುಗಿದಿದೆ. ಆದಷ್ಟೂ ಬೇಗ ಶಿವಮೊಗ್ಗದಲ್ಲಿ ಕ್ಯಾನ್ಸರ್ ಆಸ್ಪತ್ರೆ ಪ್ರಾರಂಭ ಮಾಡಲಾಗುತ್ತಿದೆ.

ಟಿ20 ಗೆದ್ದ ಭಾರತಕ್ಕೆ ಅಭಿನಂದನೆ

ವಿಧಾನಪರಿಷತ್: ಇತ್ತೀಚಿಗೆ ಟಿ 20 ವಿಶ್ವಕಪ್‌ನಲ್ಲಿ ಜಯಭೇರಿ ಬಾರಿಸಿದ ಭಾರತ ತಂಡಕ್ಕೆ ಪರಿಷತ್‌ನಲ್ಲಿ ಸದಸ್ಯರೆಲ್ಲರೂ ಶ್ಲಾಘನೀಯ ವ್ಯಕ್ತಪಡಿಸಿದರು.

ಸದನದಲ್ಲಿ ಪರಿಷತ್ ಸದಸ್ಯ ಡಿ.ಎಸ್.ಅರುಣ್ ಅವರು ವಿಷಯ ಪ್ರಸ್ತಾಪಿಸಿದ್ದು, ಟಿ20 ವಿಶ್ವಕಪ್‌ನಲ್ಲಿ ಭಾರತ ಗೆಲುವು ಸಾಧಿಸಿದೆ. ಆದ್ದರಿಂದಾಗಿ ಗೆಲುವಿನ ಪತಾಕೆ ಹಾರಿಸಲು ಕಾರಣಕರ್ತರಾದ ನಮ್ಮ ಭಾರತ ತಂಡಕ್ಕೆ ಅಭಿನಂದನೆಗಳನ್ನು ಸಲ್ಲಿಸಲಾಗುತ್ತದೆ ಎಂದು ಹೇಳಿದರು. ಬಳಿಕ ಸದಸ್ಯರೆಲ್ಲರೂ ಮೇಜು ತಟ್ಟಿ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಆಗ ಸಭಾಪತಿ ಸ್ಥಾನದಲ್ಲಿದ್ದ ಪ್ರಾಣೇಶ್ ಅವರು ಅಭಿನಂದನಾ ಪತ್ರವನ್ನು ಬಿಸಿಸಿಐಗೆ ಕಳುಹಿಸಲಾಗುವುದು ಎಂದು ಹೇಳಿದರು.

ವಿಶ್ವವಾಣಿ ಕ್ಲಬ್ ಹೌಸ್
17.03.2026
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀ ರವಿಕುಮಾರ್ ಚಿತ್ರದುರ್ಗ
ವಿಷಯ
ಮಂಕುತಿಮ್ಮನ ಕಗ್ಗ
vishwavani.news

ದಿನ ವಿಶೇಷ

17 ಮಾರ್ಚ್ 2026 ಮಂಗಳವಾರ

» ಸೂರ್ಯೋದಯ	:	06-26
» ಸೂರ್ಯಾಸ್ತ	:	06-30
» ತಿಥಿ	:	ದ್ವಾದಶಿ
» ನಕ್ಷತ್ರ	:	ಶತಭಿಷಾ
» ಸಂವತ್ಸರ	:	ವಿಶ್ವಾವಸು
» ಆಯನ	:	ಉತ್ತರಾಯಣ
» ಋತು	:	ಸೌರ ವಸಂತ
» ಮಾಸ	:	ಫಾಲ್ಗುಣ
» ಪಕ್ಷ	:	ಕೃಷ್ಣಪಕ್ಷ

ಮಾರ್ಗಸೂಚಿ ದರಕ್ಕಿಂತ ಮೂರು ಪಟ್ಟು ಹೆಚ್ಚು ಹಣ ನೀಡಿ ಖರೀದಿಸಲು ಸಿದ್ಧ | ಖರೀದಿಗೆ ಮೂರು ವರ್ಷದಲ್ಲಿ 58 ಕೋಟಿ ಖರ್ಚು | ಹಲವು ಗ್ರಾಮಗಳಲ್ಲಿ ಸ್ಮಶಾನ ಭೂಮಿಯಿಲ್ಲ | ಸದನದಲ್ಲಿ ಬೇಸರ ವ್ಯಕ್ತಪಡಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ

ಸ್ಮಶಾನ ಜಾಗಕ್ಕೂ ಭಿಕ್ಷೆ ಬೇಡಬೇಕಾದ ಸ್ಥಿತಿಯಿದೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಸರಕಾರದಲ್ಲಿ ಲಭ್ಯವಿದ್ದ ಭೂಮಿಯನ್ನು ಕೃಷಿ ಸೇರಿದಂತೆ ವಿವಿಧ ಉದ್ದೇಶಗಳಿಗೆ ಹಂಚಿಕೆ ಮಾಡಿರುವುದರಿಂದ ಇದೀಗ ಸ್ಮಶಾನಕ್ಕೂ ಜಾಗವಿಲ್ಲವಾಗಿದೆ. ಸರಕಾರ ಸ್ಮಶಾನ ಜಾಗಕ್ಕೆ ಭಿಕ್ಷೆ ಬೇಡುವ ಸ್ಥಿತಿ ಎದುರಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಬೇಸರ ವ್ಯಕ್ತಪಡಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ಲಭ್ಯವಿದ್ದ ಸರಕಾರಿ ಭೂಮಿಯನ್ನು ಕೃಷಿ ಹಾಗೂ ಇತರ ಉದ್ದೇಶಗಳಿಗೆ ಹಂಚಿಕೆ ಮಾಡಿ ಈಗ ಸ್ಮಶಾನಕ್ಕೂ ಜಾಗ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮುಂದಿನ ದಿನಗಳಲ್ಲಿ ಶಾಲಾ-ಕಾಲೇಜು ಆಟದ ಮೈದಾನ ಸ್ಮಶಾನದಂತಹ ನಾಗರಿಕ ಸೌಲಭ್ಯಗಳಿಗೆ ಭೂಮಿ ಕಾಯ್ದಿರಿಸಿ ಉಳಿದದ್ದನ್ನು ಮಾತ್ರ ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಸ್ಮಶಾನ ಇಲ್ಲದ ಗ್ರಾಮಗಳಿಗೆ ಸ್ಮಶಾನ ಭೂ ಮಂಜೂರಿಗೆ ಸರಕಾರಿ ಜಮೀನು ಇಲ್ಲದಿದ್ದರೆ, ಮಾರ್ಗಸೂಚಿ ದರಕ್ಕಿಂತ ಮೂರು ಪಟ್ಟು ಹಣ ನೀಡಿ ಖಾಸಗಿ ಜಮೀನು ಖರೀದಿಗೆ ಸರಕಾರ ಸಿದ್ಧ. ಕಳೆದ 70 ವರ್ಷಗಳಿಂದ ಎಲ್ಲಾ ಸರಕಾರಗಳೂ ಇರುವ ಭೂಮಿಯನ್ನೆಲ್ಲಾ ರೈತರಿಗೆ ಹಾಗೂ ವಿವಿಧ ಜನಪರ ಯೋಜನೆಗಳಿಗೆ ಮಂಜೂರು ಮಾಡಿದ್ದು, ಪ್ರಸ್ತುತ ಸ್ಮಶಾನಕ್ಕೂ ಭೂಮಿ ಇಲ್ಲದಂತಾಗಿದೆ. ಹತ್ತು ವರ್ಷಗಳಿಂದ ಎಲ್ಲಾ ಸರಕಾರಗಳೂ ವಸತಿ ಪ್ರದೇಶಗಳಿಗೆ ಅವಶ್ಯ ಇರುವಷ್ಟು ಸ್ಮಶಾನ ಭೂಮಿ ನೀಡಬೇಕು ಎಂದು ಪ್ರಯತ್ನಿಸಿದೆ. ಈ ವಿಚಾರದಲ್ಲಿ ಹೈಕೋರ್ಟ್ ಸಹ ಸರಕಾರದ ಬೆನ್ನುಹತ್ತಿದೆ. ಸರಕಾರಿ ಜಮೀನು ಇದ್ದಲ್ಲಿ ಆ ಭೂಮಿಯನ್ನೇ ಸ್ಮಶಾನಕ್ಕೆ ಕಾಯ್ದಿರಿಸಲಾಗಿದೆ. ಸರಕಾರಿ ಜಮೀನು ಇಲ್ಲದಿದ್ದ ಭಾಗಗಳಲ್ಲಿ ಸ್ಮಶಾನ ಭೂಮಿ ನೀಡುವ ಸಲುವಾಗಿ ಕಳೆದ 3 ವರ್ಷದಲ್ಲಿ 58 ಕೋಟಿ ಕೊಟ್ಟು ಭೂಮಿಯನ್ನು ಖರೀದಿ ಮಾಡುವ ಹಂತಕ್ಕೆ ಬಂದು ನಿಂತಿದ್ದೇವೆ ಎಂದು ವಿಷಾದಿಸಿದರು.

ಔರಾದ್ ತಾಲೂಕಿನ 154 ವಸತಿ ಪ್ರದೇಶಗಳ ಪೈಕಿ 9 ಪ್ರದೇಶಗಳಲ್ಲಿ ಸ್ಮಶಾನ ಇಲ್ಲ ಎಂಬ ವರದಿ ಇದೆ. ಈ 9 ಗ್ರಾಮಗಳ ಪೈಕಿ 2 ಗ್ರಾಮಗಳಿಗೆ ಆ ಗ್ರಾಮದ ಮಿತಿಯಲ್ಲೇ ಸರಕಾರಿ ಭೂಮಿ ಲಭ್ಯ ಇದ್ದು, ಇನ್ನೂ ಒಂದು ವಾರದಲ್ಲಿ ಸ್ಮಶಾನ ಭೂಮಿಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಲಾಗಿದೆ. ಇನ್ನೂ 7 ವಸತಿ ಪ್ರದೇಶಗಳಿಗೆ ಪಕ್ಕದ ಗ್ರಾಮದಲ್ಲಿ ಭೂಮಿ ಇದ್ದು, ಅದನ್ನು 15 ದಿನಗಳ ಒಳಗೆ ಕಾಯ್ದಿರಿಸಲು ಸೂಚಿಸಲಾಗಿದೆ. ಒಂದು ವೇಳೆ ಆ ಜಾಗ ಸೂಕ್ತ ಅಲ್ಲ ಅಂತ ಗೊತ್ತಾದರೆ ಖಾಸಗಿ ಜಮೀನನ್ನು ಖರೀದಿಸಲು ಸಹ ಪ್ರಸ್ತಾವನೆ ಸಿದ್ಧವಾಗಿದೆ. ಖಾಸಗಿ ಜಮೀನುಗಳಿಗೆ ಮಾರ್ಗಸೂಚಿ ದರಕ್ಕಿಂತ ಮೂರು ಪಟ್ಟು ಅಧಿಕ ಹಣ ನೀಡಲೂ ಸರಕಾರ ಮುಂದಾಗಿದೆ. ಇನ್ನೂ ಕಾಂಪೌಂಡ್ ನೀರಿನ ವ್ಯವಸ್ಥೆ ಸೇರಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನೂ ನರೇಗಾ ಅಡಿಯಲ್ಲಿ ಗ್ರಾಮ ಪಂಚಾಯತ್ ಮಾಡಿಕೊಡುತ್ತಾರೆ. ಈ ಸಂಬಂಧ ಗ್ರಾಮ ಪಂಚಾಯತ್ ಸಿಇಓ ಹಾಗೂ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ತಿಳಿಸಿದರು.

ಸರಕಾರದಲ್ಲಿ ಲಭ್ಯ ಇದ್ದ ಭೂಮಿಯನ್ನು ಹಂಚಿಕೆ ಮಾಡಲಾಗುತ್ತದೆ. ಭೂಮಿ ಪಡೆದವರು ಒಂದು ಎಕರೆ ವಾಪಸ್ ಕೊಡಿ ಎಂದರು ಒಪ್ಪುವುದಿಲ್ಲ. ಈ ಹಿಂದೆ ತಾವು ಸಚಿವರಾಗಿದ್ದಾಗ ದಾವಣಗೆರೆ ಹೋಗಿ ಅರಳಿಕಟ್ಟೆಯ ಮೇಲೆ ಕುಳಿತು ಸ್ಮಶಾನಕ್ಕೆ ಒಂದು ಎಕರೆ ಕೊಡಿ ಎಂದು ಬೇಡಿಕೊಂಡರೂ ಯಾರೂ ಒಪ್ಪಲಿಲ್ಲ. ಸರಕಾರ ಭೂ ಮಂಜೂರಾತಿ ಮಾಡುವಾಗ ನಾಗರೀಕ ಸೌಲಭ್ಯಗಳಿಗೆ ಭೂಮಿ ಕಾಯ್ದಿರಿಸಬೇಕು.

- ಆರ್.ಅಶೋಕ್, ಪ್ರತಿಪಕ್ಷ ನಾಯಕ

ಸರಕಾರ ತನ್ನ ಬಳಿಯಿರುವ ಭೂಮಿಯನ್ನು ಹಂಚಿಕೆ ಮಾಡಿ ಈಗ ಭಿಕ್ಷಾ ಪಾತ್ರೆ ಹಿಡಿದು ನಿಲ್ಲುವ ಸ್ಥಿತಿ ಬಂದಿದೆ. ಇನ್ಮುಂದೆ ಕಟ್ಟುನಿಟ್ಟಾಗಿ ಶಾಲೆ ಸ್ಮಶಾನ ಆಸ್ಪತ್ರೆಯಿಂದ ಉದ್ದೇಶಗಳಿಗೆ ಭೂಮಿ ಕಾಯ್ದಿರಿಸಲಾಗುವುದು. ಸ್ಮಶಾನಕ್ಕೆ ಭೂಮಿ ಒದಗಿಸುವುದು ಸರಕಾರದ ಜವಾಬ್ದಾರಿ. ಸ್ಮಶಾನವಿಲ್ಲ ಎನ್ನುವ ಕಾರಣಕ್ಕೆ ಹಿಂದುಗಳಲ್ಲಿ ಶವ ಹೂಳುತ್ತಿದ್ದವರು ಈಗ ಸುಡುವ ಪರಿಸ್ಥಿತಿಗೆ ಬಂದಿದ್ದಾರೆ. ಕ್ರಿಶ್ಚಿಯನ್ ಮತ್ತು ಮುಸ್ಲಿಂ ಅಲ್ಪಸಂಖ್ಯಾತರು ಶವ ಹೂಳುತ್ತಾರೆ. ಅವರಿಗೆ ಜಾಗ ಒದಗಿಸಬೇಕಾಗಿದೆ.

- ಕೃಷ್ಣಬೈರೇಗೌಡ, ಕಂದಾಯ ಸಚಿವ

ನಗರದಲ್ಲಿ ಭೂಮಿ ಲಭ್ಯತೆ ಕಡಿಮೆ

ನಗರ ಪ್ರದೇಶಗಳಲ್ಲಿ ಭೂಮಿಯ ಲಭ್ಯತೆ ಸಮಸ್ಯೆಯಾಗುತ್ತಿರುವುದರಿಂದಾಗಿ ಆಶ್ರಯ ಹಾಗೂ ಇತರ ವಸತಿ ಯೋಜನೆಗಳಲ್ಲಿ ನಿವೇಶನ ಹಂಚಿಕೆಯ ಬದಲಾಗಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡುವುದು ಸೂಕ್ತ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಲಹೆ ನೀಡಿದರು. ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ನಮ್ಮ ಕ್ಷೇತ್ರದ ಹಂಚ್ಯಾ ಗ್ರಾಮದಲ್ಲಿ 23 ಎಕರೆ ಭೂಮಿ ಲಭ್ಯವಿದೆ. ಅಲ್ಲಿ ನಿವೇಶನ ಹಾಗೂ ವಸತಿ ರಹಿತರಿಗೆ ಪ್ರಧಾನ ಮಂತ್ರಿ ಆವಾಜ್ ಯೋಜನೆಯಲ್ಲಿ ಮನೆ ನಿರ್ಮಿಸಿಕೊಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಸಚಿವ ಕೃಷ್ಣ ಬೈರೇಗೌಡ ಉತ್ತರಿಸಿ, ಮೈಸೂರಿನ ನರಸಿಂಹರಾಜ, ಚಾಮರಾಜ ಮತ್ತು ಚಾಮುಂಡೇಶ್ವರಿ ಕ್ಷೇತ್ರದವರು ಈ ಭೂಮಿ ನಮಗೆ ಸೇರಿದ್ದು , ನಿವೇಶನ ಹಂಚಿಕೆ ಮಾಡಲು ನಮಗೆ ಕೊಡಬೇಕು ಎಂದು ಒತ್ತಡ ಹಾಕುತ್ತಿದ್ದಾರೆ. ಶಾಸಕ ತನ್ವೀರ್ ಸೇಠ್ ಅವರ ಪತ್ರದ ಮೇರೆಗೆ ಮುಖ್ಯಮಂತ್ರಿ ಅವರು ನರಸಿಂಹ ರಾಜ ಕ್ಷೇತ್ರಕ್ಕೆ ಭೂಮಿಯನ್ನು ಮಂಜೂರು ಮಾಡಿದ್ದಾರೆ. ಹಣ ಕೂಡ ಪಾವತಿಯಾಗಿದೆ. ಆದರೆ ಇಲ್ಲಿ ನಿವೇಶನ ವಿಂಗಡಿಸಲು ರಕ್ಷಣಾ ಇಲಾಖೆ ಅಡ್ಡಿಪಡಿಸುತ್ತಿದೆ. ಸದರಿ ಭೂಮಿ 2008ರಲ್ಲಿ ನಮಗೆ ಮಂಜೂರಾಗಿದೆ. ಅನ್ಯ ಉದ್ದೇಶಕ್ಕೆ ಬಳಸಲು ಅವಕಾಶ ಇಲ್ಲ ಎಂದು ರಕ್ಷಣಾ ಇಲಾಖೆ ಅಧಿಕಾರಿಗಳು ವಾದಿಸುತ್ತಿದ್ದಾರೆ. ಸರಕಾರದ ಮುಖ್ಯ ಕಾರ್ಯದರ್ಶಿ ಅವರ ಮೂಲಕ ರಕ್ಷಣಾ ಇಲಾಖೆಯ ಎಸ್ಟೇಟ್ ಅಧಿಕಾರಿಯ ಜೊತೆ ಒಂದೆರಡು ವಾರದಲ್ಲಿ ಚರ್ಚೆ ನಡೆಸಿ ಜಮೀನಿನ ಮಾಲೀಕತ್ವದ ಬಗ್ಗೆ ವಿವಾದ ಇತ್ಯರ್ಥಪಡಿಸಬೇಕು ಎಂದು ಭರವಸೆ ನೀಡಿದರು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ತಮ್ಮ ಸಲಹೆ ಎಂದರೆ ಈ 23 ಎಕರೆಯಲ್ಲಿ ಪ್ರತಿ ಎಕರೆಯಲ್ಲಿ ಕನಿಷ್ಠ 23ರಂತೆ ಒಟ್ಟು 900 ನಿವೇಶನ ವಿಂಗಡಿಸಬಹುದು. ಈ ರೀತಿ ಸುಮಾರು ಎರಡರಿಂದ ಮೂರು ಸಾವಿರ ಮನೆಗಳನ್ನು ನಿರ್ಮಿಸಬಹುದು ಎಂದರು.

ಬಿ.ಎಡ್ ಕಾಲೇಜುಗಳ ಶುಲ್ಕ ಶೀಘ್ರ ಹೆಚ್ಚಳ

ವಿಧಾನಪರಿಷತ್: ರಾಜ್ಯದ ಬಿ.ಎಡ್ ಕಾಲೇಜುಗಳ ಶುಲ್ಕ ಪರಿಷ್ಕರಣೆ ಮಾಡಲಾಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ತಿಳಿಸಿದ್ದಾರೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್‌ನ ಮಧು ಜಿ. ಮಾದೇಗೌಡ ಪ್ರಶ್ನೆ ಕೇಳಿದರು. ಇದಕ್ಕೆ ಸಚಿವರು ಉತ್ತರ ನೀಡಿ, ರಾಜ್ಯದ ಬಿ.ಎಡ್ ಕಾಲೇಜುಗಳ ಶುಲ್ಕ ಪರಿಷ್ಕರಣೆ ಕ್ರಮ ತೆಗೆದುಕೊಳ್ಳುತ್ತೇವೆ. ಅನೇಕ ವರ್ಷಗಳಿಂದ ಬಿ.ಎಡ್ ಕಾಲೇಜುಗಳ ಶುಲ್ಕ ಪರಿಷ್ಕರಣೆ ಮಾಡಿಲ್ಲ, ಬೇರೆ ಬೇರೆ ರಾಜ್ಯದಲ್ಲಿ ಬಿ.ಎಡ್ ಕಾಲೇಜುಗಳ ಶುಲ್ಕ ಜಾಸ್ತಿ ಇದೆ. ಹೀಗಾಗಿ ರಾಜ್ಯದಲ್ಲೂ ಶುಲ್ಕ ಪರಿಷ್ಕರಣೆಗೆ ಸರಕಾರ ನಿರ್ಧರಿಸಿದೆ ಎಂದಿದ್ದಾರೆ. ಶುಲ್ಕ ಪರಿಷ್ಕರಣೆ ಸಂಬಂಧ ಉನ್ನತ ಶಿಕ್ಷಣ ಇಲಾಖೆ 6 ಸದಸ್ಯರನ್ನೊಳಗೊಂಡ ಸಮಿತಿ ರಚನೆ ಮಾಡಲಾಗಿದೆ. ವರದಿ ಬಂದ ಕೂಡಲೇ ಬಿ.ಎಡ್ ಕಾಲೇಜುಗಳ ಪರಿಷ್ಕರಣೆ ಮಾಡುತ್ತೀವಿ. ಈ ಶೈಕಣಿಕ ವರ್ಷವೇ ಶುಲ್ಕ ಪರಿಷ್ಕರಣೆ ಕ್ರಮ ತೆಗೆದುಕೊಳ್ಳುತ್ತೀವಿ ಎಂದು ಹೇಳಿದ್ದಾರೆ.

ಇದೇ ವೇಳೆ ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಪ್ರಶ್ನೆ ಕೇಳಿದರು. ಉನ್ನತ ಶಿಕ್ಷಣ ಇಲಾಖೆಯಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಉತ್ತಮ ವ್ಯವಸ್ಥೆ. ಆದ್ರೆ ಎಲ್ಲಾ ವಿವಿಯಲ್ಲಿ ಏಕರೂಪ ವೇಳಾಪಟ್ಟಿ ಜಾರಿ ಆಗ್ತಿಲ್ಲ. ರಾಜ್ಯದ ಎಲ್ಲಾ ವಿವಿಗಳು ಏಕರೂಪದ ವೇಳಾಪಟ್ಟಿಯಂತೆ ನಡೆಯಲು ಕ್ರಮ ಆಗಬೇಕು. ಖಾಸಗಿ ವಿವಿಗಳನ್ನು ಸರಕಾರ ಏಕರೂಪ ವೇಳಾಪಟ್ಟಿ ಅಡಿ ತರಬೇಕು ಅಂತ ಒತ್ತಾಯಿಸಿದ್ದಾರೆ.

ಇದಕ್ಕೆ ಸಚಿವ ಡಾ.ಸುಧಾಕಎದದ ಉತ್ತರ ನೀಡಿ, 2021ರಲ್ಲಿ ಯುಯುಸಿಎಂಎಸ್ ಜಾರಿ ಮಾಡಿದ್ದೇವೆ. ಇದರ ಅಡಿ ಎಲ್ಲಾ ವಿವಿಗೂ ಏಕರೂಪದ ವೇಳಾಪಟ್ಟಿ ಮಾಡುತ್ತಿದ್ದೇವೆ. ಕೋವಿಡ್ ಸಮಯದಲ್ಲಿ ಒಂದೊಂದು ವಿವಿಯಲ್ಲಿ ಒಂದೊಂದು ವ್ಯವಸ್ಥೆ ಇತ್ತು. ಹೀಗಾಗಿ ಯುಯುಸಿಎಂಎಸ್ ವ್ಯವಸ್ಥೆ ಜಾರಿ ಮಾಡಿದ್ದೇವೆ. ಈಗಾಗಲೇ ಮುಂದಿನ 5 ವರ್ಷಗಳಿಗೆ ಏಕರೂಪ ವೇಳಾಪಟ್ಟಿ ಮಾಡಿದ್ದೇವೆ. ಎಲ್ಲಾ ವಿವಿಯೂ ಇದೇ ವೇಳಾಪಟ್ಟಿ ಅಡಿ ಕೆಲಸ ಮಾಡುತ್ತದೆ ಎಂದು ತಿಳಿಸಿದ್ದಾರೆ.

ದೈಹಿಕ ಶಿಕ್ಷಕರ ನೇಮಕಕ್ಕೆ ಆದ್ಯತೆ: ಮಧು ಬಂಗಾರಪ್ಪ

ವಿಧಾನ ಪರಿಷತ್: ರಾಜ್ಯದಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯ ವೇಳೆ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿಗೂ ಆದ್ಯತೆ ನೀಡಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಚಿದಾನಂದಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು ದೈಹಿಕ ಶಿಕ್ಷಕರ ನೇಮಕಾತಿ ನಡೆದಿಲ್ಲ, ಅತ್ತ ಈ ಮೊದಲು ಶನಿವಾರ ನಡೆಯುತ್ತಿದ್ದ ಮಾಸ್ ಡ್ರಿಲ್ ಕೂಡಾ ನಡೆಯುತ್ತಿಲ್ಲ, ದೈಹಿಕ ಶಿಕ್ಷಣ ಪಿರಿಯಡ್‌ನಲ್ಲಿಯೇ ನೈತಿಕ ಶಿಕ್ಷಣ ಬೋಧಿಸಲಾಗುತ್ತಿದೆ ಎಂದರು.

ಈ ವೇಳೆ ಸಭಾಪತಿ ಬಸವರಾಜ ಹೊರಟ್ಟಿ ಸಹ ದನಿಗೂಡಿಸಿ, ದೈಹಿಕ ಶಿಕ್ಷಣ ವಿಷಯ ಬೋಧನಾ ಅವಧಿಯಲ್ಲಿ ನೈತಿಕ ಶಿಕ್ಷಣ ಬೋಧನೆ ಏಕೆ? ನೈತಿಕ ಶಿಕ್ಷಣ ಬೇರೆ ಪಿರಿಯಡ್‌ನಲ್ಲಿ ಬೋಧಿಸಿ ಎಂದರು. ಆಗ ಸಚಿವ ಮಧು ಬಂಗಾರಪ್ಪ ಮಾತನಾಡಿ, ರಾಜ್ಯದಲಲಿ ಪ್ರಾಥಮಿಕ ಶಾಲೆಗಳಲ್ಲಿ 3361, ಪ್ರೌಢಶಾಲೆಯಲ್ಲಿ 1841 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಮುಂಬರುವ ಹಂತದಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿ ವೇಳೆ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿಗೆ ಆದ್ಯತೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಜೂ.1ರೊಳಗೆ ವರ್ಗಾವಣೆ ಪೂರ್ಣ

ಬರುವ ಜೂನ್ 1ಶಾಲಾ ಶಿಕ್ಷಕರ ವರ್ಗಾವಣೆ ಪೂರ್ಣಗೊಳಿಸಲಾಗುವುದು ಎಂದು ಸಚಿವ ಮಧು ಬಂಗಾರಪ್ಪ ಅವರು ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ವೈ.ಎಂ.ಸತೀಶ್ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವ ಮಧು ಬಂಗಾರಪ್ಪ ಮಾತೃತ್ವ ರಜೆ ಹಾಗೂ ಶಿಶುಪಾಲನಾ ರಜೆಯ ಮೇಲೆ ತೆರಳುವ ಮಹಿಳಾ ಶಿಕ್ಷಕರ ರಜೆಯ ಅವಧಿಗೆ ಅತಿಥಿ ಶಿಕ್ಷಕರನ್ನು ನಿಯುಕ್ತಿಗೊಳಿಸಲು ಕ್ರಮವಹಿಸಲಾಗುವುದು. ಮಾತೃತ್ವ ರಜೆಯ ನಂತರ ಮರಳಿ ಕರ್ತವ್ಯಕ್ಕೆ ಹಾಜರಾಗುವ ಮಹಿಳಾ ಶಿಕ್ಷಕರಿಗೆ ಮಗುವಿನ ವಯಸ್ಸು 5 ವರ್ಷ ಪೂರ್ಣ ಗೊಳ್ಳುವವರೆಗೂ ಮಗುವಿನ ಅನುಕೂಲವಾಗುವ ರೀತಿಯಲ್ಲಿ ಮಹಿಳಾ ನೌಕರರು ಇಚ್ಛಿಸುವ ಸ್ಥಳಕ್ಕೆ ನಿಯುಕ್ತಿಗೊಳಿಸಲಾಗುವುದು ಎಂದರು. ಮಹಿಳಾ ಶಿಕ್ಷಕರಿಗೆ ಮಾತೃತ್ವ ರಜಾ ಮನವಿ ಸ್ವೀಕೃತಗೊಂಡ 15 ದಿನಗಳೊಳಗಾಗಿ ಸಕ್ಷಮ ಪ್ರಾಧಿಕಾರದಿಂದ ಮಾತೃತ್ವ ರಜೆಯನ್ನು ಮಂಜೂರು ಮಾಡಲಾಗುವುದು ಎಂದರು.

ಕೇಂದ್ರದ ಸುತ್ತೋಲೆ ಸಂಬಂಧ ಸಚಿವ ಶರಣ್ ಪ್ರಕಾಶ್ ಪಾಟೀಲ್ ಕಳವಳ

ಪ್ಯಾರಾ ಮೆಡಿಕಲ್ ಕಾಲೇಜು ಮುಚ್ಚುವ ಆತಂಕ

ವಿಧಾನ ಪರಿಷತ್: ರಾಷ್ಟ್ರೀಯ ಅಲೈಡ್ ಹಾಗೂ ಹೆಲ್ತ್ ಕೇರ್ ಪ್ರೊಫೆಶನ್ಸ್ ಆಯೋಗ (ಎನ್‌ಸಿಎಚ್‌ಪಿ) ಹೊರಡಿಸಿರುವ ಸುತ್ತೋಲೆಯಿಂದಾಗಿ ರಾಜ್ಯದಲ್ಲಿ ಪ್ಯಾರಾ ಮೆಡಿಕಲ್ ಕಾಲೇಜು ಮುಚ್ಚುವ ಆತಂಕವಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ್ ಪ್ರಕಾಶ್ ಪಾಟೀಲ್ ಕಳವಳ ವ್ಯಕ್ತಪಡಿಸಿದ್ದಾರೆ.

ವಿಧಾನ ಪರಿಷತ್ ಕಲಾಪದ ಶೂನ್ಯ ವೇಳೆಯಲ್ಲಿ ಸದಸ್ಯ ಐವನ್ ಡಿಸೋಜಾ ವಿಷಯ ಪ್ರಸ್ತಾಪಿಸಿ, ಪ್ಯಾರಾ ಮೆಡಿಕಲ್ ಕೋರ್ಸ್ ಸೇರಲು ಬಯಸುವ ವಿದ್ಯಾರ್ಥಿಗಳು ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಇವರೆಗೂ ಎಸ್‌ಎಸ್‌ಎಲ್‌ಸಿ ನಂತರ ವೈದ್ಯಕೀಯ ಕ್ಷೇತ್ರದ ತರಬೇತಿ ಪಡೆಯಲು ಅವಕಾಶವಿತ್ತು. ಆದರೆ ಇನ್ನುಮುಂದೆ ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾದವರಿಗೆ ಮಾತ್ರ ಪ್ರವೇಶ ಎಂದು ನಿಯಮ ರೂಪಿಸಿರುವುದು ಹೊಸ ಶೈಕ್ಷಣಿಕ ಬಿಕ್ಕಟ್ಟಿಗೆ ನಾಂದಿಯಾಗಿದೆ ಎಂದರು.

ಆಯೋಗವು ಜನವರಿ 2ರಂದು ಯುಜಿಸಿಗೆ ಪತ್ರ ಬರೆದು, ದೇಶಾದ್ಯಂತ ಪ್ಯಾರಾ ಮೆಡಿಕಲ್ ಕೋರ್ಸ್‌ಗಳಿಗೆ ಇನ್ನು ಮುಂದೆ ಪ್ರವೇಶ ಪಡೆಯಲು ಪಿಯುಸಿ ವಿಜ್ಞಾನ ಪೂರೈಸಿರುವುದನ್ನು ಕಡ್ಡಾಯ ಮಾಡಲಾಗಿದೆ. ಈ ನೂತನ ನಿಯಮ 2026-27ನೇ ಸಾಲಿನಿಂದಲೇ ಜಾರಿಗೆ ತರಲು ಸೂಚಿಸಿದೆ. ಇದರಿಂದ ರಾಜ್ಯದಲ್ಲಿ ಪ್ರಸ್ತುತ 32 ಸರಕಾರಿ ಹಾಗೂ 608 ಖಾಸಗಿ ಕಾಲೇಜು ಸೇರಿ 640 ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಗಳಿವೆ. ಹೊಸ ನಿಯಮ ಜಾರಿಯಾದರೆ 450 ರಿಂದ 500 ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಕೊರತೆ ಉಂಟಾಗಲಿದೆ ಎಂದು ಐವನ್ ಡಿಸೋಜಾ ಆತಂಕ ವ್ಯಕ್ತಪಡಿಸಿದರು.

ಇದಕ್ಕೆ ಉತ್ತರಿಸಿದ ಸಚಿವ ಶರಣ್ ಪ್ರಕಾಶ್ ಪಾಟೀಲ್, ಎನ್‌ಸಿಎಚ್‌ಪಿ ಸುತ್ತೋಲೆಯಿಂದಾಗಿ ರಾಜ್ಯದಲ್ಲಿರುವ ಪ್ಯಾರಾ ಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿ ಉಂಟಾಗಿದೆ. ಎಸ್‌ಎಸ್‌ಎಲ್‌ಸಿ ನಂತರ ಈ ಕೋರ್ಸ್ ಆಯ್ಕೆ ಮಾಡಿಕೊಂಡು, ಪ್ರತಿ ವರ್ಷ ರಾಜ್ಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದರು. ಈಗ ಪಿಯುಸಿಯಲ್ಲಿ ವಿಜ್ಞಾನ ತೆಗೆದುಕೊಳ್ಳಬೇಕಿದೆ. ಡಿಪ್ಲೋಮಾ ಕೋರ್ಸ್‌ಗಳಿಗೂ ಇದೇ ನಿಯಮ ಅಳವಡಿಸಲು ದೇಶದೆಲ್ಲೆಡೆ ಜಾರಿಗೆ ತರಲು ಕೇಂದ್ರವು ಮುಂದಾಗಿದೆ. ನಿಯಮದಲ್ಲಿ ಸರಳೀಕರಣದ ಬಗ್ಗೆ ಆಯೋಗದ ಅಧ್ಯಕ್ಷರೊಂದಿಗೆ ಮಾತನಾಡಿದ್ದೇವೆ. ಈ ಬಗ್ಗೆ ಸಭೆ ಕರೆದು ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಮೆಡಿಕಲ್ ಸೀಟು ಹಂಚಿಕೆಯಲ್ಲಿ ನೀಟ್ ವ್ಯವಸ್ಥೆ ರಾಜ್ಯದಲ್ಲಿ ರದ್ದು ಮಾಡುವುದಿಲ್ಲ. ನೀಟ್ ವ್ಯವಸ್ಥೆಯಿಂದ ನಮ್ಮ ರಾಜ್ಯದ ಮೆಡಿಕಲ್ ಸೀಟು ಕಡಿಮೆಯಾಗಿಲ್ಲ. ಖಾಸಗಿ ಕಾಲೇಜುಗಳಲ್ಲಿ 40% ಮೆಡಿಕಲ್ ನಮ್ಮ ರಾಜ್ಯಕ್ಕೆ ಸಿಗಲಿದೆ. ಆಲ್ ಇಂಡಿಯಾ ಕೋಟಾ ಮತ್ತು ಡೀಮ್ಡ್ ವಿವಿ ಸೀಟು ಮಾತ್ರ ಎನ್‌ಎಮ್‌ಸಿ ಸೀಟು ಹಂಚಿಕೆ ಮಾಡುತ್ತದೆ. ರಾಜ್ಯದ ಮೆಡಿಕಲ್ ಸೀಟು ಭರ್ತಿಗೆ ರಾಜ್ಯಕ್ಕೆ ಅಧಿಕಾರ ಕೊಡಲಾಗಿದೆ.

-ಶರಣಪ್ರಕಾಶ್ ಪಾಟೀಲ್ ವೈದ್ಯಕೀಯ ಶಿಕ್ಷಣ ಸಚಿವ

ರಾಜ್ಯದಲ್ಲಿ ಆಂಬ್ಯುಲೆನ್ಸ್‌ಗೆ ಕೊರತೆಯಿಲ್ಲ

ರಾಜ್ಯದಲ್ಲಿ 108-ಆರೋಗ್ಯ ಕವಚ ಸೇವೆಯಡಿಯಲ್ಲಿ 715 ಆಂಬ್ಯುಲೆನ್ಸ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಎಲ್ಲಿಯೂ ಆಂಬ್ಯುಲೆನ್ಸ್‌ಗಳ ಕೊರತೆ ಉಂಟಾಗಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಅವರು ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಟಿ.ಎನ್.ಜವರಾಯಿಗೌಡ ಅವರ ಪ್ರಶ್ನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಉತ್ತರ ನೀಡಿದ ಸಚಿವರು, ಕೇಂದ್ರ ಸರಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನ ಇ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಪ್ರತಿ 5 ಲಕ್ಷ ಜನ - ಸಂಖ್ಯೆಗೆ ಒಂದು ಎಎಲ್‌ಎಸ್ ಹಾಗೂ ಪ್ರತಿ 1ಲಕ್ಷ ಜನ - ಸಂಖ್ಯೆಗೆ ಒಂದು ಬಿಎಲ್.ಎಸ್ ಆಂಬ್ಯುಲೆನ್ಸ್‌ಗಳನ್ನು ನಿಯೋಜನೆ ಮಾಡಬೇಕಾಗಿರುತ್ತದೆ. ಇದರನ್ವಯ ರಾಜ್ಯದ ಜನ ಸಂಖ್ಯೆಗೆ ಅನುಗುಣವಾಗಿ ಸುಮಾರು 820 ಆಂಬ್ಯುಲೆನ್ಸ್‌ಗಳ ಅವಶ್ಯಕತೆ ಇರುತ್ತದೆ ಎಂದು ಹೇಳಿದರು.

17969 ಎಕರೆ ವಕ್ಫ್ ಆಸ್ತಿ ಒತ್ತುವರಿ | ಸಚಿವ ಜಮೀರ್ ಮಾಹಿತಿಗೆ ಆರ್.ಅಶೋಕ್ ಆಕ್ರೋಶ

ವಕ್ಫ್ ಆಸ್ತಿ ಒತ್ತುವರಿ ತೆರವಿಗೆ ಅಗತ್ಯ ಕ್ರಮ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯದಲ್ಲಿ 17969 ಎಕರೆ ವಕ್ಫ್ ಆಸ್ತಿ ಒತ್ತುವರಿಯಾಗಿದ್ದು ಅದನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ವಸತಿ ಹಾಗೂ ವಕ್ಫ್ ಸಚಿವ ಜಮೀರ್ ಅಹ್ಮದ್ ಹೇಳಿದರು.

ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಉತ್ತರಿಸಿದ ಅವರು, ರಾಜ್ಯದಲ್ಲಿ 1,12,860 ಎಕರೆ ವಕ್ಫ್ ಜಮೀನುಗಳಿತ್ತು. ಅದರಲ್ಲೀಗ 20,054 ಎಕರೆ ಮಾತ್ರ ಬಾಕಿ ಇದೆ. 17196 ಎಕರೆ ಒತ್ತುವರಿಯಾಗಿದೆ ಇನಾಮ್ ಅಬಾಲಿಷನ್ ಕಾಯಿದೆಯ 47,000 ಎಕರೆ ಹಾಗೂ ಭೂ ಸುಧಾರಣಾ ಕಾಯಿದೆ ಅಡಿ ಅಡಿ 27,627 ಎಕರೆ ಹೋಗಿದೆ. ಇರುವ ಜಮೀನಿನಲ್ಲೂ ಒತ್ತುವರಿಯಾಗಿದೆ ಎಂದು ಹೇಳಿದರು ಒತ್ತುವರಿ ಮಾಡಿರುವವರು ಬೇರೆ ಸಮುದಾಯದವರಲ್ಲ ಮುಸ್ಲಿಮರೇ ಒತ್ತುವರಿ ಮಾಡಿಕೊಂಡಿದ್ದಾರೆ. ಇದನ್ನು ತೆರವು ಮಾಡಲು ತಾವು ವಕ್ಫ್ ಅದಾಲತ್ ನಡೆಸಿದಾಗ ವಿರೋಧ ಪಕ್ಷದವರು ಬೆಳಗಾವಿ ಅಧಿವೇಶನದಲ್ಲಿ ಈ ಬಗ್ಗೆ ಬಾರಿ ಚರ್ಚೆಯಾಗಿದೆ ಎಂದು ಹೇಳಿದರು. ಈ ವೇಳೆ ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ ನಾವು ಒತ್ತುವರಿ ತೆರವು ಮಾಡಲು ವಿರೋಧ ವ್ಯಕ್ತಪಡಿಸಿಲ್ಲ. ಆದರೆ ಈ ಹಿಂದೆ ದೇವರಾಜ್ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಭೂ ಸುಧಾರಣಾ ಕಾಯಿದಯಡಿ ಸಾವಿರಾರು ಎಕರೆಯನ್ನು ರೈತರಿಗೆ ಮಂಜೂರು ಮಾಡಿದ್ದಾರೆ. ಸುಮಾರು 50ರಿಂದ 60 ವರ್ಷಗಳ ಕಾಲ ಜಮೀನು ಪಡೆದ ರೈತರು ಅಲ್ಲಿ ಉಳುಮೆ ಮಾಡುತ್ತಿದ್ದಾರೆ. ಅಂತವರು ಮುಸ್ಲಿಮರಾಗಲಿ ಹಿಂದುಗಳಾಗಲಿ ಅವರಿಗೆ ರೈತರಿಗೆ ಜಮೀನು ನೀಡಬೇಕು. ಎಂಬುದು ನಮ್ಮ ಆಗ್ರಹ. ಕಲಬುರಗಿಯ ಸುತ್ತಮುತ್ತ ಬಹುತೇಕ ಆಸ್ತಿಗಳು ವಕ್ಫ್ ಸೇರಿದೆ ಎಂದು ಪಹಣಿಯಲ್ಲಿ ನಮ್ಮದಾಗಿದೆ. ನಾಡಿನ ಹೆಮ್ಮೆ ಸರ್.

ಎಂ.ವಿಶ್ವೇಶ್ವರಯ್ಯ ಅವರು ಓದಿದ ಸರಕಾರಿ ಶಾಲೆ ಕೂಡ ವಕ್ಫ್‌ಗೆ ಸೇರಿದೆ ಎಂದು ಹೇಳುತ್ತಿರುವುದು ಸರಿಯಲ್ಲ. ಹಿಂದೆ ರಾಜ ಮಹಾರಾಜರು ದಾನ ನೀಡಿದ ಜಮೀನನ್ನು ಕಾಲ ನಂತರ ಕೈ ಬದಲಾವಣೆಯಾಗಿರಬಹುದು ಅದನ್ನು ನೈಜ ರೈತರಿಗೆ ಬಿಟ್ಟುಕೊಡು ಅಗತ್ಯವಿದೆ ಎಂದರು.

ಶಾಸಕ ಎಂ.ವೈ.ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಬ್ಜಲ್ ಪುರದಲ್ಲಿ 566 ಆಸ್ತಿಗಳಿವೆ. ಅವುಗಳಲ್ಲಿ 30 ಆಸ್ತಿಗಳು ಒತ್ತುವರಿಯಾಗಿದ್ದು 23 ರನ್ನು ಮರು ವಶ ಮಾಡಿಕೊಳ್ಳಲಾಗಿದೆ ಎಂದರು. ಶಾಸಕ ತನ್ವೀರ್ ಶೇಠ್ ಇನಾಂ ಅಬಾಲಿಷನ ಆಕ್ಟ್ ಅಡಿ ಮಂಜೂರಾಗಿರುವ ಆಸ್ತಿಗಳನ್ನು ಪಂಜಾಬಿನಲ್ಲಿ ಫಲಾನುಭವಿಗಳಿಗೆ ಬಿಟ್ಟುಕೊಡಲಾಗಿದೆ. ರಾಜ್ಯದಲ್ಲೂ ಅದೇ ರೀತಿಯಲ್ಲಿ ನಿರ್ಧಾರವಾಗಬೇಕು ಎಂದು ಸಲಹೆ ನೀಡಿದರು.

ನಿವೇಶನ ಹಂಚಿಕೆಯಲ್ಲಿ ನಕಲಿ ಹಕ್ಕು ಪತ್ರ ಪತ್ತೆ

ವಸತಿ ಯೋಜನೆಗೆ ಅನುದಾನ ನೀಡುವ ಸಂಬಂಧ ಪಟ್ಟಂತೆ ಬಿಜೆಪಿ ಶಾಸಕ ಮುನಿರತ್ನ ಹಾಗೂ ವಸತಿ ಸಚಿವ ಜಮೀರ್ ಅಹಮದ್‌ಖಾನ್ ನಡುವೆ ಮಾತಿನ ಜಟಾಪಟಿ ನಡೆಯಿತು. ಪ್ರಶ್ನೋತ್ತರದಲ್ಲಿ ಶಾಸಕ ಮುನಿರತ್ನ, ತಮ್ಮ ಕ್ಷೇತ್ರಕ್ಕೆ ವಸತಿ ಯೋಜನೆ ಅಡಿ ಪ್ರತಿ ವರ್ಷ ಐದರಿಂದ ಗರಿಷ್ಠ 7 ಲಕ್ಷ ಮಾತ್ರ ಅನುದಾನ ನೀಡಲಾಗುತ್ತಿದೆ. ಇದರಿಂದ ಕೊಳಚೆ ಪ್ರದೇಶಗಳಲ್ಲಿರುವ ನಿವಾಸಿಗಳಿಗೆ ಮನೆ ನಿರ್ಮಿಸಿ ಕೊಡಲು ಸಾಧ್ಯವಾಗುತ್ತಿಲ್ಲ. ಕ್ಷೇತ್ರದಲ್ಲಿ ನಿವೇಶನ ಹಂಚಿಕೆ ಮಾಡಿರುವ ವಿಚಾರವಾಗಿ ಏಳು ನಕಲಿ ಹಕ್ಕು ಪತ್ರಗಳು ಪತ್ತೆಯಾಗಿದೆ. ಈ ಬಗ್ಗೆ ತಾವು ಪಾಲಿಕೆ ಆಯುಕ್ತರನ್ನು ಪ್ರಶ್ನೆ ಮಾಡಿದಾಗ ಪ್ರಕರಣ ಬಯಲಿಗೆ ಬಂದಿದ್ದು ಆಯುಕ್ತರೇ ಪೊಲೀಸರಿಗೆ ದೂರು ನೀಡಿದ್ದಾರೆ. ಆದರೆ ನಕಲಿ ಹಕ್ಕು ಪತ್ರ ನೀಡಿದವರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ ಎಂದು ಆಕ್ಷೇಪ ವ್ಯಕ್ತಪಡಿ ಸಿದರು. ಉತ್ತರ ನೀಡಿದ ಸಚಿವ ಜಮೀರ್ ಅಹ್ಮದ್, ಫಲಾನುಭವಿಗಳ ವಂತಿಕೆ ಪಾವತಿಯಲ್ಲಿ ಸಮಸ್ಯೆ ಇದ್ದು, ತಾವು ಮುಖ್ಯಮಂತ್ರಿ ಅವರ ಮನವೊಲಿಸಿ ಫಲಾನುಭವಿಗಳ ವಂತಿಕೆಯ ಹಣ ಸರಕಾರದಿಂದಲೇ ಪಾವತಿಸುವಂತೆ ಮಾಡ ಲಾಗಿದೆ. ಈವರೆಗೂ 90,000 ಮನೆಗಳ ನಿರ್ಮಾಣ ಪೂರ್ಣಗೊಳಿಸಲಾಗಿದೆ ಎಂದು ವಿವರಿಸಿದ್ದರು. ಈ ಹಿಂದೆ ಬಿಜೆಪಿ ಸರಕಾರದದಲ್ಲಿ ಮುನಿರತ್ನ ಸಚಿವರಾಗಿದ್ದರು. ಆಗಲೂ ಅವರ ರಾಜರಾಜೇಶ್ವರಿ ನಗರ ಕ್ಷೇತ್ರಕ್ಕೆ 5 ಲಕ್ಷಗಳ ಅನುದಾನ ನೀಡಲಾಗಿದೆ. ಕೊಳಚೆ ಪ್ರದೇಶಗಳ ನಿವಾಸಿಗಳ ಮೇಲೆ ಕಾಳಜಿ ಇದ್ದರೆ ಸಚಿವರಾಗಿದ್ದಾಗ ಹೆಚ್ಚು ಹಣ ತೆಗೆದುಕೊಂಡು ಹೋಗಬೇಕಿತ್ತಲ್ಲವೇ ಎಂದರು? ಅಲ್ಲದೆ ನಕಲಿ ಹಕ್ಕು ಪತ್ರಗಳ ಬಗ್ಗೆ ತಮಗೆ ಈಗಷ್ಟೇ ಗಮನಕ್ಕೆ ಬಂದಿದೆ. ಈ ಕುರಿತು ಪರಿಶೀಲನೆ ಮಾಡುತ್ತೇನೆ ಸಚಿವರು ಭರವಸೆ ನೀಡಿದರು.

ನೈಸ್: ಗುತ್ತಿಗೆ ನವೀಕರಿಸಬೇಡಿ

ವಿಧಾನಸಭೆ: ನೈಸ್ ಸಂಸ್ಥೆಯವರು ಅತ್ಯಂತ ಉಡಾಫೆಯಿಂದ ವರ್ತಿಸುತ್ತಿದ್ದು , ಯೋಜನೆಗಾಗಿ ನೀಡಿರುವ ಭೂಮಿ ಗುತ್ತಿಗೆ ಅವಧಿ ಮುಗಿಯುತಿದ್ದು, ಮತ್ತೆ ನವೀಕರಣ ಮಾಡಬಾರದು ಎಂದು ಶಾಸಕ ಎಸ್.ಟಿ.ಸೋಮಶೇಖರ್ ಆಗ್ರಹಿಸಿದರು.

ಪ್ರಶ್ನೋತ್ತರದ ಅವಧಿಯಲ್ಲಿ ತಮ್ಮ ಕ್ಷೇತ್ರ ಯಶವಂತಪುರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹಾದು ಹೋಗಿರುವ ರಸ್ತೆಯಲ್ಲಿ ಪ್ರತಿದಿನ 10 ಕೋಟಿ ರು ಸಂಗ್ರಹ ಮಾಡಲಾಗುತ್ತಿದೆ ಎಂದು ವಿವರಿಸಿದರು.

ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಸಂಸ್ಥೆ ವತಿಯಿಂದ ಬಿಎಂಐಸಿ ಯೋಜನೆಗೆ ಸಾವಿರಾರು ಎಕರೆ ಪಡೆದುಕೊಳ್ಳಲಾಗಿದೆ. ನಿರ್ಮಿಸಲಾಗಿರುವ ರಸ್ತೆ ವೈಟ್ ಟ್ಯಾಪಿಂಗ್ ಮಾಡದ ಹೊರತು ಟೋಲ್ ಸುಂಕ ಪರಿಷ್ಕರಿಸಬಾರದು ಎಂಬ ನಿಯಮವಿದೆ. ಯಾವುದನ್ನು ಸಂಸ್ಥೆ ಪಾಲಿಸುತ್ತಿಲ್ಲ. ದಿನೇ ದಿನೇ ರಸ್ತೆಯಲ್ಲಿ ಸಂಚಾರದಟ್ಟಣೆ ಹೆಚ್ಚಾಗುತ್ತಿದೆ. ಅಕ್ಕ ಪಕ್ಕದ ರಸ್ತೆಗಳಲ್ಲೂ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಮೇಲು ಸೇತುವೆ ನಿರ್ಮಿಸಿ ಎಂದರೆ ನೈಸ್ ಸಂಸ್ಥೆ ಗಮನ ನೀಡುತ್ತಿಲ್ಲ ಎಂದು ಆರೋಪಿಸಿದರು. ನೈಸ್ ಜಮೀನಿನಲ್ಲಿ ಉಪನಗರ ನಿರ್ಮಿಸುವುದಾಗಿ ಹೇಳಿತ್ತು. ಆದರೆ, ಈವರೆಗೂ ಅದನ್ನು ಮಾಡಿಲ್ಲ, ನೈಸ್ ಮತ್ತೆ ನಿಯಮಗಳ ಉಲ್ಲಂಘನೆ ಕುರಿತು ಅಧ್ಯಯನ ನಡೆಸಲು ಈ ಹಿಂದೆ ಟಿ.ಬಿ.ಜಯಚಂದ್ರ ಅವರ ಅಧ್ಯಕ್ಷತೆಯಲ್ಲಿ ಸದನ ಸಮಿತಿ ರಚಿಸಲಾಗಿತ್ತು. ಸದರಿ ವರದಿ ಸರಕಾರದ ಮುಂದಿದೆ. ಅದನ್ನು ಅನುಷ್ಠಾನಗೊಳಿಸಲು ಹಲವು ಬಾರಿ ಸಚಿವ ಸಂಪುಟ ಉಪ ಸಮಿತಿಗಳನ್ನು ರಚಿಸಲಾಗಿದೆ. ಆದರೆ ಯಾವ ಸಮಿತಿಯವರು ನಿಗದಿತ ಕಾಲಕ್ಕೆ ಸಭೆಗಳನ್ನು ನಡೆಸಿಲ್ಲ ನೈಸ್ ಸಂಸ್ಥೆಗೆ ಹೆದರುತ್ತಿದ್ದಾರೆ. ಈ ಹಿಂದೆ ಬಿಜೆಪಿ ಸರಕಾರದಲ್ಲಿ ಗೋವಿಂದ ಕಾರಜೋಳ ಉಪ ಸಮಿತಿಯ ಅಧ್ಯಕ್ಷರಾಗಿದ್ದರು. ಒಂದು ಸಭೆ ನಡೆಸಲಿಲ್ಲ. ಈಗ ಗೃಹ ಸಚಿವರು ಅಧ್ಯಕ್ಷರಾಗಿದ್ದಾರೆ. ಈಗಲೂ ಸಭೆ ನಡೆಸುತ್ತಿಲ್ಲ ಎಂದು ಆಕ್ಷೇಪಿಸಿದರು. ನೈಸ್ ಸಂಸ್ಥೆಗೆ ಗುತ್ತಿಗೆ ನೀಡಿರುವ ಅವಧಿ 30 ವರ್ಷ ಮುಗಿಯುತ್ತಾ ಬಂದಿದೆ. ಸರಕಾರ ಅದನ್ನು ನವೀಕರಣ ಮಾಡಬಾರದು ಎಂದು ಆಗ್ರಹಿಸಿದರು.

ಹೆಚ್ಚುವರಿ ಮೇಲು ಸೇತುವೆಗಳಿಗಾಗಿ ಪತ್ರ

ಉತ್ತರ ನೀಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ನೈಸ್ ರಸ್ತೆಯಲ್ಲಿ 89 ಮೇಲು ಸೇತುವೆ ನಿರ್ಮಿಸಲಾಗಿದೆ. ಸಂಚಾರ ದಟ್ಟಣೆ ದಿನೇ ದಿನೇ ಹೆಚ್ಚಾಗುತ್ತಿದೆ. ಹೆಚ್ಚುವರಿ ಮೇಲು ಸೇತುವೆಗಳ ನಿರ್ಮಾಣಕ್ಕೆ ನೈಸ್ ಸಂಸ್ಥೆಗೆ ಪತ್ರ ಬರೆಯಲಾಗಿದೆ. ಈ ಸಂಬಂಧಪಟ್ಟಂತೆ ರಸ್ತೆ ಹಾದು ಹೋಗುವ ಕ್ಷೇತ್ರಗಳ ಶಾಸಕರುಗಳ ಜತೆ ಸದನ ಸಮಿತಿಯ ಅಧ್ಯಕ್ಷರಾಗಿರುವ ಸಚಿವ ಪರಮೇಶ್ವರ್ ಅವರೊಂದಿಗೆ ಸಭೆ ಆಯೋಜಿಸುವುದಾಗಿ ಭರವಸೆ ನೀಡಿದರು.

ಸಂಪಾದಕೀಯ

ಸೆಲ್ಫಿ, ರೀಲ್ಸ್ ಗೀಳಿನ ಸುತ್ತ

ಅತಿಯಾದರೆ ಅಮೃತವೂ ವಿಷವೇ ಎನ್ನುತ್ತಾರೆ ಬಲ್ಲವರು. ಆದರೆ ಈ ಮಾತಿನ ಒಳಾರ್ಥವನ್ನು ಗ್ರಹಿಸುವಷ್ಟರಲ್ಲೇ ಎಷ್ಟೋ ಜನರ ಆಯುಷ್ಯ ಮುಗಿಯುತ್ತಾ ಬಂದಿರುತ್ತದೆ ಅಥವಾ ಮುಗಿದುಹೋಗುತ್ತದೆ. ಗಗನಚುಂಬಿ ಕಟ್ಟಡವೊಂದರ ತುತ್ತತುದಿಯಲ್ಲಿ ಅಥವಾ ಶರವೇಗದಿಂದ ಸಾಗುತ್ತಿರುವ ರೈಲಿನ ಬಾಗಿಲಲ್ಲಿ ನಿಂತು ಅಥವಾ ವನ್ಯಮೃಗದ ಜತೆಗೆ ಪೋಸು ಕೊಟ್ಟುಕೊಂಡು ಸೆಲ್ಫಿ ಚಿತ್ರವನ್ನು ಕ್ಲಿಕ್ಕಿಸಲು ಹೋಗಿ ಪ್ರಾಣಕ್ಕೇ ಸಂಚಕಾರ ತಂದುಕೊಂಡವರ ಸುದ್ದಿಗಳನ್ನು ಓದಿದ್ದೇವೆ. ಇಂಥ ಅತಿರೇಕದ ವರ್ತನೆಯಲ್ಲಿ ಸಾಕಷ್ಟು ವೈವಿಧ್ಯಗಳನ್ನೂ ಕಾಣಬಹುದು ಎಂಬುದು ಬೇರೆ ಪ್ರಶ್ನೆ. ಈ ರೀತಿಯ ಅಪಾಯಕಾರಿ ಗೀಳಿನ ಸಾಲಿಗೆ ಸೇರುವಂಥದ್ದು 'ರೀಲ್ಸ್' ಚಿತ್ರೀಕರಣದ ಹುಚ್ಚು. ರಾತ್ರಿಯ ಹೊತ್ತಿನಲ್ಲಿ ವೇಗವಾಗಿ ಕಾರು ಓಡಿಸಿಕೊಂಡು ಅದರ ರೀಲ್ಸ್ ಮಾಡುತ್ತಿದ್ದ ಇಬ್ಬರು ಯುವಕರು ಅಪಘಾತಕ್ಕೀಡಾಗಿ ಸಾವನ್ನಪ್ಪಿರುವ ಘಟನೆ ಗುಜರಾತ್‌ನಿಂದ ವರದಿಯಾಗಿರುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಬೇಕಾಗಿ ಬಂದಿದೆ. ಇತ್ತೀಚೆಗೆ ಅತಿಯಾಗುತ್ತಿರುವ ಇಂಥ ಮತ್ತೊಂದು ಚಾಳಿಯೆಂದರೆ, ಸರಿಸಬಹುದಾದ ಚಾವಣಿಯ ಸೌಲಭ್ಯವಿರುವ ಆಧುನಿಕ ಕಾರುಗಳಲ್ಲಿ, ಸಂಚಾರದ ವೇಳೆಯಲ್ಲಿ ಆ ಚಾವಣಿಯ ಕಿಂಡಿಯಿಂದ ತಲೆಯನ್ನು ಹೊರಹಾಕಿ ಹೊರದೃಶ್ಯವನ್ನು ನೋಡುವುದಕ್ಕೆ ತಮ್ಮ ಮಕ್ಕಳಿಗೆ ಅನುವುಮಾಡಿಕೊಡುವ ಪೋಷಕರ ವರ್ತನೆ. ಇದು ಕೂಡ ಮಕ್ಕಳ ಪಾಲಿಗೆ ಎಷ್ಟೊಂದು ಅಪಾಯಕಾರಿಯಾಗಬಲ್ಲದು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಆದರೆ, ಈ ಎಲ್ಲಾ ನಿದರ್ಶನಗಳಲ್ಲಿ ಏನಾದರೊಂದು ದುರಂತ ಸಂಭವಿಸುವವರೆಗೂ ಇಂಥವರಿಗೆ ಬುದ್ಧಿ ಬರುವುದಿಲ್ಲ ಎಂಬುದು ವಿಪರ್ಯಾಸ. 'ಮಾನವ ಜನ್ಮ ದೊಡ್ಡದು, ಇದ ಹಾಳುಮಾಡಿಕೊಳಬೇಡಿರೋ ಹುಚ್ಚಪ್ಪಗಳಿರಾ' ಎಂಬ ದಾಸವಾಣಿ ಇವರಿಗೆ ನಾಟುವುದೇ ಇಲ್ಲ. ಹೀಗಾಗಿ ದುರಂತಗಳು ತಪ್ಪಿದ್ದಲ್ಲ...

ಸೊಂಪಾದಕೀಯ

ಕುಂತಲ್ಲಿ ಕೂರಂಗಿಲ್ಲ

ಬೆಂಗಳೂರು ಸೇರಿದಂತೆ ಹಲವು ನಗರ-ಪಟ್ಟಣಗಳ ಹೋಟೆಲ್‌ಗಳಲ್ಲಿ ಇನ್ನು ಮುಂದೆ ಹೊಸ ನಿಯಮವನ್ನು ಜಾರಿಗೆ ತರಲು ಅವುಗಳ ಮಾಲೀಕರು ಆಲೋಚಿಸುತ್ತಿದ್ದಾರಂತೆ ಎಂಬುದು ನಮ್ಮ ಕಿವಿಗೆ ಅನಧಿಕೃತವಾಗಿ ಬಿದ್ದಿರುವ ಸುದ್ದಿ. ಹೋಟೆಲಿಗೆ ಊಟ, ತಿಂಡಿ, ಕಾಫಿಗೆ ಅಂತ ಬರೋ ಗ್ರಾಹಕರನ್ನು ಬೇಗನೇ ಬೀಳ್ಕೊಡುವುದು ಇದರ ಉದ್ದೇಶ. ಹೋಟೆಲ್ ಅನ್ನೋದೇ ಒಂದು ದೊಡ್ಡ ಬ್ಯುಸಿನೆಸ್ ಆಗಿರುವಾಗ ಪಟ್ಟಣ-ನಗರಗಳ ಹೋಟೆಲ್‌ಗಳಲ್ಲಿ ಬ್ಯುಸಿನೆಸ್ ಮಾಡೋರ ಸಂಖ್ಯೆ ಜಾಸ್ತಿ ಆಗಿರುವುದು ಇದಕ್ಕೆ ಕಾರಣವಂತೆ. ಅಂದರೆ ಬೈಟು ಕಾಫಿ ಹೇಳಿ 2 ಗಂಟೆವರೆಗೆ ಪಟ್ಟಾಗಿ ಕೂತು ಮಾತುಕತೆ ಮಾಡೋರು, ಊಟ, ತಿಂಡಿ ಮಾಡೋರು ನಂತರ ಎದ್ದು ಹೋಗದೆ ಗಂಟೆಗಟ್ಟಲೆ ಅಲ್ಲೇ ಕುಳಿತು ಪಟ್ಟಾಂಗ ಹೊಡೆಯುವುದನ್ನು ತಪ್ಪಿಸಲು 'ಕಾಲಹರಣ ಮಾಡಬೇಡಿ, ಬೇರೆ ಗ್ರಾಹಕರಿಗೆ ಜಾಗ ಬಿಟ್ಟು ಕೊಡಿ' ಅಂತ ಹೇಳುವ ಅಭಿಯಾನವನ್ನು ಶುರುಹಚ್ಚಿಕೊಳ್ಳೋದು ಮಾಲೀಕರ ಉದ್ದೇಶ. ಆದರೆ ಅದನ್ನು ಬಾಯಿ ಬಿಟ್ಟು ಗ್ರಾಹಕರಿಗೆ ಹೇಳೋದು ಕಷ್ಟ. ಹಾಗಾಗಿ 'ನಿಮ್ಮ ನಂತರ ಮುಂದಿನವರಿಗೆ ಜಾಗ ಬಿಟ್ಟು ಕೊಡಿ' ಅಂತ ಬೋರ್ಡ್ ಹಾಕುವ ಮೂಲಕ ಗ್ರಾಹಕರಲ್ಲಿ ಅವರು ಅರಿವು ಮೂಡಿಸಲಿದ್ದಾರಂತೆ. ಪಾಪ ಅವರು ತಾನೆ ಏನು ಮಾಡಿಯಾರು? ಮನೆಗೆ ಬರೋ ನೆಂಟರೇನೋ ಊಟ, ತಿಂಡಿ, ಸಿಹಿ ಊಟ, ಬಾಡೂಟ ಎಲ್ಲಾ ಆದರೂ ವಾಪಸ್ ತಮ್ಮ ಊರಿಗೆ ಹೋಗದೇ ಅಲ್ಲೇ ಝುಂಡಾ ಊರೋದನ್ನು ನೋಡಿದ್ದೇವೆ. ಆದರೆ ತೀರಾ ಹೋಟೆಲ್ ಗ್ರಾಹಕರೂ ತಿಂದ ಮೇಲೂ ಎದ್ದು ಹೋಗದೇ ಇದ್ದರೆ, ತಿಂದ ಅನ್ನ ಅವರಿಗೆ ಜೀರ್ಣ ಆಗೋದು ಹೇಗೆ ಅನ್ನೋದು ಮಾಲೀಕರ ಕಾಳಜಿ. ಈ ಎದ್ದು ಹೋಗದ ಗ್ರಾಹಕರ ಕಾರಣದಿಂದಾಗಿ ತಮ್ಮ ವ್ಯವಹಾರ ಬಿದ್ದು ಹೋಗುತ್ತಿದೆ ಎನ್ನುವ ಮಾಲೀಕರು ಈಗ ಮುಲಾಜು ಬಿಡಲು ನಿರ್ಧರಿಸಿದ್ದಾರಂತೆ. ಕೆಲವರಿಗೆ ಇಲ್ಲಿ ತಿಂಡಿ, ಕಾಫಿ ನೆಪ ಮಾತ್ರ. ಬಹುತೇಕರು ಇಲ್ಲಿಯೇ ಕೂತು, ರಿಯಲ್ ಎಸ್ಟೇಟ್, ಮದುವೆ ಮಾತುಕತೆ, ಬ್ಯುಸಿನೆಸ್, ರಾಜಕೀಯ ಮಾತಾಡೋದಷ್ಟೇ ಅಲ್ಲದೆ, ಒಂದ್ ಕಾಫಿ ಹೇಳಿ ಉದ್ಯೋಗದ ಸಂದರ್ಶನವನ್ನೂ ಮಾಡ್ತಾರೆ ಅನ್ನೋದು ಮಾಲೀಕರ ಅಳಲು. ದರ್ಶಿನಿ ಮಾಲೀಕರೇನೋ ಕುಳಿತುಕೊಳ್ಳಲು ಕುರ್ಚಿಯನ್ನೇ ಹಾಕದೆ ಈ ಸಮಸ್ಯೆಯಿಂದ ಸುಲಭವಾಗಿ ಪಾರಾಗುತ್ತಾರೆ. ಆದರೆ ಕುರ್ಚಿ, ಟೇಬಲ್ ಹಾಕಿರುವ ರೆಗ್ಯುಲರ್ ಹೋಟೆಲ್‌ಗಳಿಗೆ ಮಾತ್ರ ಕೆಲವು ರೆಗ್ಯುಲರ್ ಕಸ್ಟಮರ್‌ಗಳಿಂದ ಈ ಕಷ್ಟ ಎದುರಾಗಿದೆ. ಹಾಗಾಗಿ ಇವರಿಗೆ 'ಟೇಬಲ್ ಮ್ಯಾನರ್ಸ್' ಕಲಿಸಬೇಕಾಗಿ ಬಂದಿದೆ ಬಡಪಾಯಿ ಹೋಟೆಲ್ ಮಾಲೀಕರಿಗೆ..!

ಸಂಪಾದಕರ ಸದ್ಯಶೋಧನೆ

'ದಿ ಗ್ರೇ ಲೇಡಿ' ಅಂದ್ರೆ ಯಾರು?

'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯನ್ನು 'ಓಲ್ಡ್ ಲೇಡಿ ಆಫ್ ಬೋರಿಬಂದರ್', 'ದಿ ಹಿಂದೂ' ಪತ್ರಿಕೆಯನ್ನು 'ಮೌಂಟ್ ರೋಡಿನ ಮಹಾವಿಷ್ಣು' ಹಾಗೂ 'ದಿ ಸ್ಟೇಟ್ಸ್‌ಮನ್' ಪತ್ರಿಕೆಯನ್ನು 'ದಿ ಓಲ್ಡ್ ಲೇಡಿ ಆಫ್ ಚೌರಿಂಘಿ' ಎಂದು ಕರೆಯುತ್ತಾರೆಂದು ನಿನ್ನೆ ಬರೆದಿದ್ದೆ. ಅದೇ ರೀತಿ ಅಮೆರಿಕದ ಪ್ರತಿಷ್ಠಿತ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯನ್ನು 'ದಿ ಗ್ರೇ ಲೇಡಿ' (The Gray Lady) ಎಂದು ಕರೆಯಲಾಗುತ್ತದೆ. ಇದು ಕೇವಲ ಒಂದು ಅಡ್ಡಹೆಸರಲ್ಲ, ಬದಲಿಗೆ ಆ ಪತ್ರಿಕೆಯ ನೂರಾರು ವರ್ಷಗಳ ಇತಿಹಾಸ, ಅದರ ಸಿದ್ಧಾಂತ ಮತ್ತು ಅದು ಕಾಪಾಡಿಕೊಂಡು ಬಂದಿರುವ ಘನತೆಯ ಸಂಕೇತ. 'ದಿ ಗ್ರೇ ಲೇಡಿ' ಎಂಬ ಹೆಸರಿಗೆ ಪ್ರಮುಖ ಮತ್ತು ನೇರವಾದ ಕಾರಣವೆಂದರೆ ಪತ್ರಿಕೆಯ ಹಳೆಯ ವಿನ್ಯಾಸ. ಇಪ್ಪತ್ತನೇ ಶತಮಾನದ ಬಹುಪಾಲು ಅವಧಿಯಲ್ಲಿ, ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಮುಖಪುಟದಲ್ಲಿ ವರ್ಣರಂಜಿತ ಚಿತ್ರಗಳಾಗಲಿ ಅಥವಾ ಆಕರ್ಷಕ ಗ್ರಾಫಿಕ್ಸ್ ಆಗಲಿ ಇರುತ್ತಿರಲಿಲ್ಲ. ಇಡೀ ಪತ್ರಿಕೆಯು ಕೇವಲ ಕಪ್ಪು ಅಕ್ಷರಗಳಿಂದ ಮತ್ತು ಸಣ್ಣ ಕಾಲಮ್‌ಗಳಿಂದ ತುಂಬಿರುತ್ತಿತ್ತು. ದೂರದಿಂದ ನೋಡಿದಾಗ ಅಥವಾ ಅಕ್ಷರಗಳ ದಟ್ಟಣೆಯನ್ನು ಗಮನಿಸಿದಾಗ, ಬಿಳಿ ಕಾಗದದ ಮೇಲೆ ಹರಡಿದ ಕಪ್ಪು ಅಕ್ಷರಗಳು ಒಟ್ಟಾರೆಯಾಗಿ 'ಬೂದು' (Gray) ಬಣ್ಣದಂತೆ ಕಾಣಿಸುತ್ತಿದ್ದವು. ಇತರ ಪತ್ರಿಕೆಗಳು ಓದುಗರನ್ನು ಸೆಳೆಯಲು ದೊಡ್ಡ ಚಿತ್ರಗಳನ್ನು ಬಳಸುತ್ತಿದ್ದಾಗಲೂ, ನ್ಯೂಯಾರ್ಕ್ ಟೈಮ್ಸ್ ಮಾತ್ರ ತನ್ನ ಸಾಂಪ್ರದಾಯಿಕ 'ಬೂದು' ಶೈಲಿಯನ್ನೇ ಮುಂದುವರಿಸಿತು. ಕೊನೆಗೆ 1997ರಲ್ಲಿ ಮಾತ್ರ, ಈ ಪತ್ರಿಕೆ ತನ್ನ ಮುಖಪುಟದಲ್ಲಿ ಮೊದಲ ಬಾರಿಗೆ ಬಣ್ಣದ ಫೋಟೋವನ್ನು ಬಳಸಿತು. ಅಷ್ಟು ವರ್ಷಗಳ ಕಾಲ ಅದು ಈ ಶಿಸ್ತನ್ನು ಪಾಲಿಸಿಕೊಂಡು ಬಂದಿತು. ಪತ್ರಿಕೋದ್ಯಮದಲ್ಲಿ Yellow Journalism ಅಥವಾ 'ಹಳದಿ ಪತ್ರಿಕೋದ್ಯಮ' ಎಂಬ ಮಾತಿದೆ. ಅಂದರೆ, ಸುಳ್ಳು ಸುದ್ದಿ ಅಥವಾ ಜನರನ್ನು ಪ್ರಚೋದಿಸುವ ಸುದ್ದಿಗಳ ಮೂಲಕ ಪತ್ರಿಕೆಯನ್ನು ಮಾರಾಟ ಮಾಡುವುದು. ಆದರೆ ನ್ಯೂಯಾರ್ಕ್ ಟೈಮ್ಸ್ ಇದಕ್ಕೆ ವಿರುದ್ಧವಾಗಿತ್ತು. ಇದು ಹಗರಣಗಳು ಅಥವಾ ಗಾಸಿಪ್‌ಗಳಿಗೆ ಪ್ರಾಮುಖ್ಯ ನೀಡದೇ, ಗಂಭೀರ ರಾಜಕೀಯ ಮತ್ತು ಸಾಮಾಜಿಕ ವಿಚಾರಗಳ ಮೇಲೆ ಗಮನವನ್ನು ಕೇಂದ್ರೀಕರಿಸಿತು. ಬೂದು ಬಣ್ಣವು ಸ್ಥಿರತೆ ಮತ್ತು ಗಾಂಭೀರ್ಯದ ಸಂಕೇತ. ಪತ್ರಿಕೆಯು ತನ್ನ ನಿಷ್ಠುರವಾದ ಸುದ್ದಿಗಾರಿಕೆ ಮತ್ತು ಸಂಪ್ರದಾಯಬದ್ಧ ಶೈಲಿಯಿಂದಾಗಿ ಒಬ್ಬ ಗೌರವಾನ್ವಿತ, ಹಿರಿಯ ಮತ್ತು ಸಭ್ಯ ಮಹಿಳೆಯಂತೆ (Lady) ಭಾಸವಾಯಿತು. ಹೀಗಾಗಿಯೇ ಇದಕ್ಕೆ 'ಲೇಡಿ' ಎಂಬ ಗೌರವದ ಸಂಬೋಧನೆ ಸಿಕ್ಕಿತು. ಈ ಪತ್ರಿಕೆಯ ವಿನ್ಯಾಸವನ್ನು 'ದಿ ಗ್ರೇ ಲೇಡಿ' ಎಂದು ಕರೆಯಲು ಮತ್ತೊಂದು ಕಾರಣ ಅದರ ಕಟ್ಟುನಿಟ್ಟಾದ ಶಿಸ್ತು. ದಶಕಗಳ ಕಾಲ ಈ ಪತ್ರಿಕೆ ತನ್ನ ಫಾಂಟ್ (ಅಕ್ಷರ) ಅಥವಾ ಹೆಡ್‌ಲೈನ್ ಶೈಲಿಯನ್ನು ಬದಲಿಸಲಿಲ್ಲ, ಪತ್ರಿಕೆಯ ಭಾಷೆ ಮತ್ತು ಶೈಲಿ ಯಾವಾಗಲೂ ತಟಸ್ಥವಾಗಿರುತ್ತಿತ್ತು. ಆ ಧ್ವನಿಯಲ್ಲಿ ಒಂದು ರೀತಿಯ 'ಪಕ್ವತೆ' ಇರುತ್ತಿತ್ತು. ಈ ಪಕ್ವತೆಯನ್ನು ವಯಸ್ಸಾದ ಅಥವಾ ಅನುಭವವಿರುವ ಮಹಿಳೆಗೆ ಹೋಲಿಸಿ 'ಲೇಡಿ' ಎಂದು ಕರೆಯಲಾಯಿತು. ಮೊದಮೊದಲು ಈ ಹೆಸರನ್ನು ಪತ್ರಿಕೆಯ 'ನೀರಸ' (Dull) ಮತ್ತು 'ಬದಲಾಗದ' ಸ್ವಭಾವವನ್ನು ಟೀಕಿಸಲು ಬಳಸಲಾಗುತ್ತಿತ್ತು. ಅಂದರೆ, 'ಈ ಪತ್ರಿಕೆ ತುಂಬಾ ಹಳೆಯ ಕಾಲದ್ದು, ಇದರಲ್ಲಿ ಯಾವುದೇ ಮೋಜಿನ ಅಂಶಗಳಿಲ್ಲ' ಎಂಬರ್ಥದಲ್ಲಿ ವಿರೋಧಿಗಳು ಈ ಹೆಸರನ್ನು ಬಳಸುತ್ತಿದ್ದರು. ಆದರೆ, ಕಾಲಕ್ರಮೇಣ ನ್ಯೂಯಾರ್ಕ್ ಟೈಮ್ಸ್ ತನ್ನ ಗುಣಮಟ್ಟದಿಂದಾಗಿ ಈ ಟೀಕೆಯನ್ನೇ ಹೆಮ್ಮೆಯಾಗಿ ಬದಲಿಸಿಕೊಂಡಿತು. 'ನಾವು ಬಣ್ಣ ಬಣ್ಣದ ಚಿತ್ರಗಳ ಮೂಲಕ ಸುಳ್ಳು ಹೇಳುವುದಿಲ್ಲ, ಬೂದು ಬಣ್ಣದ ಅಕ್ಷರಗಳ ಮೂಲಕ ಸತ್ಯ ಹೇಳುತ್ತೇವೆ' ಎಂಬ ಸಂದೇಶವನ್ನು ಇದು ಜಗತ್ತಿಗೆ ನೀಡಿತು. ಇಂದು 'ದಿ ಗ್ರೇ ಲೇಡಿ' ಎನ್ನುವುದು ಪತ್ರಿಕೋದ್ಯಮದ ಉನ್ನತ ಮಾನದಂಡಗಳಿಗೆ ಇರುವ ಅನ್ವರ್ಥ ನಾಮವಾಗಿದೆ. ಇಂದು ನ್ಯೂಯಾರ್ಕ್ ಟೈಮ್ಸ್ ಡಿಜಿಟಲ್ ಆಗಿದೆ, ಅದ್ಭುತವಾದ ಫೋಟೋಗಳು ಮತ್ತು ವಿಡಿಯೊಗಳನ್ನು ಬಳಸುತ್ತಿದೆ. ಆದರೂ, ಜನರು ಇಂದಿಗೂ ಇದನ್ನು ಪ್ರೀತಿಯಿಂದ 'ದಿ ಗ್ರೇ ಲೇಡಿ' ಎಂದೇ ಕರೆಯುತ್ತಾರೆ. ಇದು ಆ ಪತ್ರಿಕೆಯು ಅಮೆರಿಕದ ಇತಿಹಾಸದಲ್ಲಿ ಹೊಂದಿರುವ ಪ್ರಭಾವಕ್ಕೆ ಸಾಕ್ಷಿಯಾಗಿದೆ.

ಭರ್ತಿ ಜತೆ ಖಾಲಿ ಹುದ್ದೆ ಬಗ್ಗೆಯೂ ಗಮನಿಸಿ!

ಅಶ್ವತ್ಥಕಟ್ಟೆ

ರಂಜಿತ್ ಎಚ್.ಅಶ್ವತ್ಥ

vveditoped@gmail.com

ಸರಕಾರ ಯಾವ ಪಕ್ಷದ್ದೇ ಇರಲಿ, ಸರಕಾರಿ ಯಂತ್ರವನ್ನು ನಡೆಸುವುದು ಮಾತ್ರ ಅಧಿಕಾರಿಗಳು. ಯಾವುದೇ ಸರಕಾರ ಯಶಸ್ವಿಯಾಗಿ ನಡೆಯಬೇಕಾದರೆ ರಾಜಕೀಯ ಇಚ್ಛಾಶಕ್ತಿಯ ಜತೆಗೆ ಆಡಳಿತ ಯಂತ್ರವೂ ಚುರುಕಾಗಿರಬೇಕು. ಕಾರಣವಿಷ್ಟೇ- ಸರಕಾರಗಳು ತೆಗೆದುಕೊಳ್ಳುವ ತೀರ್ಮಾನ ತಳಮಟ್ಟಕ್ಕೆ ಹೋಗಬೇಕಾದರೆ, ಸಾರ್ವಜನಿಕರಿಗೆ ಈ ತೀರ್ಮಾನಗಳ ಲಾಭ ಲಭಿಸಬೇಕಾದರೆ ಸರಕಾರಿ ಅಧಿಕಾರಿ, ಸಿಬ್ಬಂದಿ ಪ್ರಮುಖ ಪಾತ್ರವಹಿಸುತ್ತಾರೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಜನರು ಹಾಗೂ ಸರಕಾರದ ನಡುವಿನ ಸೇತುವೆಯಾಗಿ ಅಧಿಕಾರಿಗಳಿರುತ್ತಾರೆ. ಆದರೆ ಇತ್ತೀಚಿನ ವರ್ಷದಲ್ಲಿ ಸೇತುವೆಗಳಾಗಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆಯಲ್ಲಿಯೇ ಗಣನೀಯ ಕುಸಿತವಾಗಿರುವುದು ಆತಂಕಕಾರಿ ವಿಷಯವಾಗಿದೆ.

ಕರ್ನಾಟಕದಲ್ಲಿ ಪದೇ ಪದೆ ಬಹುಚರ್ಚೆಯಾಗುವ ವಿಷಯವೆಂದರೆ ಸರಕಾರದ ವಿವಿಧ ಇಲಾಖೆಯಲ್ಲಿರುವ ಹುದ್ದೆಗಳು ಖಾಲಿಯಾಗುತ್ತಿರುವುದು. ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರಕಾರ ಹತ್ತು ಹಲವು ರೀತಿಯ ಪ್ರಯತ್ನ ಮಾಡುತ್ತಿದ್ದರೂ, ಆರ್ಥಿಕ, ಕಾನೂನಾತ್ಮಕ ಹಾಗೂ ಇಚ್ಛಾಶಕ್ತಿಯ ಕೊರತೆಯಿಂದಾಗಿ ಖಾಲಿ ಹುದ್ದೆಗಳ ಭರ್ತಿಯ ಬದಲಿಗೆ ವರ್ಷದಿಂದ ವರ್ಷಕ್ಕೆ ಖಾಲಿಯಾಗುವ ಹುದ್ದೆಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ.

ಖಾಲಿ ಹುದ್ದೆಗಳ ಭರ್ತಿಗೆ ಹತ್ತಾರು ಕಾರಣಗಳಿದ್ದರೂ, ಪ್ರತಿವರ್ಷ ನಿವೃತ್ತಿಯಾಗುವ ನೌಕರರ, ಸಿಬ್ಬಂದಿಯ ಸಂಖ್ಯೆಯಂತೂ ಸರಾಸರಿ ಒಂದೇ ರೀತಿಯಲ್ಲಿರುತ್ತದೆ. ಇದರೊಂದಿಗೆ ಅಸಹಜವಾಗಿ ಮೃತಪಡುವ, ವಿವಿಧ ಕಾರಣಕ್ಕೆ ಸ್ವಯಂನಿವೃತ್ತಿ ಪಡೆಯುವವರ ಸಂಖ್ಯೆಯೂ ಸೇರಿಕೊಳ್ಳುವುದರಿಂದ ಆಯಾ ವರ್ಷದ ಭರ್ತಿಯನ್ನು ಆಯಾ ವರ್ಷವೇ ಮಾಡದೇ ಹೋದರೆ ಇರುವ ಸಿಬ್ಬಂದಿಯ ಮೇಲೆ ಕಾರ್ಯದೊತ್ತಡ ಹೆಚ್ಚಾಗುತ್ತಲೇ ಸಾಗುತ್ತದೆಯೇ ಹೊರತು, ಕಡಿಮೆಯಾಗುವುದಿಲ್ಲ. ಸರಕಾರ ಈ ಹೊರೆಯನ್ನು ತಗ್ಗಿಸುವ ಉದ್ದೇಶದಿಂದ 'ಗುತ್ತಿಗೆ ಆಧಾರಿತ' ನೌಕರರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆಯನ್ನು ಕೆಲ ವರ್ಷದಿಂದ ಆರಂಭಿಸಿದೆ. ಆದರೆ ಇಂಥ ಗುತ್ತಿಗೆ ಆಧಾರಿತ ಸಿಬ್ಬಂದಿಯನ್ನು ಆಯಕಟ್ಟಿನ ಸ್ಥಾನದಲ್ಲಿ ಕೂರಿಸಲು ಸಾಧ್ಯವಿಲ್ಲ. ಇದರೊಂದಿಗೆ, ಗುತ್ತಿಗೆ ಆಧಾರದಲ್ಲಿ ಬಂದ ಬಹುತೇಕ ಸಿಬ್ಬಂದಿಗೆ, ಕಾಯಂ ಸಿಬ್ಬಂದಿಗೆ ಇರುವಷ್ಟು ಅನುಭವ, ತರಬೇತಿ ಇಲ್ಲದಿರುವುದರಿಂದ, ಕೆಲವೊಮ್ಮೆ ಇಡೀ ವ್ಯವಸ್ಥೆಯೇ ಹಾಳಾಗುವ ಸಾಧ್ಯತೆ ಇರುತ್ತದೆ. ಇದರೊಂದಿಗೆ ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವ ಸಿಬ್ಬಂದಿ ಯಾರಿಗೆ 'ಉತ್ತರದಾಯಿಗಳು' ಎನ್ನುವ ಪ್ರಶ್ನೆಗೆ ಈಗಲೂ ಉತ್ತರ ಸಿಕ್ಕಿಲ್ಲ. ಉದಾಹರಣೆಗೆ, ಬಿಎಂಟಿಸಿ ಪರಿಚಯಿಸಿರುವ ಇಲೆಕ್ಟ್ರಿಕ್ ಬಸ್‌ಗಳಿಗೆ ಚಾಲಕರು, ಖಾಸಗಿ ಕಂಪನಿಯಿಂದ ನೇಮಕವಾಗಿರುವವರು; ಅವರು ತಮಗೂ ಸಾರಿಗೆ ನಿಗಮಕ್ಕೂ ಸಂಬಂಧವಿಲ್ಲ ಎನ್ನುವ ರೀತಿಯಿದ್ದಾರೆ. ಸಾರಿಗೆ ಇಲಾಖೆಯಿಂದ ನೇಮಕವಾಗಿರುವ ಸಿಬ್ಬಂದಿಗೂ, ಇಲೆಕ್ಟ್ರಿಕ್ ಬಸ್‌ಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ಸಿಬ್ಬಂದಿಗೂ ಅಜಗಜಾಂತರವಿದೆ. ಈ ರೀತಿಯಾಗಲು ಪ್ರಮುಖವಾಗಿ, ಕಾಯಂ ನೌಕರರು ಪಡೆಯುವ ತರಬೇತಿ, ಗುತ್ತಿಗೆ ನೌಕರರು ಪಡೆಯುವುದಿಲ್ಲ. ಇದರಿಂದ ಕೌಶಲದಲ್ಲಿ ಭಾರಿ ಪ್ರಮಾಣದಲ್ಲಿ ವ್ಯತ್ಯಾಸವಿರುತ್ತದೆ. ಇದೇ ರೀತಿ ಸರಕಾರಿ ಶಾಲಾ-ಕಾಲೇಜುಗಳಿಗೆ ನೇಮಿಸಿಕೊಳ್ಳಲಾಗುವ ಅತಿಥಿ ಶಿಕ್ಷಕರು, ಉಪನ್ಯಾಸಕರಿಗೂ, ಕಾಯಂ ಶಿಕ್ಷಕರಿಗೂ ಭಾರಿ ವ್ಯತ್ಯಾಸವಿರುತ್ತದೆ.

ಈ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತಿದ್ದರೂ, ಖಾಲಿಯಾಗುತ್ತಿರುವ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳುವಲ್ಲಿ ಸರಕಾರ ಕಳೆದ ಮೂರ್ನಾಲ್ಕು ವರ್ಷದಿಂದ ಮುಂದಾಗದೇ ಇರುವುದರಿಂದ ಭಾರಿ ಪ್ರಮಾಣದ ಹುದ್ದೆಗಳಿಗೆ ನಿರ್ವಾಹಕರೇ ಇಲ್ಲ. ಸರಕಾರವೇ ಒಪ್ಪಿಕೊಂಡಿರುವಂತೆ ರಾಜ್ಯದಲ್ಲಿ ಒಟ್ಟು 7.9 ಲಕ್ಷ ಹುದ್ದೆಗಳು ಮಂಜೂರಾಗಿದ್ದರೆ, ಹಾಲಿ ಕಾರ್ಯನಿರ್ವಹಿಸುತ್ತಿರುವವರು ಕೇವಲ 5.1 ಲಕ್ಷ ಮಂದಿ. ಇನ್ನುಳಿದಂತೆ 2.7 ಲಕ್ಷ ಹುದ್ದೆಗಳು ಖಾಲಿಯಾಗಿವೆ. ಅಂದರೆ ಮೂರನೇ ಒಂದು ಭಾಗದಷ್ಟು ಹುದ್ದೆಗಳು ಭರ್ತಿಯಾಗದೇ ಇವರು ಕಾಯುತ್ತಿದ್ದಾರೆ. ಭರ್ತಿಯಾಗದೇ ಇರುವುದರಿಂದ ಅರ್ಹ ಅಭ್ಯರ್ಥಿಗಳಿಗೆ ಕೆಲಸ ಸಿಗದೇ ನಿರುದ್ಯೋಗಿಗಳಾಗಿದ್ದರೆ, ಇನ್ನೊಂದೆಡೆ ಇರುವ ಸಿಬ್ಬಂದಿಯ ಮೇಲಿನ ಒತ್ತಡ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ.

ಹಾಗೆ ನೋಡಿದರೆ, ಸರಕಾರಿ ವಲಯದಲ್ಲಿ ಪ್ರತಿವರ್ಷ 17ರಿಂದ 18 ಸಾವಿರ ನೌಕರರು, ಸಿಬ್ಬಂದಿ ಸರಾಸರಿ ನಿವೃತ್ತಿಯಾಗುತ್ತಿದ್ದರೆ, ಅದಕ್ಕೆ ಪ್ರತಿಯಾಗಿ ಪ್ರತಿವರ್ಷ 10ರಿಂದ 15 ಸಾವಿರ ಮಂದಿಯ ನೇಮಕ ಪ್ರಕ್ರಿಯೆ ನಡೆಯುತ್ತವೆ (ಕಳೆದ ಮೂರ್ನಾಲ್ಕು ವರ್ಷದಿಂದ ಇನ್ನೂ ಕಡಿಮೆಯಾಗಿದೆ). ನಿವೃತ್ತಿ ಹೊಂದುವವರ ಸಂಖ್ಯೆಗಿಂತ ನೇಮಕವಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಮುಂದಿನ ಐದು ವರ್ಷದಲ್ಲಿ ಬರೋಬ್ಬರಿ 86 ಸಾವಿರ ನೌಕರರು ವಯೋನಿವೃತ್ತಿ ಹೊಂದುತ್ತಾರೆ. ಪ್ರಸಕ್ತ ಸಾಲಿನಲ್ಲಿಯೇ 16,513 ಮಂದಿ ನಿವೃತ್ತಿಯಾಗುತ್ತಿದ್ದಾರೆ. ಕಳೆದ 3 ವರ್ಷದಲ್ಲಿ ಕೆಪಿಎಸ್‌ಸಿ ಮತ್ತು ಕೆಇಎ ಮೂಲಕ ಕೇವಲ 8,157 ಹುದ್ದೆಗಳ ನೇಮಕ ಪ್ರಕ್ರಿಯೆ ಪೂರ್ಣಗೊಂಡಿದೆ; ಆದರೆ ನಿವೃತ್ತಿ ಹೊಂದಿದವರ ಸಂಖ್ಯೆ 35 ಸಾವಿರದ ಆಸುಪಾಸಿನಲ್ಲಿದೆ. ಅಂದರೆ, ಸರಕಾರಿ ಕೆಲಸಕ್ಕೆ ಬರುವವರಿಗಿಂತ ನಿವೃತ್ತಿ ಹೊಂದುವವರ

ಸಂಖ್ಯೆಯಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ.

ಈ ಪ್ರಮಾಣದ ಅಂತರವನ್ನು ಸರಿಪಡಿಸುವುದಕ್ಕಾಗಿಯೇ ರಾಜ್ಯ ಸರಕಾರ 2026-27ನೇ ಸಾಲಿನಲ್ಲಿ ವಿವಿಧ ಇಲಾಖೆಯ 56 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಬಜೆಟ್‌ನಲ್ಲಿ ಘೋಷಿಸಿದೆ. ಆದರೆ ಒಳಮೀಸಲು ಗೊಂದಲ, ಆರ್ಥಿಕ ಇಲಾಖೆಯ ಹಲವು ಆಕ್ಷೇಪಣೆಗಳನ್ನು ಮೀರಿ ವರ್ಷದ ಅವಧಿಯಲ್ಲಿ ಈ ಪ್ರಮಾಣದಲ್ಲಿ ನೇಮಕ ಸಾಧ್ಯವೇ ಎನ್ನುವುದು ಅನೇಕರಲ್ಲಿರುವ ಪ್ರಶ್ನೆ. ಕಳೆದ ವರ್ಷವೂ ಶಿಕ್ಷಕರು, ಉಪನ್ಯಾಸಕರು, ಪೊಲೀಸ್ ಸಿಬ್ಬಂದಿ ಸೇರಿದಂತೆ ವಿವಿಧ ಹಂತದಲ್ಲಿ ನೇಮಕ ಪ್ರಕ್ರಿಯೆ ಮಾಡುವುದಾಗಿ ಸರಕಾರ ಘೋಷಿಸಿತ್ತು. ಆದರೆ ಪೂರ್ಣ ಪ್ರಮಾಣದಲ್ಲಿ ಅದು ಸಾಧ್ಯವಾಗಲಿಲ್ಲ.

ಇದರೊಂದಿಗೆ ಇಂದೇ ಸಿಬ್ಬಂದಿಯನ್ನು ಭರ್ತಿ ಮಾಡಲು ಮುಂದಾದರೂ ಅವರು ಕೆಲಸ ಆರಂಭಿಸಲು ಕನಿಷ್ಠ ಒಂದು ವರ್ಷ ಬೇಕಾಗುತ್ತದೆ. ಏಕೆಂದರೆ, ಅರ್ಜಿ ಆಹ್ವಾನಿಸಿ, ಪರೀಕ್ಷೆ ನಡೆಸಿ, ಅಂತಿಮ ಪಟ್ಟಿ, ಅದಕ್ಕೆ ಕೆಲವೊಂದಷ್ಟು ತಕರಾರು, ಬಳಿಕ ಸಂದರ್ಶನ, ತರಬೇತಿ, ಪೋಸ್ಟಿಂಗ್ ಸೇರಿದಂತೆ ಸರಕಾರಿ ವ್ಯವಸ್ಥೆಯಲ್ಲಿರುವ ಹತ್ತಾರು ಪ್ರಕ್ರಿಯೆ ಪೂರ್ಣಗೊಳಿಸಿ ವ್ಯಕ್ತಿಯನ್ನು ಅಧಿಕಾರಿ ಸ್ಥಾನದಲ್ಲಿ ಕೂರಿಸಲು ವರ್ಷಗಟ್ಟಲೇ ಬೇಕಾಗುತ್ತದೆ. ಗೃಹ ಇಲಾಖೆ ಸೇರಿದಂತೆ ಕೆಲ ಇಲಾಖೆಗಳಲ್ಲಿ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕವೂ, ಕೆಲಸ ಆರಂಭಿಸಲು ಕನಿಷ್ಠ ಒಂದೂವರೆ ವರ್ಷ ಬೇಕಾಗುತ್ತದೆ. ಈ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ ಹೊಸಬರನ್ನು ಕುರ್ಚಿಯ ಮೇಲೆ ಕೂರಿಸುವ ವೇಳೆಗೆ ಪುನಃ 15ರಿಂದ 17 ಸಾವಿರ ಸಿಬ್ಬಂದಿ ವಯೋನಿವೃತ್ತಿ ಹೊಂದುವುದರಿಂದ ಈ ಅಂತರ ಪುನಃ ಅಷ್ಟೇ ಪ್ರಮಾಣಕ್ಕೆ ಬಂದಿರುತ್ತದೆ. ಏಕೆಂದರೆ, ಹೊಸದಾಗಿ ಸೇರಿಸಿಕೊಳ್ಳುವುದು ಸರಕಾರದ ಕೈಯಲ್ಲಿ ಇರುತ್ತದೆಯೇ ಹೊರತು, ನಿವೃತ್ತಿಯಾಗುವವರನ್ನು ತಡೆದಿಟ್ಟುಕೊಳ್ಳಲು ಸಾಧ್ಯವಿಲ್ಲ.

ಇನ್ನು ಈ ಬಾರಿಯ ಬಜೆಟ್‌ನಲ್ಲಿ ರಾಜ್ಯ ಸರಕಾರ 56 ಸಾವಿರದಿಂದ 58 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಾಗಿ ಘೋಷಿಸಿದೆ. ಆದರೆ ಘೋಷಿಸಿದಷ್ಟು ಭರ್ತಿ ಮಾಡಿಕೊಂಡಿದ್ದೇ ಆದರೆ, ಸರಕಾರದ ಬೊಕ್ಕಸಕ್ಕೆ ಮತ್ತಷ್ಟು ಹೊಡೆತ ಬೀಳುವುದು ನಿಶ್ಚಿತ ಎನ್ನಲಾಗುತ್ತಿದೆ. ಏಕೆಂದರೆ, 58 ಸಾವಿರ ಜನರನ್ನು ಭರ್ತಿ ಮಾಡಿಕೊಂಡರೆ, ಅವರಿಗೆ ವೇತನ, ಭತ್ಯೆಗಳಿಗೂ ಹಣ ಹೊಂದಿಸಬೇಕಾದ ಅನಿವಾರ್ಯತೆಗೆ ಸರಕಾರ ಸಿಲುಕಲಿದೆ. ಈಗಿರುವ ವೇತನ ಶ್ರೇಣಿಯಲ್ಲಿ ಒಟ್ಟಿಗೆ ಈ ಪ್ರಮಾಣದ ಸಿಬ್ಬಂದಿಯನ್ನು ನೇಮಿಸಿಕೊಂಡರೆ, ವೇತನ ನೀಡಲು ಸರಕಾರಕ್ಕೆ ವಾರ್ಷಿಕವಾಗಿ ಕನಿಷ್ಠ ಎರಡು ಸಾವಿರ ಕೋಟಿ ರು. ಹೆಚ್ಚುವರಿ ಅನುದಾನದ ಅಗತ್ಯವಿದೆ. ಈಗಾಗಲೇ ಬದ್ಧತಾ ವೆಚ್ಚ ಮಿತಿ ಮೀರಿರುವ ಈ ಸಮಯದಲ್ಲಿ ಈ ಹೊರೆಯನ್ನು ಸರಕಾರ ಯಾವ ರೀತಿಯಲ್ಲಿ ಹೊರುತ್ತದೆ ಎನ್ನುವ ಪ್ರಶ್ನೆಯೂ ಇಲ್ಲಿ ಮೂಡುವುದು ಸಹಜ.

ಹಾಗೆಂದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಬಿಟ್ಟರೆ ವರ್ಷದಿಂದ ವರ್ಷಕ್ಕೆ ನಿವೃತ್ತಿ ಹೊಂದುವವರ ಸಂಖ್ಯೆಯೂ ಏರಿಕೆಯಾಗುತ್ತಾ ಹೋಗುತ್ತದೆ. ಈಗಲೇ ಎರಡು ಲಕ್ಷ ಚಿಲ್ಲರೆ ಖಾಲಿ ಹುದ್ದೆಗಳು ಸರಕಾರಿ ವ್ಯವಸ್ಥೆಯ ವಿವಿಧ ಹಂತದಲ್ಲಿದ್ದು, ಇನ್ನು ಮೂರು ವರ್ಷ ಕಳೆದರೆ ಈ ಪ್ರಮಾಣವು ಮೂರು ಲಕ್ಷವನ್ನು ದಾಟಲಿದೆ. ಈ ಇಕ್ಕಟ್ಟಿಗೆ ಸಿಲುಕಿರುವ ರಾಜ್ಯ ಸರಕಾರವು ಬದ್ಧತಾ ವೆಚ್ಚವೂ ಕೈಮೀರದಂತೆ, ಸರಕಾರದ ಆಡಳಿತ ಯಂತ್ರಕ್ಕೂ ಹೊಡೆತ ಬೀಳದಂತೆ ನೋಡಿಕೊಳ್ಳಬೇಕಾಗಿದೆ. ಈ ಇಕ್ಕಟ್ಟಿನಿಂದ ಹೊರಬರಲು ಸರಕಾರದ ಮುಂದಿರುವ ಏಕೈಕ ಮಾರ್ಗವೆಂದರೆ, ಆಡಳಿತ ಸುಧಾರಣಾ ಆಯೋಗವು ರಾಜ್ಯ ಸರಕಾರದ ವಿವಿಧ ಇಲಾಖೆ, ನಿಗಮ ಮಂಡಳಿಗಳಲ್ಲಿರುವ ಅನಗತ್ಯ ಹುದ್ದೆಗಳ ಬಗ್ಗೆ ಸಿದ್ಧಪಡಿಸಿರುವ ವರದಿಯನ್ನು ಪರಿಶೀಲಿಸಿ, ಅನಗತ್ಯವಾಗಿರುವ ಸಾವಿರಾರು ಹುದ್ದೆಗಳಿಗೆ ಕತ್ತರಿ ಪ್ರಯೋಗ ಮಾಡಬೇಕಿದೆ. ತಂತ್ರಜ್ಞಾನ ಯುಗದಲ್ಲಿ ಹೊರೆ ಎನಿಸಿರುವ, ಇಂದಿನ ದಿನಮಾನಕ್ಕೆ 'ಪ್ರಸ್ತುತ' ಎನಿಸದ ಹುದ್ದೆಗಳನ್ನು ಕಡಿತಗೊಳಿಸುವ ಮೂಲಕ ಅಲ್ಲಿ ಪೋಲಾಗುತ್ತಿರುವ ಕೋಟ್ಯಂತರ ರುಪಾಯಿ ವೇತನವನ್ನು ಅತ್ಯಗತ್ಯವಿರುವ ಹುದ್ದೆಗಳಿಗೆ ನೀಡಬೇಕಿದೆ.

ಏಕೆಂದರೆ ಮೊದಲೇ ಹೇಳಿದಂತೆ ಯಾವುದೇ ಸರಕಾರದ ಆಡಳಿತ ಯಂತ್ರ ಗಟ್ಟಿಯಾಗಿರಬೇಕೆಂದರೆ, ಅಲ್ಲಿ ಅಧಿಕಾರಿ, ಸಿಬ್ಬಂದಿಯ ಸಂಖ್ಯಾಬಲ ಪ್ರಮುಖ ಪಾತ್ರವಹಿಸುತ್ತದೆ. ಈ ಸಂಖ್ಯಾಬಲವನ್ನು ಗುತ್ತಿಗೆ ಆಧಾರದಲ್ಲಿಯೋ, ಅತಿಥಿ ನೌಕರರ ರೂಪದಲ್ಲಿಯೋ ತುಂಬಿಕೊಳ್ಳುವುದರಿಂದ ಕುರ್ಚಿಗಳು ಭರ್ತಿಯಾಗಬಹುದೇ ಹೊರತು, ನಿರೀಕ್ಷಿತ ವೇಗದಲ್ಲಿ ಸರಕಾರದ ಕೆಲಸಗಳು ನಡೆಯುವುದಿಲ್ಲ. ಅಧಿಕಾರದ ಚುಕ್ಕಾಣಿಯಲ್ಲಿರುವವರು ಇನ್ನಾದರೂ ಭರ್ತಿ ಮಾಡಿಕೊಳ್ಳುವತ್ತ ಗಮನಿಸಬೇಕಿದೆ. ಕೇವಲ ತುಂಬಿಸಿಕೊಳ್ಳುವುದಷ್ಟೇ ಅಲ್ಲದೆ, ಅಗತ್ಯವೆಷ್ಟಿದೆ ಎನ್ನುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಬೇಕು. ಇಷ್ಟು ದಿನ, ನಿವೃತ್ತಿ ಹೊಂದಿದ ಬಳಿಕವೂ ನೇಮಕಕ್ಕೆ ಹತ್ತಾರು ವಿಘ್ನಗಳಾಗಿರುವುದನ್ನು ಗಮನದಲ್ಲಿಟ್ಟುಕೊಂಡು, ನಿವೃತ್ತಿಯಿಂದ ಖಾಲಿಯಾಗುವ ಜಾಗಕ್ಕೆ 'ಆಟೋ ಪೈಲಟ್' ರೀತಿ ಭರ್ತಿಗೆ ಕ್ರಮವಹಿಸಬೇಕು. ಹುದ್ದೆ ಭರ್ತಿಗೆ ಈಗಿರುವ ಹತ್ತಾರು ಪ್ರಕ್ರಿಯೆಗಳ ಬದಲಿಗೆ, ಕೇಂದ್ರದ ಯುಪಿಎಸ್‌ಸಿಯಲ್ಲಿರುವಂತೆ ಪ್ರತಿವರ್ಷ ಹುದ್ದೆ ಭರ್ತಿ ಕಾರ್ಯವು ಯಾವುದೇ ಅಡ್ಡಿ ಆತಂಕವಿಲ್ಲದೇ ನಡೆಯುವಂತೆ ನೋಡಿಕೊಂಡರೆ ಮಾತ್ರ ಇಂಥ ಸಮಸ್ಯೆಗಳಿಗೆ ತಾರ್ಕಿಕ ಅಂತ್ಯ ದೊರೆಯಬಹುದು. ಇಲ್ಲದೇ ಹೋದರೆ, ಖಾಲಿ ಹುದ್ದೆ ಎನ್ನುವುದು ನಿತ್ಯ ಗೋಳಾಗುವುದರಲ್ಲಿ ಅನುಮಾನವಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಈಗ 'ಓಲ್ಡ್ ಲೇಡಿ' ಅಲ್ಲ!

ಸಂಪಾದಕರ ಸದ್ಯಶೋಧನೆ (ಮಾ.16) ಕಿರುಬರಹವು ಕೆಲ ವರ್ಷಗಳ ಹಿಂದಿನ ನೆನಪನ್ನು ತಾಜಾಗೊಳಿಸಿತು. ಹೌದು, 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯನ್ನು 'ಓಲ್ಡ್ ಲೇಡಿ ಆಫ್ ಬೋರಿಬಂದರ್' ಎಂದು ಕರೆಯುವುದು, ಅದು ಪ್ರಕಟಗೊಳ್ಳುವ ಮುಂಬೈನ ವಿ.ಟಿ. ರೈಲು ನಿಲ್ದಾಣದ ಎದುರಿನ ಸ್ಥಳದ ಹೆಸರು ಎಂಬುದು ಎಷ್ಟು ಸತ್ಯವೋ, ಇದು ಆ ಸಂಸ್ಥೆಯ ಹೆಸರಲ್ಲ ಎಂಬುದೂ ಅಷ್ಟೇ ನಿಜ. 'ಬೆನೆಟ್ ಕೋಲ್‌ಮನ್ ಆ್ಯಂಡ್ ಕಂ ಲಿಮಿಟೆಡ್' ಎಂಬುದು ಆ ಸಂಸ್ಥೆಯ ಹೆಸರು. ಮಹಾರಾಷ್ಟ್ರ ಟೈಮ್ಸ್, ಇಕನಾಮಿಕ್ ಟೈಮ್ಸ್, ನವಭಾರತ್ ಟೈಮ್ಸ್ ಮತ್ತು ಇಲಸ್ಟ್ರೇಟೆಡ್ ವೀಕ್ಲಿ, ಫೆಮಿನಾ, ವಿಮೆನ್ಸ್ ಎರಾ, ಖೇಲ್ ಭಾರತಿ ಹೀಗೆ ಹಲವಾರು ಪತ್ರಿಕೆ ಮತ್ತು ನಿಯತಕಾಲಿಕೆಗಳೂ ಈ ಸಂಸ್ಥೆಯವೇ. ಆದರೆ, 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ಅದೆಷ್ಟು ಪ್ರಭಾವಶಾಲಿಯಾಗಿ ಬೆಳೆಯಿತೆಂದರೆ, ಮುಂದೆ ಅದುವೇ ಕಂಪನಿಯ ಹೆಸರಿನಂತೆ ಆಗಿಬಿಟ್ಟಿತು; 'ಎಲ್ಲಿ ಕೆಲಸ ಮಾಡ್ತಾ ಇದ್ದೀರಿ?' ಅಂತ ಯಾರಾದರೂ ಕೇಳಿದರೆ ಅದರ ಉದ್ಯೋಗಿಗಳು ಕೂಡ 'ಟೈಮ್ಸ್‌ನಲ್ಲಿ' ಎನ್ನುತ್ತಿದ್ದರೇ ಹೊರತು, 'ಬೆನೆಟ್ ಕೋಲ್‌ಮನ್' ಅಂತ ಹೇಳುತ್ತಿರಲಿಲ್ಲ (ಒಂದೊಮ್ಮೆ ಈ ಹೆಸರನ್ನು ಉದ್ಯೋಗಿ ಹೇಳಿದರೆ, 'ನಿಮ್ಮ ಕಂಪನಿಯಲ್ಲಿ ತಯಾರಾಗುವ ಉತ್ಪನ್ನ ಯಾವುದು?' ಅಂತ ಮರುಪ್ರಶ್ನೆ ಬರುತ್ತಿತ್ತು!). ಆದರೆ, Old ಲೇಡಿ ಈಗ Modern ಬೆಡಗಿ ಆಗಿಬಿಟ್ಟಿದ್ದಾಳೆ. ಅವಳ ಹಿಂದಿನ ಲಕ್ಷಣಗಳು ಮಾಯವಾಗಿಬಿಟ್ಟಿವೆ. ಇಂದಿನ ಆ ಪತ್ರಿಕೆ ಹೆಚ್ಚು ಕಮರ್ಷಿಯಲ್ ಅಂಶಗಳಿಗೆ ಮಡಿಲಾಗಿದೆ, ಜಾಹೀರಾತುಗಳೇ ಮುಖ್ಯವಾಗಿ ಕಾಣುತ್ತಿವೆ. ಹೊಸ ಹೊಸ ಪುರವಣಿಗಳ ಹೆಸರಲ್ಲಿ ರಂಗುರಂಗಿನ ಪುಟಗಳು ರಾರಾಜಿಸುತ್ತಿವೆ. ಶೃಂಗಾರ, ಮಸಾಲೆಯುಕ್ತ ಬರಹಗಳು, ಪುಟಗಳ ಸಂಖ್ಯೆ ಹೆಚ್ಚಾಗಿವೆ. ಹೀಗಾಗಿ ಈ ಪತ್ರಿಕೆಯನ್ನು 'ಓಲ್ಡ್ ಲೇಡಿ ಆಫ್ ಬೋರಿಬಂದರ್' ಅನ್ನೋದಕ್ಕಿಂತ 'ಮಾಡರ್ನ್ ಲೇಡಿ ಆಫ್ ಇಂಡಿಯಾ' ಅನ್ನೋದೇ ಸೂಕ್ತವೇನೋ?!

– ಶಂಕರನಾರಾಯಣ ಭಟ್, ಮಾಡಗೇರಿ

ನೀತಿಸೂತ್ರಗಳ ಪವಿತ್ರನೆಲ

ವಿನಾಯಕ ವೆಂ. ಭಟ್ಟ ಅವರು ತಮ್ಮ 'ವಿದ್ಯಮಾನ' ಅಂಕಣದಲ್ಲಿ (ಮಾ.15) ಶಾಂತಿ ಮತ್ತು ಸಂಗ್ರಾಮಕ್ಕೆ ಭಾರತವೇ ಆದರ್ಶ ಎಂಬುದನ್ನು ವಿವರಿಸಿರುವ ಪರಿ ಸೊಗಸಾಗಿದೆ. ತ್ರೇತಾಯುಗದಲ್ಲಿ ಶ್ರೀರಾಮ ಹಾಗೂ ರಾವಣರ ಮಧ್ಯೆ ಏಳು ದಿನಗಳವರೆಗೆ ನಡೆದ ಭೀಕರ ಯುದ್ಧ, ಪರಾಕ್ರಮಿ ರಾಮನು ಅಲ್ಲಿಯೂ ತೋರಿದ ಸಂಯಮ, ಪಾಲಿಸಿದ ಯುದ್ಧಧರ್ಮ, ಎದುರಾಳಿ ರಾವಣನಿಗೆ ಸುಧಾರಿಸಿಕೊಳ್ಳಲು ನೀಡಿದ ಅವಕಾಶಗಳು, ಕೊನೆಗೆ ವಿಧಿಯಿಲ್ಲದೇ ಮಾಡಿದ ರಾವಣನ ಸಂಹಾರ, ಮುಂದುವರಿದು ವಿಧಿಪೂರ್ವಕವಾಗಿ ಮಾಡಲು ಬಯಸಿದ್ದ ರಾವಣನ ಅಂತ್ಯಸಂಸ್ಕಾರ, ಇಷ್ಟಕ್ಕೆಲ್ಲಾ ಸಾಕ್ಷಿಯಾದ ಆಂಜನೇಯ– ಈ ಎಲ್ಲ ವಿಷಯಗಳೂ ತಿಳಿದು ಶ್ರೀರಾಮನ ಬಗ್ಗೆ ನನಗಿದ್ದ ಪೂಜ್ಯಭಾವನೆ ಇನ್ನಷ್ಟು ಹೆಚ್ಚಾಯಿತು. ಮುಂದೆ ದ್ವಾಪರದಲ್ಲಿ 18 ದಿನಗಳ ಕಾಲ ನಡೆದ ಪಾಂಡವ-ಕೌರವರ ನಡುವಿನ 'ಮಹಾಭಾರತ' ಯುದ್ಧ, ಅಕ್ಷೋಹಿಣಿ ಸೈನ್ಯಗಳ ಲೆಕ್ಕ, ಅಲ್ಲಿಯೂ ಮುನ್ನೆಲೆಗೆ ಬಂದ ಯುದ್ಧನೀತಿ, ನೈತಿಕತೆ, ಶ್ರೀಕೃಷ್ಣನ ಸಾನ್ನಿಧ್ಯದಲ್ಲಿ–ಸಾರಥ್ಯದಲ್ಲಿ ಶುರುವಾಗಿ ಅಂತ್ಯಗೊಂಡ ಕಾಳಗ, ಅರ್ಜುನನಲ್ಲಿ ಸ್ಫುರಿಸಿದ ಧರ್ಮಜಿಜ್ಞಾಸೆ, ಅದರ ಪರಿಣಾಮವಾಗಿ ಜನ್ಮತಳೆದ 'ಶ್ರೀಮದ್ ಭಗವದ್ಗೀತಾ', ಅಂತಿಮವಾಗಿ ಹೊಮ್ಮಿದ 'ಧರ್ಮವಿಜಯ' ಈ ಎಲ್ಲ ಅನುಪಮ ಮಾಹಿತಿಗಳೂ ಸ್ಮರಣಾರ್ಹ. ಹೀಗೆ, ಭಾರತವು ಎಂದೆಂದಿಗೂ ಶಾಂತಿಪ್ರಿಯ ನೆಲ; ಅಂತೆಯೇ ಜಗತ್ತಿನಲ್ಲೇ ಅತಿದೊಡ್ಡ ಯುದ್ಧ ಪ್ರಸಂಗಕ್ಕೆ ಸಾಕ್ಷಿಯಾದ ಏಕೈಕ ನೆಲವೂ ಹೌದು ಎಂಬುದನ್ನು ಅಂಕಿ-ಅಂಶ ಮತ್ತು ದಾಖಲೆಗಳ ಸಮೇತ ನಿರೂಪಿಸಿದ ಅಂಕಣಕಾರರಿಗೆ ಹಾಗೂ ಪ್ರಕಟಿಸಿದ ಪತ್ರಿಕೆಗೆ ನನ್ನ ನಮನಗಳು.

– ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಮಕ್ಕಳಿರಲವ್ವ ಮನೆ ತುಂಬಾ ಎನ್ನುತ್ತಿರುವ ನಾಯ್ಡುಗಾರು

ವಿಶ್ಲೇಷಣೆ

ರಮಾನಂದ ಶರ್ಮಾ

vveditoped@gmail.com

ದೇಶದ ಇತರ ರಾಜ್ಯಗಳಿಗೆ ಹೋಲಿಸಿದರೆ, ಹೆಚ್ಚಿನ ಜನಸಂಖ್ಯಾ ಕುಸಿತ ಕಾಣಬರುತ್ತಿರುವ ಆಂಧ್ರಪ್ರದೇಶದಲ್ಲಿ, ಎರಡನೇ ಅಥವಾ ಅದಕ್ಕೂ ಹೆಚ್ಚಿನ ಮಗು ಹುಟ್ಟುವ ಸಮಯದಲ್ಲಿ ಹೆತ್ತವರಿಗೆ ರಾಜ್ಯ ಸರಕಾರದಿಂದ ನೆರವು ಸಿಗಲಿದೆ. ಅಂದರೆ, ಜನಸಂಖ್ಯಾ ನಿರ್ವಹಣಾ ಯೋಜನೆಯ 'ಪೋಷಣ ಶಿಕ್ಷಾ ಸುರಕ್ಷಾ' ಪ್ಯಾಕೇಜ್ ಅಡಿಯಲ್ಲಿ ಸರಕಾರವು ಪ್ರತಿ ಮಗುವಿಗೆ 25,000 ರುಪಾಯಿ ನೆರವು ನೀಡಲಿದೆ. ಮೂರನೇ ಮಗು ಹುಟ್ಟಿದರೆ ಐದು ವರ್ಷದವರೆಗೆ ಪ್ರತಿ ತಿಂಗಳೂ 1000 ರು. ನ್ಯೂಟ್ರಿಷನ್ ಸಹಾಯಧನ, 18 ವರ್ಷದವರೆಗೆ ಸಾರ್ವಜನಿಕ ಮತ್ತು ವಸತಿ ಶಾಲೆಗಳಲ್ಲಿ ಉಚಿತ ಶಿಕ್ಷಣ ನೀಡಲಾಗುವುದು. ಐವಿಎಫ್ ಮೂಲಕ ಮಗುವನ್ನು ಪಡೆಯಲು ಮುಂದಾಗುವವರಿಗೂ ಸಹಾಯಧನವನ್ನು ನೀಡಲಾಗುವುದು.

ಇಷ್ಟು ಮಾತ್ರವಲ್ಲದೆ, ಮೂರು ಮಕ್ಕಳನ್ನು ಹೊಂದಿರುವ ಸರಕಾರಿ ನೌಕರರಿಗೆ ನಿವೃತ್ತಿ ವಯಸ್ಸು ಸಮೀಪಿಸುತ್ತಿದ್ದರೆ, ಅವರಿಗೆ 15 ದಿನಗಳ ಯೋಗಕ್ಷೇಮ ರಜೆ ಮತ್ತು 50,000 ರು. ನಗದನ್ನು ನೀಡಲಾಗುವುದು. ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವವರು ಸ್ಥಳೀಯ ಚುನಾವಣೆಯಲ್ಲಿ ಸ್ಪರ್ಧಿಸುವುದರ ಮೇಲೆ ಈವರೆಗೆ ನಿರ್ಬಂಧವನ್ನು ಹೇರಲಾಗಿತ್ತು; ಆದರೆ ಅದು ಈಗ ತೆರವುಗೊಳ್ಳಲಿದೆ. ಪ್ರಸಕ್ತ ವರ್ಷದ ಏಪ್ರಿಲ್ 1ರಿಂದ ಈ ಯೋಜನೆಯು ಶುರುವಾಗಲಿದ್ದು, ಈ ಹಿಂದೆ ಜಾರಿಯಲ್ಲಿದ್ದ ಸಂತಾನಶಕ್ತಿಹರಣ ಅಥವಾ ಮಿತಕುಟುಂಬ ಯೋಜನೆಯಂಥ ಕಾರ್ಯಕ್ರಮಗಳನ್ನು ನಿಲ್ಲಿಸಲಾಗುವುದು ಎಂದು ತಿಳಿದುಬಂದಿದೆ.

ಇದು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು 'ದಿಢೀರ್' ಅಂತ ತೆಗೆದುಕೊಂಡ ನಿರ್ಣಯವಲ್ಲ; ರಾಜ್ಯದ ಜನಸಂಖ್ಯೆಯ ಪ್ರಮಾಣ ಕಡಿಮೆಯಾಗುತ್ತಿರುವುದರ ಬಗ್ಗೆ ಅವರು ವರ್ಷಗಳ ಹಿಂದೆಯೇ ಎಚ್ಚರಿಸಿದ್ದರು. 'ದುಡಿಯುವುದಕ್ಕೆ ಕೈಗಳಿಲ್ಲ' ಎಂಬಂತೆ ಆಗುತ್ತಿದೆ ಎಂದು ಆತಂಕವನ್ನು ವ್ಯಕ್ತಪಡಿಸಿದ್ದರು. 'ಉತ್ಸಾಹದಿಂದ ದುಡಿಯಬಲ್ಲ ಯುವಜನರ ಸಂಖ್ಯೆ ಕಡಿಮೆಯಾಗುವುದು ರಾಜ್ಯದ ಮತ್ತು ದೇಶದ ಆರ್ಥಿಕ ಬೆಳವಣಿಗೆಗೆ ಮಾರಕ; ನಮ್ಮ ರಾಜ್ಯದ ಲೋಕಸಭಾ ಸ್ಥಾನಗಳ ಕುಸಿತಕ್ಕೂ ಅದು ಕಾರಣವಾಗಬಹುದು' ಎಂದಿದ್ದರು ನಾಯ್ಡು. ಅವರ ಈ ಅಭಿಪ್ರಾಯವನ್ನು ಅಂದು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ, 'ಇದು ಕೆಲಸವಿಲ್ಲದ ರಾಜಕಾರಣಿಯ ಅಪಲಾಪ' ಎಂದು ಹಲವರು ಲೇವಡಿ ಮಾಡಿದ್ದರು. ಆದರೆ ನಾಯ್ಡು ಅವರು ರಾಜ್ಯದಲ್ಲಿನ ಜನಸಂಖ್ಯಾ ಕುಸಿತವನ್ನು, ಜಪಾನ್ ಮತ್ತು ದಕ್ಷಿಣ ಕೊರಿಯಾದಲ್ಲಿರುವ 'ಏಜಿಂಗ್ ಕ್ರೈಸಿಸ್' ಅಥವಾ 'ವೃದ್ಧಾಪ್ಯದ ಬಿಕ್ಕಟ್ಟು' ಎಂಬ ಪರಿಕಲ್ಪನೆಗೆ ಹೋಲಿಸಿ, ಮುಂದಿನ ದಿನಗಳಲ್ಲಿ ಇದು 'ಹ್ಯೂಮನ್ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್'ನ ಕೊರತೆಗೆ ಕಾರಣವಾಗಬಹುದೆಂದು ಭವಿಷ್ಯ ನುಡಿದು ಗಂಭೀರವಾಗಿ ಎಚ್ಚರಿಸಿದ್ದರು ಕೂಡ.

ಐವತ್ತರ ದಶಕದವರೆಗೆ ಭಾರತದಲ್ಲಿ, 'ಮಕ್ಕಳೇ ನಮ್ಮ ಆಸ್ತಿ, ಮನೆಯನ್ನು ನಡೆಸಿಕೊಂಡು ಹೋಗಲು ಮನೆಯಲ್ಲಿ ಮಕ್ಕಳು ಬೇಕು, ಮಕ್ಕಳು ಹೆಚ್ಚು ಇದ್ದಷ್ಟು ಬದುಕಿನಲ್ಲಿ ಸ್ಥಿರತೆ-ನೆಮ್ಮದಿ, ಭವಿಷ್ಯವು ಆಶಾದಾಯಕ' ಎನ್ನುವ ಭಾವನೆಯಿತ್ತು. 'ನಾವು ಕಷ್ಟಪಟ್ಟು ಗಳಿಸಿದ ಮತ್ತು ಉಳಿಸಿದ ಆಸ್ತಿಯು ನಮ್ಮ ನಂತರ ನಮ್ಮ ಸಂಸಾರದ ಕುಡಿಯ ಬಳಿಯಲ್ಲೇ ಇರಬೇಕೇ ವಿನಾ ಅನ್ಯರ ಪಾಲಾಗಬಾರದು' ಎನ್ನುವುದು ಸಾರ್ವತ್ರಿಕ ಆಶಯವಾಗಿತ್ತು. ಸಂಸಾರದ ರಥವನ್ನು ನಡೆಸಿಕೊಂಡು ಹೋಗಲು ಮನೆಯಲ್ಲಿ ಕೂಡ ಜನರ ಅವಶ್ಯಕತೆಯಿತ್ತು. 'ದುಡಿಯುವ ಕೈಗಳೇ ನಮ್ಮ ಆಸ್ತಿ ಮತ್ತು ಸಂಪತ್ತು; ಜನಸಂಖ್ಯೆ ಹೆಚ್ಚು ಇದ್ದಷ್ಟೂ ದೇಶ ಸುಭದ್ರ' ಎಂದು ಹೆಮ್ಮೆಯಿಂದ ಹೇಳುತ್ತಿದ್ದರು ಅಂದಿನ ಪ್ರಧಾನಿ ನೆಹರುರವರು. ಅಂದೆಲ್ಲಾ ಸ್ವಲ್ಪ ಕಷ್ಟವಾದರೂ ದುಡಿಯುವ ಕೈಗಳಿಗೆ ಕೆಲಸವೂ ದೊರಕುತ್ತಿತ್ತು; ದುಡಿದು ಬದುಕಲು ಮನೆಯಿಂದ ದೂರ ತೆರಳಬೇಕಾದ ಅನಿವಾರ್ಯತೆ ಅಷ್ಟಾಗಿ ಇರಲಿಲ್ಲ.

ಪರಿಸ್ಥಿತಿ ಯಾವಾಗಲೂ ಒಂದೇ ತೆರನಾಗಿ ಇರುವುದಿಲ್ಲ, ಬದಲಾವಣೆ ಎಂಬುದು ಬದುಕಿನ ನಿಯಮ ಮತ್ತು ಅನಿವಾರ್ಯತೆ ಕೂಡ. ದಿನಗಳು ಕಳೆದಂತೆ ದುಡಿಯುವ ಕೈಗಳು ಹೆಚ್ಚಾದರೂ, ಅವಕ್ಕೆ ಕೆಲಸವು ಮರೀಚಿಕೆಯಾಗತೊಡಗಿತು. ಹಾಗೆಯೇ, ಬೆಳೆಯುವ ಜನಸಂಖ್ಯೆಗೆ ತಕ್ಕಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಕೂಡ ಸರಕಾರಕ್ಕೆ ಸವಾಲಾಯಿತು. ನೂರು ಜನರಿಗಾಗಿ ರೂಪಿಸಿದ ಯೋಜನೆಯು ಜಾರಿಯಾಗುವ ಹೊತ್ತಿಗೆ ನೂರೈವತ್ತು ಫಲಾನುಭವಿಗಳು ಕೈಯನ್ನು ಮುಂದೊಡ್ಡುವಂಥ

ಹತಾಶ ಪರಿಸ್ಥಿತಿ ಉದ್ಭವವಾಯಿತು. ಆಗ ಈ ಸಮಸ್ಯೆಯ ಆಳ-ಅಗಲವನ್ನು ವಿಸ್ತೃತವಾಗಿ ವಿಶ್ಲೇಷಿಸಿದ ಸರಕಾರವು, ಜನಸಂಖ್ಯಾ ಸ್ಫೋಟವನ್ನು ನಿಯಂತ್ರಿಸದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ ಎಂದು ಭಾವಿಸಿ 'ಕುಟುಂಬ ಯೋಜನೆ' ಅಥವಾ 'ಮಿತಸಂತಾನ' ಕಾರ್ಯಕ್ರಮವನ್ನು 1952ರ ಮೊದಲನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ಜಾರಿಗೆ ತಂದಿತು. ವಾಸ್ತವವಾಗಿ, 1949ರಲ್ಲಿಯೇ Family Planning Association Of India ಹೆಸರಿನಲ್ಲಿ ಈ ಕಾರ್ಯಕ್ರಮವಿದ್ದರೂ, 1960-70ರ ದಶಕದಲ್ಲಿ ಮತ್ತು ತರುವಾಯದಲ್ಲಿ ಇದನ್ನು ಪೂರ್ಣಪ್ರಮಾಣದಲ್ಲಿ ಜಾರಿಗೊಳಿಸಲಾಯಿತು. 'ಚಿಕ್ಕ ಕುಟುಂಬ, ಚೊಕ್ಕ ಕುಟುಂಬ', 'ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ', 'ಮಿತಸಂತಾನ ಸುಖಕ್ಕೆ ಸೋಪಾನ' ಮುಂತಾದ ಆಕರ್ಷಕ-ಅರ್ಥಭರಿತ ಘೋಷವಾಕ್ಯಗಳೊಂದಿಗೆ ಕುಟುಂಬ ಯೋಜನೆಯನ್ನು ಸಮರೋಪಾದಿಯಲ್ಲಿ ಜಾರಿಗೊಳಿಸಲಾಯಿತು. ಕ್ಲಿನಿಕಲ್ ಅಪ್ರೋಚ್, ಭರ್ಜರಿ ಪ್ರಚಾರ, ತಿಳಿವಳಿಕೆ ಮತ್ತು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗಳ ಮೂಲಕ ಇದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯಲಾಯಿತು. ಕೆಲವು ಕಡೆ ಇದನ್ನು ಬಲವಂತವಾಗಿ ಮಾಡಲಾಯಿತು. 1975ರ ತುರ್ತು ಪರಿಸ್ಥಿತಿ ಸಮಯದಲ್ಲಿ ಸಂಜಯ ಗಾಂಧಿಯವರ ಆಣತಿಯಂತೆ ದೆಹಲಿಯ 'ತುರ್ಕ್‌ಮನ್ ಗೇಟ್'ನ 'ನಸ್‌ಬಂದಿ' ಕಾರ್ಯಕ್ರಮದ ವೇಳೆ ನಡೆದ ಹಿಂಸಾಚಾರ ಕೂಡ ಭಾರತದ ರಾಜಕೀಯ ಇತಿಹಾಸದಲ್ಲಿ ಒಂದು ಕಪ್ಪುಚುಕ್ಕೆಯಾಗಿದ್ದನ್ನು ಇಂದಿಗೂ ಹಲವರು ನೆನಪಿಸಿಕೊಳ್ಳುತ್ತಾರೆ. ತುರ್ತು ಪರಿಸ್ಥಿತಿಯ ನಂತರ ನಡೆದ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರ ಪಕ್ಷವು ಸೋಲಲು ಈ 'ನಸ್‌ಬಂದಿ' ಕಾರ್ಯಕ್ರಮವೇ ಕಾರಣವಾಗಿತ್ತು ಎಂದೂ ವಿಶ್ಲೇಷಿಸಲಾಗಿತ್ತು. ವಿಶೇಷವೆಂದರೆ ಇಂಥ ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ಜಗತ್ತಿನಲ್ಲಿ ಭಾರತವೇ ಮೊದಲಿಗನಾಗಿತ್ತು, ಹೀಗಾಗಿ ಈ ಕಾರ್ಯಕ್ರಮವನ್ನು ಜಗತ್ತು ಬೆಕ್ಕಸ ಬೆರಗಾಗಿ ನೋಡುತ್ತಿತ್ತು.

ಹಲವರು ಈ ಕಾರ್ಯಕ್ರಮವನ್ನು ಲೇವಡಿ ಮಾಡುತ್ತಿರುವಂತೆ ಮತ್ತು 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲವೇ?' ಎನ್ನುತ್ತಿರುವಂತೆ, ದೇಶದ ವಿದ್ಯಾವಂತರು, ಸಮಾಜದ ಮೇಲ್ವರ್ಗದವರು, ಮಧ್ಯಮ ವರ್ಗದವರು ಈ ಪರಿಕಲ್ಪನೆಯ ಹಿಂದಿನ ಅರ್ಥವನ್ನು ಗ್ರಹಿಸಿ, ತ್ವರಿತವಾಗಿ ಅಳವಡಿಸಿಕೊಂಡು, ಯೋಜನೆಯ ಉದ್ದೇಶವನ್ನು ನಿರೀಕ್ಷೆಗೂ ಮೀರಿ ದೊಡ್ಡ ಪ್ರಮಾಣದಲ್ಲಿ ಸಾರ್ಥಕಗೊಳಿಸಿದರು. ಆರ್ಥಿಕವಾಗಿ ಹಿಂದುಳಿದವರು ಸೇರಿದಂತೆ ಸಮಾಜದ ಕೆಲವು ವರ್ಗದವರು ಇದರ ಬಗೆಗೆ ಅಷ್ಟಾಗಿ ಒಲವು ತೋರದೆ, 'ಮಕ್ಕಳು ದೇವರಿತ್ತ ಕೊಡುಗೆ, ಅದನ್ನು ತಡೆಯಬಾರದು' ಎಂಬ ಓಬಿರಾಯನ ಕಾಲದ ಮಾತಿಗೆ ಕಟ್ಟುಬಿದ್ದು, ಮಿತಸಂತಾನದ ಪರಿಕಲ್ಪನೆಗೆ ಮುಖ ಸಿಂಡರಿಸಿದರು. ಜನಸಂಖ್ಯಾ ನಿಯಂತ್ರಣದ ಈ ಧ್ಯೇಯೋದ್ದೇಶವು ಕಾಲಕ್ರಮೇಣ 'ಕುಟುಂಬಕ್ಕೆ ಒಂದೇ ಮಗು' ಎಂಬ ಆಶಯದವರೆಗೆ ಬಂದು ನಿಂತಿರುವುದು ಒಂದು ದುರಂತ. ಇದು ಜನಸಂಖ್ಯೆಯನ್ನು ನಿರೀಕ್ಷೆಗೂ ಮೀರಿ ತಗ್ಗಿಸಿದೆ/ನಿಯಂತ್ರಿಸಿದೆ; ಪರಿಣಾಮವಾಗಿ ಇಂದು 'ದುಡಿಯಲು ಕೈಗಳಿಲ್ಲ' ಎನ್ನುವ ಹಂತಕ್ಕೆ ಅದು ಬಂದು ಮುಟ್ಟಿದೆ. 'ವೈಟ್ ಕಾಲರ್' ಮತ್ತು 'ಬ್ಲೂ ಕಾಲರ್' ಉದ್ಯೋಗಗಳಲ್ಲಿ ಈ ಕೊರತೆ ಎದ್ದುಕಾಣದಿದ್ದರೂ, ಕೆಳಸ್ತರದ ಉದ್ಯೋಗಗಳಲ್ಲಿ ಇದು ದಿನನಿತ್ಯದ ನೋವಾಗಿದೆ.

ಇನ್ನು, ಒಂದು ಕಾಲಕ್ಕೆ ತುಂಬಾ ಸಾಮಾನ್ಯವಾಗಿದ್ದ 8-10 ಅಂಕಣದ ದೊಡ್ಡ ಮನೆಗಳು ಕಾಲಗರ್ಭ ಸೇರುತ್ತಿವೆ. ಇದರರ್ಥ, ಅಷ್ಟು ದೊಡ್ಡ ಮನೆಗಳನ್ನು ಕಟ್ಟಿಸುವ ಆರ್ಥಿಕ ಶಕ್ತಿ ಜನರಲ್ಲಿ ಇಲ್ಲವೆಂದಲ್ಲ; ಮನೆಯಲ್ಲಿ ಉಳಿಯಲು ಅಷ್ಟು ಜನರು ಇಲ್ಲದಿರುವುದು ಇದಕ್ಕೊಂದು ಕಾರಣ. ಜತೆಗೆ, ಅಷ್ಟು ದೊಡ್ಡ ಮನೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಮನೆಯಲ್ಲಿ ಜನರಿಲ್ಲ ಮತ್ತು ಆಳುಕಾಳುಗಳು ದೊರಕುವುದಿಲ್ಲ. ಹಳ್ಳಿಗಳಲ್ಲಿ, ಮುಖ್ಯವಾಗಿ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ತುಂಡುಭೂಮಿಗಳೇ ಹೆಚ್ಚು; ಇದನ್ನು ನೋಡಿಕೊಂಡು ಬೆಳೆ ಬೆಳೆಯುವುದಕ್ಕೂ ಜನರಿಲ್ಲ, ಕೂಲಿಗಳಿಲ್ಲ ಎನ್ನುವಂಥ ಪರಿಸ್ಥಿತಿಯಿದೆ. ಇರುವ ಕೂಲಿಗಳು ಕೇಳಿದ್ದೇ ಸಂಬಳ! ಕುಟುಂಬದಲ್ಲಿದ್ದ ಒಂದಿಬ್ಬರು ಮಕ್ಕಳು ಜೀವನೋಪಾಯಕ್ಕೆಂದು ಹೊರಗೆಲ್ಲೋ (ದೇಶ-ವಿದೇಶಕ್ಕೆ) ಹೋಗಿರುತ್ತಿದ್ದು, ಪಾಳಿಯ ಮೇಲೆ ಎಂಬಂತೆ ಮನೆಗೆ ಬಂದು ಪಾಲಕರನ್ನು ನೋಡಿಕೊಂಡು ಹೋಗುತ್ತಾರೆ. ಬಹುತೇಕ ಮನೆಗಳು ವೃದ್ಧಾಶ್ರಮಗಳಾಗಿವೆ. ಆ ಹಿರಿಯರ ನಂತರ ಮುಂದೇನು? ಆ ತುಂಡುಭೂಮಿಯ ಕಥೆಯೇನು? ಇಂಥ ಉತ್ತರವಿಲ್ಲದ ಪ್ರಶ್ನೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಕೂಲಿಗಳ ಕೊರತೆಯಿಂದಾಗಿ ಕೃಷಿ ಮಾಡಲಾಗದೇ ಭೂಮಿಯನ್ನು ಕೃಷಿಯೇತರ ಬಳಕೆಗೆ ಪರಿವರ್ತಿಸಲು ಪ್ರಯತ್ನಗಳು ನಡೆಯುತ್ತಿವೆ.

ಸಂಘಟಿತ ವಲಯದಲ್ಲಿ ಪರಿಸ್ಥಿತಿ ಅಷ್ಟು ಬಿಗಡಾಯಿಸದಿದ್ದರೂ, ಅಸಂಘಟಿತ ವಲಯದಲ್ಲಿ ಬಿಡಿಕೆಲಸಗಳಿಗೆ ಜನರೇ ದೊರಕುತ್ತಿಲ್ಲ ಎಂಬ ಅಳಲು ಮುಗಿಲು ಮುಟ್ಟಿದೆ. ಪ್ಲಂಬಿಂಗ್/ಸ್ಯಾನಿಟರಿ, ಇಲೆಕ್ಟ್ರಿಕಲ್, ಗಾರ್ಡನಿಂಗ್, ಪೇಂಟಿಂಗ್, ಕಾರ್ಪೆಂಟರಿ, ಕಟ್ಟಡ ನಿರ್ಮಾಣದಂಥ ಕೆಲಸಗಳಿಗೆ ಕಾರ್ಮಿಕರೇ ಸಿಗುತ್ತಿಲ್ಲ. ಮಿತಕುಟುಂಬ ಕಾರ್ಯಕ್ರಮದ ಪರಿಣಾಮ ದೇಶದೆಲ್ಲೆಡೆ ಆಗಿದ್ದರೂ, ಹೆಚ್ಚು ಸುಶಿಕ್ಷಿತ ಪ್ರದೇಶ ಎನ್ನಲಾಗುವ ದಕ್ಷಿಣ ಭಾರತದಲ್ಲಿ ಇದರ ಪರಿಣಾಮ ಗಣನೀಯವಾಗಿದೆ. ಹೀಗಾಗಿಯೇ, ದುಡಿಯುವ ಕೈಗಳು ಉತ್ತರದ ರಾಜ್ಯಗಳಿಂದ ದಕ್ಷಿಣದ ರಾಜ್ಯಗಳಿಗೆ ದಾಂಗುಡಿ ಇಡುತ್ತಿವೆ ಎಂಬ ಮಾತಿನಲ್ಲಿ ಸತ್ಯವಿಲ್ಲದಿಲ್ಲ. ಕರೋನಾ ಪಿಡುಗಿನ ಸಮಯದಲ್ಲಿ ಈ ವಲಸಿಗರು ತಂತಮ್ಮ ರಾಜ್ಯಗಳಿಗೆ ಮರಳಿದಾಗ, ರಸ್ತೆ ಮತ್ತು ಕಟ್ಟಡ ನಿರ್ಮಾಣ ಕಾಮಗಾರಿಗಳು ಬಹುತೇಕ ನಿಂತುಹೋಗಿದ್ದುಂಟು. 'ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯಾದಾಗ, ಕಡಿಮೆ ಜನಸಂಖ್ಯಾ ಬೆಳವಣಿಗೆ ಇರುವ ದಕ್ಷಿಣ ಭಾರತವು ಗಮನಾರ್ಹ ಪ್ರಮಾಣದಲ್ಲಿ ಸ್ಥಾನಗಳನ್ನು ಕಳೆದುಕೊಳ್ಳುತ್ತದೆ' ಎಂಬ ಚಂದ್ರಬಾಬು ನಾಯ್ಡು ಅವರ ಅಭಿಪ್ರಾಯದಲ್ಲಿ ತೂಕವಿರುವಂತೆ ಕಾಣುತ್ತದೆ.

ಹಳ್ಳಿಗಳು ನಿರ್ಜನವಾಗಿವೆ, ಎಲ್ಲೆಡೆ ಮನೆಗಳು ಖಾಲಿಯಿವೆ. ನಗರಗಳ ಚಿಕ್ಕ ಚಿಕ್ಕ ಫ್ಲ್ಯಾಟ್‌ಗಳಲ್ಲಿ ಬದುಕಿನ ಮುಸ್ಸಂಜೆಯಲ್ಲಿರುವ ಹಿರಿಯರು ದಿನದೂಡುತ್ತಿದ್ದಾರೆ, ಇಂದು ಮನೆಗಳಲ್ಲಿ ಮಕ್ಕಳ ಕೇಕೆಗಿಂತ ಗಂಡ-ಹೆಂಡತಿಯ ದನಿಗಳೇ ಹೆಚ್ಚು ಕೇಳುತ್ತಿವೆ. ಜನಸಂಖ್ಯೆ ಏಕೆ ಬೆಳೆಯುತ್ತಿಲ್ಲ ಎನ್ನುವುದರ ಹಿಂದಿನ ಕಾರಣವನ್ನು ಹುಡುಕಿದಾಗ ದೊರಕುವ ಉತ್ತರವು ಆಶ್ಚರ್ಯಕರ ಎನಿಸಬಹುದು, ಆದರೆ ಅದು ಸತ್ಯ. ಹಳ್ಳಿಯಲ್ಲಿದ್ದವರಿಗೆ, ಕೃಷಿಕರಿಗೆ ಮತ್ತು ಪೌರೋಹಿತ್ಯ ಮಾಡುವವರಿಗೆ ಮದುವೆಯು ಮರೀಚಿಕೆಯಾಗುತ್ತಿದೆ ಎಂಬುದು ಇತ್ತೀಚಿನ ಒಂದು ದೊಡ್ಡ ಸಾಮಾಜಿಕ ಸಮಸ್ಯೆ; ಇವರನ್ನು ಮದುವೆಯಾಗುವವರಿಗೆ ಸರಕಾರ ಪ್ರೋತ್ಸಾಹಿಸಬೇಕೆಂಬ ಮಾತು ಕೇಳಿಬರುತ್ತಿದೆ. ಮದುವೆಯ ಜಂಜಾಟವೇ ಬೇಡ ಎನ್ನುವ ಎಷ್ಟೋ ಜನ ಯುವಕ-ಯುವತಿಯರು 40 ವರ್ಷ ದಾಟಿದರೂ ಹಸೆಮಣೆ ಏರುತ್ತಿಲ್ಲ. ಇನ್ನು, 'ನಮಗೆ ಮಕ್ಕಳು ಬೇಡವೇ ಬೇಡ' ಎನ್ನುವ ದಂಪತಿಗಳೂ ಸಾಕಷ್ಟಿದ್ದಾರಂತೆ. ಮಕ್ಕಳು ಬೇಕೆನ್ನುವವರು ದುಬಾರಿ ದಿನಮಾನ ಮತ್ತು ಮಕ್ಕಳ ಭವಿಷ್ಯದ ಬಗ್ಗೆ ಚಿಂತಿತರಾಗಿ ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಲು ಇಚ್ಛಿಸುತ್ತಿಲ್ಲ. ಇದಕ್ಕೂ ಮಿಗಿಲಾಗಿ, 'ಮದುವೆ-ಸಂಸಾರ-ಮಕ್ಕಳು-ಮರಿ' ಎಂಬ ಜಂಜಾಟಕ್ಕೆ ಸಲಾಂ ಹೊಡೆದು 'ಸಹಜೀವನ'ಕ್ಕೆ (ಲಿವಿಂಗ್ ಟುಗೆದರ್‌ಗೆ) ಮೊರೆಹೋಗುವವರೇನೂ ಕಮ್ಮಿಯಿಲ್ಲ. ಮದುವೆಯೇ ಇಲ್ಲದಿದ್ದರೆ ಅಥವಾ ವಿಳಂಬವಾದರೆ ಜನಸಂಖ್ಯೆ ವೃದ್ಧಿಯಾದೀತೇ? ಹಿಂದೆಲ್ಲಾ, ಗಂಡುಮಗು ಹುಟ್ಟುವವರೆಗೆ ಮಕ್ಕಳನ್ನು ಹೆರುತ್ತಿದ್ದರು; 'ಅಗಳು ಬರುತ್ತದೆ ಅಂತ ತಿಳಿ ಕುಡಿಯುತ್ತಾರೆ' ಎಂಬುದಾಗಿ ಇಂಥವರನ್ನು ಲೇವಡಿ ಮಾಡಲಾಗುತ್ತಿತ್ತು. ಆದರೀಗ, 'ಗಂಡಾಗಲಿ ಹೆಣ್ಣಾಗಲಿ, ಒಂದೇ ಮಗುವಿರಲಿ' ಎನ್ನುವ ಕಾಲ ಬಂದಿದೆ. ಸಾಲದೆಂಬಂತೆ, ಯುವಜನರು ದೇಶದ ಒಂದಿಷ್ಟು ಅವ್ಯವಸ್ಥೆಗಳಿಗೆ ಬೇಸತ್ತು, ಸಹನೀಯವಾಗಿರುವ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಅರಸುತ್ತಾ ದೇಶ ಬಿಟ್ಟು ಹೋಗುತ್ತಿದ್ದಾರೆ. ವರದಿಯೊಂದು ಹೇಳುವಂತೆ, ಸರಾಸರಿ 2 ಲಕ್ಷ ಜನರು ಪ್ರತಿವರ್ಷ ದೇಶಬಿಟ್ಟು ಹೊರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

ಕುಟುಂಬ ಯೋಜನೆ ಎಂಬ ಕಾರ್ಯಕ್ರಮವನ್ನು 1960-70ರ ದಶಕದಲ್ಲಿ ರೂಪಿಸಿದವರು, ಅದು ಇಂಥ ತಿರುವನ್ನು ಪಡೆಯುತ್ತದೆ ಎಂದು ಕನಸಿನಲ್ಲೂ ಎಣಿಸಿರಲಿಲ್ಲವೇನೋ? ಈಗಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಕಾಲಚಕ್ರ ಹೇಗೆ ತಿರುಗುತ್ತದೆ ಎಂಬುದು ಅರಿವಾಗುವುದರ ಜತೆಗೆ, 'ಮಕ್ಕಳಿರಲವ್ವ ಮನೆ ತುಂಬಾ' ಎಂಬ ಜಾನಪದ ಗೀತೆಯೂ ನೆನಪಾಗುತ್ತದೆ....

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಕೆ.ಜಿ.ಶೇಷಾದ್ರಿ, ಬೆಂಗಳೂರು**
ಭಟ್ರೇ, ಗೌರಿ ಲಂಕೇಶರ ಆದರ್ಶ ಸಮಾಜಕ್ಕೆ ಗೈಡ್ ಆಗಿವೆ ಅಂತಾರಲ್ಲ?
– **ನಿಜ.. ಕಾರಣ ಸಾಯುವ ಮುಂಚೆ ಆಕೆ ‘ಗೈಡ್’ ಪಬ್ಲಿಶ್ ಮಾಡ್ತಾ ಇದ್ದಳು ಅಂತ ಹಾಗೆ ಹೇಳಿರಬಹುದಾ?!**

- **ನಿರಂಜನ ಗೌಡ, ಕನಕಪುರ**
ಭಟ್ರೇ, ಪತ್ರಿಕೆಗಳಿಗೆ ಸರಕಾರ ಜಾಹೀರಾತು ನೀಡಬಾರದು ಎಂದು ನಟ ಪ್ರಕಾಶ ರೈ ಹೇಳಿದ್ದಾರಲ್ಲ?
– **ಜತೆಯಲ್ಲಿ ಸಿನಿಮಾಗಳಿಗೆ ಸಬ್ಸಿಡಿಯನ್ನೂ ಅಂತ ಸೇರಿಸಬೇಕಿತ್ತು!**

- **ಬಾಬು ಕುಂದಾಪುರ, (ಇಮೇಲ್ ಮೂಲಕ)**
ಭಟ್ರೇ, ಹುಟ್ಟಿಸುವ ದೇವರು ಹುಲ್ಲು ಮೇಯಿಸೋಲ್ಲ ಅಂತ ಎಲ್ಲರೂ ನಂಬಿದ್ದಾರಲ್ಲ?
– **ಹುಟ್ಟಿಸಿದ ದೇವರು ಸಗಣಿ ತಿನ್ನಿಸಿದ ಅಂತ ನಿನ್ನ ಅನುಭವವಾಗಿದ್ದರೆ ಧೈರ್ಯವಾಗಿ ಹೇಳು, ಪರವಾಗಿಲ್ಲ!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಗಂಡಸರು ‘ಮೀಸೆ ಬೋಳಿಸಿಕೊಳ್ತೇನೆ’ ಅಂತ ಚಾಲೆಂಜ್ ಮಾಡ್ತಾರೆ, ಹೆಂಗಸರು?
– **ಮುಡಿಕೊಡ್ತೇನೆ... ಗಂಡಂದು ಅಂತ ಹೇಳ್ತಾರೆ!**

- **ಮಂಡ್ಯ ಸತೀಶ, ಮಂಡ್ಯ**
ಭಟ್ರೇ, ಗಂಡ–ಹೆಂಡತಿಯರ ಜಗಳವನ್ನು ಕದನಕ್ಕೆ ಹೋಲಿಸುತ್ತಾರಲ್ಲ?
– **ಕದನವಿರಾಮವೇ ಇಂಟರೆಸ್ಟಿಂಗ್ ಆಗಿರೋದು ಅಂತೀಯಾ?!**

- **ಬಾಲಕೃಷ್ಣ ಪುತ್ತೂರು, ಬೆಂಗಳೂರು**
ಭಟ್ರೇ, ನೀವು ಚುನಾವಣೆಯಲ್ಲಿ ಗೆಲ್ಲುವಷ್ಟು ಬುದ್ಧಿವಂತರಾ?
– **ಹೂಂ.. ಆದರೆ ಚುನಾವಣೆಗೆ ನಿಲ್ಲಬೇಕೆಂದು ನಿರ್ಧರಿಸುವಷ್ಟು ದಡ್ಡನಲ್ಲ!**

- **ವಿಶ್ವನಾಥ ಕುಲಕರ್ಣಿ, ಧಾರವಾಡ**
ಭಟ್ರೇ, ಬ್ರಾಹ್ಮಣರೇಕೆ ಬಸ್ ಕಂಡಕ್ಟರ್ ಆಗುವುದಿಲ್ಲ?
– **ಎಲ್ಲ ರೂಟುಗಳೂ ಗೋಕರ್ಣ, ಧರ್ಮಸ್ಥಳವೇ ಆಗಿರುವುದಿಲ್ಲವಲ್ಲ?!**

- **ಸಂದೀಪ ಭಟ್, ಉಡುಪಿ**
ಭಟ್ರೇ, ಗಂಡ–ಹೆಂಡತಿ ಇದು ವಿರುದ್ಧ ಪದವಾ?
– **ಅದು ಇಬ್ಬರು ಅಪರಾಧಿಗಳ ಹೆಸರು!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಎಲ್ಲ ಗಂಡಸರೂ ಕೊರಳಿಗೆ ಮಾಂಗಲ್ಯ ಕಟ್ಟುತ್ತಾರಲ್ಲ?
– **ಸೊಂಟಕ್ಕೆ ಬೇಡ ಅಂತ ನಿನಗೆ ಹೇಳಿದವರು ಯಾರು?!**

- **ಮಂಜುನಾಥ ಸಿ., ಹೊನ್ನಾಳಿ**
ಭಟ್ರೇ, ಫ್ರೀ ಆದ ಮೇಲೆ ಪಿಂಗ್ ಮಾಡು ಅಂತ ಹುಡುಗಿಯರು ಹೇಳ್ತಾರಲ್ಲ?
– **ಪಿಂಗ್ ಮಾಡೋದೇ ವಾಸಿ, ಶಾಪಿಂಗ್ ಅಂತ ಹೇಳಿದ್ರೆ ಕಷ್ಟ!**

- **ನವೀನ ಕೆ., (ಇಮೇಲ್ ಮೂಲಕ)**
ಭಟ್ರೇ, ಅಡುಗೆ ಮಾಡುವವರಿಗೆ ಇರಬೇಕಾದ ಮುಖ್ಯ ಗುಣ ಯಾವುದು?
– **ಅಡುಗೆ ಮತ್ತು ಊಟ ಮಾಡುವವರ ಮೇಲೆ ಪ್ರೀತಿ!**

- **ಬಾಲಚಂದ್ರ ಪೋತೆ, ನಂಜನಗೂಡು**
ಸರ್, ಅಡುಗೆ ಮನೆ ಅಸ್ತವ್ಯಸ್ತವಾಗಿದ್ದರೆ ಅದು ಏನನ್ನು ಸೂಚಿಸುತ್ತದೆ?
– **ಆ ಮನೆಯಲ್ಲಿರುವವರು ಆನಂದದಿಂದ ಇದ್ದಾರೆ ಎಂಬುದನ್ನು ಸೂಚಿಸುತ್ತದೆ!**

ಮಕ್ಕಳು ನಮ್ಮ ಕನಸನ್ನು ಪೂರೈಸಲು ಹುಟ್ಟಿಲ್ಲ!

‘ಮಕ್ಕಳು ನಮ್ಮ ಕನಸುಗಳನ್ನು ಪೂರೈಸಲು ಹುಟ್ಟಿದವರಲ್ಲ, ತಮ್ಮ ಕನಸುಗಳನ್ನು ಪೂರೈಸಿಕೊಳ್ಳಲು ಹುಟ್ಟಿದವರು’ ಎನ್ನುವ ಪರಿಜ್ಞಾನ ಪೋಷಕರಲ್ಲಿ ಬೆಳೆಯಲಿ. ಎಲ್ಲವನ್ನೂ ಕಲಿಯಬೇಕು ಎನ್ನುವ ಹುಚ್ಚಾಟಕ್ಕೆ ಚೂರಾದರೂ ತೆರೆ ಬೀಳಲಿ. ಬಾಲ್ಯದಲ್ಲಿ ಸಹಜವಾದ ಆಟಗಳನ್ನು ಅವರು ಆಡುವಂತಾಗಲಿ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಅದೊಂದು ಕಾಲವಿತ್ತು. ಆಗ ಮಕ್ಕಳು ಬಹುತೇಕ ಸಮಯವನ್ನು ಆಟದಲ್ಲಿ ಕಳೆಯುತ್ತಿದ್ದರು. ಇದರರ್ಥ ಮನೆಯಿಂದ ಹೊರಗಿರುತ್ತಿದ್ದರು. ಇಳಿಸಂಜೆಯಾದರೂ ಮನೆಗೆ ಬರದಿದ್ದರೆ ಮಾತ್ರ ಹೆತ್ತವರು ‘ಮಕ್ಕಳೇಕೆ ಇನ್ನೂ ಮನೆಗೆ ಬಂದಿಲ್ಲ?’ ಎಂದು ಚಿಂತಿಸುತ್ತಿದ್ದರು. ಇವತ್ತು ಕಾಲ ಬದಲಾಗಿದೆ. ಮಕ್ಕಳು ಅರೆಕ್ಷಣ ಕಣ್ಣಿಗೆ ಕಾಣದಿದ್ದರೆ ಸಾಕು ಹುಡುಕಾಟ ಶುರುವಾಗುತ್ತದೆ. ಸಹಜವಾಗಿದ್ದ ಬದುಕು ಯಾಂತ್ರಿಕವಾಗಿದೆ. ಬಾರ್ಸಿಲೋನಾ ನಗರದಿಂದ ಬೆಂಗಳೂರಿಗೆ ಮರಳಿ ಬಂದಾಗ ನಮಗೊಂದು ಅಚ್ಚರಿ ಕಾದಿತ್ತು. ಮಕ್ಕಳನ್ನು ಸಂಗೀತಕ್ಕೆ, ಅಬ್ಯಾಕಸ್, ಡಾನ್ಸ್ ಕ್ಲಾಸಿಗೆ, ಕರಾಟೆ, ಸ್ವಿಮ್ಮಿಂಗ್, ಚೆಸ್, ಕ್ರಿಕೆಟ್ ಹೀಗೆ ಒಂದಲ್ಲ ಒಂದು ತರಗತಿಗೆ ಸೇರಿಸುವುದು ಆ ಅಚ್ಚರಿ! ಬಹಳಷ್ಟು ಮಕ್ಕಳು ಎರಡು ಅಥವಾ ಮೂರಕ್ಕೂ ಹೆಚ್ಚು ತರಗತಿಗೆ ಸೇರಿದ್ದರು. ಇದರ ಜತೆಗೆ ಟ್ಯೂಷನ್ ಬೇರೆ. ಮಕ್ಕಳಿಗೆ ಉಸಿರಾಡಲು ಕೂಡ ಪುರುಸೊತ್ತಿಲ್ಲವಲ್ಲ ಎಂದು ನಾನು ಹಲವಾರು ಬಾರಿ ಬೇಸರ ಪಟ್ಟುಕೊಂಡದ್ದು ಉಂಟು. ಹೀಗೆ ಅನೇಕ ಕ್ಲಾಸುಗಳಿಗೆ ಸೇರಿಸಿದ ಪೋಷಕರು ಯಾವುದಕ್ಕೂ ಸೇರಿಸದ ನಮ್ಮಂಥ ಪೋಷಕರ ಮೇಲೆ ಒಂದು ರೀತಿಯ ಒತ್ತಡವನ್ನು ತರಲು ಕೂಡ ಪ್ರಯತ್ನಿಸುತ್ತಾರೆ. ‘‘ನಿಮ್ಮ ಮಗಳನ್ನು ಯಾವ ಕ್ಲಾಸಿಗೂ ಸೇರಿಸಿಲ್ಲವೇ?’’ ಎನ್ನುವ ಕುಹಕದ ಮಾತುಗಳಿಗೆ ನಾವೆಂದೂ ತಲೆ ಕೆಡಿಸಿಕೊಳ್ಳಲಿಲ್ಲ. ಬದಲಿಗೆ ಇನ್ನಷ್ಟು ನಗು ಮುಖದಿಂದ ‘‘ಇಲ್ಲ ಯಾವ ಕ್ಲಾಸಿಗೂ ಸೇರಿಸಿಲ್ಲ’’ ಎಂದು ಹೇಳುತ್ತಿದ್ದೆವು.

ನನ್ನ ಪತ್ನಿ ರಮ್ಯ ಹಾಗೂಹೀಗೂ ಸಮಾಜದ ಕಟ್ಟಳೆಗೆ ಕಟ್ಟುಬಿದ್ದು ಸುಮ್ಮನಿರುತ್ತಿದ್ದಳು. ನಾನು ಮಾತ್ರ ಯಾವ ಮುಲಾಜು ಇಲ್ಲದೆ ‘‘ನೀವು ಹಣವನ್ನು ಪೋಲು ಮಾಡುತ್ತಿದ್ದೀರಿ, ನಿಮಗೇನು ಬೇಕು ಅದನ್ನು ಮಗುವಿನ ಮೇಲೆ ಹೇರಿಕೆ ಮಾಡುತ್ತಿದ್ದೀರಿ, ಮಗುವಿಗೇನು ಬೇಕು ಎಂದು ಕೇಳಿದ್ದೀರಾ?’’ ಎಂದು ಕೇಳುತ್ತಿದ್ದೆ. ಜತೆಗೆ ‘‘ಯಾವ ವಲಯದಲ್ಲಿ ನಿಮ್ಮ ಮಗು ಶ್ರೇಷ್ಠತೆ ಬೆಳೆಸಿಕೊಳ್ಳಬೇಕು ಎಂದು ಬಯಸಿದ್ದೀರಿ?’’ ಎಂದು ಕೇಳುತ್ತಿದ್ದೆ. ಕರಾಟೆ, ಈಜು, ಡಾನ್ಸ್, ಸಂಗೀತ, ಕ್ರಿಕೆಟ್ ಜತೆಗೆ ಓದಿನಲ್ಲೂ ಕಡಿಮೆ ಯಾಗಬಾರದು ಎಂದರೆ ಅದು ಹೇಗೆ ಸಾಧ್ಯ?’’ ಎಂದು ಕೇಳುತ್ತಿದ್ದೆ. ‘‘ನಿಮ್ಮ ಮಕ್ಕಳು ಕೊಹ್ಲಿಯಂತೆ ಕ್ರಿಕೆಟ್ ಆಡಬೇಕು, ಪಿ.ಟಿ. ಉಷಾರಂತೆ ಓಡಬೇಕು, ಗುಕೇಶನಂತೆ ಚೆಸ್ ಮಾಸ್ಟರ್ ಆಗಬೇಕು, ಮೈಕಲ್ ಜಾಕ್ಸನ್, ಪ್ರಭುದೇವರನ್ನು ಮೀರಿಸಿ ನೃತ್ಯ ಮಾಡಬೇಕು, ಇದೆಲ್ಲದರ ಜತೆಗೆ ಆತ ಅಥವಾ ಆಕೆ ವಿದ್ಯಾಭ್ಯಾಸದಲ್ಲೂ ಮುಂದುವರಿಯಬೇಕು... ಹೇಗೆ ಸಾಧ್ಯ ಕಣ್ರೀ?!’’ ಎಂದು ಕೇಳುತ್ತಿದ್ದೆ. ಅವರು ನಿರುತ್ತರರಾಗುತ್ತಿದ್ದರು. ಮಗಳು ಅನನ್ಯ ಆರನೇ ತರಗತಿಗೆ ಬಂದಾಗ ಅವಳಲ್ಲಿ ಮಾತಾಡುವ ಕಲೆ, ಚತುರತೆ ಮತ್ತು ಆಸಕ್ತಿ ಇರುವುದನ್ನು ಗಮನಿಸಿ ಅವಳನ್ನು ಪಬ್ಲಿಕ್ ಸ್ಪೀಕಿಂಗ್ ಕೋರ್ಸಿಗೆ ಸೇರಿಸಿದೆವು. ಸಾವಿರಾರು ಜನರ ಮುಂದೆ ನಿಂತು ಮಾತಾಡುವ ಕ್ಷಮತೆಯನ್ನು ಆಕೆ ಗಳಿಸಿಕೊಂಡಿದ್ದಾಳೆ. ಮಕ್ಕಳಲ್ಲಿ ಯಾವ ಕ್ಷಮತೆಯಿದೆ, ಅವರಿಗೆ ಯಾವುದರಲ್ಲಿ ಆಸಕ್ತಿಯಿದೆ ಎನ್ನುವುದನ್ನು ಅರಿತುಕೊಂಡು ನಾವು ಅದರ ಮೇಲೆ ಕೆಲಸ ಮಾಡಬೇಕು. ಅದನ್ನು ಬಿಟ್ಟು ಸಿಕ್ಕ ಸಿಕ್ಕ ತರಗತಿಗೆ ಸೇರಿಸಿದರೆ ಆ ಮಕ್ಕಳು ಸಮಯವನ್ನು ಎಲ್ಲಿಂದ ಹೊಂದಿಸಿ ಕೊಂಡಾರು? ವಿಪರ್ಯಾಸ ನೋಡಿ, ಹೀಗೆಲ್ಲಾ ಬಯಸುವ ಪೋಷಕರು, ‘ಮಕ್ಕಳ ವಯಸ್ಸಿನಲ್ಲಿ ತಾವು ಏನು ಮಾಡುತ್ತಿದ್ದೆವು?’ ಎನ್ನುವ ಅವಲೋಕನ ಮಾಡಿಕೊಳ್ಳಬೇಕಲ್ಲವೇ?

ಹಾಗೂಹೀಗೂ ಹತ್ತನೇ ತರಗತಿ ತನಕ ಎಲ್ಲಾ ತರಗತಿಗಳಿಗೆ ಮಣ್ಣು ಹೊತ್ತ ಮಕ್ಕಳು ವಿದ್ಯಾಭ್ಯಾಸದಲ್ಲಿ ಮಕಾಡೆ ಮಲಗಿವೆ ಎನ್ನುವುದು ಪೋಷಕರಿಗೆ ಅರ್ಥವಾಗಿಬಿಡುತ್ತದೆ. ಆಗ ನೋಡಿ ಗಡಕ್ಕೆ ಬೆಂಕಿ ಬಿದ್ದರೆ ಬಾವಿ ತೊಡುವ ತುರ್ತಿನಲ್ಲಿ ಅವರು ಅಖಾಡಕ್ಕೆ ಇಳಿದು ಬಿಡುತ್ತಾರೆ. ಸೇರಿಸಿದ ಎಲ್ಲಾ ಕೋರ್ಸುಗಳಿಂದ ಮಕ್ಕಳನ್ನು ತೆಗೆದುಬಿಡುತ್ತಾರೆ. ‘ಓದು’ ಎಂದು ಒತ್ತಡ ಹೇರಲು ಶುರುಮಾಡುತ್ತಾರೆ. ಪ್ರಥಮ ಹತ್ತು ವರ್ಷ ಟೈಮ್‌ಪಾಸ್ ಮಾಡುವುದು ಅಭ್ಯಾಸ ಮಾಡಿಕೊಂಡ ಮಕ್ಕಳು ಈಗ ಓದುವುದಕ್ಕೆ ಹೇಗೆ ಸಾಧ್ಯ? ಪ್ರಮಾಣ ಮಾಡಿ ಹೇಳುತ್ತೇನೆ, ಕಳೆದ ಹತ್ತು ವರ್ಷದಿಂದ ಇದೇ ಪ್ಯಾಟ್ರನ್ ನೋಡುತ್ತಾ ಬಂದಿದ್ದೇನೆ. ಹೋಗಲಿ ಮಕ್ಕಳು ತಾವು ಸೇರಿಕೊಂಡ ಇತರ ತರಗತಿಗಳಲ್ಲಿ ಏನಾದರೂ ಕ್ಷಮತೆಯನ್ನು ಗಳಿಸಿಕೊಂಡರೆ ಎಂದರೆ ಅದಕ್ಕೂ ಉತ್ತರ ‘ಇಲ್ಲ’ ಎನ್ನುವುದೇ ಆಗಿರುತ್ತದೆ. ಆ ಕ್ಲಾಸಿನಿಂದ ಈ ಕ್ಲಾಸು, ಈ ಕ್ಲಾಸಿನಿಂದ ಆ ಕ್ಲಾಸು ಇಷ್ಟರಲ್ಲೇ ಸಮಯ ಕಳೆದುಹೋಗಿರುತ್ತದೆ.

ಬೆಂಗಳೂರಿನಲ್ಲಿ ಸರಾಸರಿ ಮಾಸಿಕ 15,000 ರುಪಾಯಿ ಹಣವನ್ನು ಈ ರೀತಿಯ ಕೋರ್ಸುಗಳಿಗೆ ಪೋಷಕರು ವ್ಯಯಿಸುತ್ತಿದ್ದಾರೆ ಎನ್ನುತ್ತದೆ ಅಂಕಿ-ಅಂಶ. ಇದೊಂದು ಸಾಮಾಜಿಕ ಒತ್ತಡವಾಗಿದೆ. ಮಕ್ಕಳನ್ನು ಕಂಡಕಂಡ ಕೋರ್ಸಿಗೆ ಸೇರಿಸದ ಪೋಷಕರನ್ನು ಕಂಜೂಸು ಎನ್ನುವಂತೆ ನೋಡಲಾಗುತ್ತದೆ. ತಮ್ಮ ಮಕ್ಕಳು ಕೊಹ್ಲಿ ಅಥವಾ ಗುಕೇಶ್ ಆಗಿಬಿಡುತ್ತಾರೆ ಎಂದು ಸಂಭ್ರಮಿಸುತ್ತಾರೆ. ಹೀಗೆ ಈ ಗುಂಪಿಗೆ ಸೇರದವರನ್ನು ಅಯ್ಯೋ ಪಾಪ ಎನ್ನುವಂತೆ ನೋಡಲಾಗುತ್ತದೆ. ಕೋರ್ಸಿಗೆ ಸೇರಿದವರೆಲ್ಲಾ ಗುಕೇಶ್ ಆಗುವುದಿಲ್ಲ ಎಂದು ಇವರಿಗೆ ಹೇಗೆ ಹೇಳುವುದು? ಎಲ್ಲಕ್ಕಿಂತ ಮುಖ್ಯವಾಗಿ ಗುಕೇಶ್ ಚೆಸ್‌ನಲ್ಲಿ ಎಷ್ಟು ಮುಳುಗಿದ್ದರು ಎಂದರೆ ಆತನ ಪೋಷಕರು ಶಾಲೆಯನ್ನು ಬಿಡಿಸಿದ್ದರು, ಆತನ ಗಮನವೆಲ್ಲಾ ಚೆಸ್ ಮೇಲೆ ಮಾತ್ರವಿತ್ತು. ಆದರೆ ಬಹುತೇಕ ಮಕ್ಕಳಿಗೆ ಮತ್ತು ಪೋಷಕರಿಗೆ ಈ ರೀತಿಯ ನಿಖರತೆ ಇರುವುದಿಲ್ಲ. ಅವೆಲ್ಲವನ್ನೂ ಮಾಡುತ್ತಾ, ಶಿಕ್ಷಣದಲ್ಲೂ ಉತ್ತಮ ಅಂಕ ಗಳಿಸಬೇಕು ಎನ್ನುವುದು ಅವರ ಆಸೆ. ಇಷ್ಟೆಲ್ಲಾ ಸಾಧಿಸಲು ನಮ್ಮಿಂದ ಸಾಧ್ಯವೇ? ನಮ್ಮ ಮಗು ಅಷ್ಟು ಶಕ್ತವೇ? ಎನ್ನುವುದನ್ನು ಪೋಷಕರು ಪರಾಮರ್ಶಿಸುವುದು ಒಳ್ಳೆಯದು.

ಇನ್ನಷ್ಟು ಪೋಷಕರನ್ನು ನೋಡಿದ್ದೇನೆ. ಅವರು ತಮ್ಮ ಮಕ್ಕಳು ಆಲ್‌ರೌಂಡರ್ ಎಂದು ಕರೆದುಕೊಳ್ಳುವುದರಲ್ಲಿ ಬಹಳ ಖುಷಿಯನ್ನು ಕಾಣುತ್ತಾರೆ. ಈ ಆಲ್‌ರೌಂಡರ್ ಕಾನ್ಸೆಪ್ಟ್ ನನಗೆ ಇಲ್ಲಿಯವರೆಗೂ ಅರ್ಥವಾಗಿಲ್ಲ. ಯಾವು ದಕ್ಕೂ ಪೂರ್ಣವಾಗಿ ನ್ಯಾಯ ಒದಗಿಸದ ರೀತಿಯಿದು. ಕ್ರಿಕೆಟ್ ಆಟದಲ್ಲಿ ಮಾತ್ರ ಆಲ್ ರೌಂಡರ್ ಇರಬಹುದು. ನಿಜಜೀವನದಲ್ಲಿ ಎಲ್ಲವನ್ನೂ ಒಟ್ಟೊಟ್ಟಿಗೆ ನಿಭಾಯಿಸಿದವರ ಸಂಖ್ಯೆ ಎಷ್ಟಿರಬಹುದು? ಚೆನ್ನಾಗಿ ಓದಿ ಆ ನಂತರ ಬೇರೆ ವೃತ್ತಿಯಲ್ಲಿ ತೊಡಗಿಕೊಂಡವರು ಸಿಕ್ಕಬಹುದು. ಆದರೆ ಎರಡನ್ನೂ ಒಂದೇ ಸಮಯದಲ್ಲಿ ಸರಿಯಾಗಿ ಮಾಡುವ ಕ್ಷಮತೆ ಎಷ್ಟು ಮಕ್ಕಳಿಗೆ ಇರಲು ಸಾಧ್ಯ? ಅಷ್ಟು ಕ್ಷಮತೆ ಮಗುವಿಗೆ ಇದೆಯೇ ಎನ್ನುವುದನ್ನು ಪೋಷಕರು ತಿಳಿದುಕೊಳ್ಳಬೇಕು. ಕೊಹ್ಲಿ, ತೆಂಡೂಲ್ಕರ್ ಸಹಿತ ಬಹುತೇಕ ಕ್ರೀಡಾಪಟುಗಳು, ಅಥ್ಲೀಟ್‌ಗಳು ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಟ್ಟವರೇ, ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್ ಸಿಗಬಹುದು. ನಾನಿಲ್ಲಿ ಹೇಳುತ್ತಿರುವುದು ಮೆಜಾರಿಟಿ ಬಗ್ಗೆ, ಅಪವಾದಗಳ ಬಗ್ಗೆಯಲ್ಲ ಎನ್ನುವುದನ್ನು ಗಮನಿಸಬೇಕು.

ಇದಕ್ಕೆ ಪೂರಕವಾಗಿ ಒಂದು ಕಥೆಯಿದೆ. ರಾಜನೊಬ್ಬ ತನ್ನ ಮಗನನ್ನು ಗುರುವಿನ ಆಶ್ರಮಕ್ಕೆ ಸೇರಿಸಿ ಆತನನ್ನು ಬಹಳ ಕಡಿಮೆ ಸಮಯದಲ್ಲಿ ಸಕಲ ವಿದ್ಯಾಪಾ ರಂಗತನನ್ನಾಗಿಸಲು ಕೇಳುತ್ತಾನೆ. ಆಗ ಗುರು ಅತ್ಯಂತ ವಿನಯದಿಂದ ‘‘ಸಮಯ ಬೇಡುವ ಕಾರ್ಯವಿದು’’ ಎಂದು ಹೇಳುತ್ತಾರೆ. ರಾಜನಿಗೆ ಉತ್ತರ ರುಚಿಸುವುದಿಲ್ಲ, ಥೇಟ್ ಈಗಿನ ಪೋಷಕರಂತೆ! ವರ್ಷ ಬಿಟ್ಟು ಹೋದಾಗ ಕೂಡ ರಾಜನಿಗೆ ಮಗನ ಅಭಿವೃದ್ಧಿ ನೋಡಿ ಖುಷಿಯಾಗುವುದಿಲ್ಲ. ಆತ ಗುರುವನ್ನು ಮೂದಲಿಸುವ ರೀತಿಯಲ್ಲಿ ‘‘ಬೇಗ ಕಲಿಸುವ ಕ್ಷಮತೆ ನಿಮಗಿಲ್ಲ’’ ಎನ್ನುತ್ತಾನೆ. ಗುರು ಸಂಯಮ ಕಳೆದುಕೊಳ್ಳದೆ, ಹತ್ತಾರು ಮೊಲವನ್ನು ಆಟದ ಮೈದಾನದಲ್ಲಿ ಬಿಟ್ಟು ಎಲ್ಲವನ್ನೂ ಒಟ್ಟಿಗೆ ಹಿಡಿಯುವಂತೆ ರಾಜನಿಗೆ ಹೇಳುತ್ತಾರೆ. ಒಂದೊಂದು ದಿಕ್ಕಿನಲ್ಲಿ ಒಂದೊಂದು ಮೊಲ ಓಡುತ್ತಿರುತ್ತದೆ. ಅದನ್ನು ನೋಡಿದ ರಾಜ ‘‘ಇದು ಅಸಾಧ್ಯ ಒಂದೊಂದೂ ಬೇರೆ ಬೇರೆ ದಿಕ್ಕಿಗೆ ಓಡುತ್ತಿದೆ; ಎಲ್ಲವನ್ನೂ ಒಟ್ಟಿಗೆ ಹಿಡಿಯಲು ಹೇಗೆ ಸಾಧ್ಯ?’’ ಎನ್ನುತ್ತಾನೆ. ಆಗ ಗುರು ವಿನಮ್ರತೆಯಿಂದ, ‘‘ಮಹಾರಾಜಾ, ಸತ್ಯವಾದ ಮಾತನ್ನೇ ಹೇಳಿದಿರಿ, ನೀವು ಕೇಳುವ ಎಲ್ಲಾ ವಿದ್ಯೆಗಳು ಕೂಡ ಒಂದೊಂದು ಮೊಲದಂತೆ, ಎಲ್ಲವನ್ನೂ ಒಮ್ಮೆಲೇ ಕಲಿಯುವುದು ಮತ್ತು ಅದರ ಮೇಲೆ ಪ್ರಭುತ್ವ ಸಾಧಿಸುವುದು ಕಷ್ಟಸಾಧ್ಯ. ಕೋಟಿಗೊಬ್ಬರಿಗೆ ಸಾಧ್ಯವಾಗಬಹುದು; ಆದರೆ ಅದನ್ನೇ ನಾವು ಸಾಮಾನ್ಯ ಎನ್ನುವಂತೆ, ಎಲ್ಲರೂ ಮಾಡಲಿ ಎನ್ನುವಂತೆ ಬಿಂಬಿಸುವುದು ತಪ್ಪು’’ ಎಂದು ಹೇಳುತ್ತಾರೆ. ರಾಜನಿಗೆ ತನ್ನ ತಪ್ಪಿನ ಅರಿವಾಗುತ್ತದೆ ಎನ್ನುವುದರ ಮೂಲಕ ಕಥೆಯ ಅಂತ್ಯವಾಗುತ್ತದೆ. ಆದರೆ ಇವತ್ತಿನ ಪೋಷಕರಿಗೆ ಈ ಸತ್ಯ ಅರಿವಾಗುವುದು ಯಾವಾಗ?

ಸ್ಥಿತಿವಂತ ಪೋಷಕರಲ್ಲಿ, ಯಶಸ್ವಿ ಪೋಷಕರಲ್ಲಿ ಇನ್ನೊಂದು ಗುಣವಿದೆ. ತಾವೇನೋ ಇತರರಿಗಿಂತ, ಸಮಾ ಜಕ್ಕಿಂತ ಭಿನ್ನ ಎನ್ನುವುದು ಆ ಗುಣ. ಅದರ ಜತೆಗೆ ಮಕ್ಕಳು ಸೋಲುತ್ತಾರೆ ಎನ್ನುವುದನ್ನು ಇವರು ಸಹಿಸಲಾರರು. ಅವರ ಸರೀಕರೊಂದಿಗೆ ತಮ್ಮ ಮಗ/ಮಗಳು ಹೀಗೆ ಎಂದು ಹೇಳಿಕೊಂಡು ತಿರುಗಬೇಕಲ್ಲ! ಮಕ್ಕಳು ಕಡಿಮೆ ಅಂಕ ತೆಗೆದುಬಿಟ್ಟರೆ ಹೇಗೆ? ಹಣವಿದೆ, ಹೀಗಾಗಿ ಮಕ್ಕಳನ್ನು ಕೇವಲ ಶಿಕ್ಷಣಕ್ಕೆ ಸೀಮಿತಗೊಳಿಸುವುದು ಹೇಗೆ? ನಾವು ಸಮಾಜದ ಸಾಮಾನ್ಯರಂತೆ ಆಗುವುದಿಲ್ಲವೇ? ಎನ್ನುವ ದ್ವಂದ್ವ ಇವರದು. ಹೀಗಾಗಿ ಅವರ ಹುಚ್ಚಾಟಕ್ಕೆ ಬಲಿಯಾಗುವುದು ಮಕ್ಕಳು. ಈಜು, ಕರಾಟೆ, ಸಂಗೀತ, ನಾಟಕ, ಚೆಸ್, ಕ್ರಿಕೆಟ್, ಅಬಾಕಸ್ ಕ್ಲಾಸುಗಳಲ್ಲಿ ದಣಿದ ಮಕ್ಕಳು ಮನೆಗೆ ಬಂದು ಪುಸ್ತಕದಲ್ಲಿ ಮುಖ ಹುದುಗಿಸಿ ಮಲಗಿಬಿಡುತ್ತವೆ. ಅವು ಕೂಡ ಮನುಷ್ಯರಲ್ಲವೇ? ಅವಕ್ಕೂ ದಣಿವಾಗುತ್ತದೆಯಲ್ಲವೇ? ಮಕ್ಕಳು ಎಂದಾಕ್ಷಣ ಅವು ನಮ್ಮ ಕನಸುಗಳನ್ನು ನನಸು ಮಾಡುವ ಮಷಿನ್‌ಗಳಲ್ಲ. ಅವುಗಳ ಬೇಕು-ಬೇಡಗಳನ್ನು ನಾವು ಅರಿಯದೆ ನಮಗಿಷ್ಟ ಎಂತಲೋ, ಸಮಾಜದ ಜನರ ಎದುರಿಗೆ ಬೀಗಬೇಕು ಎನ್ನುವ ಕಾರಣಕ್ಕೋ ಅವರ ಮೇಲೆ ಹೇರಿಕೆ ಮಾಡುವುದು ತಪ್ಪು. ನೀವು ಹೇರಿಕೆ ಮಾಡಿದರು ಕೂಡ ನೀವು ಬಯಸಿದ ಫಲಿತಾಂಶ ಸಿಕ್ಕುವುದಿಲ್ಲ ಎನ್ನುವುದು ಮಾತ್ರ ಶತಃಸಿದ್ಧ.

ಮಗಳು ಅನನ್ಯಳ ಧ್ವನಿ ಕೇಳಿ ‘‘ಸಂಗೀತಕ್ಕೆ ಹಾಕಿ’’ ಎಂದವರ ಸಂಖ್ಯೆ, ‘‘ಮುಖಭಾವ ಚಂದವಿದೆ ಅವಳನ್ನು ನಾಟಕಕ್ಕೆ ಸೇರಿಸಿ’’ ಎಂದವರ ಸಂಖ್ಯೆ, ‘‘ಸುಮ್ಮನೆ ಕೂತು ಓದಿದರೆ ಆರೋಗ್ಯವಿರುವುದಿಲ್ಲ ಅವಳನ್ನು ಸ್ಪೋರ್ಟ್ಸ್‌ಗೆ ಸೇರಿಸಿ’’ ಎಂದವರ ಸಂಖ್ಯೆ ಲೆಕ್ಕಕ್ಕೆ ಇಡಲು ಹೋಗಲಿಲ್ಲ. ಅವರುಗಳು ಹೇಳಿದ್ದು ಕೇಳಲೂ ಇಲ್ಲ. ಮಗಳನ್ನು ನಿನಗೇನು ಇಷ್ಟ? ನಿನಗೇನು ಬೇಕು? ಎಂದು ಕೇಳಿದ್ದೆವು. ‘‘ಡ್ಯಾನ್ಸು, ನಾಟಕ, ಸಂಗೀತ ಇವೆಲ್ಲಾ ಬೇಡ, ಸ್ಪೋರ್ಟ್ಸ್ ಖಂಡಿತ ನನಗಲ್ಲ; ವಿದ್ಯಾಭಾಸ ನನ್ನ ಶಕ್ತಿ, ವಯಲಿನ್ ಇಷ್ಟ, ಗಣಿತ ಮತ್ತು ವಿಜ್ಞಾನ ಎಂದರೆ ಉಸಿರು’’ ಎಂದಳು. ಅವಳಿಷ್ಟಕ್ಕೆ ನಾವು ನೀರೆರೆಯುತ್ತ ಹೋದೆವು. ಸಮಾಜಕ್ಕೆ ಹೆದರಿ ನಾವು ಅವಳನ್ನು ಇಲ್ಲಸಲ್ಲದ ಕೋರ್ಸುಗಳಿಗೆ ಸೇರಿಸಲಿಲ್ಲ. ಎಲ್ಲರೂ ಹೀಗೆ ಮಾಡಬೇಕು ಅಂತಲ್ಲ, ಮಕ್ಕಳಿಗೆ ಏನು ಬೇಕು ಅದನ್ನು ಮಾಡಬೇಕು ಎನ್ನುವ ಅರ್ಥದಲ್ಲಿ ಹೇಳಿದ್ದು.

ಅನನ್ಯಳ ಜತೆಯಲ್ಲಿ ಓದುತ್ತಿದ್ದ ಮಕ್ಕಳಲ್ಲಿ ಬಹುತೇಕ ಮಕ್ಕಳು ಎಲ್ಲಾ ತರಗತಿಗಳಿಗೂ ಸೇರಿದ್ದರು. ಹತ್ತನೇ ತರಗತಿ ಬರುತ್ತಿದಂತೆ ಎಲ್ಲರೂ ಬಿಟ್ಟರು. ಇವತ್ತಿಗೆ ಒಂದು ಪ್ರತಿಶತ ಮಕ್ಕಳು ಕೂಡ ಬಾಲ್ಯದಲ್ಲಿ ಶುರುಮಾಡಿದ ಅಭ್ಯಾಸವನ್ನು ಮುಂದುವರಿಸುತ್ತಿಲ್ಲ. ಆದರೆ ಆ ಸಮಯದಲ್ಲಿ ಅತ್ತ ಪೋಷಕರು ಹಣವನ್ನು ಕಳೆದುಕೊಂಡರು, ಇತ್ತ ಮಕ್ಕಳು ಬಾಲ್ಯವನ್ನು!

‘ಮಕ್ಕಳು ನಮ್ಮ ಕನಸುಗಳನ್ನು ಪೂರೈಸಲು ಹುಟ್ಟಿದವರಲ್ಲ, ತಮ್ಮ ಕನಸುಗಳನ್ನು ಪೂರೈಸಿಕೊಳ್ಳಲು ಹುಟ್ಟಿದವರು’ ಎನ್ನುವ ಪರಿಜ್ಞಾನ ಪೋಷಕರಲ್ಲಿ ಬೆಳೆಯಲಿ. ಎಲ್ಲವನ್ನೂ ಕಲಿಯಬೇಕು ಎನ್ನುವ ಹುಚ್ಚಾಟಕ್ಕೆ ಚೂರಾ ದರೂ ತೆರೆ ಬೀಳಲಿ. ಬಾಲ್ಯದಲ್ಲಿ ಸಹಜವಾದ ಆಟಗಳನ್ನು ಅವರು ಆಡುವಂತಾಗಲಿ.

ಯಕ್ಷಪ್ರಶ್ನೆ
ಸುರೇಂದ್ರ ಪೈ, ಭಟ್ಕಳ

ಸಾರ್ವಜನಿಕ ಶೌಚಾಲಯದ ಗೋಳು ಕೇಳುವವರಾರು?

ಆರ್ಥಿಕತೆಯ ವಿಷಯದಲ್ಲಿ ಏರುಗತಿಯಲ್ಲಿ ಸಾಗುತ್ತಿರುವ ಭಾರತವು ಆರೋಗ್ಯ ಮತ್ತು ನೈರ್ಮಲ್ಯದ ಬಾಬತ್ತಿನಲ್ಲಿ ಮಾತ್ರ ದಿನೇ ದಿನೆ ಕುಸಿಯುತ್ತಿದೆ. ಕೃತಕ ಬುದ್ಧಿಮತ್ತೆಯ (ಎಐ) ವಲಯದಲ್ಲಿ ಅಗ್ರಸ್ಥಾನಕ್ಕೇರಲು ಬಯಸುತ್ತಿರುವ ಭಾರತದಲ್ಲಿ ಸಾರ್ವಜನಿಕ ಶೌಚಾಲಯಗಳು ಸಾಕಷ್ಟು ಸಂಖ್ಯೆಯಲ್ಲಿಲ್ಲದೆ ಜನರು ಪರದಾಡುತ್ತಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ. ಇದರ ಸತ್ಯಾಸತ್ಯತೆಯನ್ನು ತಿಳಿಯಲು ಸರಕಾರದ ವತಿಯಿಂದ ಯಾವುದೇ ಸಮಿತಿಯನ್ನು ರಚಿಸುವ ಅಗತ್ಯವಿಲ್ಲ, ಒಮ್ಮೆ ಹಾಗೇ ನಮ್ಮ ತಾಲೂಕು/ನಗರ ಪ್ರದೇಶವನ್ನು ಸುತ್ತಾಡಿ ಬಂದರೆ ಸಾಕು, ಸಾರ್ವಜನಿಕ ಶೌಚಾಲಯಗಳ ಅಲಭ್ಯತೆಯಿಂದಾಗಿ ಪರಿಸರ ಮಲಿನಗೊಳ್ಳುತ್ತಿರುವುದು ಕಣ್ಣು-ಮೂಗಿಗೆ ರಾಚುತ್ತದೆ!

ಜನಸಂಖ್ಯೆ ಹೆಚ್ಚಾಗುತ್ತಿದ್ದಂತೆ ಸಾರ್ವಜನಿಕ ಶೌಚಾಲಯಗಳ ಸಂಖ್ಯೆಯೂ ಜಾಸ್ತಿಯಾಗಬೇಕು. ಆದರೆ ದೆಹಲಿ, ಬೆಂಗಳೂರಿನಂಥ ಮಹಾನಗರಗಳು ಸೇರಿದಂತೆ ರಾಷ್ಟ್ರದ ಬಹುತೇಕ ನಗರ-ಪಟ್ಟಣ-ತಾಲೂಕು ಕೇಂದ್ರಗಳಲ್ಲಿ, ಪ್ರವಾಸಿ ತಾಣಗಳಲ್ಲಿ ಇಂಥ ಶೌಚಾಲಯಗಳ ಕೊರತೆ ತೀವ್ರವಾಗುತ್ತಿದೆ. ತಂತಮ್ಮ ಕೆಲಸಗಳಿಗಾಗಿ ಅಥವಾ ವಿಹಾರಕ್ಕಾಗಿ ಪರಸ್ಥಳಗಳಿಂದ ಇಲ್ಲಿಗೆ ಬರುವವರು, ನೈಸರ್ಗಿಕ ಕರೆಯನ್ನು ನಿಭಾಯಿಸಲು ಪರದಾಡುವಂತಾಗಿದೆ. ಇದು ಸರಕಾರವು ತಕ್ಷಣ ನಿವಾರಿಸಬೇಕಾದ ಮೂಲಭೂತ ಸಮಸ್ಯೆ. ಜನಸಂಖ್ಯೆಗೆ ತಕ್ಕಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದು ಯಾವುದೇ ಸರಕಾರದ ಪ್ರಾಥಮಿಕ ಕರ್ತವ್ಯವಾಗಬೇಕು. ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾದ ‘ಸ್ವಚ್ಛ ಭಾರತ ಅಭಿಯಾನ’ಕ್ಕೆ ಚಾಲನೆ ದಕ್ಕಿ 10 ವರ್ಷಗಳಾಗಿವೆ, ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ವಿಧಿಸಿದ ಗಡುವು ಮುಗಿದು 5 ವರ್ಷಗಳಾಗಿವೆ. ಆದರೆ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ. ಇತ್ತೀಚಿನ ವರದಿಗಳ ಪ್ರಕಾರ, ಭಾರತವು ನೈರ್ಮಲ್ಯದ ವಿಷಯಕ್ಕೆ ಸಂಬಂಧಿಸಿದಂತೆ ಬಿಕ್ಕಟ್ಟಿನತ್ತ ಸಾಗುತ್ತಿದೆ. ಸಾರ್ವಜನಿಕ ಶೌಚಾಲಯಗಳಲ್ಲಿ ಅಶುಚಿತ್ವ ಮತ್ತು ನಿರ್ವಹಣೆಯ ಕೊರತೆಯು ಪ್ರಮುಖ ಸಮಸ್ಯೆಯಾಗಿದೆ. ಶೇ. 76ಕ್ಕಿಂತ ಹೆಚ್ಚು ಶೌಚಾಲಯಗಳು ಕಳಪೆ ನಿರ್ವಹಣೆಯಿಂದಾಗಿ (ಅಂದರೆ ಸಮರ್ಪಕ ಬಾಗಿಲು, ಒಳಗಿನಿಂದ ಚಿಲಕಹಾಕುವ ವ್ಯವಸ್ಥೆ, ನೀರು ಮುಂತಾದವು ಇಲ್ಲದಿರುವಿಕೆ) ಬಳಕೆಗೆ ಯೋಗ್ಯವಾಗಿಲ್ಲ; ಕೊಳಕು, ದುರ್ವಾಸನೆ ಮತ್ತು ಸೋಂಕು ಹರಡುವ ಭೀತಿ ಇಲ್ಲೆಲ್ಲಾ ಮಾಮೂಲು. ಇದರಿಂದಾಗಿ ಸಾರ್ವಜನಿಕರು, ಅದರಲ್ಲೂ ನಿರ್ದಿಷ್ಟವಾಗಿ ಮಹಿಳೆಯರು ಮತ್ತು ವಿಕಲಚೇತನರು ಕಸಿವಿಸಿಗೆ ಒಳಗಾಗುತ್ತಿದ್ದಾರೆ.

ಶೌಚಾಲಯಗಳ ಕೊರತೆಯು ಕಾರ್ಯಕ್ಷೇತ್ರದ ಮನೋವಿಜ್ಞಾನದ ಮೇಲೆ ಪ್ರಭಾವವನ್ನು ಬೀರುತ್ತದೆ. ಶೌಚಾಲಯಕ್ಕೆ ಹೋಗುವುದನ್ನು ತಪ್ಪಿಸಲೆಂದೇ ಕೆಲವು ಮಹಿಳೆಯರು ನೀರು ಕುಡಿಯುವುದನ್ನು ಉದ್ದೇಶಪೂರ್ವಕವಾಗಿ ತಪ್ಪಿಸುವುದಿದೆ. ಇದರಿಂದಾಗಿ ಮೂತ್ರನಾಳದ ಸೋಂಕು ಮತ್ತು ನಿರ್ಜಲೀಕರಣದಂಥ ಆರೋಗ್ಯ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ‘ಸಿಲಿಕಾನ್ ಸಿಟಿ’ ಎಂದೇ ಕರೆಸಿಕೊಳ್ಳುವ ಮತ್ತು ದೇಶದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದೆನಿಸಿಕೊಂಡಿರುವ ಬೆಂಗಳೂರಿನಲ್ಲಿ ಜನಸಂಖ್ಯೆಯು ಅಂದಾಜು 1.4 ಕೋಟಿಯನ್ನು ಮುಟ್ಟಿದ್ದರೂ, ಸಾರ್ವಜನಿಕ ನೈರ್ಮಲ್ಯ ಸಂಬಂಧಿತ ಮೂಲಸೌಕರ್ಯಗಳಲ್ಲಿ ಇದು ಹಿಂದುಳಿದಿದೆ. ಅಂದರೆ, ಸ್ಥಳೀಕ ಜನರು ಮತ್ತು ಬೇರೆ ಕಡೆಗಳಿಂದ ವಲಸೆ ಬರುವವರ ಸಂಖ್ಯೆಗೆ ಅನುಗುಣವಾಗಿ ಸಾರ್ವಜನಿಕ ಶೌಚಾಲಯಗಳು ಈ ಮಹಾನಗರಿಯಲ್ಲಿಲ್ಲ. ‘ಸ್ಮಾರ್ಟ್ ಸಿಟಿ’ ಯೋಜನೆಯಡಿ ‘ಇ-ಟಾಯ್ಲೆಟ್’ಗಳನ್ನು ಪರಿಚಯಿಸಲಾಯಿತು; ಆದರೂ ಅವು ಕೂಡ ಸಮರ್ಪಕ ನಿರ್ವಹಣೆಯಿಲ್ಲದೆ ಹಾಳಾಗಿವೆ. ಸಂಚಾರಿ ಶೌಚಾಲಯಗಳಂತೂ ನಿಂತೇ ಹೋಗಿವೆ. ಶೇ.66ರಷ್ಟು ಶೌಚಾಲಯಗಳಲ್ಲಿ ಸೂಕ್ತವಾದ ಬೆಳಕಿನ ವ್ಯವಸ್ಥೆಯಿಲ್ಲದೆ ರಾತ್ರಿ ವೇಳೆಯಲ್ಲಿ ಮಹಿಳೆಯರು ಇವನ್ನು ಬಳಸುವುದು ದುಸ್ತರವಾಗಿದೆ, ಅಪಾಯಕಾರಿಯೂ ಆಗಿದೆ.

ರಾಜ್ಯದ ಮಿಕ್ಕ ನಗರ/ಪಟ್ಟಣಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ; ಬಸ್ ನಿಲ್ದಾಣಗಳಲ್ಲಿ ಸ್ವಚ್ಛವಾದ ಶೌಚಾಲಯಗಳಿಲ್ಲದೆ ಐದಾರು ತಾಸು ಕೂತು ಪ್ರಯಾಣಿಸಿಕೊಂಡು ಬರುವ ಜನರಿಗೆ ಬಸ್‌ನಿಂದ ಇಳಿದಾಕ್ಷಣ ದೇಹವನ್ನು ಹಗುರವಾಗಿಸಿಕೊಳ್ಳುವುದಕ್ಕೆ ಮಾರ್ಗೋಪಾಯವಿಲ್ಲ. ಶೌಚಾಲಯಗಳು ಒಂದೊಮ್ಮೆ ಇದ್ದರೂ ಗಬ್ಬೆದ್ದು ನಾರುತ್ತಿರುವ ಪರಿಸ್ಥಿತಿ ಬಹಳ ಕಡೆ ಕಾಣಬರುತ್ತದೆ. ಹೀಗಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿದೆ (ರಾಜ್ಯದ ಬಹುತೇಕ ಸರಕಾರಿ ಶಾಲೆಗಳ ಶೌಚಾಲಯಗಳ ಪರಿಸ್ಥಿತಿಯೂ ಹೀಗೇ ಆಗಿದೆ. ಈ ಕಾರಣದಿಂದ ಹೆಣ್ಣು ಮಕ್ಕಳು ಮುಜುಗರಕ್ಕೆ ಒಳಗಾಗಿ ಶಾಲೆಗೆ ಗೈರಾಗುವುದು ಅಥವಾ ಖಾಸಗಿ ಶಾಲೆಗೆ ಸೇರಿಕೊಳ್ಳುವುದು ಮಾಮೂಲಾಗಿದೆ). ನಿಯಮಗಳ ಪ್ರಕಾರ, ಬಸ್ ನಿಲ್ದಾಣಗಳಲ್ಲಿನ ಮೂತ್ರಾಲಯಗಳ ಬಳಕೆಯು ಉಚಿತವಾಗಿರಬೇಕು; ಆದರೆ ಇಲ್ಲಿಯೂ ಹಣವನ್ನು ವಸೂಲು ಮಾಡಲಾಗುತ್ತಿದೆ. ಆದರೆ ಕಲ್ಪಿಸಬೇಕಾದ ಅಗತ್ಯ ಮೂಲಸೌಕರ್ಯಗಳು ಮತ್ತು ಸ್ವಚ್ಛತೆಯನ್ನು ಮಾತ್ರ ಕೇಳಬೇಡಿ!

ಹಾಗೆಂದ ಮಾತ್ರಕ್ಕೆ ಎಲ್ಲವೂ ಸರಕಾರದ್ದೇ ಜವಾಬ್ದಾರಿ ಎಂದೇನಲ್ಲ; ಶೌಚಾಲಯಗಳು ಇಂಥ ದುಸ್ಥಿತಿಗೆ ತಲುಪುವುದಕ್ಕೆ ‘ನಾಗರಿಕ ಪ್ರಜ್ಞೆಯ ಕೊರತೆ’ಯ ಪಾಲೂ ಇದೆ. ಈ ಕುರಿತಾಗಿ ಅದೆಷ್ಟು ಜಾಗೃತಿ ಅಭಿಯಾನಗಳನ್ನು ಕೈಗೊಂಡರೂ ಕೆಲ ಜನರು ದಾರಿಗೆ ಬರುತ್ತಿಲ್ಲ. ಶೌಚಾಲಯಗಳಲ್ಲಿ ಮದ್ಯದ ಬಾಟಲಿ ಎಸೆಯುವ, ಗುಟ್ಕಾ ಜಗಿದು ಉಗಿಯುವ ಮಹಾನುಭಾವರು ಸಾಕಷ್ಟು ಇದ್ದಾರೆ. ಹೀಗಾಗಿ ಶೌಚಾಲಯಗಳು ‘ಕಸದಬುಟ್ಟಿ’ಯೇ ಆಗುತ್ತಿವೆ. ಅಕ್ಟೋಬರ್ 2ರಂದು ಕೈಯಲ್ಲಿ ಪೊರಕೆ ಹಿಡಿದು ಬೀದಿಗಿಳಿದು ಸ್ವಚ್ಛತೆಯ ನಾಟಕವಾಡಿ ಫೋಟೋಗಳಿಗೆ ಪೋಸು ಕೊಡುವವರು, ವರ್ಷದ ಮಿಕ್ಕ ದಿನಗಳಲ್ಲಿ ಈ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದಕ್ಕೆ ಏನನ್ನುವುದು?

(ಲೇಖಕರು ಶಿಕ್ಷಕರು)

ಇವರು ಸಂವಿಧಾನಕ್ಕಿಂತ ಮೇಲಲ್ಲ; ಜನಾದೇಶದ ಅಧಿಕಾರವೇ ಪರಮೋಚ್ಚ

ರಾಜತಂತ್ರ
ವೇಣುಗೋಪಾಲ್
vveditoped@gmail.com

ವಿಧಾನಸಭೆಯ ಅಧಿವೇಶನದ ಆರಂಭದಲ್ಲಿ ರಾಜ್ಯಪಾಲರ ಭಾಷಣವು ಅವರ ವೈಯಕ್ತಿಕ ಅಭಿಪ್ರಾಯವಲ್ಲ; ಅದು ಆಯ್ಕೆಯಾದ ಸರಕಾರದ ನೀತಿ ಮತ್ತು ಕಾರ್ಯಕ್ರಮಗಳ ಅಧಿಕೃತ ಘೋಷಣೆ. ಇತ್ತೀಚಿನ ದಿನಗಳಲ್ಲಿ ದಕ್ಷಿಣ ಭಾರತದ ಮೂರು ರಾಜ್ಯಗಳಲ್ಲಿ ನಡೆದ ಘಟನೆಗಳು ಭಾರತದ ಸಂವಿಧಾನಾತ್ಮಕ ವ್ಯವಸ್ಥೆಯ ಬಗ್ಗೆ ಮತ್ತೆ ಚರ್ಚೆಯನ್ನು ಹುಟ್ಟುಹಾಕಿವೆ. ತಮಿಳುನಾಡು, ಕೇರಳ ಮತ್ತು ಕರ್ನಾಟಕ ರಾಜ್ಯಗಳ ರಾಜ್ಯಪಾಲರು ವಿಧಾನಸಭೆಯ ಅಧಿವೇಶನ ಆರಂಭದಲ್ಲಿ ನೀಡಬೇಕಾದ ಪರಂಪರೆಯ ಭಾಷಣದ ಬಗ್ಗೆ ತೋರಿದ ನಡೆಯು ರಾಜಕೀಯ ಹಾಗೂ ಕಾನೂನು ವಲಯಗಳಲ್ಲಿ ಕ್ಷೋಭೆ ಉಂಟುಮಾಡಿದೆ

ಸಂಪ್ರದಾಯದಂತೆ, ವಿಧಾನಸಭೆಯ ಪ್ರತಿ ವರ್ಷದ ಮೊದಲ ಅಧಿವೇಶನದಲ್ಲಿ ಸರಕಾರ ತಯಾರಿಸಿದ ಭಾಷಣವನ್ನು ರಾಜ್ಯಪಾಲರು ಓದುತ್ತಾರೆ. ಈ ಭಾಷಣದಲ್ಲಿ ಸರಕಾರದ ನೀತಿಗಳು, ಯೋಜನೆಗಳು ಮತ್ತು ಮುಂದಿನ ಕಾರ್ಯಕ್ರಮಗಳ ಕುರಿತು ವಿವರಿಸಲಾಗುತ್ತದೆ. ಆದರೆ ಇತ್ತೀಚೆಗೆ ಈ ಮೂರು ರಾಜ್ಯಗಳಲ್ಲಿ ಈ ಸಂಪ್ರದಾಯದಿಂದ ಹೊರ ನಡೆದಿರುವುದು ಕಂಡುಬಂದಿದೆ.

ತಮಿಳುನಾಡಿನಲ್ಲಿ ರಾಜ್ಯಪಾಲರು ವಿಧಾನಸಭೆಯಲ್ಲಿ ಪೂರ್ಣ ಭಾಷಣವನ್ನು ಓದಲು ನಿರಾಕರಿಸಿದರು. ಕೇರಳದಲ್ಲಿ ರಾಜ್ಯಪಾಲರು ಭಾಷಣದ ಕೆಲವು ಪ್ರಮುಖ ಭಾಗಗಳನ್ನು ಬಿಟ್ಟುಬಿಟ್ಟರು. ಕರ್ನಾಟಕದಲ್ಲಿ ರಾಜ್ಯಪಾಲರು ಕೇವಲ ಎರಡು ಸಾಲುಗಳನ್ನು ಹೇಳಿ ಸಭೆಯಿಂದ ಹೊರ ನಡೆದರು. ಈ ಘಟನೆಗಳು ಸಾಮಾನ್ಯ ರಾಜಕೀಯ ವಿವಾದ ಮಾತ್ರವಲ್ಲ; ಅವು ಸಂವಿಧಾನಾತ್ಮಕ ಸಂಪ್ರದಾಯಗಳ ಮಹತ್ವವನ್ನು ಮತ್ತೆ ಪ್ರಶ್ನೆಗೆ ಒಳಪಡಿಸಿವೆ.

ಭಾಷಣದ ಸಾಂವಿಧಾನಿಕ ಅರ್ಥ

ಇಲ್ಲಿ ಹುಟ್ಟುವ ಮುಖ್ಯ ಪ್ರಶ್ನೆಗಳು ಏನೆಂದರೆ, ರಾಜ್ಯಪಾಲರ ಪಾತ್ರವೇನು? ಜನರಿಂದ ಆಯ್ಕೆಯಾದ ಸರಕಾರವು ತಯಾರಿಸಿದ ಭಾಷಣವನ್ನು ಬದಲಾಯಿಸಲು ಅಥವಾ ಓದಲು ನಿರಾಕರಿಸಲು ಅವರು ಅಧಿಕಾರ ಹೊಂದಿದ್ದಾರೆಯೇ?

ಸಂವಿಧಾನಾತ್ಮಕವಾಗಿ ನೋಡಿದರೆ, ವಿಧಾನಸಭೆಯ ಅಧಿವೇಶನದ ಆರಂಭದಲ್ಲಿ ರಾಜ್ಯಪಾಲರು ನೀಡುವ ಭಾಷಣವು ಅವರ ವೈಯಕ್ತಿಕ ಅಭಿಪ್ರಾಯವಲ್ಲ. ಅದು ಜನರಿಂದ ಆಯ್ಕೆಯಾದ ಸರಕಾರದ ನೀತಿಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳ ಘೋಷಣೆ ಮಾತ್ರ. ಆದ್ದರಿಂದ ಆ ಭಾಷಣವನ್ನು ಬದಲಿಸುವುದು ಅಥವಾ ಓದಲು ನಿರಾಕರಿಸುವುದು ಸಂವಿಧಾನಾತ್ಮಕ ಸಂಪ್ರದಾಯಕ್ಕೆ ವಿರುದ್ಧವಾಗುತ್ತದೆ.

ಸಂವಿಧಾನ ನಿರ್ಧರಿಸಿರುವ ರಾಜ್ಯಪಾಲರ ಪಾತ್ರ

ಭಾರತದ ಸಂವಿಧಾನವು ರಾಜ್ಯಪಾಲರ ಸ್ಥಾನಮಾನ ಮತ್ತು ಅಧಿಕಾರಗಳನ್ನು ಸ್ಪಷ್ಟವಾಗಿ ನಿರ್ಧರಿಸಿದೆ. ಸಂವಿಧಾನದ ಹಲವು ವಿಧಿಗಳ ಪ್ರಕಾರ ರಾಜ್ಯಪಾಲರು ಓರ್ವ ಸಾಂವಿಧಾನಿಕ ಮುಖ್ಯಸ್ಥರು.

ಆದರೆ ಕಾರ್ಯನಿರ್ವಹಣೆಯ ನಿಜವಾದ ಅಧಿಕಾರವು ಜನರಿಂದ ಆಯ್ಕೆಯಾದ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟದ ಕೈಯಲ್ಲಿದೆ. ಅಂದರೆ ರಾಜ್ಯಪಾಲರು ಸ್ವತಂತ್ರ ಕಾರ್ಯನಿರ್ವಾಹಕ ಅಧಿಕಾರಿಯಾಗಿಲ್ಲ; ಅವರು ಸಚಿವ ಸಂಪುಟದ ಸಲಹೆಯ ಮೇರೆಗೆ ಕಾರ್ಯನಿರ್ವಹಿಸಬೇಕಾಗುತ್ತದೆ.

ಸಂವಿಧಾನದ ವಿಧಿ 176ರ ಪ್ರಕಾರ ವಿಧಾನಸಭೆಯ ಸಾಮಾನ್ಯ ಚುನಾವಣೆಯ ನಂತರ ನಡೆಯುವ ಮೊದಲ ಅಧಿವೇಶನದಲ್ಲಿ ಹಾಗೂ ಪ್ರತಿ ವರ್ಷದ ಮೊದಲ ಅಧಿವೇಶನದಲ್ಲಿ ರಾಜ್ಯಪಾಲರು ವಿಧಾನಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವುದು ಕಡ್ಡಾಯವಾಗಿದೆ. ಅಧಿವೇಶನವನ್ನು ಏಕೆ ಕರೆಯಲಾಗಿದೆ ಎಂಬುದನ್ನು ಈ ಭಾಷಣವು ವಿವರಿಸುತ್ತದೆ. ನಂತರ ಈ ಭಾಷಣದ ವಿಷಯಗಳ ಕುರಿತು ವಿಧಾನಸಭೆಯಲ್ಲಿ ಚರ್ಚೆ ನಡೆಯುವುದು ಪ್ರಜಾಪ್ರಭುತ್ವದ ಪ್ರಕ್ರಿಯೆಯ ಭಾಗವಾಗಿದೆ.

ಸಚಿವ ಸಂಪುಟದ ಸಲಹೆ

ವಿಧಾನಸಭೆಯನ್ನು ಉದ್ದೇಶಿಸಿ ಭಾಷಣ ಮಾಡಲು ಅಥವಾ ಸಂದೇಶ ಕಳುಹಿಸಲು ಸಂವಿಧಾನದ ವಿಧಿ 175 ರಾಜ್ಯಪಾಲರಿಗೆ ಅವಕಾಶ ನೀಡುತ್ತದೆ. ಆದರೆ ಈ ಅಧಿಕಾರವನ್ನು ಅವರು ತಮ್ಮ ವೈಯಕ್ತಿಕ ಅಭಿಪ್ರಾಯದ ಪ್ರಕಟಣೆಗೆ ಬಳಸುವಂತಿಲ್ಲ. ರಾಜ್ಯಪಾಲರ ಭಾಷಣವು ಸರಕಾರದ ನೀತಿಗಳನ್ನು ಪ್ರತಿಬಿಂಬಿಸುವುದೇ ಹೊರತು ಅವರ ವೈಯಕ್ತಿಕ ದೃಷ್ಟಿಕೋನವನ್ನು ಅಲ್ಲ.

ಸಂವಿಧಾನಾತ್ಮಕ ಸಂಪ್ರದಾಯದ ಪ್ರಕಾರ ರಾಷ್ಟ್ರಪತಿ ಅಥವಾ ರಾಜ್ಯಪಾಲರು ಸರಕಾರ ತಯಾರಿಸಿದ ಭಾಷಣದ ಪಠ್ಯದಿಂದ ವಿಚಲಿತರಾಗಬಾರದು. ಏಕೆಂದರೆ ಅದು ಜನರಿಂದ ಆಯ್ಕೆಯಾದ ಸರಕಾರದ ಅಧಿಕೃತ ನಿ ೀತಿ ಘೋಷಣೆ ಆಗಿರುತ್ತದೆ. ಅದರಲ್ಲಿ ಬದಲಾವಣೆ ಮಾಡಿದರೆ ಅಥವಾ ಅದನ್ನು ಓದಲು ನಿರಾಕರಿಸಿದರೆ ಸರಕಾರಕ್ಕೆ ರಾಜಕೀಯವಾಗಿ ಸಂಕಷ್ಟಕರ ಪರಿಸ್ಥಿತಿ ಉಂಟಾಗಬಹುದು

ಕೋರ್ಟ್ ತೀರ್ಪುಗಳು ಹೇಳುವ ಮಿತಿ

ಈ ವಿಷಯದಲ್ಲಿ ಭಾರತದ ಸುಪ್ರೀಂ ಕೋರ್ಟ್ ಹಲವು ತೀರ್ಪುಗಳ ಮೂಲಕ ರಾಜ್ಯಪಾಲರ ಅಧಿಕಾರದ ಮಿತಿಯನ್ನು ಸ್ಪಷ್ಟಪಡಿಸಿದೆ. ವಿಶೇಷವಾಗಿ 2016ರಲ್ಲಿ ನಡೆದ ನಾಬಮ್ ರೇಬಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಹತ್ವದ ಅಭಿಪ್ರಾಯ ನೀಡಿತು. ಸಂವಿಧಾನದ ವಿಧಿ 163(1) ಪ್ರಕಾರ ರಾಜ್ಯಪಾಲರು ಮುಖ್ಯಮಂತ್ರಿಗಳ ನೇತೃತ್ವದ ಸಚಿವ ಸಂಪುಟದ ಸಲಹೆಯ ಮೇರೆಗೆ ಕಾರ್ಯನಿರ್ವಹಿಸಬೇಕು ಎಂದು ನ್ಯಾಯಾಲಯ ಸ್ಪಷ್ಟಪಡಿಸಿತು. ಸಂವಿಧಾನವು ವಿಶೇಷವಾಗಿ ಅವಕಾಶ ನೀಡಿರುವ ಕೆಲವೇ ಸಂದರ್ಭಗಳನ್ನು ಹೊರತುಪಡಿಸಿದರೆ ರಾಜ್ಯಪಾಲರಿಗೆ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇಲ್ಲ. ಸಾಮಾನ್ಯವಾಗಿ ಅವರು ಸಚಿವ ಸಂಪುಟದ ಸಲಹೆಯನ್ನು ಅನುಸರಿಸಲೇಬೇಕು ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ.

ನ್ಯಾಯಾಲಯ ಮತ್ತೊಂದು ಮಹತ್ವದ ಎಚ್ಚರಿಕೆಯನ್ನು ನೀಡಿದೆ. ರಾಜ್ಯಪಾಲರು ರಾಜ್ಯದಲ್ಲಿ ಸಮಾನಾಂತರ ಆಡಳಿತ ನಿರ್ಮಿಸುವಂತಾಗಬಾರದು. ಜನರಿಂದ ಆಯ್ಕೆಯಾದ ಸರಕಾರದ ಮೇಲೆ ಮತ್ತೊಂದು ಅಧಿಕಾರ ಕೇಂದ್ರ ನಿರ್ಮಾಣವಾದರೆ ಅದು ಸಂಸದೀಯ ಪ್ರಜಾಪ್ರಭುತ್ವದ ಮೂಲಭೂತ ತತ್ವಗಳಿಗೆ ವಿರುದ್ಧವಾಗುತ್ತದೆ.

ವಸಾಹತು ಕಾಲದ ಪರಂಪರೆ

ಇತಿಹಾಸಾತ್ಮಕವಾಗಿ ನೋಡಿದರೆ, ರಾಜ್ಯಪಾಲರ ಅಸ್ತಿತ್ವವು ವಸಾಹತುಶಾಹಿ ಆಡಳಿತದ ಕಾಲದಿಂದ ಬಂದ ವ್ಯವಸ್ಥೆಯಾಗಿದೆ. ಬ್ರಿಟಿಷರ ಆಡಳಿತದಲ್ಲಿ ರಾಜ್ಯಪಾಲರನ್ನು ಲಂಡನ್‌ನಿಂದ ನೇಮಕ ಮಾಡಲಾಗುತ್ತಿತ್ತು. ಇಂದು ಅವರನ್ನು ಕೇಂದ್ರ ಸರಕಾರವು ದೆಹಲಿಯಿಂದ ನೇಮಕ ಮಾಡುತ್ತದೆ. ಆದರೂ ಪ್ರಜಾಪ್ರಭುತ್ವದ ಮೂಲತತ್ವ ಒಂದೇ- ಅದೆಂದರೆ, ನಿಜವಾದ ಅಧಿಕಾರವು ಜನರಿಂದ ಆಯ್ಕೆಯಾದ ಸರಕಾರದ ಕೈಯಲ್ಲಿರಬೇಕು ಎಂಬುದು .

ರಾಜ್ಯಪಾಲರು ಮತ್ತು ರಾಜ್ಯ ಸರಕಾರಗಳ ನಡುವೆ ಘರ್ಷಣೆಗಳು ಹೊಸದೇನಲ್ಲ. 1960ರ ದಶಕದಲ್ಲಿಯೇ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಸಿ.ಎನ್. ಅಣ್ಣಾದುರೈ ಅವರು ವ್ಯಂಗ್ಯವಾಗಿ ಹೇಳಿದ ಈ ಮಾತು ಇಂದಿಗೂ ಪ್ರಸಿದ್ಧವಾಗಿದೆ: ‘ಒಂದು ಮೇಕೆಗೆ ಗಡ್ಡ ಏಕೆ ಬೇಕು? ಹಾಗೆಯೇ ಒಂದು ದೇಶಕ್ಕೆ ರಾಜ್ಯಪಾಲರು ಏಕೆ ಬೇಕು?’. ಈ ಮಾತು ರಾಜ್ಯಪಾಲರ ಸ್ಥಾನಮಾನದ ಕುರಿತು ಸಮಾಜದಲ್ಲಿ ನಡೆಯುತ್ತಿರುವ ಚರ್ಚೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಸಂವಿಧಾನಾತ್ಮಕ ವ್ಯವಸ್ಥೆಯ ಮೂಲ ಸಂದೇಶ ಸ್ಪಷ್ಟವಾಗಿದೆ- ಜನರಿಂದ ಆಯ್ಕೆಯಾದ ಸರಕಾರವೇ ಆಡಳಿತದ ನಿಜವಾದ ಕೇಂದ್ರ. ರಾಜ್ಯಪಾಲರು ಆ ವ್ಯವಸ್ಥೆಯ ಗೌರವಾನ್ವಿತ, ಆದರೆ ಸಾಂವಿಧಾನಿಕ ಮಿತಿಗಳೊಳಗಿನ ಪಾತ್ರವನ್ನು ಮಾತ್ರ ನಿರ್ವಹಿಸಬೇಕು.

ಒಂದು ಸಾಂವಿಧಾನಿಕ ಸಂಸ್ಥೆಯು ಸಂವಿಧಾನದ ಚೌಕಟ್ಟನ್ನು ಮೀರಿದರೆ, ಅದು ಇಡೀ ದೇಶದಲ್ಲಿ ಅರಾಜಕತೆಯ ಆರಂಭ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಸಾವಿರಾರು ವರ್ಷಗಳಿಂದ ವಿವಿಧ ಸಂಸ್ಕೃತಿಗಳು, ಮಹಾನ್ ವ್ಯಕ್ತಿಗಳ ಅನೇಕ ಕೊಡುಗೆಗಳಿಂದಾಗಿ ನಮ್ಮ ದೇಶವು ವೈವಿಧ್ಯದ ಅತ್ಯುತ್ತಮ ಅನನ್ಯ ದೇಶವಾಗಿದೆ. ಆದ್ದರಿಂದ ಒಕ್ಕೂಟ ರಚನೆಯು ನಮ್ಮ ಆಡಳಿತದ ಆತ್ಮವಾಗಿದೆ. ಒಕ್ಕೂಟ ರಚನೆಯು ವೈಯಕ್ತಿಕ ವೈವಿಧ್ಯಮಯ ಹಿತಾಸಕ್ತಿಗಳನ್ನು ಗೌರವಿಸುತ್ತದೆ. ಒಂದು ರಾಜ್ಯ ಸರಕಾರವು ಆಯಾ ರಾಜ್ಯದ ಜನರ ನಿಜವಾದ ಹಿತಾಸಕ್ತಿಗಳೇನು ಎಂಬುದನ್ನು ಚೆನ್ನಾಗಿ ತಿಳಿದಿರುತ್ತದೆ. ಕೆಲವು ರಾಜ್ಯಪಾಲರ ಇತ್ತೀಚಿನ ವರ್ತನೆ ಈ ದೇಶದ ಅಗತ್ಯ ಒಕ್ಕೂಟ ರಚನೆಯನ್ನು ಅಣಕಿಸುತ್ತಿದೆ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಗಳಿಗಿಂತ ಸಂವಿಧಾನವೇ ಶ್ರೇಷ್ಠ. ಅದರ ಆತ್ಮವನ್ನು ಗೌರವಿಸುವುದು ಪ್ರತಿಯೊಂದು ಸಂವಿಧಾನಾತ್ಮಕ ಸಂಸ್ಥೆಯ ಜವಾಬ್ದಾರಿಯಾಗಿದೆ.

(ಲೇಖಕರು ವಕೀಲರು)

ಪ್ರತಿಸ್ಪಂದನ
ಸಾಮಗ ದತ್ತಾತ್ರಿ, ಬೆಂಗಳೂರು

ಕಾರಣ ಇದಿರಬಹುದೇ?

ಕೆ.ವಿ.ಚಂದ್ರಮೌಳಿ ಅವರ ‘ಇಂಧನ ಸುಧಾರಣೆಗಳ ಬುನಾದಿ: ಯುಪಿಎ ಕಾಲದ ನೀತಿಗಳ ವಾಸ್ತವ ವಿಶ್ಲೇಷಣೆ’ ಶೀರ್ಷಿಕೆಯ ಲೇಖನವು (ಮಾ.16) ನಿಜವಾಗಿಯೂ ಸಮತೂಕದ ಬರವಣಿಗೆ ಎನ್ನಲಡ್ಡಿಯಿಲ್ಲ. ಹಿಂದಿನ ಯುಪಿಎ ಸರಕಾರ ಮತ್ತು ಇಂದಿನ ಎನ್‌ಡಿಎ ಸರಕಾರ, ಈ ಎರಡರ ಅವಧಿಯಲ್ಲಿ ಇಂಧನ ನೀತಿಯು ನಿರ್ವಹಣೆಯಾದ ಬಗೆಯನ್ನು ಲೇಖಕರು ‘ಸುದೂರದಲ್ಲಿ’ ನಿಂತು ವಿಶ್ಲೇಷಿಸಿದ್ದಾರೆ.

ಲೇಖನದ ಒಂದು ಕಡೆಯಲ್ಲಿ ಈ ಮಾತು ಬಂದಿದೆ: 2014ರಿಂದ 2020ರವರೆಗೆ ಪೆಟ್ರೋಲ್ ಮೇಲಿನ ಕೇಂದ್ರದ ತೆರಿಗೆ ಸುಮಾರು ಮೂರು ಪಟ್ಟು ಮತ್ತು ಡೀಸೆಲ್ ಮೇಲಿನ ತೆರಿಗೆ ಸುಮಾರು ಎಂಟು ಪಟ್ಟು ಹೆಚ್ಚಳ ಕಂಡಿತು. ಇದೇ ಅವಧಿಯಲ್ಲಿ ಜಾಗತಿಕ ಕಚ್ಚಾತೈಲದ ಬೆಲೆಗಳು 2014ರ ನಂತರ ಹಲವು ವರ್ಷಗಳಲ್ಲಿ ಬ್ಯಾರೆಲ್‌ಗೆ 100 ಡಾಲರ್ ಮಟ್ಟದಿಂದ 40-60 ಡಾಲರ್ ಮಟ್ಟಕ್ಕೆ ಇಳಿದಿದ್ದವು.

ಸಿದ್ಧಾಂತದ ಪ್ರಕಾರ ಇಂಥ ಪರಿಸ್ಥಿತಿಯಲ್ಲಿ ಗ್ರಾಹಕರಿಗೆ ಇಂಧನ ಬೆಲೆಯಲ್ಲಿ ಹೆಚ್ಚಿನ ಕಡಿತ ದೊರೆಯಬೇಕಾಗಿತ್ತು. ಆದರೆ ತೆರಿಗೆ ಹೆಚ್ಚಳದ ಕಾರಣದಿಂದ ಅಂಥ ಲಾಭ ಗ್ರಾಹಕರಿಗೆ ಸಂಪೂರ್ಣವಾಗಿ ತಲುಪಲಿಲ್ಲ ಎಂಬ ಆರ್ಥಿಕ ತಜ್ಞರ ಅಭಿಪ್ರಾಯಗಳು ವ್ಯಕ್ತವಾಗಿವೆ. ಹೌದು, ಈ ಕುರಿತು ವಿಪಕ್ಷಗಳೂ ಟೀಕೆ ಮಾಡಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಗಮನಾರ್ಹವಾಗಿ ಇಳಿದಾಗ ತೆರಿಗೆಯ ಸ್ತರದಲ್ಲಿ ಇಳಿಕೆ ಮಾಡದಿರುವುದಕ್ಕೆ, ಬಹುಶಃ ಯುಪಿಎ ಸರಕಾರದ ತೈಲ ಬಾಂಡ್‌ಗಳ (ಸುಮಾರು 1.48 ಲಕ್ಷ ಕೋಟಿ ರುಪಾಯಿ) ಸಾಲವನ್ನು ಬಡ್ಡಿ ರಹಿತ ಮರುಪಾವತಿ (3.23 ಲಕ್ಷ ಕೋಟಿ ರು.) ಮಾಡಬೇಕಾದ ಅನಿವಾರ್ಯತೆಯು ಕಾರಣವಿರಬೇಕು, ಅಲ್ಲವೇ? ಅಂದಿನ ಪರಿಸ್ಥಿತಿಗೆ ಅನುಗುಣವಾಗಿ ಯುಪಿಎ ಅವಧಿಯ ಸಬ್ಸಿಡಿ ನೀತಿ ವಿಹಿತವಾಗಿತ್ತು, ಜನರು ಆಗ ಹೊರೆಯಿಂದ ಮುಕ್ತರಾದರು. ಆದರೆ ಸಾಲದ ಹೊರೆಯನ್ನು ನಿರ್ವಹಿಸಬೇಕಾದ ಹೊಣೆಗಾರಿಕೆ ಮುಂದಿನ ಸರಕಾರದ್ದಾಯಿತು (ಯಾವ ಪಕ್ಷದ್ದು ಎನ್ನುವುದು ಮುಖ್ಯವಲ್ಲ). ಹಾಗಾಗಿ ಕಚ್ಚಾತೈಲದ ಬೆಲೆ ಇಳಿದಾಗಲೂ ಅದರ ಲಾಭವನ್ನು ಜನತೆಗೆ ವರ್ಗಾಯಿಸದೆ ಇದ್ದುದ್ದಕ್ಕೆ, ಸಾಲ ಮರುಪಾವತಿಯ ಹೊಣೆಗಾರಿಕೆಯ ಕಷ್ಟವೇ ಕಾರಣವಿರಬೇಕು, ಅಲ್ಲವೇ?

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:61

ಸಮಾಚಾರ ಸಣ್ಣದಲ್ಲ

ಮೋದಿ ನಿಂದನೆ: ಅಯ್ಯರ್ ವಿರುದ್ಧ ಜೈಪುರ ಎಫ್ಐಆರ್

ಜೈಪುರ: ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಕಾಂಗ್ರೆಸ್‌ನ ಹಿರಿಯ ನಾಯಕ, ಕೇಂದ್ರದ ಮಾಜಿ ಸಚಿವ

ಮಣಿಶಂಕರ್ ಅಯ್ಯರ್ ವಿರುದ್ಧ ಜೈಪುರದಲ್ಲಿ ಸೋಮವಾರ ಎಫ್ಐಆರ್ ದಾಖಲಾಗಿದೆ. ಭಾರತದ ಭವಿಷ್ಯ: ನಕಲಿ ಹಿಂದೂ ಧರ್ಮ/ಜಾತ್ಯತೀತ ಭಾರತ ವಿಷಯವಾಗಿ ವಿಶೇಷ ಉಪನ್ಯಾಸ ನೀಡಲು ಶನಿವಾರ ಜೈಪುರಕ್ಕೆ ಬಂದಿದ್ದ ಅಯ್ಯರ್, 2017ರಲ್ಲಿ ಪ್ರಧಾನಿ ಬಗ್ಗೆ ತಾವು ನೀಡಿದ್ದ ವಿವಾದಾತ್ಮಕ ಹೇಳಿಕೆ ವಿಚಾರವಾಗಿ ಸ್ಪಷ್ಟನೆ ನೀಡಲು ಯತ್ನಿಸಿದರು. ತಮ್ಮ ಹೇಳಿಕೆ ಮೋದಿ ಅವರ ಪಾತ್ರದ ಕುರಿತಾಗಿತ್ತೇ ಹೊರತು ಅವರ ಜಾತಿ ಬಗ್ಗೆ ಆಗಿರಲಿಲ್ಲ. ಆದರೆ, ನನ್ನ ಹೇಳಿಕೆ ತಿರುಚಲಾಯಿತು. ಮೋದಿಯನ್ನು ಕೆಳಜಾತಿಯವರೆಂದು ಹೇಳಿರಲಿಲ್ಲ. ಅವರ ನಡವಳಿಕೆ ಉಲ್ಲೇಖಿಸಿ ಕೆಳವರ್ಗದ ವ್ಯಕ್ತಿ ಎಂಬ ಪದ ಬಳಸಿದ್ದೆ ಅಷ್ಟೇ ಎಂದರು. ಶನಿವಾರದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಬಗ್ಗೆ ಅಯ್ಯರ್ ಅವಹೇಳನಕಾರಿ ಭಾಷೆ ಬಳಸಿದ್ದಾರೆಂದು ಆರೋಪಿಸಿ ಸ್ಥಳೀಯ ನಿವಾಸಿ ಬಾಬುಲಾಲ್ ತನ್ವರ್ ಎಂಬವರು ಗಾಂಧಿನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಕಾರ್ಯಕ್ರಮದ ವಿಡಿಯೊ ಜಾಲತಾಣದಲ್ಲಿ ಪ್ರಕಟವಾದ ಬಳಿಕ 2017ರ ವಿವಾದ ಮತ್ತೆ ತೆರೆದುಕೊಂಡಂತಾಗಿದೆ. ಬಿಜೆಪಿ ಕಾರ್ಯಕರ್ತರು ಜೈಪುರ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಅಯ್ಯರ್ ವಿರುದ್ಧ ಘೋಷಣೆ ಕೂಗಿದ್ದಾರೆ. ಅಯ್ಯರ್ ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದ್ದಾರೆ.

ಭಾರತೀಯರ ವಾಪಸ್: ಅರ್ಮೇನಿಯಕ್ಕೆ ವಂದನೆ

ದೆಹಲಿ: ಪಶ್ಚಿಮ ಏಷ್ಯಾ ಸಂಘರ್ಷದ ಮಧ್ಯೆಯೇ ಇರಾನ್ ದೇಶದಿಂದ 550 ಮತ್ತು ಇತರೆ ಗಲ್ಫ್ ದೇಶಗಳಿಂದ 20 ಸಾವಿರಕ್ಕೂ ಅಧಿಕ ಭಾರತೀಯರನ್ನು ದೇಶಕ್ಕೆ ವಾಪಸ್ ಕರೆತರಲು ಅರ್ಮೇನಿಯ ದೇಶದ ಆಡಳಿತ ದೊಡ್ಡ ಮಟ್ಟದಲ್ಲಿ ಸಹಾಯ ಮಾಡಿದೆ. ಅದಕ್ಕಾಗಿ ಅರ್ಮೇನಿಯ ಸರಕಾರಕ್ಕೆ ಭಾರತ ಧನ್ಯವಾದ ಸಲ್ಲಿಸುತ್ತದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಸೋಮವಾರ ಹೇಳಿದ್ದಾರೆ. ವಿವಿಧ ದೇಶಗಳಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಭಾರತದ ನಾಗರಿಕರಿಗೆ ಸಹಾಯ ಮಾಡುವುದನ್ನು ಕೇಂದ್ರ ಸರಕಾರ ಚುರುಕುಗೊಳಿಸಿದೆ. ಪರಿಣಾಮವಾಗಿ ಇರಾನ್‌ನಲ್ಲಿ ಸಂಕಷ್ಟದಲ್ಲಿದ್ದ 550 ಭಾರತೀಯ ಪ್ರಜೆಗಳನ್ನು ಅರ್ಮೇನಿಯಕ್ಕೆ ತಲುಪುವಂತೆ ಮಾಡಿ ಅಲ್ಲಿಂದ ವಿಮಾನದಲ್ಲಿ ಕರೆ ತರಲಾಗಿದೆ. ರಸ್ತೆ ಮಾರ್ಗದಲ್ಲಿ ಭಾರತೀಯರ ದೇಶ ಪ್ರವೇಶಕ್ಕೆ ಗಡಿ ಭಾಗದಲ್ಲಿ ಅರ್ಮೇನಿಯ ಅನುವು ಮಾಡಿಕೊಟ್ಟಿದೆ. ಅಲ್ಲಿನ ಸರಕಾರಕ್ಕೆ ಮತ್ತು ಆ ದೇಶದ ಅಧಿಕಾರಿಗಳಿಗೆ ಧನ್ಯವಾದ ಅರ್ಪಿಸುವೆ ಎಂದು ಸಚಿವ ಜೈಶಂಕರ್ ಹೇಳಿದ್ದಾರೆ. ಕಠಿಣ ಪರಿಸ್ಥಿತಿಯ ನಡುವೆಯೂ ಇರಾನ್ ರಾಜಧಾನಿ ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಪೂರ್ಣವಾಗಿ ಕಾರ್ಯ ನಿರ್ವಹಿಸುತ್ತಿದೆ. ರಾಜಧಾನಿಯಿಂದ ದೂರ ಪ್ರದೇಶ ಗಳಲ್ಲಿರುವ ಭಾರತೀಯ ವಿದ್ಯಾರ್ಥಿಗಳನ್ನು ಇರಾನ್‌ನ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ನೆರವಾಗಿದೆ ಎಂದು ರಾಯಭಾರ ಕಚೇರಿ ವಕ್ತಾರರು ತಿಳಿಸಿದ್ದಾರೆ.

ಎಪ್‌ಸ್ಟೀನ್ ನಂಟು: ಮಾನಹಾನಿ ದಾವೆ

ದೆಹಲಿ: ಅಮೆರಿಕದ ವಿವಾದಿತ ವ್ಯಕ್ತಿ ಜೆಫ್ರಿ ಎಪ್‌ಸ್ಟೀನ್‌ರ ಕ್ರಿಮಿನಲ್ ಚಟುವಟಿಕೆಗಳ ಜತೆಗೆ ತಮಗೆ ನಂಟು ಕಲ್ಪಿಸುವ ಮೂಲಕ ಮಾನಹಾನಿ ಮಾಡಿದ್ದಕ್ಕಾಗಿ ಹಲವು ವ್ಯಕ್ತಿಗಳು ಮತ್ತು ಜಾಲತಾಣಗಳ ವಿರುದ್ಧ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪುತ್ರಿ ಹಿಮಾಯನಿ ಪುರಿ ಅವರು ದೆಹಲಿ ಹೈಕೋರ್ಟ್‌ನಲ್ಲಿ 10 ಕೋಟಿ ರು.ಗಳ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಅಲ್ಲದೇ ತಮ್ಮ ವಿರುದ್ಧವಾದ ವಿಚಾರಗಳನ್ನು ಮಾಧ್ಯಮ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸದಂತೆ ಶಾಶ್ವತ ತಡೆಯಾಜ್ಞೆ ನೀಡುವಂತೆಯೂ ನ್ಯಾಯಾಲಯವನ್ನು ಕೋರಿದ್ದಾರೆ.

ಸುಳ್ಳು ಸುದ್ದಿ ಹರಡಿದ 19 ಭಾರತೀಯರ ಸೆರೆ

ಅಬುಧಾಬಿ: ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧಕ್ಕೆ ಸಂಬಂಧಿಸಿದಂತೆ ಸುಳ್ಳು ಸುದ್ದಿಗಳು, ತಪ್ಪು ಮಾಹಿತಿಗಳನ್ನು ಹಂಚಿಕೊಂಡ ಆರೋಪದಡಿ 19 ಭಾರತೀಯರು ಸೇರಿದಂತೆ ಒಟ್ಟು 35 ಮಂದಿಯನ್ನು ಯುಎಇ ಪೊಲೀಸರು ಬಂಧಿಸಿದ್ದಾರೆ. ಕೃತಕ ಬುದ್ಧಿಮತ್ತೆ(ಎ.ಐ) ತಂತ್ರಜ್ಞಾನದ ಮೂಲಕ ನಕಲಿ ವಿಡಿಯೊಗಳು, ಸುಳ್ಳು ಸುದ್ದಿಗಳು, ಬೇರೆಲ್ಲೋ ನಡೆದ ಘಟನೆಗಳನ್ನು ಇರಾನ್ ಮತ್ತು ನೆರೆಹೊರೆ ದೇಶಗಳಲ್ಲೇ ನಡೆದಿರುವಂತೆ ಬಿಂಬಿಸುವ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಆರೋಪಿಗಳು ಹಂಚಿಕೊಂಡಿದ್ದರೆ ಎಂದು ಪ್ರಕರಣ ದಾಖಲಿಸಲಾಗಿದೆ.

{ ಅಬ್ಬಾಸ್ ಅರಾಘ್ಚಿ }
ಇರಾನ್ ವಿದೇಶಾಂಗ ಸಚಿವ

ಹಾರ್ಮುಜ್ ಜಲಸಂಧಿಯನ್ನು ಅಮೆರಿಕ ಮತ್ತು ಇಸ್ರೇಲ್‌ನಂತಹ ಶತ್ರು ರಾಷ್ಟ್ರಗಳಿಗೆ ಹಾಗೂ ಈ ಎರಡೂ ದೇಶಗಳಿಗೆ ನೆರವಾಗುವ ಯೂರೋಪ್ ಒಕ್ಕೂಟದ ದೇಶಗಳು ಮತ್ತು ನೆರೆಯ ಗಲ್ಫ್ ದೇಶಗಳ ಪಾಲಿಗೆ ಮಾತ್ರ ಮುಚ್ಚಲಾಗಿದೆ. ಉಳಿದಂತೆ ಬೇರೆ ದೇಶಗಳಿಗೆ ತೆರೆದಿಡಲಾಗಿದೆ. ಇರಾನ್ ಮೇಲೆ ದಾಳಿ ಮಾಡುವ ಯುದ್ಧ ನೌಕೆಗಳಿಗಂತೂ ಪ್ರವೇಶ ನಿಷಿದ್ಧ.

80,800 ಮೆಟ್ರಿಕ್ ಟನ್ ಕಚ್ಚಾತೈಲ ಹೊತ್ತು ಸಾಗುತ್ತಿರುವ ಜಗ್ ಲಾಡ್ಕಿ ನೌಕೆ । ಭಾನುವಾರ ಬೆಳಗ್ಗೆ 10.30ಕ್ಕೆ ಯುಎಇ ಬಂದರಿನಿಂದ ಸಂಚಾರ ಆರಂಭ । ಮಂಗಳವಾರ ಬೆಳಗ್ಗೆ 9.30ಕ್ಕೆ ಮುಂದ್ರಾ ಬಂದರು ಸೇರುವ ನಿರೀಕ್ಷೆ

ಯುಎಇಯಿಂದ ಭಾರತಕ್ಕಿಂದು ಬರಲಿದೆ ಜಗ್‌ಲಾಡ್ಕಿ ತೈಲ ನೌಕೆ

ದೆಹಲಿ: ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧ ಸೋಮವಾರ 17ನೇ ದಿನಕ್ಕೆ ಕಾಲಿರಿಸಿದ್ದು, ಯುದ್ಧದ ತೀವ್ರತೆಯೇನೂ ತಗ್ಗಿಲ್ಲ. ಜಾಗತಿಕ ಕಚ್ಚಾತೈಲ-ಅನಿಲ ಸರಬರಾಜು ಮಾರುಕಟ್ಟೆಗೆ ದೊಡ್ಡ ಪೆಟ್ಟು ಕೊಟ್ಟಿರುವ ಇರಾನ್ ಹಾರ್ಮುಜ್ ಜಲಸಂಧಿ ಬಿಕ್ಕಟ್ಟೂ ಪರಿಹಾರವಾಗಿಲ್ಲ, ಕಚ್ಚಾತೈಲಕ್ಕಾಗಿ ಎಲ್ಲಾ ದೇಶಗಳಲ್ಲೂ ಹಾಹಾಕಾರ ಎದ್ದಿದೆ, ತೈಲ ಬೆಲೆಯೂ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದೆ.

ಇಂಥ ಕಠಿಣ ಪರಿಸ್ಥಿತಿಯ ಮಧ್ಯೆಯೇ, 80,800 ಮೆಟ್ರಿಕ್ ಟನ್ ಕಚ್ಚಾತೈಲ ಹೊತ್ತ 16 ವರ್ಷಗಳಷ್ಟು ಹಳೆಯದಾದ ಬೃಹತ್ ತೈಲ ಸಾಗಣೆ ನೌಕೆಯು ಭಾರತದತ್ತ ಧಾವಿಸಿ ಬರುತ್ತಿದೆ. ಇದರೊಂದಿಗೆ ಹಾರ್ಮುಜ್ ಜಲಸಂಧಿ ಮಾರ್ಗವಾಗಿ ಮೊದಲ ಕಚ್ಚಾತೈಲ ನೌಕೆ ಹಾಗೂ ಎಲ್‌ಪಿಜಿ ಸೇರಿದಂತೆ 3ನೆಯ ಇಂಧನ ನೌಕೆ ಭಾರತಕ್ಕೆ ಬರುವಂತಾಗಿದೆ.

ಇರಾನ್‌ನ ನೆರೆಯ ದೇಶ ಯುನೈಟೆಡ್ ಅರಬ್ ಎಮಿರೇಟ್ (ಯುಎಇ)ನಿಂದ ಭಾರತದತ್ತ ಹೊರಟಿರುವ 'ಜಗ್ ಲಾಡ್ಕಿ' ಎಂಬ ಬೃಹತ್ ತೈಲ ಸಾಗಣೆ ನೌಕೆ ಸರಾಗವಾಗಿ ಹಾರ್ಮುಜ್ ಜಲಸಂಧಿಯನ್ನು ಭಾನುವಾರ ದಾಟಿದ್ದು ಭಾರತದತ್ತ ಗಂಟೆಗೆ 14.2 ನಾಟಿಕಲ್ ಕಿಮೀ ವೇಗದಲ್ಲಿ ಪ್ರಯಾಣ ಬೆಳೆಸಿದೆ.

'ಯುಎಇ'ಯ ಫ್ಯುಜೈರಾಹ್ ಆಯಿಲ್ ಟರ್ಮಿನಲ್‌ನಲ್ಲಿ ಶನಿವಾರ ಮುರ್ಬನ್ ಕಚ್ಚಾತೈಲ ಲೋಡ್ ಮಾಡಿಸಿಕೊಂಡಿರುವ 'ಜಗ್ ಲಾಡ್ಕಿ' ತೈಲ ಸಾಗಣೆ ನೌಕೆ ಶನಿವಾರವೇ ಹೊರಡಲು ಆಗಲಿಲ್ಲ, ಕಾರಣ, ಶನಿವಾರ ನೌಕೆಗೆ ಕಚ್ಚಾತೈಲ ಲೋಡಿಂಗ್ ವೇಳೆಯಲ್ಲೇ ಇರಾನ್ ವಾಯುಪಡೆಯಿಂದ ಯುಎಇಯ ವಿವಿಧ ಬಂದರುಗಳ ಮೇಲೆ, ಬಾಂಬ್ ದಾಳಿಯಾಯಿತು. ಈ ಬಾಂಬ್ ದಾಳಿಯಿಂದ ಜಗ್ ಲಾಡ್ಕಿ ತೈಲ ಸಾಗಣೆ ನೌಕೆ ಸ್ವಲ್ಪದರಲ್ಲಿ ಪಾರಾಗಿದೆ. ಸ್ವಲ್ಪವೇ ವ್ಯತ್ಯಾಸವಾಗಿದ್ದರೂ 2010ರಲ್ಲಿ ನಿರ್ಮಿತವಾದ ಬೃಹತ್ ನೌಕೆಯೇ ಇರುತ್ತಿರಲಿಲ್ಲ. 80,800 ಟನ್ ಕಚ್ಚಾತೈಲ ಸಮೇತ ಭಸ್ಮವಾಗಿರುತ್ತಿತ್ತು. ಕಷ್ಟ ಕಾಲದಲ್ಲಿ ಭಾರತಕ್ಕೆ ಬರಬೇಕಿದ್ದ ತೈಲವೂ ಸಿಗುತ್ತಿರಲಿಲ್ಲ.

ಭಾನುವಾರ ಬೆಳಗ್ಗೆ 10.30ಕ್ಕೆ ಯುಎಇ ಬಂದರಿನಿಂದ ಪ್ರಯಾಣ ಆರಂಭಿಸಿದ ಜಗ್ ಲಾಡ್ಕಿ ತೈಲ ನೌಕೆ ಹಾರ್ಮುಜ್ ಜಲಸಂಧಿಯನ್ನು ಸರಾಗವಾಗಿ ದಾಟಿಕೊಂಡು ಸೋಮವಾರ ಮಧ್ಯಾಹ್ನದ ವೇಳೆಗೆ ಅರಬ್ಬಿ ಸಮುದ್ರದಲ್ಲಿ ಸಂಚಾರ ಮಾಡುತ್ತಿದೆ. ಅಂದಾಜಿನ ಪ್ರಕಾರ ಮಂಗಳವಾರ ಬೆಳಗ್ಗೆ 9.30ರ ವೇಳೆಗೆ ಗುಜರಾತ್ ರಾಜ್ಯದ ಮುಂದ್ರಾ ಬಂದರನ್ನು ಜಗ್ ಲಾಡ್ಕಿ ತೈಲ ಸಾಗಣೆ ನೌಕೆ ಸೇರಿಕೊಳ್ಳಲಿದೆ ಎನ್ನಲಾಗಿದೆ.



ಜಗ್ ಲಾಡ್ಕಿ ತೈಲ ಸಾಗಣೆ ನೌಕೆಯ ವಿಶೇಷತೆ

- ಫೆ.26ರಂದು ಚೆನ್ನೈನ ಬಂದರಿನಿಂದ ಯುಎಇಯತ್ತ ಹೊರಟ ಜಗ್ ಲಾಡ್ಕಿ
- 4 ದಿನಕ್ಕೆ ಯುಎಇ ತಲುಪಿದರೂ ಯುದ್ಧದ ಕಾರಣ ವಾಪಸ್ ಬರಲಾಗದ ಸ್ಥಿತಿ
- ಇರಾನ್ ವಿದೇಶಾಂಗ ಸಚಿವ ಅರಾಘ್ಚಿ ಜತೆ ಸಚಿವ ಜೈಶಂಕರ್ ದೂರವಾಣಿ ಮಾತುಕತೆ
- ಜಗ್ ಲಾಡ್ಕಿ ನೌಕೆ ತೈಲ ತುಂಬಿಕೊಂಡು ಹಾರ್ಮುಜ್ ಜಲಸಂಧಿ ದಾಟಲು ಅನುಮತಿ
- 'ಯುಎಇ'ಯ ಫ್ಯುಜೈರಾಹ್ ಆಯಿಲ್ ಟರ್ಮಿನಲ್‌ನಲ್ಲಿ ಮುರ್ಬನ್ ಕಚ್ಚಾತೈಲ ಲೋಡ್
- ಶನಿವಾರ ತೈಲ ಲೋಡಿಂಗ್ ವೇಳೆ ಇರಾನ್‌ನ ಬಾಂಬ್ ದಾಳಿ-ಸ್ವಲ್ಪದರಲ್ಲಿ ನೌಕೆ ಪಾರು
- ಸೋಮವಾರ ಮಧ್ಯಾಹ್ನ ಅರಬ್ಬಿ ಸಮುದ್ರದಲ್ಲಿ ಗಂಟೆಗೆ 14.2 ಕಿಮೀ ವೇಗದ ಸಂಚಾರ
- 16 ವರ್ಷ ಹಳೆಯ ತೈಲ ನೌಕೆ ಐಎಂಒ 9461764ರ ಉದ್ದ 274 ಮೀ. ಎತ್ತರ 50 ಮೀ.

ಭಾರತ-ಯುಎಇ-ಇರಾನ್ ನಡುವಿನ ಸಂಬಂಧ

ಕೆಲ ವರ್ಷಗಳಿಂದ ಭಾರತ-ಯುಎಇ ಸಂಬಂಧ ಹೊಸ ಎತ್ತರಕ್ಕೆ ಏರಿ ಬಹಳ ಸದೃಢವಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಯುಎಇ ಅಧ್ಯಕ್ಷ, ದುಬೈನ ರಾಜಕುಮಾರ ಶೇಕ್ ಮೊಹಮ್ಮದ್ ಬಿನ್ ಝೂಯೆದ್ ಅಲ್ ನಹ್ಯಾನ್ ಅವರ ನಡುವಿನ ಸ್ನೇಹ ಸಂಬಂಧ ಬಹಳ ಗಾಢವಾಗಿದೆ. ಇನ್ನೊಂದೆಡೆ ಸಚಿವ ಜೈಶಂಕರ್ ಅವರೂ ಇರಾನ್-ಯುಎಇ ವಿದೇಶಾಂಗ ಸಚಿವರ ಜತೆ ಉತ್ತಮ ಸಂಪರ್ಕ ಸಾಧಿಸಿಕೊಂಡಿದ್ದಾರೆ. ಹಾಗಾಗಿ ಇಂಥ ಸಂಘರ್ಷದ ಸಮಯದಲ್ಲೂ ಭಾರತಕ್ಕೆ ಕಚ್ಚಾತೈಲ ಕಳುಹಿಸಿಕೊಡಲು ಯುಎಇ ಮುಂದಾಗಿದೆ. ಜತೆಗೆ ಇರಾನ್ ಕೂಡಾ ಭಾರತದ ತೈಲ-ಅನಿಲ ನೌಕೆಗಳು ಹಾರ್ಮುಜ್ ಜಲಸಂಧಿಯನ್ನು ಸರಾಗ ದಾಟಿಕೊಂಡು ಹೋಗಲು ಅವಕಾಶ ಮಾಡಿಕೊಟ್ಟಿದೆ. 'ಇರಾನ್ ಜತೆ ಯಾವುದೇ ಮುಚ್ಚುಮರೆ ಮಾತುಕತೆಯಾಗಿಲ್ಲ, ಒಳ ಒಪ್ಪಂದಗಳೂ ನಡೆದಿಲ್ಲ. ನೇರವಾಗಿಯೇ ಮಾತನಾಡಲಾಗಿದೆ. ಹಾಗಾಗಿ ಅದು ಫಲ ನೀಡಿದೆ. ಇರಾನ್ ವಿದೇಶಾಂಗ ಸಚಿವ ಅರಾಘ್ಚಿ ಅವರ ಜತೆ ದೂರವಾಣಿಯಲ್ಲಿ ಮಾತನಾಡಿ, ಭಾರತದಲ್ಲಿನ ಎಲ್‌ಪಿಜಿ ಕೊರತೆ, ಕಚ್ಚಾತೈಲದ ಅಗತ್ಯವನ್ನು ಮನವರಿಕೆ ಮಾಡಿಕೊಡಲಾಗಿದೆ. ಅವರೂ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಭಾರತದ ಧ್ವಜವಿರುವ ಎಲ್‌ಪಿಜಿ ಮತ್ತು ಕಚ್ಚಾತೈಲದ ಒಟ್ಟು 3 ನೌಕೆಗಳು ಈವರೆಗೆ ಹಾರ್ಮುಜ್ ಜಲಸಂಧಿಯನ್ನು ಸುಲಭವಾಗಿ ದಾಟಲು ಅವಕಾಶ ಮಾಡಿಕೊಟ್ಟಿದ್ದಾರೆ' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಪತ್ರಿಕಾ ಸಂದರ್ಶನವೊಂದರಲ್ಲಿ ಸೋಮವಾರ ಹೇಳಿದ್ದಾರೆ.



ವಿಶಿಷ್ಟ ವಿದೇಶಾಂಗ ನೀತಿಯ ಫಲ

ಹಾರ್ಮುಜ್ ಜಲಸಂಧಿ ಬೇರೆಲ್ಲಾ ದೇಶಗಳ ಕಚ್ಚಾತೈಲ ಸಾಗಣೆ ನೌಕೆಗಳ ಪಾಲಿಗೆ ಬಾಗಿಲು ಹಾಕಿದ್ದರೂ ಭಾರತದ ವಾಣಿಜ್ಯ ನೌಕೆಗಳ ಮಟ್ಟಿಗೆ ಬಾಗಿಲು ತೆರೆದುಕೊಳ್ಳುತ್ತಿದೆ. ಇರಾನ್ ದೇಶದ ಆಡಳಿತಗಾರರು ಭಾರತ



ಸರಕಾರದ ಮೇಲಿಟ್ಟಿರುವ ವಿಶ್ವಾಸದ ಕಾರಣದಿಂದಾಗಿ ಎರಡು ದಿನಗಳ ಅವಧಿಯಲ್ಲೇ 92,700 ಟನ್ ಎಲ್‌ಪಿಜಿ ತುಂಬಿಕೊಂಡು 2 ಅನಿಲ ಸಾಗಣೆ ನೌಕೆಗಳು ಮತ್ತು 80,800 ಮೆಟ್ರಿಕ್ ಟನ್ ಕಚ್ಚಾತೈಲ ತುಂಬಿದ 1 ಬೃಹತ್ ನೌಕೆ ಭಾರತಕ್ಕೆ ಬಂದು ಸೇರಿದ್ದು, ದೇಶದಲ್ಲಿನ ಇಂಧನ ತೈಲ ಮತ್ತು ಅಡುಗೆ ಅನಿಲ ಕೊರತೆ ಸಮಸ್ಯೆಯನ್ನು ಪರಿಹರಿಸಿವೆ. ಇದೆಲ್ಲವೂ ಸಾಧ್ಯವಾಗಿದ್ದು ಭಾರತದ 'ವಸುದೈವ ಕುಟುಂಬಕಂ' ಎಂಬ ತತ್ವದ ವಿಶಿಷ್ಟ ವಿದೇಶಾಂಗ ನೀತಿ ಮತ್ತು ಜಾಗತಿಕ ರಾಜತಾಂತ್ರಿಕ ಕ್ಷೇತ್ರದಲ್ಲಿ ಬಲು ಭಿನ್ನವಾಗಿ ನಿಲ್ಲುವ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ವಿವಿಧ ದೇಶಗಳಲ್ಲಿನ ಸಂಪರ್ಕದ ಕೊಂಡಿಯಿಂದ ಎಂಬುದು ಗಮನಾರ್ಹ. ವಿಶ್ವದ ಅತ್ಯಂತ ಸೂಕ್ಷ್ಮ ಮತ್ತು ಸಂಘರ್ಷಮಯ ಜಲಮಾರ್ಗವೆನಿಸಿಕೊಂಡಿರುವ ಹಾರ್ಮುಜ್ ಜಲಸಂಧಿಯಲ್ಲಿ ತೈಲ-ಅನಿಲ ನೌಕೆಗಳನ್ನು ಸುರಕ್ಷಿತವಾಗಿ ಸಾಗಿಸುವುದು ಈಗಿನ ಇರಾನ್-ಅಮೆರಿಕ ಯುದ್ಧ ಸಂದರ್ಭದಲ್ಲಿ ಅಸಾಧ್ಯವಾಗಿದೆ. ಅನೇಕ ರಾಷ್ಟ್ರಗಳು ಈ ಮಾರ್ಗದಲ್ಲಿ ತೈಲ ನೌಕೆಗಳನ್ನು ಕೊಂಡೊಯ್ಯಲಾಗದೇ ಪರಿತಪಿಸುತ್ತಿವೆ. ಆದರೆ, ಭಾರತದ ವಿದೇಶಾಂಗ ಸಚಿವಾಲಯ ಗಲ್ಫ್ ದೇಶಗಳೊಂದಿಗೆ ಹೊಂದಿರುವ ಸದೃಢ ಬಾಂಧವ್ಯ-ಸ್ನೇಹಮಯ ನಡೆ ಬೇರೆಯವರಿಗೆ ಕಷ್ಟದ್ದಾಗಿರುವ ಈ ಕೆಲಸವನ್ನು ಸುಲಭವಾಗಿಸಿದೆ.

ಟ್ರಂಪ್ ರಾಜತಾಂತ್ರಿಕ ನಡೆಗೆ ಹಿನ್ನಡೆ

ಹಾರ್ಮುಜ್ ಕಾವಲಿಗೆ ಯುದ್ಧನೌಕೆ ಕಳುಹಿಸಲ್ಲ

ವಾಷಿಂಗ್ಟನ್: ಇರಾನ್ ತನ್ನ ಕಾಲಬುಡದಲ್ಲೇ ಇರುವ ಹಾರ್ಮುಜ್ ಜಲಸಂಧಿಯಲ್ಲಿ ಭಾರತ-ಚೀನಾ ಹೊರತಾಗಿ ಬೇರೆ ದೇಶಗಳ ಸರಕು ಸಾಗಣೆ ನೌಕೆಗಳ ಸಂಚಾರಕ್ಕೆ ನಿರ್ಬಂಧ ವಿಧಿಸಿರುವುದು ಜಾಗತಿಕ ತೈಲ ಮಾರುಕಟ್ಟೆ ಮೇಲೆ ತೀವ್ರ ಸ್ವರೂಪದ ಪರಿಣಾಮ ಬೀರಿದೆ. ಏಕೆಂದರೆ ಈ ಜಲಸಂಧಿಯಲ್ಲಿ ವಿಶ್ವದ ತೈಲಸಾಗಣೆಯ ಐದನೇ ಒಂದು ಭಾಗದಷ್ಟು ಕಚ್ಚಾತೈಲ ನಿತ್ಯ ಸಾಗಣೆಯಾಗುತ್ತದೆ.

ಇದೇ ಕಾರಣಕ್ಕಾಗಿ ಇರಾನ್ ವಿರುದ್ಧವನ್ನು ಕೊನೆಗೊಳಿಸುವಂತೆ ಅಮೆರಿಕ-ಇಸ್ರೇಲ್ ಮೇಲೆ ವಿಶ್ವದ ಹಲವು ದೇಶಗಳಿಂದ ನೈತಿಕ ಒತ್ತಡ ಹೆಚ್ಚುತ್ತಿದೆ.

ಅದರಿಂದ ತಪ್ಪಿಸಿಕೊಳ್ಳುವ ಮಾರ್ಗವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹಾರ್ಮುಜ್ ಜಲಸಂಧಿ ಕೇವಲ ಇರಾನ್‌ಗೆ ಸೇರಿದ್ದಲ್ಲ. ಜಲಸಂಧಿಯಲ್ಲಿ ಸಂಚರಿಸುವ ನೌಕೆಗಳ ದೇಶಗಳಿಗೂ ಸೇರಿದ್ದು ಎಂದು ಪ್ರತಿಪಾದಿಸಿದ್ದಾರೆ. ಜಲಸಂಧಿಯನ್ನು ಇರಾನ್ ಹಿಡಿತದಿಂದ ಬಿಡಿಸಿ ಎಲ್ಲಾ ದೇಶಗಳ ಸರಕು ಸಾಗಣೆ ನೌಕೆಗಳೂ ಸರಾಗ ಸಂಚರಿಸುವಂತೆ ಮಾಡಲು ಯೋಜಿಸಿದ್ದಾರೆ. ಆ ದಿಶೆಯಲ್ಲಿ 7 ಪ್ರಮುಖ ದೇಶಗಳಿಗೆ ಯುದ್ಧ ಹಡಗುಗಳನ್ನು ಹಾರ್ಮುಜ್ ಜಲಸಂಧಿಗೆ ಕಳುಹಿಸಿಕೊಡುವಂತೆ ಒತ್ತಾಯಿಸಿದ್ದರು. ಆದರೆ 2 ದೇಶಗಳಿಂದ ನಕಾರಾತ್ಮಕ ಪ್ರತಿಕ್ರಿಯೆ ಬಂದಿದೆ. ಟ್ರಂಪ್‌ಗೆ ರಾಜತಾಂತ್ರಿಕತೆಗೆ ಹಿನ್ನಡೆಯಾಗಿದೆ ಎಂದೇ ವಿಶ್ಲೇಷಣೆ ಮಾಡಲಾಗಿದೆ.

ಹಾರ್ಮುಜ್ ಜಲಸಂಧಿ ತಮಗೂ ಸೇರಿದ್ದಾಗಿದೆ ಎಂದುಕೊಂಡೇ ತೈಲ ಅವಲಂಬಿತ ದೇಶಗಳು ರಕ್ಷಣೆ ಮಾಡಲು ಮುಂದಾಗಬೇಕು ಎಂದು ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯ, ಬ್ರಿಟನ್ ಸೇರಿದಂತೆ 7 ದೇಶಗಳಿಗೆ ಹೇಳಿದ ಟ್ರಂಪ್, ಯುದ್ಧನೌಕೆ ಕಳುಹಿಸಲು ಸೂಚಿಸಿದ್ದರು. ಆದರೆ ಟ್ರಂಪ್ ಮಾತಿಗೆ ಆಸ್ಟ್ರೇಲಿಯ ಮಣಿದಿಲ್ಲ. ನೌಕೆ ಕಳುಹಿಸಲ್ಲ ಎಂದು ಸಚಿವೆ ಕ್ಯಾಥರೀನ್ ಕಿಂಗ್ ಹೇಳಿದ್ದಾರೆ. ಹಾರ್ಮುಜ್ ಜಲಸಂಧಿ ಎಷ್ಟು ಮುಖ್ಯ ಎಂಬುದು ಗೊತ್ತು. ಆದರೆ ಯುದ್ಧ ನೌಕೆ ಕಳುಹಿಸುವ ಯೋಜನೆ ಇಲ್ಲ ಎಂದು ಎಬಿಸಿ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ. ಬದಲಾಗಿ ಆಸ್ಟ್ರೇಲಿಯದಿಂದ ಯುಎಇಗೆ ಯುದ್ಧ ವಿಮಾನಗಳನ್ನು ಕಳುಹಿಸಿಕೊಡಲಾಗುವುದು ಎಂದಿದ್ದಾರೆ.

ನಿರ್ಧಾರ ತೆಗೆದುಕೊಳ್ಳುವ ಮೊದಲು ಎಚ್ಚರಿಕೆಯಿಂದ ಪರಿಶೀಲಿಸಲಾಗುವುದು. ಜಪಾನಿನ ಕಾನೂನು ಚೌಕಟ್ಟಿನೊಳಗೆ ನಿರ್ಧರಿಸಲಾಗುವುದು ಎಂದು ಜಪಾನ್ ಅಧ್ಯಕ್ಷರ ಕಚೇರಿ ಪ್ರತಿಕ್ರಿಯಿಸಿದೆ. ವಾಷಿಂಗ್ಟನ್ ಜತೆ ಈ ವಿಚಾರವಾಗಿ ಸಮಾಲೋಚನೆ ನಡೆಸಲಾಗುವುದು ಎಂದು ಹೇಳಿರುವ ದಕ್ಷಿಣ ಕೊರಿಯ, ಈವರೆಗೂ ಸ್ಪಷ್ಟ ನಿರ್ಧಾರ ತೆಗೆದುಕೊಂಡಿಲ್ಲ.

ವಾಷಿಂಗ್ಟನ್‌ನಲ್ಲಿರುವ ಚೀನಾ ರಾಯಭಾರ ಕಚೇರಿ ವಕ್ತಾರರು, ಈ ಯುದ್ಧ ತಕ್ಷಣ ನಿಲ್ಲಬೇಕು ಎಂಬುದೇ ಚೀನಾ ನಿಲುವಾಗಿದೆ. ಪಶ್ಚಿಮ ಏಷ್ಯಾ ವಲಯದಲ್ಲಿ ಸ್ಥಿರತೆಯಿದ್ದರೆ ಇಂಧನ ಪೂರೈಕೆಗೆ ಅಡ್ಡಿ ಇರುವುದಿಲ್ಲ. ಇದನ್ನು ಖಚಿತಪಡಿಸಿಕೊಳ್ಳುವುದು ಎಲ್ಲಾ ದೇಶಗಳ ಜವಾಬ್ದಾರಿ ಎಂದಿದ್ದಾರೆ.

ಬ್ರಿಟನ್ ಸ್ಪಂದನೆ

ಯುನೈಟೆಡ್ ಕಿಂಗ್ಡಂ ಮಾತ್ರ ಟ್ರಂಪ್ ಕರೆಗೆ ಓಗೊಟ್ಟಂತಿದೆ. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ರಾಜತಾಂತ್ರಿಕ ಮಾರ್ಗ ಅನುಸರಿಸಿದ್ದು, ಸರಕು ಸಾಗಣೆಗಿರುವ ಅಡಚಣೆ ನಿವಾರಣೆ ಬಹಳ ಮುಖ್ಯ. ಜಲಸಂಧಿ ತೆರೆಸುವ ಅಗತ್ಯದ ಬಗ್ಗೆ ಟ್ರಂಪ್ ಜತೆ ಚರ್ಚಿಸುವೆ ಎಂದಿದ್ದಾರೆಂದು ಡೌನಿಂಗ್ ಸ್ಟ್ರೀಟ್ ತಿಳಿಸಿದೆ. ಜತೆಗೆ ಫ್ರಾನ್ಸ್ ಮತ್ತಿತರ ಕೆಲ ದೇಶಗಳಷ್ಟೇ ಟ್ರಂಪ್ ಕೋರಿಕೆ ಪರಿಗಣಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಭಾರತ-ಅಮೆರಿಕ ವ್ಯಾಪಾರ ಒಪ್ಪಂದಕ್ಕಿನ್ನೂ ಸಹಿ ಬಿದ್ದಿಲ್ಲ

ದೆಹಲಿ: ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದಕ್ಕೆ ಈವರೆಗೂ ಭಾರತದ ಸಹಿ ಬಿದ್ದಿಲ್ಲ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಸರಕುಗಳ ಆಮದು ಮೇಲೆ ವಿಧಿಸಿರುವ ಸುಂಕದ ಪ್ರಮಾಣ ಎಷ್ಟು ಎಂಬುದು ಅಧಿಕೃತವಾದ ಮೇಲಷ್ಟೇ ಸಹಿ ಹಾಕಲಾಗುವುದು ಎಂದು ಭಾರತದ ವಾಣಿಜ್ಯ ಸಚಿವಾಲಯ ಈ ಪ್ರಕ್ರಿಯೆಯನ್ನು ಬಾಕಿ ಇರಿಸಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತ ಭಾರತದ ಸರಕುಗಳ ಮೇಲಿನ ಟಾರಿಫ್(ಸುಂಕ) ಪ್ರಮಾಣವನ್ನು ಅಂತಿಮಗೊಳಿಸಿದ ಬಳಿಕವಷ್ಟೇ ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದಕ್ಕೆ ಭಾರತದ ರುಜು ಬೀಳಲಿದೆ ಎಂದು ಕೇಂದ್ರ ಸರಕಾರದ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಸೋಮವಾರ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಈ ಮೊದಲು ಟ್ರಂಪ್ ಆಡಳಿತ ಭಾರತ ಸೇರಿದಂತೆ ವಿವಿಧ ದೇಶಗಳ ಮೇಲೆ ವಿಧಿಸಿದ್ದ ರೆಸಿಪ್ರೊಕಲ್ ಟಾರಿಫ್(ಪ್ರತಿಸುಂಕ) ಪ್ರಮಾಣವನ್ನು ಅಮೆರಿಕದ ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಈಗ ಟ್ರಂಪ್ ಆಡಳಿತ ಆಮದು ಸುಂಕ ಪ್ರಮಾಣವನ್ನು ದೇಶಗಳ ಮೇಲೆ ಕ್ರಮಬದ್ಧವಾಗಿ ನಿಗದಿಪಡಿಸಬೇಕಿದೆ. ಆಗ ಭಾರತದ ಮೇಲೇನು ಪರಿಣಾಮವಾಗಲಿದೆ ಎಂಬುದನು ಗಮನಿಸಬೇಕಿದೆ. ಆ ನಂತರವಷ್ಟೇ ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದಕ್ಕೆ ನಾವು ಸಹಿ ಹಾಕಲು ಸಾಧ್ಯ ಎಂದು ಅಗರ್ವಾಲ್ ಸ್ಪಷ್ಟಪಡಿಸಿದ್ದಾರೆ.

ಅಮೆರಿಕದ ಸುಪ್ರೀಂ ಕೋರ್ಟ್ ಫೆಬ್ರವರಿಯಲ್ಲಿ ಸುಂಕ ಪ್ರಮಾಣಕ್ಕೆ ಸಂಬಂಧಿಸಿದಂತೆ ತೀರ್ಪು ಪ್ರಕಟಿಸಿದ ನಂತರ ಟ್ರಂಪ್ ಸರಕಾರ, ಮೊದಲಿಗೆ ಎಲ್ಲಾ ದೇಶಗಳ ಮೇಲೆಯೂ ಶೇ.10ರಷ್ಟು ಪ್ರತಿಸುಂಕ ವಿಧಿಸಿ ಹೊಸ ಕಾರ್ಯಾದೇಶವನ್ನು ಹೊರಡಿಸಿತ್ತು. ಬಳಿಕ ಅದನ್ನು ಶೇ.15ಕ್ಕೆ ಏರಿಕೆ ಮಾಡಿತ್ತು. ಹಾಗಾಗಿ ಭಾರತ ಕಾದುನೋಡುವ ನಿರ್ಧಾರಕ್ಕೆ ಬಂದಿದೆ ಎನ್ನಲಾಗಿದೆ.

ಪ.ಬಂಗಾಳ, ಕೇರಳಕ್ಕೆ ಮೊದಲ ಬಿಜೆಪಿ ಪಟ್ಟಿ

ದೆಹಲಿ: 4 ರಾಜ್ಯಗಳು, ಒಂದು ಕೇಂದ್ರಾಡಳಿತ ಪ್ರದೇಶದಲ್ಲಿನ ವಿಧಾನಸಭೆಗಳಿಗೆ ಚುನಾವಣೆ ವೇಳಾಪಟ್ಟಿಯನ್ನು ಚುನಾವಣಾ ಆಯೋಗ ಭಾನುವಾರ ಸಂಜೆ ಪ್ರಕಟಿಸಿದೆ. ಚುನಾವಣೆ



ಘೋಷಣೆಯಾದ ಬೆನ್ನಲ್ಲೇ ಭಾರತೀಯ ಜನತಾ ಪಕ್ಷ ಕಾರ್ಯಾಚರಣೆ ಆರಂಭಿಸಿದೆ. ಪಕ್ಷಕ್ಕೆ ಬಹುದೊಡ್ಡ ಸವಾಲು ಎನಿಸಿರುವ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿನ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಸೋಮವಾರ ಸಂಜೆ ಪ್ರಕಟಿಸಿದೆ.

ಪಶ್ಚಿಮ ಬಂಗಾಳದ 144 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಿರುವ ಬಿಜೆಪಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸ್ಪರ್ಧೆ ಮಾಡುವ ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಸುವೇಂಧು ಅಧಿಕಾರಿ ಅವರನ್ನೇ ಕಣಕ್ಕಿಳಿಸಿದೆ. ಅಷ್ಟೇ ಅಲ್ಲದೇ, ಸುವೇಂಧು ಅಧಿಕಾರಿಯನ್ನು ಮತ್ತೊಂದು ಕ್ಷೇತ್ರ(ನಂದಿಗ್ರಾಮ)ದಿಂದಲೂ ಕಣಕ್ಕಿಳಿಸುವ ಮೂಲಕ ಪ್ರಮುಖ ನಾಯಕನಿಗೆ ಎರಡು ಅವಕಾಶಗಳನ್ನು ನೀಡಿದೆ. 2021ರ ವಿಧಾನಸಭೆ ಚುನಾವಣೆಯಲ್ಲಿಯೂ ನಂದಿಗ್ರಾಮ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದ್ದ ಸುವೇಂಧು ಅವರು ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿದ್ದರು.

ಮತ್ತೊಬ್ಬ ಪ್ರಮುಖ ನಾಯಕ ದಿಲೀಪ್ ಘೋಷ್ ಅವರನ್ನು ಖರಗ್‌ಪುರ್ ಸಾದಾರ್ ಕ್ಷೇತ್ರದಲ್ಲಿ ಕಣಕ್ಕಿಳಿಸಿದೆ. ಅಗ್ನಿಮಿತ್ರ ಪೌಲ್ ಅವರಿಗೆ ಅಸನ್ಸೋಲ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆ ಮಾಡಲು ಬಿಟ್ಟಿದೆ. ರಾಜ್ಯಸಭೆಯ ಮಾಜಿ ಸದಸ್ಯ ಸ್ವಪನ್ ದಾಸ್ ಗುಪ್ತಾ ಅವರಿಗೂ ವಿಧಾನಸಭೆ ಟಿಕೆಟ್ ನೀಡಲಾಗಿದೆ. ಅವರಿಗೆ ರಾಶ್‌ಬೆಹಾರಿ ಕ್ಷೇತ್ರ ಬಿಟ್ಟುಕೊಡಲಾಗಿದೆ.

ಕೇರಳಂನಲ್ಲಿ 47 ಕ್ಷೇತ್ರಕ್ಕೆ ಅಭ್ಯರ್ಥಿ ಪ್ರಕಟ

ಇತ್ತೀಚೆಗಷ್ಟೇ ಕೇರಳಂ ಎಂದು ಹೆಸರು ಬದಲಿಸಿಕೊಂಡಿರುವ 'ದೇವರ ಸ್ವಂತ' ನಾಡು ಖ್ಯಾತಿಯ ಮಲಯಾಳಂ ರಾಜ್ಯದಲ್ಲಿನ 47 ವಿಧಾನಸಭಾ ಕ್ಷೇತ್ರಗಳಿಗೂ ಬಿಜೆಪಿ ಅಭ್ಯರ್ಥಿಗಳ ಮೊದಲ

ಪಟ್ಟಿ ಸೋಮವಾರ ಬಿಡುಗಡೆಯಾಗಿದೆ. ಕೇಂದ್ರದ ಮಾಜಿ ಸಚಿವರಾದ ರಾಜೀವ್ ಚಂದ್ರಶೇಖರ್ ಮತ್ತು ವಿ.ಮುರಳೀಧರನ್, ಪಕ್ಷದ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಸುರೇಂದ್ರನ್ ಅವರ ಹೆಸರು ಮೊದಲ ಪಟ್ಟಿಯಲ್ಲಿದೆ. ರಾಜೀವ್ ಚಂದ್ರಶೇಖರ್ ನೆಮೋಮ್ ಕ್ಷೇತ್ರದಿಂದ ಸ್ಪರ್ಧೆ ಮಾಡಲಿದ್ದರೆ, ವಿ.ಮುರಳೀಧರನ್ ಕಳಕ್ಕೂಟಂ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಸುರೇಂದ್ರನ್ ಅವರಿಗೆ ಮಂಜೇಶ್ವರ ಕ್ಷೇತ್ರ ಬಿಟ್ಟುಕೊಡಲಾಗಿದೆ. ಮತ್ತೊಬ್ಬ ನಾಯಕ ಪಿ.ಸಿ.ಜಾರ್ಜ್ ಅವರಿಗೆ ಪೂಂಜಾರು ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಈ ಪಟ್ಟಿಯಲ್ಲಿ ಹಿಂದೂ ಮತ್ತು ಕ್ರೈಸ್ತ ಸಮುದಾಯದ ನಾಯಕರುಗಳಿಗೆ ಅವಕಾಶ ಮಾಡಿಕೊಟ್ಟಿರುವುದು ಉಲ್ಲೇಖಾರ್ಹ. ಪಕ್ಷದ ಮಹಿಳಾ ಮೋರ್ಚಾದ ಮಾಜಿ ರಾಷ್ಟ್ರೀಯ ಅಧ್ಯಕ್ಷೆ ಶೋಭಾ ಸುರೇಂದ್ರನ್ ಅವರನ್ನು ಪಾಲಕ್ಕಾಡ್ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ನವ್ಯಾ ಹರಿದಾಸ್ ಅವರಿಗೆ ಕೋಯಿಕ್ಕೋಡ್ ಉತ್ತರ, ಪದ್ಮಜಾ ವೇಣುಗೋಪಾಲ್ ಅವರಿಗೆ ತ್ರಿಶ್ಶೂರ್ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧೆಗೆ ಅವಕಾಶ ಮಾಡಿಕೊಡಲಾಗಿದೆ.

ಪರಕೀಯ ಕ್ಷೇತ್ರಗಳಲ್ಲಿ ಬಿಜೆಪಿಯ ಸತ್ವಪರೀಕ್ಷೆ

ದೆಹಲಿ: ಮುಂದಿನ ತಿಂಗಳು(ಏಪ್ರಿಲ್) ನಡೆಯಲಿರುವ 4 ರಾಜ್ಯ ಮತ್ತು 1 ಕೇಂದ್ರಾಡಳಿತ ಪ್ರದೇಶದಲ್ಲಿನ ವಿಧಾನಸಭೆಗಳ ಚುನಾವಣೆ ಬಿಜೆಪಿ ಪಾಲಿಗೆ ಒಂದು ರೀತಿಯಲ್ಲಿ ಸತ್ವ ಪರೀಕ್ಷೆಯಂತಿರಲಿದೆ. ತನ್ನ ಪರವಾಗಿಲ್ಲದ, ಪ್ರತಿಪಕ್ಷಗಳು ಬಲಿಷ್ಠವಾಗಿರುವ ರಾಜ್ಯಗಳಲ್ಲಿ ನಡೆಯು ತ್ತಿರುವ ಈ ಚುನಾವಣೆಯು ಬಿಜೆಪಿಯ ಸಾಮರ್ಥ್ಯವನ್ನು ಪರೀಕ್ಷೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಿದೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ. ಇದೇ ಮಾತು ಬಿಜೆಪಿ ಪಾಳಯದಲ್ಲಿಯೂ ಕೇಳಿಬರುತ್ತಿದೆ. ಈಶಾನ್ಯ ಭಾರತ ದಲ್ಲಿನ ಅಸ್ಸಾಂ ರಾಜ್ಯ ಮತ್ತು ದಕ್ಷಿಣ ಭಾರತದಲ್ಲಿನ ಕೇಂದ್ರಾಡಳಿತ ಪ್ರದೇಶವಾದ ಪುದುಚೇ ರಿಯಲ್ಲಿ ಪ್ರಸ್ತುತ ಬಿಜೆಪಿ ಸರಕಾರವಿದೆ. ಆದರೆ, ಉಳಿದ ಮೂರು ರಾಜ್ಯಗಳಾದ ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಬಿಜೆಪಿಗೆ ರಾಜಕೀಯ ನೆಲೆ ಇಲ್ಲದ ಚುನಾವಣಾ ರಾಜಕೀಯ ಕಣಗಳಾಗಿವೆ. ಇದ್ದುದರಲ್ಲಿ ಪಶ್ಚಿಮ ಬಂಗಾಳದಲ್ಲಿ ಕಳೆದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಮತ ಬ್ಯಾಂಕ್ ಪ್ರಮಾಣವನ್ನು ತಕ್ಕಮಟ್ಟಿಗೆ ಹೆಚ್ಚಿಸಿಕೊಂಡಿದೆ. ಆದರೆ, ವಿಧಾನಸಭೆಯ ಪ್ರವೇಶ ಬಲು ದೂರವಾಗಿದೆ. ಈ ಬಾರಿಯ ಚುನಾವಣೆ ಬಿಜೆಪಿ ಪಾಲಿಗೆ ನೈಜ ಪರೀಕ್ಷೆಯಾಗಿರಲಿದೆ.

ಉಳಿದಂತೆ ತಮಿಳುನಾಡು, ಕೇರಳ ರಾಜ್ಯಗಳು ಬಿಜೆಪಿ ಪಾಲಿಗೆ 'ಪರಕೀಯ' ಎನ್ನುವಂತಿವೆ. ಈವರೆಗೆ ಇಲ್ಲಿ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ ಸಾಧನೆ ಏನೇನೂ ಇಲ್ಲ ಎಂದೇ ಹೇಳಬಹುದು. ಆದರೆ, ಕೇರಳದಲ್ಲಿ ಈ ಬಾರಿ ಸ್ಥಳೀಯ ಸಂಸ್ಥೆಗಳ ಚುನಾವ ಣೆಯಲ್ಲಿ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಅಧಿಕಾರದ ಬಾವುಟ ಹಾರಿಸಿರುವುದೇ ದೊಡ್ಡ ಸಾಧನೆ.

ಚುನಾವಣೆ ಘೋಷಣೆ ಬೆನ್ನಲ್ಲೇ ಉನ್ನತ ಅಧಿಕಾರಿಗಳು ಬದಲು: ಗೃಹ ಕಾರ್ಯದರ್ಶಿಸಂಘಮಿತ್ರ

ಪ.ಬಂಗಾಳಕ್ಕೆ ನೂತನ ಮುಖ್ಯ ಕಾರ್ಯದರ್ಶಿ

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆಗೆ ಎರಡು ಹಂತಗಳಲ್ಲಿ(ಏ.23-29) ಚುನಾವಣೆ ನಡೆಸುವುದಾಗಿ ಭಾನುವಾರ ಘೋಷಿಸಿದ ಭಾರತೀಯ ಚುನಾವಣಾ ಆಯೋಗ(ಇಸಿಐ),

ನಂತರದ ಕೆಲ ಗಂಟೆಗಳಲ್ಲಿಯೇ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ ಸೇರಿದಂತೆ ರಾಜ್ಯ ಸರಕಾರದಲ್ಲಿನ ಉನ್ನತ ಆಡಳಿತಾಧಿಕಾರಿ ಹುದ್ದೆಗಳಲ್ಲಿ ಬದಲಾವಣೆ ಮಾಡಲು ಆದೇಶಿಸಿದೆ.

ಮುಖ್ಯ ಕಾರ್ಯದರ್ಶಿ ಹುದ್ದೆಗೆ 1993ರ ಬ್ಯಾಚ್‌ನ ಹಿರಿಯ ಐಎಎಸ್ ಅಧಿಕಾರಿ ದುಷ್ಯಂತ್ ನರಿಯಾಲ ಮತ್ತು ಗೃಹ ಕಾಯದರ್ಶಿ ಸ್ಥಾನಕ್ಕೆ ಸಂಘಮಿತ್ರ ಘೋಷ್ ಅವರನ್ನು ನೇಮಕ ಮಾಡಿ ಚುನಾವಣಾ ಆಯೋಗ ಭಾನುವಾರ ರಾತ್ರಿಯೇ ಆದೇಶ ಹೊರಡಿಸಿದೆ.

ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾದ ಮರುಕ್ಷಣದಿಂದಲೇ ಚುನಾವಣಾ ಮಾದರಿ ನೀತಿ ಸಂಹಿತೆ ರಾಜ್ಯದಲ್ಲಿ ಜಾರಿಗೆ ಬಂದಿದ್ದು, ಚುನಾವಣಾ ಆಯೋಗ ರಾಜ್ಯದ ಆಡಳಿತಲ್ಲಿನ ಉನ್ನತ ಹುದ್ದೆಗಳಲ್ಲಿನ ಅಧಿಕಾರಿಗಳನ್ನು ಬದಲಿಸಲು ಆದೇಶಿಸಿದೆ.

ಎತ್ತಂಗಡಿ: ಈವರೆಗೆ ರಾಜ್ಯ ಮುಖ್ಯ ಕಾರ್ಯದರ್ಶಿಯಾಗಿದ್ದ ನಂದಿನಿ ಚಕ್ರವರ್ತಿ 'ಎಸ್ಐಆರ್' ಪ್ರಕ್ರಿಯೆ ವೇಳೆ ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸಿಲ್ಲ. ನಾಲ್ವರು ಚುನಾವಣಾ ಅಧಿಕಾರಿಗಳ ವಿರುದ್ಧ ಎಫ್ಐಆರ್ ದಾಖಲಿಸಲು ಸೂಚನೆ ನೀಡಿದ್ದರೂ ವೃಥಾ ವಿಳಂಬ ಮಾಡಿದ್ದಾರೆ ಎಂಬ ಕಾರಣ ನೀಡಿರುವ ಚುನಾವಣಾ ಆಯೋಗ, ಅವರನ್ನು ಮುಖ್ಯ ಕಾರ್ಯದರ್ಶಿ ಹುದ್ದೆಯಿಂದಲೇ ಎತ್ತಂಗಡಿ ಮಾಡಿದೆ.

ಈವರೆಗೆ ಗೃಹ ಕಾರ್ಯದರ್ಶಿಯಾಗಿದ್ದ ಜಗದೀಶ್ ಪ್ರಸಾದ್ ಮೀನಾ ಅವರನ್ನು ಬದಲಿಸಿ, ಆ ಜಾಗಕ್ಕೆ ಸಂಘಮಿತ್ರ ಘೋಷ್ ಎಂಬ 1997ರ ಬ್ಯಾಚ್ ಐಎಎಸ್ ಅಧಿಕಾರಿ ಮತ್ತು ಬಂಗಾಳದ ಮೊದಲ ಮಹಿಳಾ ಅಧಿಕಾರಿಯನ್ನು ನೇಮಕ ಮಾಡಿದೆ.

ಈ ಸಂಬಂಧ ಭಾನುವಾರ ರಾತ್ರಿಯೇ ರಾಜ್ಯ ಸರಕಾರಕ್ಕೆ ಸೂಚನಾ ಪತ್ರ ಕಳುಹಿಸಿಕೊಟ್ಟಿರುವ ಚುನಾವಣಾ ಆಯೋಗ, ಸದ್ಯ ಸ್ಥಳಾಂತರಗೊಂಡ ಉನ್ನತ ಅಧಿಕಾರಿಗಳನ್ನು ವಿಧಾನಸಭೆ ಚುನಾವಣೆ ಮುಗಿಯುವವರೆಗೂ ಚುನಾವಣೆಗೆ ಸಂಬಂಧಿಸಿದ ಯಾವುದೇ ಹುದ್ದೆಗಳಲ್ಲಿ ನಿಯೋಜಿಸಬಾರದು ಎಂದು ನಿರ್ದೇಶನ ನೀಡಿದೆ.

ರಾಜ್ಯದಲ್ಲಿ ಏ.23-29ರಂದು 2 ಹಂತಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಮೇ 4ಕ್ಕೆ ಮತ ಎಣಿಕೆ ನಡೆಯಲಿದೆ.

ಟಿಎಂಸಿ ವಿರೋಧ

ರಾಜ್ಯದ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್ಐಆರ್) ಮತ್ತು

ಬೂತ್ ಮಟ್ಟದ ಅಧಿಕಾರಿಗಳಿಗೆ ಸಂಭಾವನೆ ನಿಗದಿ ವಿಚಾರ ಸೇರಿದಂತೆ ವಿವಿಧ ವಿಷಯಗಳಲ್ಲಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ರಾಜ್ಯ ಸರಕಾರ ಮತ್ತು ಚುನಾವಣಾ ಆಯೋಗದ ನಡುವೆ ಸಂಘರ್ಷ ನಡೆದಿದೆ. ಈಗ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ ಬದಲಿಸಿರುವುದಕ್ಕೆ ಟಿಎಂಸಿ ತೀವ್ರ ವಿರೋಧ ವ್ಯಕ್ತಪಡಿಸಿದೆ. ಚುನಾವಣಾ ಆಯೋಗ ಬಿಜೆಪಿ ಕೈಗೊಂಬೆಯಾಗಿದೆ ಎಂದು ಟೀಕಿಸಿದೆ.

ಅಲಿ ಖಮೇನಿ ಬಳಸುತ್ತಿದ್ದ ವಿಮಾನ ನಾಶ: ಇಸ್ರೇಲ್

ಟೆಲ್‌ಅವಿವ್: ಇರಾನ್ ದೇಶ ಮತ್ತು ಷಿಯಾ ಸಮುದಾಯದ ಸರ್ವೋಚ್ಚ ನಾಯಕರಾಗಿದ್ದ ಆಯತೊಲ್ಲಾ ಅಲಿ ಖಮೇನಿ ಬಳಸುತ್ತಿದ್ದ ವಿಮಾನವನ್ನು ಮತ್ತು ಅವರ ವಿಮಾನದ ಹಾರಾಟಕ್ಕೆ ಬಳಸಲಾಗುತ್ತಿದ್ದ ಮೊಹ್ರಾಬಾದ್ ವಿಮಾನ ನಿಲ್ದಾಣವನ್ನು ಧ್ವಂಸಗೊಳಿಸಿದ್ದೇವೆ

ಎಂದು ಇಸ್ರೇಲ್ ರಕ್ಷಣಾ ಪಡೆ ಸೋಮವಾರ ಹೇಳಿಕೊಂಡಿದೆ.

ಇರಾನ್‌ನ ಮೆಹ್ರಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಭಾನುವಾರ ರಾತ್ರಿ ಕ್ಷಿಪಣಿಗಳಿಂದ ತೀವ್ರ ಸ್ವರೂಪದ ದಾಳಿ ನಡೆಸಲಾಗಿದ್ದು, ವಿಮಾನ ನಿಲ್ದಾಣ ತಕ್ಷಣದ ಬಳಕೆಗೆ ಬಾರದಂತೆ ಹಾನಿಗೊಳಿಸಲಾಗಿದೆ. ಅದಲ್ಲದೇ, ವಿಮಾನ ನಿಲ್ದಾಣದಲ್ಲಿ ನಿಲುಗಡೆಯಾಗಿದ್ದ ಅಲಿ ಖಮೇನಿ ಅವರ ವಿಶೇಷ ವಿಮಾನ ಕೂಡಾ ಇದೇ ದಾಳಿಯಲ್ಲಿ ನಾಶವಾಗಿದೆ. ಈ ಐಶಾರಾಮಿ ವಿಮಾನವನ್ನು ಅಲಿ ಖಮೇನಿ ಅವರಷ್ಟೇ ಬಳಸುತ್ತಿದ್ದರು ಎನ್ನಲಾಗಿದೆ. ಮೆಹ್ರಾಬಾದ್ ವಿಮಾನ ನಿಲ್ದಾಣ ಇರಾನ್‌ನ ಅತ್ಯಂತ ಹಳೆಯ ವಿಮಾನ ನಿಲ್ದಾಣ. ಅದನ್ನು ಸರಕಾರದ ಉನ್ನತ ಶ್ರೇಣಿಯ ಅಧಿಕಾರಿಗಳು, ಹಿರಿಯ ಸೇನಾಧಿಕಾರಿಗಳು ದೇಶ-ವಿದೇಶದ ಪ್ರಯಾಣಕ್ಕೆ ಬಳಸುತ್ತಿದ್ದರು. ಅಲ್ಲದೇ ಮಿತ್ರ ರಾಷ್ಟ್ರಗಳೊಂದಿಗೆ ಸಮನ್ವಯ ಸಾಧಿಸಲು ಕೂಡ ಈ ವಿಮಾನವನ್ನು ಬಳಸಲಾಗುತ್ತಿತ್ತು. ಈಗ ಆ ವಿಮಾನ ನಿಲ್ದಾಣ ಧ್ವಂಸವಾಗಿದೆ ಎಂದು ಇಸ್ರೇಲ್ ಹೇಳಿದೆ.

ಸಮಾಚಾರ ಸಣ್ಣದಲ್ಲ

ಸುಧಾಮೂರ್ತಿ ಕನ್ನಡ ಮಾತು: ದಾಸರ ಕೀರ್ತನೆ ಉಲ್ಲೇಖ

ದೆಹಲಿ: ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆ ಡಾ. ಸುಧಾಮೂರ್ತಿ ಸೋಮವಾರ ರಾಜ್ಯಸಭೆ ಅಧಿವೇಶನದ ಶೂನ್ಯ ವೇಳೆಯಲ್ಲಿ ಕನ್ನಡದಲ್ಲೇ ಮಾತನಾಡಿ ಗಮನ ಸೆಳೆದರು. ರಾಯಚೂರಿನಲ್ಲಿ ಏಮ್ಸ್ (ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್) ಸ್ಥಾಪಿಸುವಂತೆ ಸುಧಾಮೂರ್ತಿ ಮನವಿ ಮಾಡಿದರು. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಹಕರಿಸುವಂತೆಯೂ ಸುಧಾಮೂರ್ತಿ ಮನವಿ ಮಾಡಿದರು. ಕೇಂದ್ರ ಸರಕಾರ ಹಲವು ರಾಜ್ಯಗಳಲ್ಲಿ ಏಮ್ಸ್ ಸ್ಥಾಪಿಸಿದೆ. ಆದರೆ ಕರ್ನಾಟಕಕ್ಕೆ ಇನ್ನೂ ಒಂದು ಏಮ್ಸ್ ಸಿಕ್ಕಿಲ್ಲ. ರಾಯಚೂರು ನೀತಿ ಆಯೋಗದ ಪ್ರಕಾರ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಉತ್ತರ ಕರ್ನಾಟಕವು 260 ವರ್ಷಗಳಿಂದಲೂ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ದಕ್ಷಿಣ ಕರ್ನಾಟಕದಂತೆ ಮೈಸೂರು ಒಡೆಯರ್ ರಾಜವಂಶದ ಅಭಿವೃದ್ಧಿ ಸ್ಪರ್ಶ ಸಿಕ್ಕಿಲ್ಲ. ಇಲ್ಲಿನ ಜನರು ಆರೋಗ್ಯ ಸಮಸ್ಯೆಗಳು ಬಂದರೆ ದೂರದ ಬೆಂಗಳೂರು ಅಥವಾ ಹೈದರಾಬಾದ್‌ಗೆ ಹೋಗಬೇಕಾಗುತ್ತದೆ. ಜಿಲ್ಲೆಯ ಮಹಿಳೆಯರಲ್ಲಿ ಕೇವಲ 48%, ಪುರುಷರಲ್ಲಿ 60% ಸಾಕ್ಷರತೆ ಇದೆ ಎಂದು ಸುಧಾಮೂರ್ತಿ ವಿವರಿಸಿದರು. 'ಎನ್ನ ಬಿನ್ನಪ ಕೇಳು ಧನ್ವಂತ್ರಿ ದಯಮಾಡು..ಎಂದು ಗೋಪಾಲ ದಾಸರ ಕೀರ್ತನೆ ಉಲ್ಲೇಖಿಸಿದ ಸುಧಾಮೂರ್ತಿ ಸದನದ ಗಮನ ಸೆಳೆದರು.

ಎಲ್‌ಪಿಜಿ ಕೊರತೆ: ಖರ್ಗೆ ವಾಗ್ದಾಳಿ



ದೆಹಲಿ: ದೇಶದಲ್ಲಿ ಎಲ್‌ಪಿಜಿ ಕೊರತೆಯ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯಲ್ಲಿ ಸೋಮವಾರ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಕೇಂದ್ರ ಸರಕಾರವು ಅಡುಗೆ ಅನಿಲದ ಬಿಕ್ಕಟ್ಟು ಮತ್ತು ಕಾಳಸಂತೆ ಯಲ್ಲಿ ಮಾರಾಟವನ್ನು ತಡೆಯಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿ ದರು. ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಮತ್ತು ಸದನದ ನಾಯಕ ಜೆ ಪಿ ನಡ್ಡಾ ಅವರು, ವಿರೋಧ ಪಕ್ಷವು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರಕಾರದೊಂದಿಗೆ ನಿಲ್ಲುವ ಬದಲು ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದು ಹೇಳಿದರು. ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಖರ್ಗೆ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ದೇಶಾದ್ಯಂತ ಎಲ್‌ಪಿಜಿ ಬಿಕ್ಕಟ್ಟಿನಿಂದ ಜನ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.

ಕೊಲ್ಲಿಯಿಂದ 2.20 ಲಕ್ಷ ಮಂದಿ ವಾಪಸ್

ದೆಹಲಿ: ಮಧ್ಯಪ್ರಾಚ್ಯ ಯುದ್ಧ ಆರಂಭವಾದ ಫೆ.28ರ ಬಳಿಕ ಗಲ್ಫ್ ರಾಷ್ಟ್ರಗಳಿಂದ ಒಟ್ಟು 2,20,000 ಮಂದಿ ದೇಶಕ್ಕೆ ಮರಳಿದ್ದಾರೆ ಎಂದು ಭಾರತ ಸರಕಾರ ತಿಳಿಸಿದೆ. ಯುಎಇ, ಸೌದಿ ಅರೇಬಿಯಾ, ಒಮಾನ್ ಮತ್ತು ಕತಾರ್ ಸೇರಿದಂತೆ ಗಲ್ಫ್ ಪ್ರದೇಶದ ವಿವಿಧ ದೇಶ ಗಳಿಂದ ನಲವತ್ತೈದು ವಿಮಾನಗಳು ಭಾರತದ ವಿವಿಧ ವಿಮಾನ ನಿಲ್ದಾಣಗಳಲ್ಲಿ ಇಳಿಯುವ ನಿರೀಕ್ಷೆ ಯಿದೆ ವಿದೇಶಾಂಗ ಇಲಾಖೆಯ ಕಾರ್ಯದರ್ಶಿ ತಿಳಿಸಿದ್ದಾರೆ. ಕತಾರ್‌ನ ವಾಯುಪ್ರದೇಶವು ಭಾಗಶಃ ಮತ್ತೆ ತೆರೆದಿರುವುದರಿಂದ ವಿಮಾನಗಳು ಕಾರ್ಯ ನಿರ್ವಹಿಸುತ್ತಿವೆ. ಭಾರತದ ವಿವಿಧ ಸ್ಥಳಗಳಿಗೆ ಮೂರು ವಿಮಾನಗಳು ಹಾರಾಟ ನಡೆಸುವ ನಿರೀಕ್ಷೆ ಯಿದೆ ಎಂದು ವಿದೇಶಾಂಗ ಸಚಿವಾಲಯದ ಜಂಟಿ ಕಾರ್ಯದರ್ಶಿ (ಗಲ್ಫ್) ಅಸೀಮ್ ಮಹಾಜನ್ ಹೇಳಿದ್ದಾರೆ. 550 ಭಾರತೀಯ ಪ್ರಜೆಗಳು ಭೂ ಗಡಿಯ ಮೂಲಕ ಅರ್ಮೇನಿಯಾವನ್ನು ದಾಟಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದರು. 90 ಭಾರತೀಯರು ಇರಾನ್‌ನಿಂದ ಭೂ ಗಡಿಯ ಮೂಲಕ ಅಜೆರ್ಬೈಜಾನ್‌ಗೆ ಪ್ರಯಾಣಿಸಿದ್ದಾರೆ. ಕುವೈತ್‌ನ ವಾಯುಪ್ರದೇಶವು ಮುಚ್ಚಲ್ಪಟ್ಟಿರುವುದರಿಂದ ವಿಶೇಷ ವಿಮಾನಗಳು ಶೀಘ್ರದಲ್ಲೇ ಕಾರ್ಯ ನಿರ್ವಹಿಸುವ ನಿರೀಕ್ಷೆಯಿದೆ. ಬಹ್ರೇನ್ ಮತ್ತು ಇರಾಕ್‌ನಲ್ಲಿರುವ ಪ್ರಯಾಣಿಕರಿಗೆ ಸೌದಿ ಅರೇಬಿಯಾ ಮೂಲಕ ಸಾರಿಗೆ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಕಲಾಪಕ್ಕೆ ಸಚಿವರ ಗೈರು: ಛಲವಾದಿ ಆಕ್ರೋಶ

ಬೆಂಗಳೂರು: ವಿಧಾನ ಸಭೆಯಲ್ಲಿ ಸಚಿವರ ಹಾಜರಾತಿ ವಿಚಾರ ಚರ್ಚೆ ನಡೆದಿದ್ದ ಬೆನ್ನಲ್ಲೆ ವಿಧಾನ ಪರಿಷತ್‌ನಲ್ಲೂ ಹಾಜರಾತಿ ವಿಚಾರ ಚರ್ಚೆಗೆ ಗ್ರಾಸವಾಯಿತು. ಕಡ್ಡಾಯ ಹಾಜರಾತಿ ಅಂದರೂ ಸಚಿವರು ಸದನಕ್ಕೆ ಬಂದಿಲ್ಲ, ಅಧಿಕಾರಿಗಳೂ ಇಲ್ಲ, ಹೀಗಾದರೆ ಹೇಗೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಸಭಾಪತಿಗಳನ್ನು ಪ್ರಶ್ನಿಸಿದ್ದಾರೆ. ಯಾರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಹೇಳಿ? ವಿಧಾನ ಸಭೆಯಲ್ಲಿ ಉತ್ತರ ಸಿಗಲಿಲ್ಲ ಅಂತಾ ಸದನ ಮುಂದೂಡಿದ್ದಾರೆ. ನಮ್ಮಲ್ಲಿ ಏಕೆ ಈ ಅಸಡ್ಡೆ? ಅಧಿಕಾರಿಗಳು ಸಮರ್ಪಕ ಉತ್ತರ ಕೊಡಲ್ಲ, ಸದಸ್ಯರ 126 ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲವೆಂದು ತಿಳಿದು ಬಂದಿದೆ. ನಮ್ಮ ಸದಸ್ಯರೊಬ್ಬರು ಇಂದಿನ ವರೆಗೂ ಪ್ರಶ್ನೆ ಮಾಡುತ್ತಾನೇ ಇದ್ದಾರೆ. ನಾವು ಉತ್ತರ ಕೊಡಲಾರದ ಪ್ರಶ್ನೆಯನ್ನು ಕೇಳುತ್ತಿದ್ದೀವಾ? ಎಂದು ಛಲವಾದಿ ಗರಂ ಆಗಿದ್ದಾರೆ. ಹೀಗಾಗಿ ಕೂಡಲೇ ಉತ್ತರ ಕೊಡಿಸಿ, ಇಲ್ಲ ಕ್ರಮ ಜರುಗಿಸಿ ಎಂದು ಸಭಾನಾಯಕ ಬೋಸರಾಜುಗೆ ಸಭಾಪತಿ ಸೂಚನೆ ನೀಡಿದ ಪ್ರಸಂಗ ನಡೆದಿದೆ. ಪರಿಷತ್ ಸದಸ್ಯ ಭೋಜೇಗೌಡ ಅವರೂ ಬೇಸರ ವ್ಯಕ್ತಪಡಿಸಿದರು.

ಎಸ್‌ಟಿಪಿ ಘಟಕಗಳ ಸುತ್ತಲೂ ಸಸಿ ನೆಡುವ ಯೋಜನೆ | ಅನಧಿಕೃತ ಪಾರ್ಕಿಂಗ್ ವಿರುದ್ಧ ಸೂಕ್ತ ಕ್ರಮ: ತುಷಾರ್ ಗಿರಿನಾಥ್

ನಗರ ಸೌಂದರ್ಯೀಕರಣಕ್ಕೆ ಸಮಗ್ರ ಯೋಜನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ಮೇಲ್ಸೇತುವೆಗಳ ಕೆಳಭಾಗದ ಸ್ಥಳಗಳನ್ನು ಸೌಂದರ್ಯೀಕರಣಗೊಳಿಸುವ ಸಲುವಾಗಿ ಸಮಗ್ರ ಯೋಜನೆ ರೂಪಿಸಿ ಎಂದು ಅಧಿಕಾರಿಗಳಿಗೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ನಗರದಲ್ಲಿ ಮೇಲ್ಸೇತುವೆಗಳ ಕೆಳಭಾಗಗಳ ಅಭಿವೃದ್ಧಿ, ಸಸಿ ನೆಡುವುದು, ಟ್ರಾನ್ಸ್‌ಫರ್ ಸ್ಟೇಷನ್‌ಗಳ ಸ್ಥಾಪನೆ ಹಾಗೂ ಪಾರ್ಕಿಂಗ್ ವ್ಯವಸ್ಥೆ ಕುರಿತು ಸಭೆ ನಡೆಸಿ ಮಾತನಾಡಿ, ಮೇಲ್ಸೇತುವೆಗಳ ಕೆಳಭಾಗದ ಪ್ರದೇಶಗಳು ಅಭಿವೃದ್ಧಿ ಆಗದೆ ನಗರದ ಸೌಂದರ್ಯಕ್ಕೆ ಧಕ್ಕೆಯುಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆ ಹಾಗೂ ಬಿಡಿಎ ವತಿಯಿಂದ ನಿರ್ಮಿಸಲಾದ ಮೇಲ್ಸೇತುವೆಗಳ ಕೆಳಭಾಗದಲ್ಲಿ ಎಲ್ಲೆಲ್ಲಿ ಸೌಂದರ್ಯೀಕರಣ ಮತ್ತು ಅಭಿವೃದ್ಧಿ ಮಾಡಬಹುದು ಎಂಬುದರ ಕುರಿತು ಪಟ್ಟಿ ಸಿದ್ಧಪಡಿಸಿ, ಅದಕ್ಕಾಗಿ ಸಮಗ್ರ ಯೋಜನೆ ರೂಪಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಲಮಂಡಳಿ ತನ್ನ ಎಸ್‌ಟಿಪಿ ಘಟಕಗಳ ಸುತ್ತಲೂ ಸಸಿ ನೆಡುವ ಯೋಜನೆ ರೂಪಿಸಬೇಕು. ರಸ್ತೆ ಬದಿ ಹಾಗೂ ಕೆರೆಗಳ ಸುತ್ತಲೂ ಬಿದಿರು ಸಸಿಗಳನ್ನು ನೆಟ್ಟು ಪೋಷಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜತೆಗೆ ಟ್ರೀ ಫಾರ್ಕ್ ನಿರ್ಮಾಣ ಮಾಡುವ ಸಲುವಾಗಿ ಸ್ಥಳ ಗುರುತಿಸುವುದು ಹಾಗೂ ಅದಕ್ಕೆ ತಗಲುವ ವೆಚ್ಚದ ಕುರಿತು ವರದಿ ನೀಡಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅಧಿಕಾರಿಗಳ ಸಭೆ ಕರೆದು ನಗರ ಸೌಂದರ್ಯೀಕರಣಕ್ಕೆ ಸಮಗ್ರ ಯೋಜನೆಯ ಸೂಚನೆ ನೀಡಿದರು.

ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ನಗರದಲ್ಲಿ ರಸ್ತೆ ಬದಿಗಳಲ್ಲಿ ಅನಧಿಕೃತ ಪಾರ್ಕಿಂಗ್ ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ವಿಶೇಷ ಅಭಿಯಾನ ನಡೆಸಿ ಅನಧಿಕೃತ ಪಾರ್ಕಿಂಗ್ ವಿರುದ್ಧ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ನಗರದಲ್ಲಿ ಹಸಿರೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಪ್ರಸಕ್ತ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಟ್ಟು ಅವುಗಳ ಸಮರ್ಪಕ ಪೋಷಣೆ ಮಾಡಬೇಕು. ನಗರದಲ್ಲಿ ದ್ವಿತೀಯ ಹಂತದ ತ್ಯಾಜ್ಯ ವರ್ಗಾವಣೆ ಘಟಕಗಳ ನಿರ್ಮಾಣಕ್ಕೆ ಜಾಗದ ಅಭಾವವಿರುವ ಪ್ರದೇಶಗಳಲ್ಲಿ ಮಿನಿ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಆರ್. ರಾಮಚಂದ್ರನ್, ಕಾರ್ಯದರ್ಶಿ ದೀಪಾ ಚೋಳನ, ಬಿಡಿಎ ಆಯುಕ್ತ ಮಣಿವಣ್ಣನ್, ನಗರ ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ರಮೇಶ್ ಡಿ.ಎಸ್., ರಮೇಶ್ ಕೆ.ಎನ್., ಡಾ. ರಾಜೇಂದ್ರ ಕೆ.ವಿ., ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆಯ ಸಿಇಒ ಕರೀಗೌಡ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್, ಜಲಮಂಡಳಿ ಅಧ್ಯಕ್ಷ ರಾಮಪ್ರಸಾತ್ ಮನೋಹರ್, ಮೆಟ್ರೋ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್, ಅಭಿವೃದ್ಧಿ ಅಪರ ಆಯುಕ್ತೆ ಆರ್. ಲತಾ, ಸಂಚಾರಿ ಪೊಲೀಸ್ ವಿಭಾಗದ ಜಂಟಿ ಆಯುಕ್ತ ಕಾರ್ತಿಕ್ ರೆಡ್ಡಿ ಸೇರಿದಂತೆ ಮೆಟ್ರೋ, ಡಲ್ಟ್, ಜಲಮಂಡಳಿ ಹಾಗೂ ಇತರೆ ಇಲಾಖೆಗಳ ಅಧಿಕಾರಿಗಳು ಇದ್ದರು.

ಪಾರ್ಕಿಂಗ್ ನಿಯಮಾವಳಿ

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯ ಕುರಿತು ಸಮಗ್ರ ಪರಿಶೀಲನೆ ನಡೆಸಿ, ಸಮರ್ಪಕ ಪಾರ್ಕಿಂಗ್ ನಿಯಮಾವಳಿಯನ್ನು ರೂಪಿಸಬೇಕು. ರಸ್ತೆ ಬದಿಗಳಲ್ಲಿರುವ ಖಾಲಿ ಜಾಗಗಳು ಅಥವಾ ಖಾಸಗಿ ನಿವೇಶನಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಸಾಧ್ಯತೆ ಕುರಿತು ಪರಿಶೀಲಿಸಿ, ಜಾಗದ ಮಾಲೀಕರಿಗೆ ನೀಡಬಹುದಾದ ಸೌಲಭ್ಯಗಳು ಇನ್ಸೆಂಟಿವ್ ನೀಡುವ ಕುರಿತು ವರದಿ ಸಲ್ಲಿಸಿ. ಐದು ನಗರ ಪಾಲಿಕೆಗಳಲ್ಲಿ ಟೋಯಿಂಗ್ ಮಾಡುವ ಸಲುವಾಗಿಯೇ ಪ್ರತ್ಯೇಕ ಅಧಿಕಾರಿಗಳನ್ನು ನಿಯೋಜಿಸಿ ಆ ವರದಿ ನೀಡಬೇಕು. ಆ ಬಳಿಕ ಟೋಯಿಂಗ್ ವಾಹನಗಳನ್ನು ಬಳಸಿಕೊಂಡು ಅನಾಥ ವಾಹನಗಳನ್ನು ತೆರವುಗೊಳಿಸಲು ತುಷಾರ್ ಗಿರಿನಾಥ್ ನಿರ್ದೇಶನ ನೀಡಿದರು.

ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯುಪಿಎಸ್‌ಸಿ ಸಾಧಕರನ್ನು ಸಚಿವ ಚಲುವರಾಯಸ್ವಾಮಿ ಅವರು ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಇಂಡಿಯಾ ಫಾರ್ ಅಕಾಡೆಮಿಯ ಆಡಳಿತ ಮಂಡಳಿ ಅಧ್ಯಕ್ಷ ಡಾ. ಸಿ ಎಸ್. ಕೇದಾರ್, ಉಪಾಧ್ಯಕ್ಷ ಡಾ.ಜಿ.ಎನ್. ಶ್ರೀ ಕಂಠಯ್ಯ ಇದ್ದರು.

ಗ್ರಾಮೀಣ ವಿದ್ಯಾರ್ಥಿಗಳ ಸಾಧನೆ ಗಮನಾರ್ಹ

ಬೆಂಗಳೂರು: ಗ್ರಾಮೀಣ ಭಾಗದ ಅಭ್ಯರ್ಥಿಗಳು ಇತ್ತೀಚಿನ ದಿನಗಳಲ್ಲಿ ಯುಪಿಎಸ್‌ಸಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದು, ಇದು ಉತ್ತಮ ಬೆಳವಣಿಗೆಯಾಗಿದೆ. ಗ್ರಾಮೀಣ ಪ್ರದೇಶದವರಿಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಹೇಳಿದ್ದಾರೆ.

ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಲ್ಲಿ ಆಯ್ಕೆಯಾದ ರಾಜ್ಯದ 19 ಸಾಧಕರನ್ನು ಅಭಿನಂದಿಸಿ ಮಾತನಾಡಿದ ಅವರು, ನಾಗರಿಕ ಸೇವೆ ಅತ್ಯಂತ ಶ್ರೇಷ್ಠ ಮತ್ತು ಪರಮೋಚ್ಚ ಅವಕಾಶ. ಪ್ರಧಾನಿ ನೇತೃತ್ವದಲ್ಲಿ ಕೈಗೊಂಡ ತೀರ್ಮಾನವನ್ನು ಆದೇಶದ ಮೂಲಕ ಜಾರಿ ಮಾಡುವವರು ಅಧಿಕಾರಿಗಳು. ಅಧಿಕಾರಿಗಳಿಗೆ ಸಂವಿಧಾನ ಅಷ್ಟೊಂದು ಪರಮಾಧಿಕಾರ ನೀಡಿದೆ. ನಾಗರಿಕ ಸೇವೆಯಿಂದ ಬಹಳಷ್ಟು ಜನ ಉತ್ತಮ ಕೆಲಸ ಮಾಡಿದ್ದಾರೆ ಎಂದರು.

ಅಧಿಕಾರಿಗಳು ಸಾಮಾನ್ಯ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡಬೇಕು. ಜನ ಸಾಮಾನ್ಯರಿಗೆ ಸೇವೆ ಸಲ್ಲಿಸಲು ನಿಮಗೆ ಆಕಾಶವೇ ಮಿತಿಯಾಗಿದೆ. ತಾಳ್ಮೆಯಿಂದ, ವಿವೇಚನೆಯಿಂದ ಕೆಲಸ ಮಾಡಬೇಕು. ಉತ್ತಮ ವಿಧಾನಗಳನ್ನು ಅಳವಡಿಸಿಕೊಂಡರೆ ಉತ್ತಮ ಕೆಲಸ ಮಾಡಲು ನೆರವಾಗಲಿದೆ ಎಂದರು.

ಬೆಂಗಳೂರಿನ ಚಂದ್ರಾ ಲೇಔಟ್ ನಲ್ಲಿ ಸ್ಥಾಪನೆಯಾದ ಇಂಡಿಯಾ ಫಾರ್ ಐಎಎಸ್ ಅಕಾಡೆಮಿ ಕಡಿಮೆ ಶುಲ್ಕದಲ್ಲಿ ಉನ್ನತ ಗುಣಮಟ್ಟದ ಮಾರ್ಗದರ್ಶನ ಮತ್ತು ತರಬೇತಿ ನೀಡುತ್ತಿದೆ. 2025-26ರ ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವಾ ಪರೀಕ್ಷೆಯಲ್ಲಿ ಒಟ್ಟು ಕರ್ನಾಟಕದಿಂದ 25 ಅಭ್ಯರ್ಥಿಗಳು ಯಶಸ್ವಿಯಾಗಿದ್ದು, ಇಂಡಿಯಾ ಪಾರ್ ಐಎಎಸ್ ಅಕಾಡೆಮಿಯಿಂದ ಬೇರೆ ಬೇರೆ ಹಂತಗಳಲ್ಲಿ ತರಬೇತಿ ಪಡೆದ 19 ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ.

ಬೆಂ.ವಿವಿ: ಮಹಿಳಾ ದಿನಾಚರಣೆ

ಬೆಂಗಳೂರು: ಮರ್ಯಾದೆ ಹತ್ಯೆ ರೀತಿಯ ಶೋಚನೀಯ ಘಟನೆಗಳು ಮಹಿಳೆಯರ ಅಸ್ತಿತ್ವಕ್ಕೆ ಸವಾಲಾಗುತ್ತಿದ್ದು, ಮಹಿಳೆಯನ್ನು ಕೇವಲ ಲೈಂಗಿಕತೆಯ ವಸ್ತುವಾಗಿ ನೋಡುವ ಮನೋಭಾವ ದೂರಾಗಿ ಲಿಂಗ ತಾರತಮ್ಯವಿಲ್ಲದ ಸಮಾನತೆಯ ಸಮಾಜ ಸೃಷ್ಟಿಯಾಗಬೇಕು ಎಂದು ಹಿರಿಯ ಸಾಹಿತಿ ಹಾಗೂ ಮಹಿಳಾ ಲೇಖಕಿಯರ ಸಂಘದ ನಿಕಟಪೂರ್ವ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ವಿವಿ ವತಿಯಿಂದ ಜ್ಞಾನ ಭಾರತಿ ಆವರಣದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೆಣ್ಣು ಅಂದರೆ ಕೇವಲ ಒಂದು ವ್ಯಕ್ತಿ ಮಾತ್ರವಲ್ಲ, ಅವಳು ಒಂದು ಕುಟುಂಬದ ಕಣ್ಣು, ಒಂದು ಕುಟುಂಬದ ಶಕ್ತಿ. ಬಹುಕಾಲದಿಂದ ಮಹಿಳೆಯರಿಗೆ ವಸ್ತ್ರ ಸಂಹಿತೆ, ಸಂಪ್ರದಾಯಗಳು ಮತ್ತು ರೀತಿ-ರಿವಾಜುಗಳ ಹೆಸರಿನಲ್ಲಿ ಅನೇಕ ನಿರ್ಬಂಧಗಳನ್ನು ವಿಧಿಸಲಾಗಿದೆ.

ಮಹಿಳೆಯರ ಸುತ್ತ ಅನೇಕ ತಡೆಗೋಡೆಗಳನ್ನು ಕಟ್ಟಲಾಗಿದೆ. ಇಂದು ಮಹಿಳೆಯರು ಶಿಕ್ಷಣ, ವಿಜ್ಞಾನ, ಆಡಳಿತ, ಕಲೆ, ಸಾಹಿತ್ಯ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಎಲ್ಲಾ ಸಂಕೋಲೆಗಳನ್ನು ತೊಡೆದು ಹಾಕಿ ಅವರು ಸಾಧನೆಯ ದಾರಿಯಲ್ಲಿ ಮುನ್ನಡೆಯುತ್ತಿರುವುದು ಸಮಾಜದ ಹೆಮ್ಮೆಯ ಸಂಗತಿ ಎಂದರು.

ಬೆಂಗಳೂರು ವಿವಿಯಿಂದ ಪ್ರಸಿದ್ಧ ಲೇಖಕಿ ಡಾ.ಆರ್.ತಾರಿಣಿ ಶುಭದಾಯಿನಿ, ಇಸ್ರೋ ಸಮೂಹ ನಿರ್ದೇಶಕಿ ರೂಪ ಎಂ.ವಿ, ಹಿರಿಯ ಪತ್ರಕರ್ತೆ ರಾಧಾ ಹಿರೇಗೌಡರ್, ಕ್ರೀಡಾಪಟು ವಿ.ಕಾವ್ಯ ಅವರಿಗೆ ವಿಶೇಷ ಸಾಧಕಿ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ಬೆಂಗಳೂರು ವಿವಿ ಬೋಧಕೇತರ ಹುದ್ದೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಮಹಿಳಾ ಸಿಬ್ಬಂದಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಬೆಂಗಳೂರು ವಿವಿ ಕುಲಪತಿ ಡಾ.ಜಯಕರ ಎಸ್.ಎಂ, ಕುಲಸಚಿವರು ಕೆ.ಟಿ.ಶಾಂತಲಾ, ಕುಲಸಚಿವರು (ಮೌಲ್ಯಮಾಪನ) ಪ್ರೊ.ಸಿ.ಎಸ್ ಕರಿಗಾರ್, ಸಂಯೋಜಕರು ಪ್ರೊ.ಎಸ್. ನಾಗರತ್ನಮ್ಮ, ನಿಕಟಪೂರ್ವ ಕುಲಪತಿಗಳು ಮಹಾರಾಣಿ ಕ್ಲಸ್ಟರ್ ವಿವಿ ಪ್ರೊ. ಎಲ್.ಗೋಮತಿದೇವಿ, ಸಿಂಡಿಕೇಟ್ ಸದಸ್ಯರು ಡಾ.ಕೆ. ಷರೀಫಾ ಇದ್ದರು.

ಬೆಂಗಳೂರು ವಿವಿ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಿತು.

ದೇಶದ ಸಂಪ್ರದಾಯ, ಘನತೆಗೆ ಧಕ್ಕೆ | ಕಾಂಗ್ರೆಸ್, ಮಿತ್ರಪಕ್ಷಗಳ ವರ್ತನೆಗೆ ಆಕ್ಷೇಪ

ಸೋನಿಯಾಗೆ ದೇವೇಗೌಡರ ಪತ್ರ



ದೆಹಲಿ: ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿಗೆ ಮಾಜಿ ಪ್ರಧಾನಿ ಹೆಚ್‌ಡಿ ದೇವೇಗೌಡ ಪತ್ರ ಬರೆದಿದ್ದಾರೆ. ಸುದೀರ್ಘ 2 ಪುಟಗಳ ಪತ್ರ ಬರೆದಿರುವ ದೇವೇಗೌಡರು, ಸಂಸತ್‌ನಲ್ಲಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ಸದಸ್ಯರ ವರ್ತನೆ ಬಗ್ಗೆ ಆಕ್ಷೇಪಿಸಿದ್ದಾರೆ.

ಪತ್ರದಲ್ಲಿ ದೇವೇಗೌಡ ಅವರು ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಪಾರ್ಲಿಮೆಂಟ್‌ನೊಳಗೆ ಮತ್ತು ಹೊರಗೆ ವಿರೋಧ ಪಕ್ಷಗಳು ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಸದಸ್ಯರು ತೋರಿಸುತ್ತಿರುವ ಅತಿಯಾದ ವರ್ತನೆ, ಅಶಿಸ್ತಿನ ನಡವಳಿಕೆ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ವಿರೋಧ ಪಕ್ಷಗಳು ತಮ್ಮ ವಿರೋಧವನ್ನು ತೋರಿಸಬಹುದು, ಆದರೆ ಅದು ಪಾರ್ಲಿಮೆಂಟ್‌ನ ನಿಯಮಗಳು, ಸಂಪ್ರದಾಯಗಳು ಮತ್ತು ಘನತೆಗೆ ಧಕ್ಕೆ ತರುವಂತಿರಬಾರದು ಎಂದು ಗೌಡರು ಹೇಳಿದ್ದಾರೆ.

ಈ ಹಿಂದೆ ವಿರೋಧ ಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯನ್ನು ಗೌರವಿಸಿ, ಸಂಯಮದಿಂದ ವರ್ತಿಸಿದ್ದವು ಎಂದು ಉದಾಹರಣೆ ನೀಡಿದ್ದಾರೆ. ಪಾರ್ಲಿಮೆಂಟ್ ಮೆಟ್ಟಿಲುಗಳ ಮೇಲೆ ಕುಳಿತು ಚಹಾ-ಬಿಸ್ಕತ್ತು-ಪಕೋಡಾ ತಿನ್ನುವುದು ಮುಂತಾದ ಈಗಿನ ಅತಿಯಾದ ಕ್ರಮಗಳು ಅನುಚಿತವೆಂದು ಟೀಕಿಸಿದ್ದಾರೆ. ಇದರ ಅತಿಯಾದ ಪರಿಣಾಮಗಳು ಜನಾಂಗೀಯ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತವೆ ಎಂದು ದೇವೇಗೌಡರು ಎಚ್ಚರಿಕೆ ನೀಡಿದ್ದಾರೆ. ಪತ್ರದ ಸಮೇತ ಹೆಚ್‌ಡಿ ದೇವೇಗೌಡರು ತಮ್ಮ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿ ದ್ದಾರೆ. ನಾನು ಇಂದು ಶ್ರೀಮತಿ ಸೋನಿಯಾ ಗಾಂಧಿಯವರಿಗೆ ಪತ್ರ ಬರೆದಿದ್ದೇನೆ. ಸಂಸತ್ತಿನ ಕಲಾಪಕ್ಕೆ ಆಗುತ್ತಿರುವ ಆಗಾಗ್ಗೆ ಅಡ್ಡಿ ಮತ್ತು ಸಂಸದೀಯ ಸಂಪ್ರದಾಯಗಳ ನಿರ್ಲಕ್ಷ್ಯದ ಬಗ್ಗೆ ಅವರ ಅನುಭವ ಮತ್ತು ಪ್ರಬುದ್ಧತೆಯ ಸಂಪತ್ತನ್ನು ಬಳಸಿಕೊಂಡು ಕಾಂಗ್ರೆಸ್ ಪಕ್ಷ ಮತ್ತು ವಿರೋಧ ಪಕ್ಷದ ಸಹೋದ್ಯೋಗಿಗಳೊಂದಿಗೆ ಮಾತನಾಡಲು ನಾನು ಅವರನ್ನು ವಿನಂತಿಸಿದ್ದೇನೆ ಅಂತ ಹೇಳಿದ್ದಾರೆ.

ಹಿಂದಿ-ಇಂಗ್ಲಿಷ್‌ನಲ್ಲಿ ರೈಲ್ವೆ ಪರೀಕ್ಷೆ: ಕರಾವೇ ಪ್ರತಿಭಟನೆ

ಬೆಂಗಳೂರು: ರೈಲ್ವೆ ಇಲಾಖೆಯ ಒಳ ಪದೋನ್ನತಿ ಪರೀಕ್ಷೆಯನ್ನು ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರ ನಡೆಸುತ್ತಿರುವುದಕ್ಕೆ ಕನ್ನಡದ ಸ್ಪರ್ಧಾರ್ಥಿಗಳಿಗೆ ಅನ್ಯಾಯವಾಗಿದೆ. ಈ ಹಿನ್ನಲೆಯಲ್ಲಿ ಮಂಗಳವಾರ ನಡೆಯಲಿರುವ ಪರೀಕ್ಷೆಯನ್ನು ತಡೆಯಲು ಪರೀಕ್ಷಾ ಕೇಂದ್ರಗಳ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣ ಗೌಡ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈಲ್ವೆ ಇಲಾಖೆಯಲ್ಲಿ 194 ಗೂಡ್ಸ್ ಟ್ರೈನ್ ಮ್ಯಾನೇಜರ್ ಹುದ್ದೆಗೆ ಹಾಗೂ 101 ಎಲ್‌ಡಿಸಿಎ ಹುದ್ದೆಗೆ ಹುದ್ದೆಗಳಿಗಾಗಿ ಪರೀಕ್ಷೆ ನಡೆಯಲಿದ್ದು, ಈ ಪರೀಕ್ಷೆಯನ್ನು ಬೆಂಗಳೂರು, ಹುಬ್ಬಳ್ಳಿ ಮತ್ತು ಮೈಸೂರು ನಗರಗಳಲ್ಲಿ ನಡೆಸಲು ಯೋಜಿಸಲಾಗಿದೆ. ಆದರೆ ಈ ಪರೀಕ್ಷೆಯಲ್ಲಿ ಕನ್ನಡ ಭಾಷೆಗೆ ಅವಕಾಶ ನೀಡದೇ ಕೇವಲ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ಮಾತ್ರ ಅವಕಾಶ ನೀಡಿರುವುದು ಕನ್ನಡಿಗರ ವಿರುದ್ಧದ ಭೇದಭಾವ ಮೂಡಿಸಿದಂತಾಗಿದೆ. ರೈಲ್ವೆ ಇಲಾಖೆಯಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಕನ್ನಡಿಗ ಉದ್ಯೋಗಿಗಳು ಪದೋನ್ನತಿ ಪಡೆಯಲು ಪರೀಕ್ಷೆ ಬರೆಯಬೇಕಾಗುತ್ತದೆ. ಆದರೆ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದೇ ಇರುವುದು ನ್ಯಾಯಸಮ್ಮತವಲ್ಲ ಎಂದರು.

ಈ ಕುರಿತು ಅಭ್ಯರ್ಥಿಗಳೇ ನನ್ನನ್ನು ಖುದ್ದಾಗಿ ಸಂಪರ್ಕಿಸಿ ಸಮಸ್ಯೆ ವಿವರಿಸಿದ್ದಾರೆ. ಕಳೆದ ನಾಲ್ಕು ದಿನಗಳ ಹಿಂದೆ ಈ ವಿಷಯವನ್ನು ನನಗೆ ತಿಳಿಸಿದರು. ಕನ್ನಡಿಗರಿಗೆ ಪದೋನ್ನತಿ ಸಿಗಬಾರದೆಂಬ ರೀತಿಯಲ್ಲಿ ಈ ಪರೀಕ್ಷಾ ವ್ಯವಸ್ಥೆ ರೂಪಿಸಲಾಗಿದೆ. ಈ ಬಗ್ಗೆ ಕೇಂದ್ರ ಸಚಿವರು ಮತ್ತು ಕರ್ನಾಟಕದ ಸಂಸದರು ತಕ್ಷಣ ಮಧ್ಯ ಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸಬೇಕು. ಸಮಸ್ಯೆ ಪರಿಹರಿಸಲು ಸಾಧ್ಯವಾಗದಿದ್ದರೆ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಕರ್ನಾಟಕಕ್ಕೆ ಬಂದು ಜನರಿಗೆ ಉತ್ತರ ನೀಡಬೇಕು. ಇದೇ ವಿಚಾರವಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರೊಂದಿಗೆ ದೂರ ವಾಣಿ ಮೂಲಕ ಮಾತನಾಡಿದ್ದೇನೆ. ಈ ಕುರಿತು ಒಂದು ನಿಯೋಗವನ್ನು ದೆಹಲಿಗೆ ಕಳುಹಿಸುವಂತೆ ಅವರು ಸಲಹೆ ನೀಡಿದ್ದಾರೆ. ಆದರೂ ಕೂಡ ತಕ್ಷಣದ ಕ್ರಮ ಅಗತ್ಯವಿರುವುದರಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯಕರ್ತರಿಗೆ ಪ್ರತಿಭಟನೆ ನಡೆಸಲು ಕರೆ ನೀಡಲಾಗಿದೆ ಎಂದರು.

ಅಭಿವೃದ್ಧಿ ಶೂನ್ಯ ಸಾಲದ ಬಜೆಟ್: ಸಿ.ಟಿ ರವಿ

ಬೆಂಗಳೂರು: ಹಿಂದಿನ ವರ್ಷದ ಬಜೆಟ್ ಕೇವಲ ಶೇ.59 ಮಾತ್ರ ಬಳಕೆ ಆಗಿದೆ. ಸಾಲದಲ್ಲಿ ಈ ವರ್ಷದ್ದು ದಾಖಲೆಯ ಸಾಲದ ಬಜೆಟ್ ಆಗಿದೆ. ಬಜೆಟ್‌ನಲ್ಲಿ ಮೀಸಲಿಟ್ಟ ಹಣ ಬಳಸಲು ಕಳ್ಳ ಲೆಕ್ಕ ಬರೆಯಬೇಕಾಗಿದೆ ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ ರವಿ ಕಿಡಿಕಾರಿದ್ದಾರೆ.

ಬಜೆಟ್ ಮೇಲೆ ಚರ್ಚೆ ವೇಳೆ ಸರಕಾರ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಕಳೆದ ವರ್ಷದ ಬಜೆಟ್‌ನಲ್ಲಿ ಘೋಷಣೆ ಮಾಡಿ ದಂತೆ ಆದಾಯ ಸಂಗ್ರಹ ಮಾಡಲು ಆಗಿಲ್ಲ. ರೈತರ ಆತ್ಮಹತ್ಯೆಯಲ್ಲಿ ದೇಶದಲ್ಲಿ ರಾಜ್ಯ 2ನೇ ಸ್ಥಾನದಲ್ಲಿದೆ. ರೈತರ ಆತ್ಮಹತ್ಯೆಗೆ ಕಾರಣ ಹುಡುಕುವುದಕ್ಕೆ ಸರಕಾರ ವಿಫಲ ವಾಗಿದೆ. ರೈತರಿಗೆ ಪರಿಹಾರ ಸಹ ಸರಿಯಾಗಿ ವಿತರಣೆಯಾಗಿಲ್ಲ, ಅನ್ನದಾತ ಬದುಕಿನ ಭರವಸೆ ಕಳೆದುಕೊಂಡಿರುವುದಕ್ಕೆ ಕಾರಣ ಹುಡುಕಬೇಕಿದೆ. ಬಜೆಟ್‌ನಲ್ಲಿ ರೈತರಿಗೆ ಪ್ರಮುಖವಾಗಿ ಯೋಜನೆಗಳನ್ನ ಕೊಟ್ಟಿಲ್ಲ. ನೀರಾವರಿ ಯೋಜನೆಗೂ ಸಹ ಬಿಜೆಪಿ ಅವಧಿಗಿಂತಿ ಮೂರು ರಷ್ಟು ಕಡಿಮೆ ಕೊಟ್ಟಿದ್ದಾರೆ. ಇದೊಂದು ರೀತಿಯಲ್ಲಿ ರಾಜಕೀಯ ಇತಹಾಸದಲ್ಲಿ ದಾಖಲೆ. ಬಜೆಟ್‌ನಲ್ಲಿ ಜುಂಗಲ್‌ಬಂಧಿ ನಡೆಸಿದ್ದಾರೆ. ಖಾಲಿ ಚೆಂಬು ಹಿಡಿದು ವಿಪಕ್ಷಗಳು ಯಾಕೆ ಪ್ರತಿಭಟನೆ ಮಾಡಿದೇವೂ ಅನ್ನೋದನ್ನು ಅರ್ಥ ಮಾಡಿ ಕೊಳ್ಳಬೇಕಿದೆ ಎಂದರು. ದಾಖಲೆಯ ಬಜೆಟ್ ಮಂಡನೆ ಮಾಡುವುದು ವಿಶೇಷ ಅಲ್ಲ, ಸಾರ್ಥಕ ಬಜೆಟ್ ಮಂಡನೆ ಮಾಡಿಲ್ಲ. ರಾಜಕೀಯ ಮರುಹುಟ್ಟು ಸ್ಥಾಪಿಸಲು ಸಿಎಂ ಅವರು ಅಹಿಂದ ಹುಟ್ಟುಹಾಕಿದರು ಎಂದರು.

ರಾಜ್ಯ ಹಾಳು ಮಾಡಿದ ಕಾಂಗ್ರೆಸ್ ಸರಕಾರ

ಶಕ್ತಿ ಯೋಜನೆಯನ್ನು ಸಾರಿಗೆ ಸಂಸ್ಥೆ ನಿಶಕ್ತಿ ಯೋಜನೆ ಮಾಡಿದ್ದಾರೆ. ನಾಲ್ಕು ನಿಗಮಗಳಿಗೆ 4,200 ಕೋಟಿ ರು.ಬಾಕಿ ಉಳಿಸಿಕೊಂಡಿದೆ ಸಾರಿಗೆ ಇಲಾಖೆಯೇ ನಿಶಕ್ತಿ ಆದರೆ ಬಸ್ ನಿಂತುಕೊಳ್ಳುತ್ತಿದೆ. ಉಚಿತ ಪ್ರಯಾಣ ಅಂತ ಹೋಗಿ ಸೀರೆಯನ್ನು ಕಚ್ಚೆ ರೀತಿ ಕಟ್ಟಿಕೊಂಡು ಬಸ್ ತಳ್ಳುವಂತ ಕಾಲ ಬಂದಿದೆ. ರಾಜ್ಯ ಹಾಳು ಮಾಡುವವರನ್ನು ಏನೆಂದು ಕರೆಯಬೇಕು ಎಂದು ಹೇಳಿದಾಗ ದೇಶವನ್ನ ಹಾಳು ಮಾಡುವವರನ್ನು ಏನೆಂದು ಕರೆಯಬೇಕು ಎಂದು ಕೈ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಸಾಲ ಮಾಡಿ ರಾಜಕೀಯ ಲಾಭ ಪಡೆಯುವ ಉದ್ದೇಶ ಆಗಿದ್ದು, ವಿತ್ತಿಯ ಕೊರೆತೆಯ ಬಜೆಟ್ ಆಗಿದೆ. ಸಿದ್ದರಾಮಯ್ಯ ಅನುಭವ ವಿತ್ತಿಯ ಕೊರೆತೆಯನ್ನು ಕಡಿಮೆ ಮಾಡಬೇಕಿತ್ತು. ಕೇಂದ್ರದಿಂದ ರಾಜ್ಯಕ್ಕೆ ತೆರಿಗೆ ಪಾಲು ಡಬಲ್ ಸಿಗುತ್ತಿದೆ ಎಂದು ಪರಿಷತ್ ಸದಸ್ಯ ಸಿ.ಟಿ. ರವಿ ತಿಳಿಸಿದರು.

ಕೆ.ಎಚ್.ಪಾಟೀಲ್ ಅಪರೂಪದ ರಾಜಕಾರಣಿ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಹಕಾರಿ ಧುರೀಣ ಕೆ.ಎಚ್ ಪಾಟೀಲರು ಅಪರೂಪದ ರಾಜಕಾರಣಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸಹಕಾರಿ ರಂಗದ ಭೀಷ್ಮ, ನಾಡು ಮೆಚ್ಚಿದ ನಾಯಕ ಕೆ.ಎಚ್ ಪಾಟೀಲ್‌ರ 101 ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು, ಸಹಕಾರಿ ಕ್ಷೇತ್ರದಲ್ಲಿ ಮಾಡದಿರುವ ಕೆಲಸವಿಲ್ಲ. ಸಾಮಾನ್ಯ ಗ್ರಾಮದಲ್ಲಿ ಹುಟ್ಟಿ ಪಂಚಾಯತಿ ಸದಸ್ಯರಾಗಿ, ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ಸಚಿವರಾಗಿ ಕಾರ್ಯನಿರ್ವಹಿಸಿದ್ದ ಕೆ. ಎಚ್. ಪಾಟೀಲ್ ಅವರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆ ಮಾತಿನಂತೆ ಸಹಕಾರಿ ಕ್ಷೇತ್ರದಲ್ಲಿ ಇವರು ಮಾಡದಿರುವ ಕೆಲಸವಿಲ್ಲ. ಸಹಕಾರಿ ಕ್ಷೇತ್ರ ಮಾತ್ರವಲ್ಲದೆ, ರಾಜಕೀಯ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡಿದ್ದರು. ದೇವರಾಜ ಅರಸು, ವೀರೇಂದ್ರ ಪಾಟೀಲ್ ಹಾಗೂ ಬಂಗಾರಪ್ಪ ಅವರ ಸಂಪುಟದಲ್ಲಿ ಸಚಿವರಾಗಿದ್ದರು ಎಂದರು.

ಕೆ.ಎಚ್ ಪಾಟೀಲರು ಬಡವರು, ದಲಿತರು, ಅಲ್ಪಸಂಖ್ಯಾತರಿಗೆ ಆರ್ಥಿಕ ಶಕ್ತಿ ತುಂಬಿದ್ದರು. ಪಾಟೀಲರ ಸಂಪರ್ಕ ರಾಜಕೀಯವಾಗಿ ಕಡಿಮೆಯಿದ್ದರೂ ಅವರು ಸಚಿವರಾಗಿ ಮಾಡುತ್ತಿದ್ದ ಕೆಲಸವನ್ನು ಗಮನಿಸುತ್ತಿದ್ದೆ. ಓದು ಕಡಿಮೆಯಿದ್ದರೂ ಜನಪರವಾದ ಅಪಾರ ಕಾಳಜಿಯನ್ನು ಹೊಂದಿದ್ದರು. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಬಡವರು, ದಲಿತರು, ಅಲ್ಪಸಂಖ್ಯಾತರಲ್ಲಿ ಶಕ್ತಿ ತುಂಬುವ ಕೆಲಸ ಮಾಡಿದ್ದನ್ನು ಸ್ಮರಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ , ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭಾ ಉಪಾಧ್ಯಕ್ಷರಾದ ರುದ್ರಪ್ಪ ಲಮಾಣಿ, ಸಚಿವರಾದ ಕೆ. ಎಚ್.ಮುನಿ ಯಪ್ಪ, ಎಚ್. ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಎನ್. ಎಸ್ ಬೋಸರಾಜು, ಶರಣಪ್ರಕಾಶ್ ಪಾಟೀಲ್, ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜರಾಯ ರೆಡ್ಡಿ, ಶಾಸಕರು, ಉಪಸ್ಥಿತರಿದ್ದರು.



ಕೆ.ಎಚ್.ಪಾಟೀಲ್ ಜಯಂತ್ಯುತ್ಸವದ ನಿಮಿತ್ತ ಸಿಎಂ ಸಿದ್ದರಾಮಯ್ಯ ಅವರು ಪುಷ್ಪನಮನ ಸಲ್ಲಿಸಿದರು.

ಮೇ ತಿಂಗಳಿನಲ್ಲಿ ಗುಲಾಬಿ ಮಾರ್ಗ ಕಾರ್ಯಾಚರಣೆ

ಬೆಂಗಳೂರು: ನಮ್ಮ ಮೆಟ್ರೋದ ಗುಲಾಬಿ ಮಾರ್ಗವು ಮೇ ತಿಂಗಳಿನಲ್ಲಿ ಕಾರ್ಯಾಚರಣೆ ಮಾಡಲು ಸಿದ್ಧತೆ ನಡೆಸಿದ್ದು, ನಾಲ್ಕನೇ ರೈಲು ಭಾನುವಾರ ನಗರಕ್ಕೆ ಬಂದಿಳಿದಿದೆ. ಆರು ಕೋಚ್‌ಗಳಿರುವ ಹೊಸ ರೈಲು ಸೆಟ್‌ನ್ನು ಮಾರ್ಚ್ 13ರಂದು ಬಿಇಎಂಎಲ್ ಸಂಸ್ಥೆಯ ನ್ಯೂ ತಿಪ್ಪಸಂದ್ರ ಘಟಕದಿಂದ ಬನ್ನೇರುಘಟ್ಟ ರಸ್ತೆಯಲ್ಲಿರುವ ಕೊತ್ತನೂರು ಡಿಪೋಗೆ ತರಲಾಗಿದ್ದು, ಈ ರೈಲನ್ನು ಪ್ರಸ್ತುತ ಕೊತ್ತನೂರು ಡಿಪೋದಲ್ಲಿನ ಇನ್‌ಸ್ಪೆಕ್ಷನ್ ಬೇ ಲೈನ್‌ಗೆ ಸ್ಥಳಾಂತರಿಸಿ ಅಗತ್ಯ ತಾಂತ್ರಿಕ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಎಲ್ಲಾ ಪರೀಕ್ಷೆಗಳು ಮತ್ತು ನಿಯಮಾನುಸಾರ ಅನುಮತಿ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ರೈಲು ಸೇವೆಗೆ ಸಿದ್ಧವಾಗಲಿದೆ.

ಗುಲಾಬಿ ಮಾರ್ಗದ ಮೊದಲ ರೈಲನ್ನು ಬಿಇಎಂಎಲ್ ಸಂಸ್ಥೆ 2025ರ ಡಿ. 11ರಂದು ಬಿಡುಗಡೆ ಮಾಡಿತ್ತು. ಬಳಿಕ ಫೆಬ್ರವರಿಯಲ್ಲಿ ಇನ್ನೂ ಎರಡು ರೈಲುಗಳನ್ನು ಬಿಎಂಆರ್‌ಸಿಎಲ್‌ಗೆ ಹಸ್ತಾಂತರಿಸಿತ್ತು. ಈಗ ನಾಲ್ಕನೇ ರೈಲು ಕೂಡ ಬಂದಿರುವುದರಿಂದ ಗುಲಾಬಿ ಮಾರ್ಗದಲ್ಲಿ ಸೇವೆ ಆರಂಭಕ್ಕೆ ಸಿದ್ಧತೆಗಳು ನಡೆದಿದ್ದು, 7.5 ಕಿ.ಮೀ ಉದ್ದದ ಕಾಳೇನ ಅಗ್ರಹಾರ -ತಾವರೆಕೆರೆಯ ಗುಲಾಬಿ ಮಾರ್ಗದಲ್ಲಿ ಮೇ ತಿಂಗಳಲ್ಲಿ ರೈಲು ಸಂಚಾರ ಆರಂಭಿಸಲು ನಿರ್ಧರಿಸಲಾಗಿದೆ ಎಂದು ಮೆಟ್ರೋ ತಿಳಿಸಿದೆ.

ನೇರಳೆ ಮತ್ತು ಹಸಿರು ಮಾರ್ಗಗಳಲ್ಲೂ ಸಂಚಾರ

ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿನ ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಕೂಡ ಕ್ರಮ ಕೈಗೊಳ್ಳಲಾಗಿದ್ದು, ಕೋಲ್ಕತ್ತಾ ಮೂಲದ ಟಿಟಾಗಢ್ ರೈಲ್ ಸಿಸ್ಟಮ್ಸ್ ಲಿಮಿಟೆಡ್ ಸಂಸ್ಥೆ ನೇರಳೆ ಹಾಗೂ ಹಸಿರು ಮಾರ್ಗಗಳಿಗಾಗಿ ಎರಡನೇ ಡಿಟಿಜಿ ರೈಲು ಸೆಟ್‌ನ್ನು ಕಳುಹಿಸಿದೆ. ಈ ರೈಲಿನ ಮೂರು ಕೋಚ್‌ಗಳನ್ನು ಮಾರ್ಚ್ 13ರಂದು ಕಳುಹಿಸಲಾಗಿದ್ದು, ಉಳಿದ ಮೂರು ಕೋಚ್‌ಗಳು ಮರುದಿನ ರಾತ್ರಿ ರವಾನೆಯಾಗಿವೆ. ರೈಲು ಈ ತಿಂಗಳ ಅಂತ್ಯದೊಳಗೆ ಪೀಣ್ಯ ಡಿಪೋ ತಲುಪುವ ಸಾಧ್ಯತೆ ಇದೆ. ಈ ಎರಡು ಹೊಸ ರೈಲುಗಳು ಮೇ-ಜೂನ್ ವೇಳೆಗೆ ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ಸಂಚಾರ ಶುರು ಮಾಡುವ ನಿರೀಕ್ಷೆಯಿದ್ದು, ಪೀಕ್ ಅವರ್‌ಗಳಲ್ಲಿ ಮೆಟ್ರೋದಲ್ಲುಂಟಾಗುವ ಜನದಟ್ಟಣೆ ಇದರಿಂದ ಕಡಿಮೆಯಾಗಲಿದೆ ಎಂದು ಮೆಟ್ರೋ ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ದಾವಣಗೆರೆ ಟಿಕೆಟ್‌ಗೆ ಮುಸ್ಲಿಮರಿಂದ ಆಗ್ರಹ

ದಾವಣಗೆರೆ: ಶಾಮನೂರು ಶಿವಶಂಕರಪ್ಪ ಅವರನ್ನು ಇಷ್ಟು ವರ್ಷ ಗೆಲ್ಲಿಸಿಕೊಂಡು ಬಂದಿದ್ದೇವೆ. ಈ ಉಪಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಅಲ್ಪಸಂಖ್ಯಾತರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ನೀಡಬೇಕು ಎಂದು ಮುಸ್ಲಿಂ ಮುಖಂಡರು ಒತ್ತಾಯಿಸಿದ್ದಾರೆ. ಇದರ ನಡುವೆ ಕೆಲವು ಮುಸ್ಲಿಂ ಮುಖಂಡರು ಸಮರ್ಥ್ ಶಾಮನೂರು ಅವರಿಗೆ ಟಿಕೆಟ್ ನೀಡುವಂತೆ ಸಿಎಂ ಹಾಗೂ ಡಿಸಿಎಂಗೆ ಒತ್ತಾಯಿಸಿದ್ದಾರೆ. ಸಮರ್ಥ್ ಅವರಿಗೆ ಟಿಕೆಟ್ ನೀಡುವಂತೆ ಒತ್ತಾಯಿಸಿದ್ದ ಮುಸ್ಲಿಂ ಮುಖಂಡರ ವಿರುದ್ಧ ಅದೇ ಸಮುದಾಯದ ಯುವಕರು ಆಕ್ರೋಶ ಹೊರಹಾಕಿದ್ದಾರೆ. ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಜತೆ ನಿಯೋಗ ಹೋಗಿ ಸಮರ್ಥ್ ಶಾಮನೂರು ಅವರಿಗೆ ಟಿಕೆಟ್‌ಗಾಗಿ ಒತ್ತಾಯ ಮಾಡಿದ್ದಾರೆ ಎಂದು ಯುವಕರು ಅಸಮಾಧಾನ ಹೊರಹಾಕಿದ್ದಾರೆ. ಅಲ್ಲದೇ ಅಂಜುಮನ್ ಇಸ್ಲಾಂ ಕಮಿಟಿ ಅಧ್ಯಕ್ಷರನ್ನು ಪ್ರಶ್ನೆ ಮಾಡಿ ಘೇರಾವ್ ಹಾಕಲು ಯುವಕರ ಗುಂಪು ಮುಂದಾಗಿತ್ತು. ಕಚೇರಿಯಲ್ಲಿ ಅಧ್ಯಕ್ಷ ದಾದು ಸೇಠ್ ಸಿಗದ ಕಾರಣ ಕೆರಳಿದ್ದ ಯುವಕರ ಗುಂಪು, ಅಂಜುಮನ್ ಕಮಿಟಿಯ ಕಚೇರಿ ಎದುರು ನಿಂತು ಧಿಕ್ಕಾರ ಕೂಗಿದರು. ಬಳಿಕ ಮುಸ್ಲಿಂ ಮುಖಂಡರು ತಿಳಿ ಹೇಳಿ ಅವರನ್ನು ಅಲ್ಲಿಂದ ಕಳಿಸಿದ್ದಾರೆ.

ಆಸ್ತಿಗಾಗಿ ತೋಟದಲ್ಲಿ ಮಹಿಳೆಯ ಕೊಲೆ

ಚಿಕ್ಕೋಡಿ: ಕಬ್ಬಿನ ತೋಟದಲ್ಲಿ ಮಹಿಳೆಯನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಬೆಳಗಾವಿ ಜಿಲ್ಲೆಯ ಅಥಣಿ ಪಟ್ಟಣದಲ್ಲಿ ನಡೆದಿದೆ. ಸುಜಾತಾ

ಪವಾರ (34) ಮೃತ ಮಹಿಳೆ. ಮಾರ್ಚ್ 5 ರಂದು ಮಹಿಳೆಯನ್ನು ಅಥಣಿ ಪಟ್ಟಣದ ಸಮೀಪದಲ್ಲಿರುವ ಪ್ರದೀಪ್ ಗುಂಡಾ ಎಂಬುವವರ ಕಬ್ಬಿನ ತೋಟದಲ್ಲಿ ಕೊಲೆ ಮಾಡಲಾಗಿದೆ. ಮೃತ ಸುಜಾತಾ ಹಾರೂಗೇರಿಯಲ್ಲಿರುವ ಆಕೆಯ ಗಂಡನ ಜೊತೆ ಸಂಬಂಧ ಕಡಿದುಕೊಂಡು ತವರು ಮನೆಯಾದ ಅಥಣಿಯಲ್ಲಿ ವಾಸವಿದ್ದಳು. ಈ ವೇಳೆ ಕುಮಾರ ಹವಾಲ್ದಾರ್ ಸುಜಾತಾ ಜೊತೆ ಸಂಬಂಧ ಹೊಂದಿದ್ದ. ಕುಮಾರ್ ಮಹಿಳೆಯ ಆಸ್ತಿ ಹೊಡೆಯಲು ಆಕೆಯನ್ನು ಕೊಲೆ ಮಾಡಿದ್ದಾನೆ ಎನ್ನುವುದು ಪೊಲೀಸ್ ತನಿಖೆಯಿಂದ ತಿಳಿದು ಬಂದಿದೆ. ಮಾರ್ಚ್ 5 ರಂದು ಮಧ್ಯಾಹ್ನ ಆರೋಪಿ ಕುಮಾರ ಸುಜಾತಾಳನ್ನು ಬೈಕ್ ಮೇಲೆ ಕರೆದೊಯ್ದು ಕಬ್ಬಿನ ತೋಟದಲ್ಲಿ ಆಕೆಯ ಕುತ್ತಿಗೆಗೆ ಬಟ್ಟೆಯಿಂದ ಕಟ್ಟಿ ಉಸಿರು ಗಟ್ಟಿಸಿ ಕೊಲೆ ಮಾಡಿದ್ದಾನೆ. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಂಚ ಪ್ರಕರಣ: 4 ವರ್ಷ ಜೈಲು

ಕಲಬುರಗಿ: ಹೊರಗುತ್ತಿಗೆ ನೌಕರನ ನೇಮಕಾತಿಗೆ ಶಿಫಾರಸು ಮಾಡಲು ಲಂಚ ಪಡೆದಿದ್ದ ಎಂಎಸ್ ಐಎಲ್ ಕಚೇರಿಯ ಇಬ್ಬರು ಅಧಿಕಾರಿಗಳಿಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ವಿಶೇಷ ನ್ಯಾಯಾಲಯವು 4 ವರ್ಷ ಜೈಲು ಶಿಕ್ಷೆ ಹಾಗೂ ತಲಾ 20 ಸಾವಿರ ರು.ದಂಡ ವಿಧಿಸಿ ಸೋಮವಾರ ತೀರ್ಪು ನೀಡಿದೆ.

ಏನಿದು ಪ್ರಕರಣ? : ಎಂಎಸ್‌ಐಎಲ್‌ನಲ್ಲಿ ಎಡಿಇಓ ಆಗಿ ನೇಮಕಗೊಳ್ಳಲು ಸಿದ್ದಲಿಂಗ ಎಂಬುವವರು ಅರ್ಜಿ ಸಲ್ಲಿಸಿದ್ದರು. ಅವರ ನೇಮಕಾತಿಗೆ ಶಿಫಾರಸು ಮಾಡಲು ಡಿಎಲ್‌ಓ ಚಂದ್ರಶೇಖರ ಸಲಾಕೆ 1 ಲಕ್ಷ ರು.ಬೇಡಿಕೆಯಿಟ್ಟು, ಮುಂಗಡವಾಗಿ 50 ಸಾವಿರ ರು.ಪಡೆದಿದ್ದರು. ಈ ಹಣವನ್ನು ಶಾಖಾ ವ್ಯವಸ್ಥಾಪಕ ಬಿ. ಕೃಷ್ಣಮೂರ್ತಿ ಅವರಿಗೆ ನೀಡುತ್ತಿದ್ದಾಗ ಲೋಕಾಯುಕ್ತ (ಅಂದಿನ ಎಸಿಬಿ) ಪೊಲೀಸರು ದಾಳಿ ನಡೆಸಿ ಬಂಧಿಸಿದ್ದರು. ನ್ಯಾಯಾಧೀಶರಾದ ಜಿ.ಎಲ್. ಲಕ್ಷ್ಮೀನಾರಾಯಣ ಅವರು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ಶಿಕ್ಷೆ ಪ್ರಕಟಿಸಿದ್ದಾರೆ. ಸರಕಾರದ ಪರವಾಗಿ ವಿಶೇಷ ಅಭಿಯೋಜಕ ಅಶೋಕ ಎಸ್.ಚಾಂದಕವಠ ವಾದ ಮಂಡಿಸಿದ್ದರು.

22 ಪ್ರಕರಣಗಳು: 36 ಆರೋಪಿಗಳ ಸೆರೆ

ವಿಜಯಪುರ: ಚಿನ್ನಾಭರಣ, ಬೆಳ್ಳಿ, 2 ಕಾರು, 17 ಬೈಕ್ ಜಪ್ತಿ ಸೇರಿದಂತೆ 1.27 ಕೋಟಿ ರು. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿ, ಒಟ್ಟು 22 ಪ್ರಕರಣಗಳ 36 ಆರೋಪಿಗಳನ್ನು ಪೊಲೀಸರು ಬಂಧನ ಮಾಡಿದ್ದಾರೆ. ವಿಜಯಪುರ ಜಿಲ್ಲಾ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಮುದ್ದೇಬಿಹಾಳ, ಬಸವನ ಬಾಗೇವಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ, ದರೋಡೆ ಪ್ರಕರಣಗಳನ್ನ ಬೇಧಿಸಿದ್ದಾರೆ. ಅಂತರ್ ಜಿಲ್ಲಾ, ಅಂತರ್ ರಾಜ್ಯ ಕಳ್ಳರನ್ನು ಬಂಧಿಸಿದ್ದು, ಮನೆ ದರೋಡೆ, ಬೈಕ್ ಕಳ್ಳತನ ಮಾಡುತ್ತಿದ್ದ ಗ್ಯಾಂಗ್ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಪಂಚರಾಜ್ಯಗಳ ಚುನಾವಣಾ ವೇಳಾಪಟ್ಟಿ ಬಿಡುಗಡೆ

ಸುದ್ದಿ

ಒನ್ ಬ್ಯಾಟಲ್ ಆಫ್ಟರ್ ಅನದರ್ ಉತ್ತಮ ಚಿತ್ರ | ಮೈಕಲ್ ಜೋರ್ಡಾನ್ ಅತ್ಯುತ್ತಮ ನಟ

ಆಸ್ಕರ್ ಪ್ರಶಸ್ತಿ: ಭಾರತಕ್ಕೆ ನಿರಾಸೆ

ಲಾಸ್ ಎಂಜಲೀಸ್: ಚಿತ್ರರಂಗದ ಅತ್ಯುತ್ತಮ ಪ್ರಶಸ್ತಿಯಾದ ಆಸ್ಕರ್ ಪ್ರಶಸ್ತಿ ಘೋಷಣೆಯಾಗಿದೆ. ಅಮೆರಿಕದ ಲಾಸ್ ಎಂಜಲೀಸ್‌ನಲ್ಲಿರುವ ಹಾಲಿವುಡ್ ಸ್ಟುಡಿಯೊದಲ್ಲಿ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಅತ್ಯುತ್ತಮ ಸಿನಿಮಾ, ಕಲಾವಿದರು, ತಂತ್ರಜ್ಞರಿಗೆ ಪ್ರಶಸ್ತಿ ನೀಡಿ ಗೌರವಿಸಲಾ ಯಿತು. ಹಾಲಿವುಡ್ ಸೇರಿದಂತೆ ಚಿತ್ರರಂಗದ ಹಲವು ಗಣ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಟಿ ಪ್ರಿಯಾಂಕಾ ಚೋಪ್ರಾ, ಬಿಳಿ ಬಣ್ಣದ ಆಕರ್ಷಕ ಡಿಯರ್ ಗೌನ್ ತೊಟ್ಟು ಕಂಗೊಳಿಸಿದರು.

ಈ ಬಾರಿ ಒನ್ ಬ್ಯಾಟಲ್ ಆಫ್ಟರ್ ಅನದರ್ ಸಿನಿಮಾ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಪೌಲ್ ಥಾಮಸ್ ಆ್ಯಂಡ್ರಿಸನ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದು, ಅತ್ಯುತ್ತಮ ನಿರ್ದೇಶನ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಈ ಚಿತ್ರದಲ್ಲಿ ಟೈಟಾನಿಕ್ ಖ್ಯಾತಿಯ ಲಿಯನಾರ್ಡೋ ಡಿಕ್ಯಾಪ್ರಿಯೋ ನಾಯಕನಾಗಿ ನಟಿಸಿದ್ದಾರೆ. ನಟ ಮೈಕಲ್ ಜೋರ್ಡನ್ ಸಿನ್ನರ್ಸ್ ಚಿತ್ರದ ಅಮೋಘ ಅಭಿನಯಕ್ಕಾಗಿ ಅತುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. ನಟಿ ಜೆಸ್ಸಿ ಬಕ್ಲಿ ಹ್ಯಾಮ್ನೆಟ್ ಸಿನಿಮಾದ ನಟನೆಗಾಗಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ. ಅವತಾರ್: ಫೈಯರ್ ಆಂಡ್ ಆಶ್ ಚಿತ್ರ ಅತ್ಯುತ್ತಮ ವಿಶ್ಯುವಲ್ ಎಫೆಕ್ಟ್ ವಿಭಾಗದಲ್ಲಿ ಪ್ರಶಸ್ತಿ ಪಡೆದಿದೆ. ಆಸ್ಕರ್ ಅಂಗಳದಲ್ಲಿ ಸಿನ್ನರ್ಸ್ ಸಿನಿಮಾ ಹದಿನಾರು ವಿಭಾಗಗಳಲ್ಲಿ ನಾಮಿನೇಟ್ ಆಗುವ ಮೂಲಕ ಗಮನಸೆಳೆದಿದೆ. ಜತೆಗೆ ಹೊಸ ದಾಖಲೆಯನ್ನು ಬರೆದಿದೆ. ರಯಾನ್ ಕೂಗ್ಲರ್ ನಿರ್ದೇಶನದ ಈ ಚಿತ್ರ ಫ್ಯಾಂಟಸಿಯ ಜತೆಗೆ ಹಾರರ್ ಮತ್ತು ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿದೆ.

- ಅತ್ಯುತ್ತಮ ಚಿತ್ರ - ಒನ್ ಬ್ಯಾಟಲ್ ಆಫ್ಟರ್ ಅನದರ್
- ಅತ್ಯುತ್ತಮ ನಟ - ಮೈಕಲ್ ಜೋರ್ಡಾನ್ (ಸಿನ್ನರ್ಸ್)
- ಅತ್ಯುತ್ತಮ ನಟಿ - ಜೆಸ್ಸಿ ಬಕ್ಲಿ (ಹ್ಯಾಮ್ನೆಟ್)
- ಅತ್ಯುತ್ತಮ ಪೋಷಕ ನಟಿ: ಆಮಿ ಮ್ಯಾಡಿಗನ್ (ವೆಪನ್ಸ್)
- ಅತ್ಯುತ್ತಮ ಪೋಷಕ ನಟ: ಸೀನ್ ಪೆನ್ (ಒನ್ ಬ್ಯಾಟಲ್ ಆಫ್ಟರ್ ಅನದರ್)
- ಅತ್ಯುತ್ತಮ ಅನಿಮೇಟೆಡ್ ಫೀಚರ್ ಫಿಲಂ : ಕೆ ಪಾಪ್ ಡೆಮನ್ ಹಂಟರ್ಸ್
- ಅತ್ಯುತ್ತಮ ಅಡಾಪ್ಟೆಡ್ ಸ್ಕ್ರೀನ್‌ಪ್ಲೇ: ಪಾಲ್ ಥಾಮಸ್ ಆಂಡರ್ಸನ್ (ಒನ್ ಬ್ಯಾಟಲ್ ಆಫ್ಟರ್ ಅನದರ್)
- ಅತ್ಯುತ್ತಮ ಒರಿಜಿನಲ್ ಚಿತ್ರಕಥೆ: ರಿಯಾನ್ ಕೂಗ್ಲರ್ (ಸಿನ್ನರ್ಸ್)
- ಅತ್ಯುತ್ತಮ ಕಾಸ್ಟಿಂಗ್: ಕ್ಯಾಸೆಂಡ್ರಾ ಕುಲುಕುಂಡಿಸ್ (ಒನ್ ಬ್ಯಾಟಲ್ ಆಫ್ಟರ್ ಅನದರ್)
- ಅತ್ಯುತ್ತಮ ಅನಿಮೇಟೆಡ್ ಕಿರುಚಿತ್ರ: ದಿ ಗರ್ಲ್ ಹೂ ಕ್ರೈಡ್ ಪರ್ಲ್ಸ್
- ಅತ್ಯುತ್ತಮ ವಿಎಫ್‌ಎಕ್ಸ್ : ಅವತಾರ್: ಫೈರ್ ಅಂಡ್ ಆಶ್
- ಅತ್ಯುತ್ತಮ ಪ್ರೊಡಕ್ಷನ್ ಡಿಸೈನ್: ಫ್ರಾಂಕೆನ್‌ಸ್ಟೈನ್

ಹೊರಬಿದ್ದ ಕಾಂತಾರ-1

ಈ ಬಾರಿ ಭಾರತೀಯ ಸಿನಿಮಾಗಳಿಗೆ ಯಾವುದಾದರೂ ವಿಭಾಗದಲ್ಲಿ ಆಸ್ಕರ್ ಪ್ರಶಸ್ತಿ ಒಲಿಯಬಹುದು ಎಂಬ ಆಸೆ ಎಲ್ಲರಲ್ಲಿಯೂ ಇತ್ತು. ಆದರೆ ಅದು ನಿರಾಸೆಯಾಗಿದೆ. ಆಸ್ಕರ್ ಸ್ಪರ್ಧೆಗೆ ಭಾರತದಿಂದ ಹೋಮ್‌ಬೌಂಡ್ ಸಿನಿಮಾವನ್ನು ಅಧಿಕೃತವಾಗಿ ಆಯ್ಕೆ ಮಾಡಲಾಗಿತ್ತು. ಹೋಮ್ ಬೌಂಡ್ ಸಿನಿಮಾ ವಿದೇಶಿ ಚಿತ್ರಗಳ ಪಟ್ಟಿಯಲ್ಲಿ ಅಂತಿಮ ಹದಿನೈದು ಚಿತ್ರಗಳ ಸ್ಥಾನ ಪಡೆದುಕೊಂಡಿತ್ತು. ಆದರೆ ಅಂತಿಮ ಸುತ್ತಿಗೆ ಆಯ್ಕೆಯಾಗುವಲ್ಲಿ ವಿಫಲವಾಯಿತು.

ಇನ್ನು ಹೊಂಬಾಳೆ ಫಿಲಂಸ್ ತನ್ನ ಬ್ಯಾನರ್‌ನಲ್ಲಿ ನಿರ್ಮಾಣವಾದ ಕಾಂತಾರ- 1 ಹಾಗೂ ಮಹಾವತಾರ್ ನರಸಿಂಹ ಚಿತ್ರಗಳನ್ನು ಆಸ್ಕರ್ ಸ್ಪರ್ಧೆಗೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿತ್ತು. ಭಾರತದಿಂದ ಅಧಿಕೃತವಾಗಿ ಆಯ್ಕೆ ಆಗದಿದ್ದರೂ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಪ್ರವೇಶ ಪಡೆದಿತ್ತು. ಆದರೆ ಅಂತಿಮ ನಾಮಿನೇಷನ್ಸ್ ಪಟ್ಟಿಯಿಂದ ಹೊರಬಿದ್ದಿದ್ದವು. ಇದರಿಂದ ಸಿನಿಪ್ರಿಯರಿಗೆ ಮತ್ತಷ್ಟು ನಿರಾಸೆಯಾಗಿದೆ.

ರಾಯಚೂರಿನಲ್ಲಿ ವರುಣಾರ್ಭಟ

ರಾಯಚೂರು: ಜಿಲ್ಲೆಯ ಹಲವೆಡೆ ಏಕಾಏಕಿ ಜೋರು ಮಳೆ ಸುರಿದಿದ್ದು, ಬಿಸಿಲಿನಿಂದ ತತ್ತರಿಸಿದ್ದ ಬಿಸಿಲನಾಡಿನ ಜನರಿಗೆ ತಂಪೆರೆದಂತಾಗಿದೆ. ಜಿಲ್ಲೆಯ ಕವಿತಾಳ, ಪಾಮನಕಲ್ಲೂರು, ವಟಗಲ್, ಅಮಿನಗಡ ಗ್ರಾಮಗಳಲ್ಲಿ ಆಲಿಕಲ್ಲು ಮಳೆ ಸುರಿದಿದೆ. ಗುಡುಗು, ಮಿಂಚು ಸಹಿತ ಜೋರಾಗಿ ಮಳೆ ಸುರಿದಿದ್ದು, ಬಿಸಿಲಿನಿಂದ ಬೇಸತ್ತಿದ್ದ ಜನರಿಗೆ ತಂಪು ನೀಡಿದೆ. ಆಲಿಕಲ್ಲು ಮಳೆಯಾಗಿದ್ದರಿಂದ ಗ್ರಾಮೀಣ ಭಾಗದಲ್ಲಿ ಅಚ್ಚರಿ ಮೂಡಿಸಿದೆ. ಸೋಮವಾರ ಮಧ್ಯಾಹ್ನ ವೇಳೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಳೆರಾಯ ಅಬ್ಬರಿಸಿದ್ದಾನೆ. ಏಕಾಏಕಿ ಮಳೆ ಸುರಿದಿದ್ದರಿಂದ ಬಸ್ ಸ್ಟಾಪ್ ಸೇರಿ ಸಾರ್ವಜನಿಕ ಸ್ಥಳಗಳಲ್ಲಿ ಕೆಲಕಾಲ ಜನರು ಪರದಾಡುವಂತಾಗಿತ್ತು.

ಬಾವಿಗೆ ಬಿದ್ದ ಮಗು ಪಾರು

ಕಾರವಾರ: ಆಟವಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ಬಾವಿಗೆ ಬಿದ್ದು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ಎರಡು ವರ್ಷದ ಬಾಲಕಿಯನ್ನು ವ್ಯಕ್ತಿಯೋರ್ವ ರಕ್ಷಿಸಿದ ಘಟನೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ನಗರದ ಕಸ್ತೂರಬಾ ನಗರದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಭುವಿ (2) ಬಾವಿಗೆ ಬಿದ್ದು ಅದೃಷ್ಟವಶಾತ್ ಬದುಕುಳಿದ ಬಾಲಕಿಯಾಗಿದ್ದಾಳೆ.



ಮನೆಯಲ್ಲಿ ಮಗು ಕಾಣದಿದ್ದಾಗ ಆತಂಕಗೊಂಡ ಅಜ್ಜಿ ಸುತ್ತಮುತ್ತ ಹುಡುಕಾಡಿದ್ದಾರೆ. ಬಾವಿಯ ಹತ್ತಿರ ಹೋದಾಗ ಮಗುವಿನ ಅಳುವಿನ ಶಬ್ದ ಕೇಳಿಬಂದಿದೆ. ಆತಂಕದೊಂದಿಗೆ ಬಾವಿಯೊಳಗೆ ಇಣುಕಿ ನೋಡಿ ದಾಗ, ಮಗು ನೀರಿಗೆ ಇಳಿಸಲಾಗಿದ್ದ ಪಂಪ್ ಪೈಪನ್ನು ಗಟ್ಟಿಯಾಗಿ ಹಿಡಿದುಕೊಂಡು ಅಳುತ್ತಿರುವುದು ಕಂಡುಬಂದಿದೆ. ಈ ಸುದ್ದಿ ತಿಳಿಯುತ್ತಿದ್ದಂತೆಯೇ ಹತ್ತಿರದಲ್ಲೇ ವಾಸವಿರುವ ಪಯಾಜ್ ಚೌಟಿ ಎಂಬವರು ತಕ್ಷಣ ಸ್ಥಳಕ್ಕೆ ಧಾವಿಸಿ ಬಾವಿಗೆ ಹಗ್ಗದ ಸಹಾಯದಿಂದ ಇಳಿದು ರಕ್ಷಣೆ ಮಾಡಿದ್ದಾರೆ

ತುಮಕೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಕುಂಚಶ್ರೀ ಮಹಿಳಾ ಬಳಗದಿಂದ ಅಂತಾರಾಷ್ಟ್ರೀಯ ತೊಗಲುಗೊಂಬೆ ಕಲಾವಿದೆ ಗಾಯತ್ರಿ ಗಿರಿ ಅವರಿಗೆ ಕುಂಚಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಅಧ್ಯಕ್ಷರಾದ ಲಲಿತಾ ಮಲ್ಲಪ್ಪ ಸೇರಿ ಹಲವು ಗಣ್ಯರು ಪಾಲ್ಗೊಂಡಿದ್ದರು.

ಡಿಸಿ, ಇಓ ವಿರುದ್ಧ ಹಕ್ಕುಚ್ಯುತಿ ಮಂಡಿಸಿದ ರೇವಣ್ಣ

ಹಾಸನ: ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ವಿರುದ್ಧ ಮಾಜಿ ಸಚಿವ ಎಚ್.ಡಿ.ರೇವಣ್ಣ ಅಧಿವೇಶನದಲ್ಲಿ ಹಕ್ಕುಚ್ಯುತಿ ಮಂಡಿಸಿದ್ದಾರೆ.

ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ದೇವಾಲಯ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಶಿಷ್ಟಾಚಾರ ಪಾಲಿಸಿಲ್ಲ, ಕ್ಷೇತ್ರದ ಶಾಸಕನಾದ ನನ್ನ ಹಕ್ಕಿಗೆ ಚ್ಯುತಿ ತಂದಿದ್ದಾರೆ. ಇದು ನನಗೆ ಮಾಡಿದ ಅವಮಾನ ಅಲ್ಲ. ಇಡೀ ಕ್ಷೇತ್ರಕ್ಕೆ ಮಾಡಿದ ಅವಮಾನ ಆಗಿದೆ ಎಂದಿದ್ದಾರೆ. ಜಿಲ್ಲಾಧಿಕಾರಿ ಮಾತ್ರವಲ್ಲದೇ ಹೊಳೆನರಸೀಪುರ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮುನಿರಾಜು ವಿರುದ್ಧವೂ ಹಕ್ಕುಚ್ಯುತಿ ಮಂಡನೆ ಮಾಡಿದ್ದಾರೆ.

ಇಬ್ಬರು ಅಧಿಕಾರಿಗಳ ವಿಚಾರವನ್ನು ಹಕ್ಕುಚ್ಯುತಿ ಸಮಿತಿಗೆ ನೀಡುವುದಾಗಿ ಸಭಾಪತಿ ಯು.ಟಿ.ಖಾದರ್ ಅವರು ಭರವಸೆ ನೀಡಿದ್ದಾರೆ. ಕಳೆದ ಮಾ.3 ರಂದು ಹೊಳೆನರಸೀಪುರದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವವಿದ್ದು, ಮಾ.2 ರಂದು ರಥೋತ್ಸವಕ್ಕೆ ಬಟ್ಟೆ ಅಲಂಕಾರ ಮಾಡುವ ವಿಚಾರಕ್ಕೆ ರೇವಣ್ಣ ಹಾಗೂ ಸಂಸದ ಶ್ರೇಯಸ್ ಪಟೇಲ್ ನಡುವೆ ಜಟಾಪಟಿ ನಡೆದು ಪ್ರತಿಭಟನೆ ನಡೆಸಲಾಗಿತ್ತು.

ಇದಾದ ಬಳಿಕ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಧ್ಯೆಪ್ರವೇಶಿಸಿ ಬಟ್ಟೆ ಬದಲು ಹೂವಿನ ಅಲಂಕಾರ ಮಾಡಿ ರಥೋತ್ಸವ ನಡೆಸುವಂತೆ ಸೂಚಿಸಿದ್ದರು. ಮಾ.3 ರಂದು ಕೇವಲ ಹೂವಿನ ಅಲಂಕಾರದಲ್ಲಿ ರಥೋತ್ಸವ ಜರುಗಿದ್ದು ಡಿಸಿ ವಿರುದ್ಧ ಗರಂ ಆಗಿದ್ದರು. ಈ ವೇಳೆ ರೇವಣ್ಣ ಹಕ್ಕುಚ್ಯುತಿ ಮಂಡಿಸುವುದಾಗಿ ಎಚ್ಚರಿಸಿದ್ದರು.

ಎಲ್‌ಪಿಜಿ ಇ-ಕೆವೈಸಿ ಕಡ್ಡಾಯ

ದೆಹಲಿ: ಗೃಹ ಬಳಕೆಯ ಅಡುಗೆ ಅನಿಲ ಹೊಂದಿರುವವರು ಇ-ಕೆವೈಸಿ ಕಡ್ಡಾಯಗೊಳಿಸಲಾಗಿದೆ. ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಸಿಗುವ ಸಬ್ಸಿಡಿಗೆ ಇ-ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಕೇಂದ್ರ ಸರಕಾರ ಸೂಚಿಸಿದೆ. ಉಜ್ವಲ ಯೋಜನೆಯಡಿ ಸುಮಾರು 105.1 ಮಿಲಿಯನ್‌ಗಿಂತಲೂ ಹೆಚ್ಚು ಫಲಾನುಭವಿಗಳು ಸಬ್ಸಿಡಿ ಪಡೆಯುತ್ತಿದ್ದು, ಇವರ ಸಬ್ಸಿಡಿಗೆ ಅಡಚಣೆಯಾಗದೇ ಇರಲು ವಾರ್ಷಿಕ ಬಯೋಮೆಟ್ರಿಕ್ ಆಧಾರ್ ದೃಢೀಕರಣವನ್ನು ಮಾಡಲೇಬೇಕಾಗುತ್ತದೆ ಎಂದು ಸರಕಾರ ಹೇಳಿದೆ.

ಅಡುಗೆಗೆ ಬಳಸುವ ಅನಿಲ ಅಥವಾ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) 330 ಮಿಲಿಯನ್‌ಗಿಂತಲೂ ಹೆಚ್ಚು ಗೃಹಬಳಕೆದಾರರು ಬಯೋಮೆಟ್ರಿಕ್ ಆಧಾರ್ ದೃಢೀಕರಣ ವ್ಯವಸ್ಥೆಯ ಮೂಲಕ ತಮ್ಮ ಎಲೆಕ್ಟ್ರಾನಿಕ್ ನೋ ಯುವರ್ ಕಸ್ಟಮರ್ (ಇ-ಕೆವೈಸಿ) ಮಾಡಿಸಿಕೊಳ್ಳುವಂತೆ ಸರಕಾರ ಸೂಚಿಸಿದೆ.

ಇದಕ್ಕೆ ಸಂಬಂಧಿಸಿ ಸಾಮಾಜಿಕ ಮಾಧ್ಯಮ ಖಾತೆ ಎಕ್ಸ್ ನಲ್ಲಿ ಮಾಹಿತಿ ನೀಡಿರುವ ಪೆಟ್ರೋಲಿಯಂ ಸಚಿವಾಲಯ, ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರು ಬಯೋಮೆಟ್ರಿಕ್ ಆಧಾರ್ ದೃಢೀಕರಣವನ್ನು ಪೂರ್ಣಗೊಳಿಸಬೇಕಾಗುತ್ತದೆ. ಇದನ್ನು ಮನೆಯಿಂದಲೇ ಮಾಡಬಹುದು. ಇದಕ್ಕಾಗಿ ತೈಲ ಮಾರ್ಕೆಟಿಂಗ್ ಕಂಪನಿಯ (ಒಎಂಸಿ) ಮೊಬೈಲ್ ಅಪ್ಲಿಕೇಶನ್ ಮತ್ತು ಆಧಾರ್ ಫೇಸ್‌ಆರ್‌ಡಿ ಅಪ್ಲಿಕೇಶನ್ ಬಳಸುವಂತೆ ಸೂಚಿಸಿದೆ.

ಗ್ಯಾಸ್ ಏಜೆನ್ಸಿಯಿಂದ ಇ-ಕೆವೈಸಿ

ನಿಮ್ಮ ಆಧಾರ್ ಕಾರ್ಡ್ ಮತ್ತು ಗ್ಯಾಸ್ ಪಾಸ್‌ಬುಕ್ ಅನ್ನು ತೆಗೆದುಕೊಂಡು ಹತ್ತಿರದ ಗ್ಯಾಸ್ ಏಜೆನ್ಸಿಗೆ ಭೇಟಿ ನೀಡಿ. ಅಲ್ಲಿ ಬಯೋಮೆಟ್ರಿಕ್ ಯಂತ್ರದ ಮೂಲಕ ದೃಢೀಕರಣ ಪೂರ್ಣಗೊಳಿಸಿ. ಮೊಬೈಲ್ ಆ್ಯಪ್ ಮೂಲಕ ಇ-ಕೆವೈಸಿ ನಿಮ್ಮ ಗ್ಯಾಸ್ ಕಂಪನಿಯ ಅಧಿಕೃತ ಆ್ಯಪ್ ಡೌನ್‌ಲೋಡ್ ಮಾಡಿ

(ಉದಾಹರಣೆಗೆ: IndianOil One, BharatGas ಅಥವಾ HP Pay), ಜೊತೆಗೆ ಪ್ಲೇಸ್ಟೋರ್‌ನಿಂದ 'Aadhaar Face RD ಆ್ಯಪ್ ಅನ್ನು ಕೂಡ ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಬಳಿಕ ಗ್ಯಾಸ್ ಆ್ಯಪ್‌ನಲ್ಲಿ ಲಾಗಿನ್ ಆಗಿ e-KYC ಆಯ್ಕೆ ಮಾಡಿ Facial recognition ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಸಬ್ಸಿಡಿ ಪಡೆಯಲು ಅಥವಾ ಸಿಲಿಂಡರ್ ಬುಕಿಂಗ್ ಮಾಡಲು ತೊಂದರೆ ಆಗಬಹುದು. ಹೆಚ್ಚಿನ ಮಾಹಿತಿಗಾಗಿ ನೀವು ಅಧಿಕೃತ ವೆಬ್‌ಸೈಟ್ www.pmuy.gov.in/e-kyc.htmlಗೆ ಭೇಟಿ ನೀಡಬಹುದು.

ಭಾರತದ ಎಲ್ಲ ಹಡಗುಗಳ ಸುರಕ್ಷತೆಗೆ ಕ್ರಮ, ಇನ್ನೂ ಹಲವು ಹಡಗುಗಳ ಸಂಚಾರಕ್ಕೆ ಸಂಧಾನ: ಕೇಂದ್ರ ವಿದೇಶಾಂಗ ಸಚಿವ ಎಸ್.ಜೈಶಂಕರ್

ಇರಾನ್-ಭಾರತ ಮಾತುಕತೆ ಯಶಸ್ಸು

ದೆಹಲಿ: ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ನಡುವೆ, ಭಾರತದ ಇಂಧನ ಭದ್ರತೆ ಮತ್ತು ನಿರಂತರವಾಗಿ ತೈಲ ಪೂರೈಕೆಯಾಗುವಂತೆ ನೋಡಿಕೊಳ್ಳಲು ಭಾರತದ ಕಾರ್ಯತಂತ್ರದ ಬಗ್ಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಮಾಹಿತಿ ನೀಡಿದ್ದಾರೆ. ಇರಾನ್‌ನ ಹೊರ್ಮುಜ್ ಜಲಸಂಧಿಯ ಮೂಲಕ ಭಾರತೀಯ ಹಡಗುಗಳ ಸಂಚಾರವನ್ನು ಸುರಕ್ಷಿತಗೊಳಿಸಲು ಇರಾನ್ ಜೊತೆಗೆ ಸತತವಾಗಿ ಮಾತುಕತೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ.

ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಜಾಗತಿಕ ತೈಲ ವ್ಯಾಪಾರದ ಸುಮಾರು ಶೇಕಡಾ 20ರಷ್ಟು ಭಾಗವನ್ನು ನಿರ್ವಹಿಸುವ ಪ್ರಮುಖ ಜಲ ಮಾರ್ಗವನ್ನು ಪುನಃ ತೆರೆಯಲು ಅನುಕೂಲವಾಗುವಂತೆ ನವದೆಹಲಿ ಪ್ರಸ್ತುತ ಇರಾನ್‌ನೊಂದಿಗೆ ನಿರಂತರ ಮಾತುಕತೆಯಲ್ಲಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ.

ಇರಾನ್ ಜೊತೆಗಿನ ಈ ಚರ್ಚೆಗಳು ಈಗಾಗಲೇ ಕೆಲವು ಫಲಿತಾಂಶಗಳನ್ನು ನೀಡುತ್ತಿವೆ. ಖಂಡಿತವಾಗಿಯೂ ಭಾರತದ ದೃಷ್ಟಿಕೋನದಿಂದ, ಸುಮ್ಮನೆ ಇರುವುದಕ್ಕಿಂತ ನಾವು ತರ್ಕಿಸಿ ಸಮನ್ವಯ ಸಾಧಿಸುವುದು ಮತ್ತು ಪರಿಹಾರವನ್ನು ಪಡೆಯುವುದು ಉತ್ತಮ. ಈ ಮಾತುಕತೆಗೆ ಲಾಭವೂ ಸಿಕ್ಕಿದೆ. ಭಾರತೀಯ ಧ್ವಜ ಹೊಂದಿರುವ ಎರಡು ಹಡಗುಗಳಾದ ಶಿವಾಲಿಕ್ ಮತ್ತು ನಂದಾ ದೇವಿಯನ್ನು ಭಾರತಕ್ಕೆ ಬಂದಿವೆ. ಇವು ಸುಮಾರು 92,712 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು ಹೊಂದಿವೆ ಎಂದು ಜೈಶಂಕರ್ ಹೇಳಿದ್ದಾರೆ.

ಆದಾಗ್ಯೂ, ಭಾರತೀಯ ಧ್ವಜ ಹೊಂದಿರುವ ಎಲ್ಲಾ ಹಡಗುಗಳಿಗೆ ಅನುಮತಿ ನೀಡುವ ಔಪಚಾರಿಕ ವ್ಯವಸ್ಥೆ ಇನ್ನೂ ಆಗಿಲ್ಲ. ಹಡಗುಗಳ ಸಾಗಣೆಯನ್ನು ಪ್ರಸ್ತುತ ಪ್ರತಿ ಬಾರಿಯೂ ಪರಿಶೀಲಿಸಿ ಅದಕ್ಕೆ ಅನುಗುಣವಾಗಿ ನಿರ್ವಹಿಸಲಾಗುತ್ತಿದೆ ಎಂದು ಅವರು ವಿವರಿಸಿದರು.

ಇರಾನ್‌ನ ಖಾರ್ಗ್ ದ್ವೀಪದಲ್ಲಿ ಸಂಭಾವ್ಯ ಹೆಚ್ಚುವರಿ ದಾಳಿಗಳ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಎಚ್ಚರಿಕೆಗಳ ಹಿನ್ನೆಲೆಯಲ್ಲಿ ಜೈಶಂಕರ್ ಅವರ ಹೇಳಿಕೆಗಳು ಬಂದಿವೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅಮೆರಿಕ, ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ ಮತ್ತು ಬ್ರಿಟನ್ ಸೇರಿದಂತೆ ಅಂತಾರಾಷ್ಟ್ರೀಯ ಮಿತ್ರರಾಷ್ಟ್ರಗಳು ಹಡಗು ಮಾರ್ಗವನ್ನು ರಕ್ಷಿಸಲು ನೌಕೆಗಳನ್ನು ನಿಯೋಜಿಸುವಂತೆ ಒತ್ತಾಯಿಸಿದರು.

ಯುರೋಪಿಯನ್ ರಾಷ್ಟ್ರಗಳೊಂದಿಗೆ ತನ್ನ ಅನುಭವವನ್ನು ಹಂಚಿಕೊಳ್ಳಲು ಭಾರತ ಮುಕ್ತವಾಗಿದ್ದರೂ, ಇರಾನ್‌ನೊಂದಿಗಿನ ಪ್ರತಿಯೊಂದು ದೇಶದ ಸಂಬಂಧ ತನ್ನದೇ ಆದ ಸಂದರ್ಭಗಳಿಂದ ರೂಪುಗೊಂಡಿದೆ ಎಂದು ಅವರು ಉಲ್ಲೇಖಿಸಿದರು. ಸಂಬಂಧಿತ ಘಟನೆಯೊಂದರಲ್ಲಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಭಾರತೀಯ ಧ್ವಜವನ್ನು ಹೊಂದಿರುವ ಟ್ಯಾಂಕರ್ ಜಗ್ ಲಾಡ್ಕಿ ಭಾನುವಾರ ಫುಜೈರಾದಿಂದ ಹೊರಟಿದೆ ಎಂದು ದೃಢಪಡಿಸಿದೆ.

ಚಾಲಕನ ನಿಯಂತ್ರಣ ತಪ್ಪಿ ಮಗುಚಿಬಿದ್ದ ಅನಿಲ ಟ್ಯಾಂಕರ್

ಉಡುಪಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದ ಸಿಲಿಂಡರ್ ಸರಬರಾಜಿನಲ್ಲಿ ವ್ಯತ್ಯಯವಾಗಿದ್ದು, ನಾಗರಿಕರು ಪರದಾಡುತ್ತಿರುವ ಬೆನ್ನಲ್ಲೆ ಅನಿಲ ತುಂಬಿಕೊಂಡು ತೆರಳುತ್ತಿದ್ದ ಟ್ಯಾಂಕರ್ ಚಾಲಕನ ನಿಯಂತ್ರಣ ತಪ್ಪಿ ಮಗುಚಿಬಿದ್ದಿರುವ ಘಟನೆ ಜಿಲ್ಲೆಯ ಕಾಟಪಾಡಿ ಬಳಿ ನಡೆದಿದೆ.

ಮಂಗಳೂರಿನಿಂದ ಉಡುಪಿ ಕಡೆಗೆ ಎಲ್ಪಿಜಿ ಸಾಗಾಟ ಮಾಡುತ್ತಿದ್ದ ಟ್ಯಾಂಕರ್ ರಾಷ್ಟ್ರೀಯ ಹೆದ್ದಾರಿ-66ರಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿಯಿಂದ ನಿಯಂತ್ರಣ ಕಳೆದು ಕೊಂಡು ಉರುಳಿ ಬಿದ್ದಿದೆ. ಅದೃಷ್ಟವಶಾತ್ ಯಾವುದೇ ದುರಂತ ಸಂಭವಿಸಿಲ್ಲ. ಸುದ್ದಿ ತಿಳಿದ ಕೂಡಲೇ ಅಗ್ನಿಶಾಮಕ ದಳ ಸಿಬ್ಬಂದಿಗಳು ಸ್ಥಳಕ್ಕೆ ದೌಡಾಯಿಸಿ ಮುನ್ನೆಚ್ಚರಿಕೆ ವಹಿಸಿ ಅನಿಲ ಸೋರಿಕೆಯಾಗದಂತೆ ಕ್ರಮ ಕೈಗೊಂಡಿದ್ದಾರೆ.

ಬೃಹತ್ ಗಾತ್ರದ ಟ್ಯಾಂಕರ್ ಉರುಳಿಬಿದ್ದಿದ್ದು, ಸಂಚಾರ ಅಸ್ತವ್ಯಸ್ಥಗೊಂಡಿದ್ದು, ಕಿಲೋಮೀಟರ್‌ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸ್ಥಳದಲ್ಲೆ ಮೊಕ್ಕಾಂ ಹೂಡಿದ್ದು, ಎರಡು ಖಾಲಿ ಟ್ಯಾಂಕರ್‌ಗಳನ್ನು ತರಿಸಿ ಉರುಳೀಬಿದ್ದ ಟ್ಯಾಂಕರ್‌ನಿಂದ ಅನಿಲ ಸ್ಥಳಾಂತರಿಸುವ ಕಾರ್ಯದಲ್ಲಿ ತೊಡಗಿದ್ದರು.

ಒಂದು ವೇಳೆ ಅನಿಲ ಸೋರಿಕೆಯಾಗಿದ್ದರೆ ದೊಡ್ಡ ಮಟ್ಟದಲ್ಲಿ ಅನಾಹುತವೇ ಸಂಭವಿಸುತ್ತಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಅನಿಲ ಸೋರಿಕೆಯಾಗದಂತೆ ಕ್ರಮ ಕೈಗೊಂಡು ಟ್ಯಾಂಕರ್ ಮೇಲೆ ನಿರಂತರವಾಗಿ ನೀರು ಸಿಂಪಡಿಸಿದ್ದಾರೆ. ಇದರಿಂದ ದೊಡ್ಡ ಅನಾಹುತ ತಪ್ಪಿದಂತಾಗಿದೆ.

ಸಿಲಿಂಡರ್ ಕೊರತೆ ನಡುವೆಯೇ ದ.ಕನ್ನಡ ಜಿಲ್ಲೆಯ ಹಲವು ರೈತರ ದಿಟ್ಟ ಹೆಜ್ಜೆ | ಸಗಣಿಯಿಂದ ತಯಾರಾದ ಗ್ಯಾಸ್ ಬಳಸಿ ಅಡುಗೆ, ನಿತ್ಯದ ಜೀವನ ನಿರಾತಂಕ

ಎಲ್‌ಪಿಜಿಗೆ ಪರ್ಯಾಯವಾಗಿ ಗೋಬರ್ ಗ್ಯಾಸ್

ಮಂಗಳೂರು: ಅಡುಗೆ ಅನಿಲದ ಕೊರತೆಯಿಂದ ರಾಜ್ಯದ ಜನತೆ ಕಂಗಾಲಾಗಿದ್ದಾರೆ. ಈ ನಡುವೆ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ರೈತರು ಜೈವಿಕ ಇಂಧನದ ಮೂಲಕ ಪರ್ಯಾಯ ದಾರಿಯನ್ನು ಕಂಡುಕೊಂಡಿದ್ದು, ಈ ಮೂಲಕ ಇತರರಿಗೆ ಪ್ರೇರಣೆ ನೀಡುತ್ತಿದ್ದಾರೆ. ಇಲ್ಲಿನ ರೈತರು ಹಸುವಿನ ಸಗಣಿಯಿಂದ ಉತ್ಪಾದಿಸುವ ಜೈವಿಕ ಇಂಧನದ ಮೂಲಕ ಅಡುಗೆ ಅನಿಲದ ಅವಲಂಬನೆಯನ್ನು ಕಡಿಮೆ ಮಾಡಿಕೊಂಡು, ಸ್ವಾವಲಂಬನೆಯತ್ತ ಹೆಜ್ಜೆ ಹಾಕುತ್ತಿದ್ದಾರೆ.

ಹಾಲು ಉತ್ಪಾದನೆ ಹಾಗೂ ಕೃಷಿಯನ್ನು ಅವಲಂಬಿಸಿಕೊಂಡಿರುವ ಇಲ್ಲಿನ ರೈತರಿಗೆ ಗೋವಿನ ಸಗಣಿ ಸುಲಭವಾಗಿ ಸಿಗುತ್ತದೆ. ಅದನ್ನೇ ಇಂಧನವಾಗಿ ಪರಿವರ್ತಿಸುವ ಜೈವಿಕ ಇಂಧನ ಘಟಕಗಳು ಇದೀಗ ಹಲವು ರೈತರ ಮನೆಗಳಲ್ಲಿ ಬಳಕೆಯಲ್ಲಿವೆ. ಇದರಿಂದ ಅಡುಗೆ ಅನಿಲದ ಕೊರತೆ ಎದುರಾದರೂ ಅವರ ದಿನನಿತ್ಯದ ಬದುಕು ಅಷ್ಟಾಗಿ ತೊಂದರೆಗೊಳಗಾಗುವುದಿಲ್ಲ.

ಉಳ್ಳಾಲ ತಾಲೂಕಿನ ಇನೋಳಿಯಲ್ಲಿ ಹೋಂಸ್ಟೇ ಮತ್ತು ಫಾರ್ಮ್‌ಹೌಸ್ ನಡೆಸುತ್ತಿರುವ ರೈತ ಗ್ಲೆನ್ ರೋಚೆ ಇತರರಿಗೆ ಉದಾಹರಣೆಯಾಗಿದ್ದಾರೆ. ಹೈನುಗಾರರಿಗೆ ಮತ್ತು ಕೃಷಿ ಚಟುವಟಿಕೆಗಳ ಜೊತೆಗೆ ಜೈವಿಕ ಇಂಧನ ಘಟಕವನ್ನು ಯಶಸ್ವಿಯಾಗಿ ಬಳಸುತ್ತಿದ್ದಾರೆ. ಅವರ ಬಳಿ ಇರುವ ಹಸುಗಳಿಂದ ದೊರೆಯುವ ಸಗಣಿಯನ್ನು ಬಳಸಿ ಪ್ರತಿದಿನ ಜೈವಿಕ ಇಂಧನ ಉತ್ಪಾದಿಸಿ ಅಡುಗೆ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ನಮ್ಮ ಬಳಿ ಇರುವ ಹಸುಗಳಿಂದ ದೊರೆಯುವ ಸಗಣಿಯನ್ನು ಜೈವಿಕ ಇಂಧನ ಘಟಕಕ್ಕೆ ಬಳಸುತ್ತೇವೆ. ಇದರಿಂದ ಅಡುಗೆ ಅನಿಲ ಸಿಲಿಂಡರ್ ಅವಲಂಬನೆ ಕಡಿಮೆಯಾಗಿದೆ. ಕಾರ್ಮಿಕರು ಹಾಗೂ ಮನೆಯವರು ಎಲ್ಲರೂ ಅದನ್ನೇ ಅಡುಗೆಗಾಗಿ ಬಳಸುತ್ತಾರೆ. ವಿದ್ಯುತ್ ಅಗತ್ಯಗಳಿಗೆ ಸೌರಶಕ್ತಿಯನ್ನು ಬಳಸುತ್ತಿದ್ದೇವೆ ಮತ್ತು ಹೊಲಗಳಿಗೆ ಸಹಜ ಸಾವಯವ ಗೊಬ್ಬರವನ್ನು ಉಪಯೋಗಿಸುತ್ತೇವೆಂದು ಗ್ಲೆನ್ ರೋಚೆ ಅವರು ಹೇಳಿದ್ದಾರೆ.

ಇದೇ ರೀತಿಯಲ್ಲಿ ಪುತ್ತೂರು ತಾಲೂಕಿನ ಮುರುಳ್ಯ ಗ್ರಾಮದ ರೈತ ಜಗನ್ನಾಥ ಪೂಜಾರಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸ್ಥಾಪಿಸಿದ್ದ ಜೈವಿಕ ಇಂಧನ ಘಟಕವನ್ನು ಇನ್ನೂ ಬಳಸುತ್ತಿದ್ದಾರೆ. ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ಹಸುಗಳನ್ನು ಸಾಕುತ್ತಿದ್ದ ಅವರು ಈಗ ಕಡಿಮೆ ಸಂಖ್ಯೆಯ ಹಸುಗಳನ್ನು ಹೊಂದಿದ್ದರೂ ಜೈವಿಕ ಇಂಧನದ ಬಳಕೆ ಮುಂದುವರಿಸಿದ್ದಾರೆ.

ಪ್ರತಿದಿನ ಸಗಣಿಯಿಂದ ಜೈವಿಕ ಇಂಧನ ಉತ್ಪಾದಿಸುತ್ತೇವೆ. ಇದರಿಂದ ಅಡುಗೆ ಅನಿಲ ಸಿಲಿಂಡರ್ ಅಗತ್ಯ ಬಹುತೇಕ ಕಡಿಮೆಯಾಗಿದೆ. ಇದು ಸ್ವಚ್ಛ, ಹೊಗೆರಹಿತ ಹಾಗೂ ಪರಿಸರ ಸ್ನೇಹಿ ಇಂಧನವಾಗಿದೆ ಎಂದು ಜಗನ್ನಾಥ ಅವರು ಹೇಳಿದ್ದಾರೆ.

ಪರಿಸರ ತಜ್ಞ ಜೀತ್ ಮಿಲನ್ ರೋಚೆ ಅವರು ಮಾತನಾಡಿ, ಜೈವಿಕ ಇಂಧನವು ಕೇವಲ ಪರ್ಯಾಯ ಇಂಧನವಲ್ಲ, ಪರಿಸರ ಸಂರಕ್ಷಣೆಗೆ ಸಹ ಸಹಕಾರಿ. ಜೈವಿಕ ಇಂಧನದಿಂದ ತ್ಯಾಜ್ಯವನ್ನು ಇಂಧನವಾಗಿ ಪರಿವರ್ತಿಸಬಹುದು. ಇದರಿಂದ ಕಟ್ಟಿಗೆಗಳ ಬಳಕೆ ಕಡಿಮೆಯಾಗುತ್ತದೆ ಹಾಗೂ ಕಾಡಿನ ಸಂರಕ್ಷಣೆಗೂ ನೆರವಾಗುತ್ತದೆ. ಇದು ಸ್ಥಳೀಯವಾಗಿ ಲಭ್ಯವಿರುವ ನವೀಕರಿಸಬಹುದಾದ ಶಕ್ತಿಯ ಮೂಲವೂ ಆಗಿದೆ ಎಂದು ಹೇಳಿದ್ದಾರೆ. ಎಲ್‌ಪಿಜಿ ಕೊರತೆ ಉಂಟಾದ ಈ ಸಂದರ್ಭದಲ್ಲಿ ದಕ್ಷಿಣ ಕನ್ನಡದ ರೈತರು ಜೈವಿಕ ಇಂಧನದ ಬಳಕೆಯ ಮೂಲಕ ಪರ್ಯಾಯ ದಾರಿಯನ್ನು ಹುಡುಕಿಕೊಂಡಿದ್ದು, ಕೃಷಿ, ಪಶುಸಂಗೋಪನೆ ಮತ್ತು ನವೀಕರಿಸಬಹುದಾದ ಶಕ್ತಿಯನ್ನು ಒಟ್ಟಿಗೆ ಬಳಸುವ ಈ ವಿಧಾನವು ಗ್ರಾಮೀಣ ಜೀವನದಲ್ಲಿ ಸ್ವಾವಲಂಬನೆ ಬದುಕು ಸಾಧಿಸಲು ಸಹಾಯಕವಾಗುತ್ತಿದೆ.

ವಿಶ್ವವಾಣಿ 17-03-2026 ಮಂಗಳವಾರ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ರವಿಹಾರ

ಸಾಂಪ್ರದಾಯಿಕ 'ಕೂರಿ'ಯ ತಾಂತ್ರಿಕ ಚಮತ್ಕಾರ..!

• ಹೊಸ್ಮನೆ ಮುತ್ತು

ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಕೆಲವು ದಶಕಗಳ ಹಿಂದೆ ಎಲ್ಲಿ ನೋಡಿದರಲ್ಲಿ ಭತ್ತದ ಗದ್ದೆಗಳೇ ಕಾಣುತ್ತಿದ್ದವು. ಮಳೆಗಾಲದಲ್ಲಿ ಈ ಗದ್ದೆಗಳಲ್ಲಿ 'ತರು' ಮೀನುಗಳು ಹೇರಳವಾಗಿರುತ್ತಿದ್ದವು. ಇವು ಪೈರಿಗೆ ದಾಳಿ ಇಡುವ ಕ್ರಿಮಿ-ಕೀಟಗಳನ್ನು ತಿಂದು ವೇಗವಾಗಿ ಬೆಳೆಯುತ್ತಿದ್ದವು. ಚುರುಕಾದ ಈ ಸಣ್ಣ ಮೀನುಗಳನ್ನು ಬಲೆ ಹಾಕಿ ಅಥವಾ ಬರಿಗೈಯಿಂದ ಹಿಡಿಯುವುದು ಕಷ್ಟ. ಇದಕ್ಕಾಗಿ ನಮ್ಮ ಹಿರಿಯರು ವಿಶಿಷ್ಟವಾದ ಸಾಧನ ವೊಂದನ್ನು ಕಂಡುಕೊಂಡಿದ್ದರು. ಇದನ್ನು 'ಕೊಡಿಮೆ', 'ಕೊಂಜೋಲು' ಅಥವಾ 'ಕೂರಿ' ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು.

ಅಪರೂಪದ ಹಸ್ತಕಲೆಯಾದ ಈ ಸಾಧನವನ್ನು ಸಿದ್ಧಪಡಿಸಲು ಬೇಕಿರುವುದು ಬರಿ ಕೌಶಲವಲ್ಲ; ಅತೀವ ತಾಳ್ಮೆ ಮತ್ತು ನಿಖರತೆ. ಇದರ ತಯಾರಿಕೆಗೆ ಬಿದಿರು, ಬೆತ್ತ ಅಥವಾ ಈಚಲು ಮರದ ತೆಳುವಾದ ಕಡ್ಡಿಗಳೇ ಆಧಾರ. ಇವುಗಳನ್ನು ಸಮಾನ ಅಳತೆಯ ತೆಳುವಾದ ಪಟ್ಟಿಗಳಾಗಿ ಸೀಳಿ ನಾರಿನಿಂದ ನೈಪುಣ್ಯದಿಂದ ಹೆಣೆದು, ಶಂಕುವಿನಾಕಾರದಲ್ಲಿ ಸಿದ್ಧಪಡಿಸಲಾಗುತ್ತದೆ.

ಇದರ ಒಳಭಾಗದ ವಿನ್ಯಾಸ ಅತ್ಯಂತ ಚತುರತೆಯಿಂದ ಕೂಡಿದ್ದು, ಮೀನು ಒಳಗೆ ಹೋಗಲು ಸುಲಭವಾದ ದಾರಿಯಿರುತ್ತದೆ, ಆದರೆ ಒಮ್ಮೆ ಒಳಗೆ ಹೋದರೆ ಮರಳಿ ಬರಲು ಸಾಧ್ಯವಾಗದಂಥ ತಾಂತ್ರಿಕತೆಯನ್ನು ಇದು ಹೊಂದಿದೆ. ಈ ನೈಸರ್ಗಿಕ ಸಾಧನಗಳು ನೀರಿನಲ್ಲಿ ದೀರ್ಘಕಾಲ ಇದ್ದರೂ ಕೊಳೆಯುವುದಿಲ್ಲ. ಇದು ಮಲೆನಾಡಿನ ಕೃಷಿ ಸಂಸ್ಕೃತಿಯ ತಾಂತ್ರಿಕ ಜ್ಞಾನಕ್ಕೆ ಸಾಕ್ಷಿಯಾಗಿದೆ.

ಹಳ್ಳ ಅಥವಾ ಗದ್ದೆಗಳ ನೀರು ಹರಿದುಹೋಗುವ ಕಿರಿದಾದ ತೋಡುಗಳಲ್ಲಿ (ಕಣಿ), ನೀರಿನ ಹರಿವಿಗೆ ಎದುರಾಗಿ ಮೀನುಗಳ ವಲಸೆಯ ಹಾದಿಯನ್ನು ಗುರುತಿಸಿ ಸರಿಯಾದ ಜಾಗದಲ್ಲಿ ಇವುಗಳನ್ನು ಅಳವಡಿಸುತ್ತಾರೆ. ನೀರಿನ ಹರಿವಿನ ಜತೆಗೆ ಬರುವ ಮೀನುಗಳು ನೇರವಾಗಿ ಕೂರಿಯ ಒಳಗೆ ಸೇರಿ ಸಿಲುಕಿಕೊಳ್ಳುತ್ತವೆ. ನಮ್ಮ ಹಿರಿಯರು ಆಧುನಿಕ ವಿಜ್ಞಾನವನ್ನು ಓದದಿದ್ದರೂ, ಭೌತಶಾಸ್ತ್ರ ಮತ್ತು ಜೀವಶಾಸ್ತ್ರದ ತತ್ವಗಳನ್ನು ಈ ಸಾಧನಗಳಲ್ಲಿ ಅಳವಡಿಸಿದ್ದಾರೆ. ಸಾಧನದ ಕಡ್ಡಿಗಳ ನಡುವೆ ಇರುವ ಸಣ್ಣ ಕಿಂಡಿಗಳು ನೀರು ಸುಲಭವಾಗಿ ಹರಿದು ಹೋಗಲು ಬಿಡುತ್ತವೆ, ಆದರೆ ಮೀನನ್ನು ಮಾತ್ರ ತಡೆಹಿಡಿಯುತ್ತವೆ. ಈ ಸಾಧನದ ಕಿಂಡಿಗಳು ನಿರ್ದಿಷ್ಟ ಗಾತ್ರದಲ್ಲಿರುವುದರಿಂದ ತಿನ್ನಲು ಯೋಗ್ಯವಾದ ದೊಡ್ಡ ಮೀನುಗಳು ಮಾತ್ರ ಸಿಕ್ಕಿಬೀಳುತ್ತವೆ. ಇದರ ಹಿಂದೆ ಜೈವಿಕ ಸಂರಕ್ಷಣೆಯ ತತ್ವವಿದೆ. ಅತಿ ಸಣ್ಣ ಮರಿಗಳು ಕಿಂಡಿಗಳ ಮೂಲಕ ತಪ್ಪಿಸಿಕೊಂಡು ಹೋಗುವುದರಿಂದ ಜಲಚರಗಳ ಸಂತಾನೋತ್ಪತ್ತಿ ನಿರಂತರವಾಗಿ ಸಾಗುತ್ತದೆ. ಇವುಗಳಲ್ಲಿ ಯಾವುದೇ ಪ್ಲಾಸ್ಟಿಕ್ ಅಥವಾ ರಾಸಾಯನಿಕವನ್ನು ಬಳಸದ ಕಾರಣ ಪರಿಸರಕ್ಕೆ ಯಾವುದೇ ಹಾನಿಯಾಗುವುದಿಲ್ಲ.

ಗದ್ದೆಗಳ ಜಾಗವನ್ನು ಅಡಕೆ ತೋಟಗಳು ಆಕ್ರಮಿಸಿಕೊಂಡಂತೆ 'ಕೂರಿ'ಯಂಥ ಸಾಂಪ್ರದಾಯಿಕ ಪರಿಕರಗಳು ಕಣ್ಮರೆಯಾಗುತ್ತಿವೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ವಾಣಿಜ್ಯ ಮೇಳದಂಥ ಜಾಗತಿಕ ವೇದಿಕೆಗಳಲ್ಲಿ ಈ ವಸ್ತು ಪ್ರದರ್ಶನಗೊಂಡಿರುವುದು ನಮ್ಮ ಗ್ರಾಮೀಣ ಜೀವನಶೈಲಿಯ ಸರಳತೆ ಮತ್ತು ತಾಂತ್ರಿಕ ಕೌಶಲಕ್ಕೆ ಸಂದ ಗೌರವವಾಗಿದೆ. ಬದಲಾದ ಕಾಲದಲ್ಲೂ ನಮ್ಮ ಪರಂಪರೆಯ ಮೌಲ್ಯ ಮಾಸಿಲ್ಲ ಎಂಬುದಕ್ಕೆ ಇದೇ ಸಾಕ್ಷಿ.

ಇಂದಿನ ಮಹಾನಗರಗಳ ಬದುಕು ಅಕ್ಷರಶಃ ಕಾಂಕ್ರೀಟ್ ಕುಲುಮೆಯಂತಾಗಿದೆ. ಟ್ರಾಫಿಕ್ ಜಾಮ್, ಹಾರ್ನ್ ಸದ್ದು ಸಿಲುಕಿದ ಮನುಷ್ಯನಿಗೆ ಪ್ರಕೃತಿ ಎನ್ನುವುದು ಕೇವಲ ಮೊಬೈಲ್ ವಾಲ್ ಪೇಪರ್ ಆಗಿದೆ. ಇಂಥ ಹೊತ್ತಿನಲ್ಲಿ, ಬಸ್ಸಿನಲ್ಲೋ ಮೆಟ್ರೋದಲ್ಲೋ ಕುಳಿತು ಓದುವ ಒಂದು ಕವಿತೆ ಅಥವಾ ಲಲಿತ ಪ್ರಬಂಧವು ಧೂಳಿನ ನಡುವೆ ಒದಗುವ ಅನಿರೀಕ್ಷಿತ ಮಳೆಹನಿಯಂತೆ ಭಾಸವಾಗುತ್ತದೆ.

ತಂಪೆರೆಯುವ ಅಕ್ಷರದ ಮಳೆ

• ಲಕ್ಷ್ಮೀಕಾಂತ್ ಎಲ್.ವಿ., ತುಮಕೂರು

ಸೂರ್ಯನು ನೆತ್ತಿಯ ಮೇಲೆ ಬೆಂಕಿಯ ಉಂಡೆಗಳನ್ನು ಸುರಿಸುತ್ತಿದ್ದಾನೆ. ಮರಗಿಡಗಳು ಬಸವಳಿದು ನಿಂತಿವೆ, ರಸ್ತೆಗಳು ಬಿಕೋ ಎನ್ನುತ್ತಿವೆ. ಇಪ್ಪತ್ತೊಂದನೇ ಶತಮಾನದ ಈ ದಿನಗಳಲ್ಲಿ ಗ್ಲೋಬಲ್ ವಾರ್ಮಿಂಗ್ ಎನ್ನುವ ಮಾತು ಬರಿ ಸುದ್ದಿಯಲ್ಲ, ಅದು ನಮ್ಮ ಚರ್ಮಕ್ಕೆ ತಾಗುವ ಸುಡುವಾಸ್ತವ. ಆದರೆ, ಇಂಥ ಹೊರಗಿನ ಬಿಸಿಲ ಝುಳಕ್ಕಿಂತಲೂ ಮನುಷ್ಯನನ್ನು ಹೆಚ್ಚು ಕಾಡುತ್ತಿರುವುದು ಒಳಗಿನ ಬದುಕು ಎದುರಿಸುತ್ತಿರುವ ಭಾವನಾತ್ಮಕ ಬೇಸಗೆ. ಈ ಶುಷ್ಕತೆಯ ನಡುವೆ ಸಾಹಿತ್ಯವು ತಂಗಾಳಿಯಂತೆ ಬಂದು ತಂಪೆರೆಯುತ್ತದೆ.

ಅಕ್ಷರ ಲೋಕದ ಹವಾನಿಯಂತ್ರಣ

ಹೊರಗಿನ ತಾಪಮಾನವನ್ನು ತಗ್ಗಿಸಲು ನಾವು ಹವಾನಿಯಂತ್ರಿತ ವ್ಯವಸ್ಥೆಯ ಮೊರೆಹೋಗುತ್ತೇವೆ. ಆದರೆ ಮನುಷ್ಯನ ಅಶಾಂತ ಮನಸ್ಸಿಗೆ ಬೇಕಿರುವುದು ಅಕ್ಷರಗಳ ತಂಪು. ಬಿರುಬಿಸಿಲ ಮಧ್ಯಾಹ್ನವೊಂದರಲ್ಲಿ ಕೈಯಲ್ಲೊಂದು ಪುಸ್ತಕ ಹಿಡಿದು ಕುಳಿತರೆ, ಅಲ್ಲಿ ತೆರೆದುಕೊಳ್ಳುವ ಲೋಕವೇ ಬೇರೆ. ಕುವೆಂಪು ಅವರ ಮಲೆನಾಡಿನ ಚಿತ್ರಣಗಳನ್ನು ಓದುತ್ತಿದ್ದರೆ, ಮಲೆನಾಡಿನ ಮಳೆಯ ಹನಿಗಳು ನಮ್ಮೆದೆಯ ಮೇಲೆ ಬಿದ್ದಂತಾಗುತ್ತದೆ. ಶಿವರಾಮ ಕಾರಂತರ ಕಾದಂಬರಿಗಳಲ್ಲಿನ ಕಡಲ ತೀರದ ಅಲೆಗಳು ನಮ್ಮ ಕಾಲುಗಳನ್ನು ತೊಳೆದ ಅನುಭವ ನೀಡುತ್ತವೆ. ವರ್ತಮಾನದ ಈ ಒತ್ತಡದ ಬದುಕಿನಲ್ಲಿ, ಸಾಹಿತ್ಯವು ಕೇವಲ ಮನರಂಜನೆಯಲ್ಲ; ಅದು ನಮಗಾಗಿ ನಾವೇ ಸೃಷ್ಟಿಸಿಕೊಳ್ಳುವ ಒಂದು 'ಮಾನಸಿಕ ಓಯಸಿಸ್'. ಹೊರಗಿನ ಬಿಸಿಲು ನಮ್ಮ ಚರ್ಮವನ್ನು ಸುಟ್ಟರೆ, ಸಾಹಿತ್ಯವು ನಮ್ಮೊಳಗಿನ ಕಾವನ್ನು ಆರಿಸುತ್ತದೆ.

ಹಳೆಯ ಪುಸ್ತಕದ ಘಮ

ಇಂದು ನಮ್ಮ ಕೈಯಲ್ಲಿರುವ ಸ್ಮಾರ್ಟ್‌ಫೋನ್‌ಗಳು ಅಕ್ಷರಶಃ ಬಿಸಿಯಾಗುತ್ತಿವೆ. ಇನ್‌ಸ್ಟಾಗ್ರಾಂ ರೀಲ್‌ಗಳು ಮತ್ತು ಶಾರ್ಟ್ ವಿಡಿಯೋಗಳ ವೇಗ ನಮ್ಮ ತಾಳ್ಮೆಯನ್ನು ಸುಟ್ಟು ಹಾಕುತ್ತಿದೆ. ಈ ಡಿಜಿಟಲ್ ಬೇಸಗೆಯಿಂದ ಮುಕ್ತಿ ಪಡೆಯಲು ಸಾಹಿತ್ಯದ ಹಳೆಯ ಪುಸ್ತಕದ ವಾಸನೆ ಒಂದು ಅದ್ಭುತ ಮದ್ದು. ನಿಜ ಹೇಳುವುದಾದರೆ, ಇಂದಿನ ಯುವಪೀಳಿಗೆಗೆ ಸಾಹಿತ್ಯವು ಕೇವಲ ಗ್ರಂಥಾಲಯದ ಕಪಾಟುಗಳಲ್ಲಿಲ್ಲ. ಅದು ಪಾಡ್‌ಕ್ಯಾಸ್ಟ್, ಇ-ಬುಕ್ ರೂಪಗಳಲ್ಲೂ ಲಭ್ಯವಿದೆ. ಆದರೆ, ಪುಸ್ತಕದ ಆಳವಾದ ಓದು ನೀಡುವ ಆ ಧ್ಯಾನಸ್ಥ ಸ್ಥಿತಿ ಇದೆಯಲ್ಲಾ, ಅದು ಬಿರುಬೇಸಗೆಯಲ್ಲಿ ಸಿಗುವ ಐಸ್ ಕ್ರೀಮ್‌ಗಿಂತಲೂ ಹೆಚ್ಚು ಮಧುರ. ಬಿಸಿಲಿಗೆ ಒಣಗಿದ ಬಳ್ಳಿಗೆ ನೀರುಣಿಸಿದಂತೆ, ವಾಟ್ಸಾಪ್ ನೋಟಿಫಿಕೇಶನ್‌ಗಳ ಕಿರಿಕಿರಿಯಿಂದ ದಣಿದ ಮಿದುಳಿಗೆ ಒಂದು ಸುಂದರವಾದ ಕವಿತೆ ಅಮೃತದಂತೆ ಭಾಸವಾಗುತ್ತದೆ.

ಕವಿತೆಗಳೆಂಬ ನೆರಳು, ಕಥೆಗಳೆಂಬ ನದಿ

ಕವಿಗಳು ಬರೆಯುವ ಸಾಲುಗಳು ಕೇವಲ ಶಬ್ದಗಳಲ್ಲ, ಅವು ನಡುಹಗಲಿನಲ್ಲಿ ಸಿಗುವ ಆಲದ ಮರದ ನೆರಳು. ಬಿಸಿಲ್ಗುದುರೆಯ ಬೆನ್ನೇರಿ ಹೊರಟವನಿಗೆ ಸಾಹಿತ್ಯವು ತಂಗಾಳಿಯ ಸ್ಪರ್ಶವಿದ್ದಂತೆ; ಜೀವನದ ಸಂಕಷ್ಟಗಳ ಬಿಸಿಲಿನಲ್ಲಿ ಬೆಂದವರಿಗೆ ಸಾಹಿತ್ಯವು ಸಾಂತ್ವನ ನೀಡುತ್ತದೆ. ಕಥೆಗಳು ನಮ್ಮನ್ನು ಬೇರೆ ಲೋಕಕ್ಕೆ ಕರೆದೊಯ್ಯುತ್ತವೆ. ಅಲ್ಲಿ ನಾಯಕ-ನಾಯಕಿಯರ ಹೋರಾಟದ ಮುಂದೆ ನಮ್ಮ ದೈನಂದಿನ ಕಷ್ಟಗಳು ಗೌಣವೆನಿಸುತ್ತವೆ. ಇದು ಪಲಾಯನವಾದವಲ್ಲ, ಬದಲಿಗೆ ಹೊಸ ಚೈತನ್ಯದೊಂದಿಗೆ ಮತ್ತೆ ಬಿಸಿಲಿಗೆ ಮುಖಾಮುಖಿಯಾಗಲು ಸಿದ್ಧರಾಗುವ ಪ್ರಕ್ರಿಯೆ.

ಕಾಂಕ್ರೀಟ್ ಕಾಡಿನಲ್ಲಿ ಕಾವ್ಯದ ತಂಗಾಳಿ

ಇಂದಿನ ಮಹಾನಗರಗಳ ಬದುಕು ಅಕ್ಷರಶಃ ಕಾಂಕ್ರೀಟ್ ಕುಲುಮೆಯಂತಾಗಿದೆ. ಬೆಳಗ್ಗೆಯಿಂದ ಸಂಜೆಯವರೆಗೆ ಟ್ರಾಫಿಕ್ ಜಾಮ್, ಹಾರ್ನ್ ಸದ್ದು ಮತ್ತು ಆಫೀಸಿನ ಫೈಲುಗಳ ನಡುವೆ ಸಿಲುಕಿದ ಮನುಷ್ಯನಿಗೆ ಪ್ರಕೃತಿ ಎನ್ನುವುದು ಕೇವಲ ಮೊಬೈಲ್ ವಾಲ್‌ಪೇಪರ್ ಆಗಿದೆ. ಇಂಥ ಹೊತ್ತಿನಲ್ಲಿ, ಬಸ್ಸಿನಲ್ಲೋ ಅಥವಾ ಮೆಟ್ರೋದಲ್ಲೋ ಕುಳಿತು ಓದುವ ಒಂದು ಸಣ್ಣ ಕವಿತೆ ಅಥವಾ ಲಲಿತ ಪ್ರಬಂಧವು ನಗರದ ಧೂಳಿನ ನಡುವೆ ಸಿಗುವ ಅನಿರೀಕ್ಷಿತ ಮಳೆಯ ಹನಿಯಂತೆ ಭಾಸವಾಗುತ್ತದೆ. ಕುವೆಂಪುವರ 'ಎಲ್ಲಾದರು ಇರು ಎಂತಾದರು ಇರು' ಎನ್ನುವ ಸಾಲುಗಳು ಅಥವಾ ಬೇಂದ್ರೆಯವರ 'ನಾದಲೀಲೆ'ಗಳು ನಮ್ಮ ಸುತ್ತಲಿನ ಗದ್ದಲವನ್ನು ಕ್ಷಣಾರ್ಧದಲ್ಲಿ ಮರೆಸಿ, ಒಳಗಣ್ಣಿನ ಮುಂದೆ ಹಸಿರು ಕಾನನವನ್ನು ಸೃಷ್ಟಿಸುತ್ತವೆ. ಇದು ಕೇವಲ ಕಲ್ಪನೆಯಲ್ಲ, ಬದಲಿಗೆ ಯಾಂತ್ರಿಕ ಬದುಕಿನಿಂದ ಬಿಡುಗಡೆ ಪಡೆಯುವುದಕ್ಕಿರುವ ಒಂದು ಬೌದ್ಧಿಕ ಮಾರ್ಗ.

ಬಿಸಿಲಿನ ಝುಳವೋ, ತಂಪಾದ ಹನಿಯೋ?

ಇಂದು ಸಾಹಿತ್ಯವು ಕೇವಲ ಮುದ್ರಿತ ಪುಸ್ತಕಗಳಿಗೆ ಸೀಮಿತವಾಗಿಲ್ಲ; ಅದು ಫೇಸ್‌ಬುಕ್ ಗೋಡೆಗಳ ಮೇಲೆ, ಇನ್‌ಸ್ಟಾಗ್ರಾಂನ ಸುಂದರ ಪೋಸ್ಟ್‌ಗಳಲ್ಲಿಯೂ ಹರಿಯುತ್ತಿದೆ. ಆದರೆ ಇಲ್ಲಿ ಎಚ್ಚರವೂ ಅಗತ್ಯ. ಅನಗತ್ಯವಾದ ವಿವಾದಗಳ ಶಾಖವು ಜಾಲತಾಣಗಳಲ್ಲಿ ಹೆಚ್ಚಾಗಿರುತ್ತದೆ. ಈ ಬಿಸಿಲಿನ ಝಳದ ನಡುವೆ, ಕೆಲವರು ಹಂಚಿಕೊಳ್ಳುವ ಅರ್ಥಪೂರ್ಣ ಹನಿಗವಿತೆಗಳು ಅಥವಾ ಹಿರಿಯ ಸಾಹಿತಿಗಳ ಜೀವನದ ಸಣ್ಣ ಕಥೆಗಳು ಓದುಗನಿಗೆ ಸಾಂತ್ವನ ನೀಡುತ್ತವೆ. ಇಂದಿನ ರೀಲ್ಸ್ ಜಗತ್ತಿನಲ್ಲಿ ಎರಡು ನಿಮಿಷ ನಿಂತು ಒಂದು ಪ್ಯಾರಾ ಓದುವ ತಾಳ್ಮೆ ಬೆಳೆಸಿಕೊಳ್ಳುವುದು, ಬಿರುಬೇಸಗೆಯಲ್ಲಿ ಬಾಯಾರಿದ ಹಕ್ಕಿಗೆ ನೀರುಣಿಸಿದಷ್ಟೇ ಪುಣ್ಯದ ಕೆಲಸ. ಡಿಜಿಟಲ್ ಮಾಧ್ಯಮವನ್ನು ಸಾಹಿತ್ಯದ ಹರಿವಿಗೆ ಬಳಸಿಕೊಂಡಾಗ, ಅದು ಕೇವಲ ಪರದೆಯ ಬೆಳಕಾಗದೆ ಮನದ ತಂಪಾಗುತ್ತದೆ.

ಮನದ ತಾಪಮಾನ ಇಳಿಸುವ ಹಾದಿ

ಅಂತಿಮವಾಗಿ, ಸಾಹಿತ್ಯವೆಂಬುದು ನಮ್ಮನ್ನು ನಾವು ಅರಿಯುವ ಕನ್ನಡಿ. ಹೊರಗಿನ ಉಷ್ಣಾಂಶ ಮಿತಿಮೀರಿದಾಗ ದೇಹವು ಬಳಲಬಹುದು; ಆದರೆ ದ್ವೇಷ, ಅಸೂಯೆ ಮತ್ತು ಆತುರದಂಥ ಅಂತರಂಗದ ತಾಪಮಾನ ಹೆಚ್ಚಾದಾಗ ಇಡೀ ಬದುಕೇ ಸುಟ್ಟುಹೋಗುತ್ತದೆ. ಸಾಹಿತ್ಯದ ತಂಗಾಳಿಯು ಈ ಆಂತರಿಕ ತಾಪವನ್ನು ಕಡಿಮೆ ಮಾಡುವ ಶಕ್ತಿಯನ್ನು ಹೊಂದಿದೆ. ವಚನಕಾರರ 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎನ್ನುವ ಮಾತುಗಳು ಇಂದಿನ ಸಾಮಾಜಿಕ ಅಸಹನೆಯ ಬಿಸಿಲಿಗೆ ತಣ್ಣನೆಯ ಮದ್ದು. ನಾವು ಓದುವ ಪ್ರತಿ ಸಾಲೂ ನಮ್ಮ ವ್ಯಕ್ತಿತ್ವದ ಮೇಲಿನ ಧೂಳನ್ನು ಕೊಡವಿ, ನಮ್ಮನ್ನು ಮತ್ತಷ್ಟು ಮೃದುವಾಗಿಸುತ್ತದೆ.

ಸಾಹಿತ್ಯದ ಸಾಂಗತ್ಯ ಸದಾ ಇರಲಿ

ಬೇಸಗೆ ಮುಗಿದು ಮಳೆಗಾಲ ಬರುತ್ತದೆ. ಆದರೆ ಮನುಷ್ಯನ ಅಂತರಂಗದ ತಳಮಳಕ್ಕೆ ಸಾಹಿತ್ಯದ ಸಾಂಗತ್ಯ ಸದಾ ಬೇಕು. ಕಿಟಕಿಯ ಹೊರಗೆ ಬಿಸಿಲು ಎಷ್ಟೇ ಪ್ರಖರವಾಗಿದ್ದರೂ, ಒಳಗೊಂದು ಪುಸ್ತಕ ತೆರೆದಿದ್ದರೆ ಅಲ್ಲಿ ವಸಂತಕಾಲವೇ ಸರಿ. ಬನ್ನಿ, ಈ ಬೇಸಗೆಯನ್ನು ಕೇವಲ ಫ್ಯಾನ್ ಅಡಿ ಕುಳಿತು ಕಳೆಯುವ ಬದಲು, ಸಾಹಿತ್ಯದ ತಂಗಾಳಿಯಲ್ಲಿ ಮೀಯೋಣ. ಯಾಕೆಂದರೆ, ಸುಡುವ ಬಿಸಿಲಿಗಿಂತಲೂ ಅಕ್ಷರಗಳ ಪ್ರೀತಿ ಹೆಚ್ಚು ಶಕ್ತಿಯುತವಾದುದು. ಈ ಬಿಸಿಲನ್ನು ಗೆಲ್ಲಲು ಅಕ್ಷರಗಳಿಗಿಂತ ದೊಡ್ಡ 'ಸಛತ್ರಛಾಯೆ' ಮತ್ತೊಂದಿಲ್ಲ...

ಯುದ್ಧ ಮುಗಿಯದು

• ಡಾ. ರವಿಶಂಕರ್ ಎ.ಕೆ.

ಮಾನವ ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ಅಲ್ಲಿ ಶಾಂತಿಯ ಸಂದೇಶಗಳಿಗಿಂತ ಯುದ್ಧದ ರಕ್ತದ ಕಲೆಗಳೇ ಹೆಚ್ಚು ಕಾಣಸಿಗುತ್ತವೆ. ನಾಗರಿಕತೆ ಬೆಳೆದಂತೆ ಮನುಷ್ಯನು ಸಂಸ್ಕಾರವಂತನಾಗುತ್ತಾನೆ ಎಂಬ ನಂಬಿಕೆ ಸುಳ್ಳಾಗುತ್ತಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ಅಧ್ಯಾತ್ಮದ ಉತ್ತುಂಗದಲ್ಲಿರುವ ಇಂದಿನ ಕಾಲದಲ್ಲೂ ಯುದ್ಧದ ಕಾರ್ಮೋಡಗಳು ಮರೆಯಾಗಿಲ್ಲ. ಯುದ್ಧ ಮುಗಿಯುವುದಿಲ್ಲ ಎನ್ನುವುದು ಕೇವಲ ಒಂದು ವಾಕ್ಯವಲ್ಲ, ಅದು ಈ ಜಗತ್ತಿನ ಕಟುವಾಸ್ತವ. ಯುದ್ಧಗಳು ಕೇವಲ ಗಡಿಭಾಗಗಳಲ್ಲಿ ನಡೆಯುತ್ತಿಲ್ಲ; ಅವು ಮನುಷ್ಯನ ಆಲೋಚನೆಗಳಲ್ಲಿ, ಮಾರುಕಟ್ಟೆಯ ವ್ಯವಹಾರಗಳಲ್ಲಿ ಮತ್ತು ಸ್ವಾರ್ಥದ ಅಡಿಪಾಯದ ಮೇಲೆ ನಿರಂತರವಾಗಿ ನಡೆಯುತ್ತಲೇ ಇವೆ.

ಪ್ರಯತ್ನಗಳ ಕತ್ತಲಲ್ಲಿ: ಶತಮಾನಗಳಿಂದಲೂ ಕವಿಗಳು, ಹಾಡುಗಾರರು ಮತ್ತು ರಂಗಕರ್ಮಿಗಳು ಶಾಂತಿಗಾಗಿ ತಮ್ಮ ಬದುಕು ಮತ್ತು ಕಲೆಯನ್ನು ಮುಡಿಪಾಗಿಟ್ಟಿದ್ದಾರೆ. ಪಂಪನಿಂದ ಹಿಡಿದು ಕುವೆಂಪು ಅವರವರೆಗೆ ಜಗತ್ತಿನ ಶ್ರೇಷ್ಠ ಸಾಹಿತಿಗಳು ಯುದ್ಧದ ಭೀಕರತೆಯನ್ನು ವರ್ಣಿಸುತ್ತಾ ಮನುಕುಲಕ್ಕೆ ಶಾಂತಿಯ ಮಂತ್ರವನ್ನು ಬೋಧಿಸಿದ್ದಾರೆ. ರಂಗಕರ್ಮಿಗಳು ರಂಗಭೂಮಿಯ ಮೇಲೆ ಯುದ್ಧದ ದುರಂತಗಳನ್ನು ಪ್ರದರ್ಶಿಸಿ, ಪ್ರೇಕ್ಷಕರ ಮನಸ್ಸಿನಲ್ಲಿ ಅಹಿಂಸೆಯ ಬೀಜ ಬಿತ್ತಲು ಪ್ರಯತ್ನಿಸಿದ್ದಾರೆ. ಸಾವಿರಾರು ಹಾಡುಗಳು ಶಾಂತಿಯ ಪರವಾಗಿ ಜಗತ್ತಿನ ಮೂಲೆ ಮೂಲೆಗಳಲ್ಲಿ ಪ್ರತಿಧ್ವನಿಸಿವೆ. ಇಷ್ಟೆಲ್ಲಾ ಸೃಜನಶೀಲ ಪ್ರಯತ್ನಗಳ ನಂತರವೂ ಮನುಷ್ಯನು ಶಸ್ತ್ರಾಸ್ತ್ರಗಳನ್ನು ತ್ಯಜಿಸಿಲ್ಲ. ಕಲೆಯು ಮನಸ್ಸನ್ನು ಪರಿವರ್ತಿಸಬಹುದು ಎಂದು ನಾವು ನಂಬಿದ್ದರೂ, ಅಧಿಕಾರ ಮತ್ತು ಹಣದ ವ್ಯಾಮೋಹವು ಆ ಪರಿವರ್ತನೆಯನ್ನು ತಡೆಹಿಡಿದಿದೆ. ಶಾಂತಿಗಾಗಿ ಬರೆದ ಕವಿತೆಗಳು ಕೇವಲ ಪುಸ್ತಕದ ಪುಟಗಳಲ್ಲಿ ಉಳಿಯುತ್ತಿವೆಯೇ ಹೊರತು, ಯುದ್ಧಭೂಮಿಯ ವ್ಯೂಹಗಳನ್ನು ಭೇದಿಸಲು ಅವುಗಳಿಗೆ ಸಾಧ್ಯವಾಗುತ್ತಿಲ್ಲ.

ಇಂದಿನ ಜಗತ್ತು ಸಂಪೂರ್ಣವಾಗಿ ವ್ಯವಹಾರಮಯವಾಗಿದೆ. ಪ್ರತಿಯೊಂದು ಚಟುವಟಿಕೆಯೂ ಲಾಭ ಮತ್ತು ನಷ್ಟದ ಅಳತೆಗೋಲಿನ ಮೇಲೆ ನಿಂತಿದೆ. ಸ್ವಾರ್ಥವು ಮನುಷ್ಯನ ಮೂಲಪ್ರೇರಣೆಯಾದಾಗ, ಅಲ್ಲಿ ಶಾಂತಿಗಿಂತ ಲಾಭವೇ ಮುಖ್ಯವಾಗುತ್ತದೆ. ಯುದ್ಧ ಎನ್ನುವುದು ಇಂದು ಒಂದು ಬೃಹತ್ ಉದ್ಯಮವಾಗಿ ಬೆಳೆದಿದೆ. ಶಸ್ತ್ರಾಸ್ತ್ರಗಳ ಮಾರಾಟ, ರಕ್ಷಣಾ ಒಪ್ಪಂದಗಳು ಮತ್ತು ಇತರ ದೇಶಗಳ ಸಂಪನ್ಮೂಲಗಳ ಮೇಲೆ ಕಣ್ಣಿಡುವ ಪ್ರವೃತ್ತಿಯು ಯುದ್ಧವನ್ನು ಜೀವಂತವಾಗಿರಿಸಿದೆ. ಶಾಂತಿ ನೆಲೆಸಿದರೆ ಶಸ್ತ್ರಾಸ್ತ್ರ ಕಾರ್ಖಾನೆಗಳು ಮುಚ್ಚಬೇಕಾಗುತ್ತದೆ ಎಂಬ ಆರ್ಥಿಕ ಭಯವು ಪಟ್ಟಭದ್ರ ಹಿತಾಸಕ್ತಿಗಳಲ್ಲಿ ಅಡಗಿದೆ. ಆದ್ದರಿಂದಲೇ, ಈ ಜಗತ್ತಿನಲ್ಲಿ ಸ್ವಾರ್ಥವು ಸದಾ ಹೊಸ ಹೊಸ ಕಾರಣಗಳನ್ನು ಹುಡುಕುತ್ತಾ ಯುದ್ಧದ ಬೆಂಕಿಗೆ ತುಪ್ಪವನ್ನು ಸುರಿಯುತ್ತಲೇ ಇರುತ್ತದೆ. ಮನುಷ್ಯನ ಹಪಾಹಪಿಗೆ ಮಿತಿಯಿಲ್ಲದಿರುವುದೇ ಯುದ್ಧಗಳು ಮುಗಿಯದಿರಲು ಪ್ರಮುಖ ಕಾರಣವಾಗಿದೆ.

ವಾಸ್ತವ ಬೇರೆಯೇ ಇದೆ: ಜಗತ್ತಿನ ಈ ಯುದ್ಧದ ವ್ಯವಸ್ಥೆಯನ್ನು ಮೂರು ಹಂತಗಳಲ್ಲಿ ನೋಡಬಹುದು. ಮೊದಲನೆಯದಾಗಿ, ಉಳ್ಳವರಿಗೆ ಯುದ್ಧ ಎನ್ನುವುದು ಒಂದು ಆಟ. ಶಕ್ತಿಶಾಲಿ ರಾಷ್ಟ್ರಗಳು ಮತ್ತು ಶ್ರೀಮಂತ ವ್ಯಕ್ತಿಗಳಿಗೆ ಯುದ್ಧವು ತಮ್ಮ ಪ್ರಾಬಲ್ಯವನ್ನು ಮೆರೆಯಲು ಹಾಗೂ ಅಧಿಕಾರವನ್ನು ವಿಸ್ತರಿಸಲು ಆಡುವ ಚದುರಂಗದಾಟದಂತೆ ಕಾಣುತ್ತದೆ. ಅವರು ಸುರಕ್ಷಿತವಾದ ಕೋಣೆಗಳಲ್ಲಿ ಕುಳಿತು ಸೈನ್ಯವನ್ನು ದಾಳಗಳಂತೆ ಬಳಸುತ್ತಾರೆ. ಎರಡನೆಯದಾಗಿ, ನಿರ್ವಾಹಕರಿಗೆ ಇದು ಒಂದು ನೋಟ. ಯುದ್ಧವನ್ನು ನಿರ್ವಹಿಸುವವರು, ತಂತ್ರ ರೂಪಿಸುವವರು ಮತ್ತು ಮಾಧ್ಯಮಗಳು ಇದನ್ನು ಒಂದು ಕುತೂಹಲದ ಘಟನೆಯಂತೆ ಅಥವಾ ಅಂಕಿ-ಅಂಶಗಳ ಆಟದಂತೆ ವಿಶ್ಲೇಷಿಸುತ್ತವೆ. ಮೂರನೆಯದಾಗಿ, ಇಲ್ಲದವರಿಗೆ ಯುದ್ಧದ ಪ್ರತಿ ಹೆಜ್ಜೆಯೂ ಪಾಠ. ಬಡವರು, ಸಾಮಾನ್ಯ ಜನರು ಮತ್ತು ಗಡಿಯಲ್ಲಿ ಹೋರಾಡುವ ಸೈನಿಕರು ಯುದ್ಧದ ನೇರ ಬಲಿಪಶುಗಳಾಗುತ್ತಾರೆ. ಸಾವು-ನೋವು, ಹಸಿವು ಮತ್ತು ನೆಲೆ ಕಳೆದುಕೊಳ್ಳುವ ಭೀತಿಯು ಅವರಿಗೆ ಬದುಕಿನ ಅತ್ಯಂತ ಕಠಿಣ ಪಾಠಗಳನ್ನು ಕಲಿಸುತ್ತದೆ. ಆದರೆ, ಈ ಪಾಠಗಳು ಅಧಿಕಾರದಲ್ಲಿ ಇರುವವರಿಗೆ ತಲುಪುವುದೇ ಇಲ್ಲ.

ನಾವು ನಮ್ಮನ್ನು ಬುದ್ಧಿವಂತರು ಎಂದು ಕರೆದುಕೊಳ್ಳುತ್ತೇವೆ. ಆದರೆ, ನಮ್ಮ ಬುದ್ಧಿವಂತಿಕೆಯು ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಬಳಕೆಯಾಗುತ್ತಿದೆಯೇ ಹೊರತು ಮನುಕುಲದ ಏಳಿಗೆಗಲ್ಲ. ನಾವು ಪರಮಾಣು ಬಾಂಬುಗಳನ್ನು ತಯಾರಿಸಿ, ಅವುಗಳನ್ನು ಶಾಂತಿಯ ರಕ್ಷಾಕವಚಗಳು ಎಂದು ನಂಬುತ್ತೇವೆ. ಇದು ನಾವು ಬುದ್ಧಿವಂತ ಮೂರ್ಖರು ಎಂಬುದಕ್ಕೆ ಸಾಕ್ಷಿ. ಜ್ಞಾನವು ವಿನಯವನ್ನೂ, ಶಾಂತಿಯನ್ನೂ ನೀಡಬೇಕು. ಆದರೆ, ನಮ್ಮ ಜ್ಞಾನವು ಅಹಂಕಾರ ಮತ್ತು ಆಕ್ರಮಣಕಾರಿ ಮನೋಭಾವವನ್ನು ಹೆಚ್ಚಿಸುತ್ತಿದೆ. ಚಂದ್ರನ ಮೇಲೆ ಮನೆಯನ್ನು ಕಟ್ಟಲು ಯೋಚಿಸುವ ನಾವು, ಈ ಭೂಮಿಯ ಮೇಲೆ ನೆರೆಹೊರೆಯವರೊಂದಿಗೆ ಸಾಮರಸ್ಯದಿಂದ ಬದುಕುವುದನ್ನು ಮರೆತಿದ್ದೇವೆ. ವಿವೇಕವಿಲ್ಲದ ಬುದ್ಧಿವಂತಿಕೆಯು ಸದಾ ಸಂಘರ್ಷಕ್ಕೇ ದಾರಿ ಮಾಡಿಕೊಡುತ್ತದೆ. ಆದ್ದರಿಂದಲೇ ನಾವು ಎಷ್ಟೇ ಮುಂದುವರಿದರೂ ಯುದ್ಧದ ಮನಸ್ಥಿತಿಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಸಾರಾಂಶದಲ್ಲಿ ಹೇಳುವುದಾದರೆ, ಯುದ್ಧವು ಸದಾ ಸಂಸಿದ್ಧವಾಗಿರುತ್ತದೆ, ಏಕೆಂದರೆ ಮನುಷ್ಯನ ಅಂತರಂಗದ ಸ್ವಾರ್ಥವು ಸದಾ ಜಾಗೃತವಾಗಿದೆ. ಶಾಂತಿಯ ಘೋಷಣೆಗಳು ಕೇವಲ ಮುಖವಾಡಗಳಾಗಿ ಬಳಕೆಯಾಗುತ್ತಿವೆ. ಎಲ್ಲಿಯವರೆಗೆ ಮನುಷ್ಯನು ತನ್ನ ಬುದ್ಧಿವಂತಿಕೆಯನ್ನು ವಿವೇಚನೆಯೊಂದಿಗೆ ಬೆಸೆಯುವುದಿಲ್ಲವೋ, ಅಲ್ಲಿಯವರೆಗೆ ಯುದ್ಧಗಳು ಮುಗಿಯುವುದಿಲ್ಲ. ಈ ವ್ಯವಹಾರಿ ಜಗತ್ತಿನಲ್ಲಿ ಬಡವರು ಪಾಠ ಕಲಿಯುತ್ತಲೇ ಇರುತ್ತಾರೆ, ಶ್ರೀಮಂತರು ಆಟವಾಡುತ್ತಲೇ ಇರುತ್ತಾರೆ. ಮನುಷ್ಯನ ಆಲೋಚನೆಗಳಲ್ಲಿ ಬದಲಾವಣೆ ಬಂದಾಗ ಮಾತ್ರ, ಯುದ್ಧದ ಅಂತ್ಯವು ಸಾಧ್ಯವೇ ಹೊರತು ಶಸ್ತ್ರಾಸ್ತ್ರಗಳ ಸಂಧಾನದಿಂದಲ್ಲ. ನಾವು ಬುದ್ಧಿವಂತರಾಗುವ ಬದಲು ಆಲೋಚನೆಯುಕ್ತರಾಗಿ ಬದಲಾಗದಿದ್ದರೆ, ಈ ಯುದ್ಧದ ಸರಣಿಯು ಮುಂದಿನ ತಲೆಮಾರುಗಳನ್ನೂ ಬಲಿ ತೆಗೆದುಕೊಳ್ಳುತ್ತಲೇ ಇರುತ್ತದೆ.

ಅನುಭವಿಸಲು ಸಾಲಾಗಿ ನಿಲ್ಲಬೇಕಷ್ಟೆ...

ಅಸೂಯೆಯ ಅಳಿವಿನಿಂದ ಆರೋಗ್ಯ- ಆನಂದ-ಅಭಿವೃದ್ಧಿ

• ಡಾ.ಕರವೀರಪ್ರಭು ಕ್ಯಾಲಕೊಂಡ

ಈ ಪ್ರಪಂಚದಲ್ಲಿ ಯಾರೇನೂ ಶಾಶ್ವತವಲ್ಲ. ಆದ್ದರಿಂದ, ಇರುವಷ್ಟು ದಿನವೂ ಬದುಕನ್ನು ಸಂತಸದಿಂದ ನಡೆಸುವ ಬಗೆಯನ್ನು ಅರಿಯ ಬೇಕಾದ್ದು ಮುಖ್ಯ. ಹಾಗಾದರೆ ಸಹಜ-ಸಂತಸವನ್ನು ರೂಢಿಸಿಕೊಳ್ಳುವುದು ಹೇಗೆ?

ಹಾಗೆ ನೋಡಿದರೆ, ಸಹಜ ಸ್ಥಿತಿಯಲ್ಲಿ ವ್ಯಕ್ತಿಯ ಮನದಲ್ಲಿ ಸಂತಸ ತುಂಬಿರುತ್ತದೆ. ಇದಕ್ಕೆ ಪುರಾವೆ ಬೇಕಿದ್ದರೆ ಪುಟ್ಟ ಮಗುವನ್ನು ನೋಡಬೇಕು. ಆ ಮಗುವಿನಲ್ಲಿ ಅದೆಂಥಾ ನಗು, ಅದೆಷ್ಟು ಸಂತಸ! ಹಸಿದರೆ ಮಾತ್ರವೇ ಅದು ಅಳುತ್ತದೆ ಇಲ್ಲವೇ ಚೀರುತ್ತದೆ. ಆದರೆ ನಾವು ಬೆಳೆಯುತ್ತಾ ಹೋದಂತೆ ಆ ಮುಗ್ಧ ಮತ್ತು ನಿಷ್ಕಳಂಕ ನಗುವನ್ನು ಕಳೆದುಕೊಳ್ಳುವ ಹಲವು ವಿಧಾನಗಳನ್ನು ಕರಗತ ಮಾಡಿಕೊಳ್ಳುತ್ತೇವೆ. ''ನಿಮ್ಮ ಆಲೋಚನಾ ಶಕ್ತಿಯನ್ನು ಹೊಟ್ಟೆಕಿಚ್ಚು ಬದಲಾಯಿಸುತ್ತದೆ; ನಿಮ್ಮಲ್ಲಿರುವ ಗುಣ, ಸಂಪತ್ತುಗಳಿಂದ ಸಂತೋಷ ಪಡುವ ಬದಲಾಗಿ, ಬೇರೆಯವರಲ್ಲಿರುವ ಗುಣ-ಸಂಪತ್ತುಗಳನ್ನು ಆಶಿಸುತ್ತೀರಿ. ಇದುವೇ ದುಃಖದ ಮೂಲ'' ಎಂದಿದ್ದಾರೆ ತತ್ವಜ್ಞಾನಿ ಬರ್ಟ್ರೆಂಡ್ ರಸೆಲ್.

ಅಸೂಯೆ ಎಂಬ ಶತ್ರು: ನಮ್ಮ ಸಹಪಾಠಿಗಳು ಅಥವಾ ಸಹೋದ್ಯೋಗಿಗಳ ಮೇಲೆ ಸಾಮಾನ್ಯವಾಗಿ ಈ ಅಸೂಯೆ ಉಂಟಾಗುತ್ತದೆ. ನಮ್ಮ ಜೀವನದ ಅವಧಿ ಕಿರಿದಾದುದು. ಹೀಗಿರುವಾಗ ವಿನಾಕಾರಣ ಅಸೂಯೆಗೆ ಒಡ್ಡಿಕೊಂಡು ಬದುಕನ್ನು ಹಾಳು ಮಾಡಿಕೊಳ್ಳುವುದು ವಿಪರ್ಯಾಸವಲ್ಲವೇ? ಅಸೂಯೆ ಎಂಬ ಕಾಯಿಲೆ ಬಹುತೇಕ ಎಲ್ಲರನ್ನೂ ಒಂದಲ್ಲಾ ಒಂದು ಹಂತದಲ್ಲಿ ಕಾಡುವುದು ನಿಜ. ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನ ಬೇಕು. ಯಾರು ಅಸೂಯೆಯನ್ನು ಮೆಟ್ಟಿ ನಿಲ್ಲುತ್ತಾರೋ ಅವರು ಬದುಕನ್ನು ನಿಜವಾಗಿಯೂ ಸಂತಸದಿಂದ ಕಳೆಯುತ್ತಾರೆ, ಯಶಸ್ಸನ್ನು ತಮ್ಮದಾಗಿಸಿಕೊಳ್ಳುತ್ತಾರೆ.

ಅಸೂಯೆಯನ್ನು ಗೆದ್ದವರಿಗೆ ಕಾಯಿಲೆಗಳು ಬಾಧಿಸುವುದಿಲ್ಲ. ಒಂದೊಮ್ಮೆ ಯಾವುದಾದರೊಂದು ದೀರ್ಘಾವಧಿ ಕಾಯಿಲೆಯು ಅಮರಿಕೊಂಡಿದ್ದರೂ, ಅಸೂಯೆಯನ್ನು ಇಲ್ಲವಾಗಿಸಿಕೊಂಡಾತನು ಬದುಕನ್ನು ಆನಂದದಿಂದ ಕಳೆಯುವುದಂತೂ ಖಂಡಿತ. ನಮ್ಮ ಇಂದಿನ ಶಿಕ್ಷಣ ಪದ್ಧತಿಯು ಎಳೆಯ ವಯಸ್ಸಿನ ಮಕ್ಕಳಲ್ಲಿ ಅಸೂಯೆಯ ಬೀಜ ಬಿತ್ತಿ, ಅವಕ್ಕೆ ಬೇಕಾದ ಪೌಷ್ಟಿಕ ಆಹಾರಗಳನ್ನು ಕೊಟ್ಟು ಬೆಳೆಸುತ್ತಿರುವುದು ಬಹಳ ದುಃಖದ ಸಂಗತಿ. ಹೀಗಾಗಿ ಪ್ರಾಥಮಿಕ ವಿದ್ಯಾಭ್ಯಾಸದ ಹಂತದಿಂದಲೇ ರ್‍ಯಾಂಕ್‌ನ ಗೀಳು ಎಳೆಯ ಮಕ್ಕಳನ್ನು ಕಾಡತೊಡಗುತ್ತದೆ. ರ್‍ಯಾಂಕು, ಅಂಕಗಳು, ಜೀವನದ ಸ್ಥಾನಮಾನ ಇತ್ಯಾದಿಗಳು ಮಕ್ಕಳ ಮನದ ಆನಂದವನ್ನು ತೊಲಗಿಸಿ ಅಸೂಯೆಯನ್ನು ಬೆಳೆಸುತ್ತವೆ.

ಸಂತಸವೇ ಆರೋಗ್ಯದ ಮೂಲ: ಬದುಕಿನಲ್ಲಿ ಸಂತಸ ನಮ್ಮದಾಗಬೇಕೆಂದರೆ, ನಮಗಿಂತ ಹೆಚ್ಚು ಕಷ್ಟದಲ್ಲಿ ಇರುವವರನ್ನು ನೋಡಿ ತಿಳಿಯುವ ಪ್ರಯತ್ನ ಮಾಡಬೇಕು. 'ನಮಗಿಂತ ಸಂಪಾದಿಸುವವರು ಕೆಲವೇ ಮಂದಿ, ಆದರೆ ನಮಗಿಂತ ಕೆಳಗಿನ ಮಟ್ಟದಲ್ಲಿ ಜೀವನ ವ'ಾ'ಡ'ಂವ'ವ'ರ'ಂ ಸಹಸ್ರಾರು ಮಂದಿ, ಹೊಟ್ಟೆಗೆ ಹಿಟ್ಟಿಲ್ಲದೆಯೇ ಸಾಯುವವರು ಲಕ್ಷಾಂತರ ಮಂದಿ' ಎಂಬ ಮಾತು ವಾಸ್ತವವೂ ಹೌದು.



ಕಾಲಿನಲ್ಲಿ ನೋವಿದ್ದವನೊಬ್ಬ, ಕಾಲುಗಳೇ ಇಲ್ಲದ ವ್ಯಕ್ತಿಯೊಬ್ಬನನ್ನು ಕಂಡು ತನ್ನ ನೋವನ್ನು ಮರೆತನಂತೆ. ನಾವೆಷ್ಟೇ ಬುದ್ಧಿವಂತರಾಗಿರಲಿ, ಸಿರಿವಂತರಾಗಿರಲಿ, ಬಲಾಢ್ಯರಾಗಿರಲಿ, ಈ ವಿಷಯಗಳಲ್ಲಿ ನಮಗಿಂತ ಮೇಲಿರುವವರು ಇರುವುದು ಖಂಡಿತ. ಹಾಗಂತ ಅಸೂಯೆಪಟ್ಟರೆ, ನಮ್ಮ ಸಂತಸಕ್ಕೆ ನಾವೇ ಸಂಚಕಾರವನ್ನು ತಂದುಕೊಂಡಂತೆ. ಪರರ ಸೇವೆ, ಸಹಾನುಭೂತಿ ಮತ್ತು ಸರ್ವರಲ್ಲೂ ಪ್ರೀತಿ ತೋರುವಿಕೆ ಮುಂತಾದ ಗುಣ-ವೈಶಿಷ್ಟ್ಯಗಳು ಆರೋಗ್ಯವರ್ಧಕ ರಾಸಾಯನಿಕ ಪದಾರ್ಥಗಳನ್ನು ಹುಟ್ಟುಹಾಕಿ ನಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ ಎಂಬುದಕ್ಕೆ ಈಗ ಸಾಕಷ್ಟು ಪುರಾವೆಗಳಿವೆ. ಅಂತೆಯೇ, ದ್ವೇಷ, ಅಸೂಯೆ, ಗರ್ವ, ಅಹಂಕಾರ ಮುಂತಾದ ನಕಾರಾತ್ಮಕ ಚಿಂತನೆಗಳು ಹಾನಿಕಾರಕ ರಾಸಾಯನಿಕಗಳಾಗಿ ಮಾರ್ಪಟ್ಟು, ದೇಹ ಮತ್ತು ಮನಸ್ಸಿನ ಸ್ವಾಸ್ಥ್ಯವನ್ನು ಹಾಳುಗೆಡವುತ್ತವೆ ಎಂಬುದರಲ್ಲಿ ಸಂದೇಹವಿಲ್ಲ.

ಮೆಟ್ಟಿ ನಿಲ್ಲಬೇಕು: 'ಸಾವು ಇಲ್ಲದ ಮನೆಯಿಲ್ಲ' ಎನ್ನುವ ಹಾಗೆ ಲವಲೇಶವಾದರೂ ಅಸೂಯೆ ಇಲ್ಲದ ವ್ಯಕ್ತಿ ಸಿಗುವುದು ವಿರಳ. ಅಸೂಯೆ ಎಂಬುದು ಮನುಷ್ಯನ ಮೂಲಭೂತ ಭಾವನೆಗಳಲ್ಲಿ ಒಂದೆಂದು ಮನೋವಿಜ್ಞಾನವೂ ಹೇಳುತ್ತದೆ. ಆದರೆ ಅದರ ಪ್ರಮಾಣವು ಹೆಚ್ಚಾಗಲು ಬಿಡಬಾರದು. ಅಸೂಯೆಯ ಭಾವವನ್ನು ಮೆಟ್ಟಬೇಕು, ಸಾಧನೆಗೆ ಅದನ್ನೊಂದು ಮೆಟ್ಟಿಲಾಗಿ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಅಸೂಯೆಯೇ ನಮ್ಮನ್ನು, ನಮ್ಮ ಮಾತು-ವರ್ತನೆಗಳನ್ನು ನಿಯಂತ್ರಿಸತೊಡಗುತ್ತದೆ. ಕೀಳರಿಮೆ ಮತ್ತು ಆತ್ಮವಿಶ್ವಾಸದ ಕೊರತೆಯು ಅಸೂಯೆಗೆ ತಾಯ್ನೆಲವಿದ್ದ ಹಾಗೆ. ನಮ್ಮ ಇತಿಮಿತಿಗಳನ್ನು ಒಪ್ಪಿಕೊಳ್ಳುವುದು ಮತ್ತು ಇನ್ನೊಬ್ಬರ ಸಾಮರ್ಥ್ಯವನ್ನು ಗೌರವಿಸುವುದು- ಈ ಎರಡೂ ಕಲೆತಾಗ ಅಸೂಯೆಯನ್ನು ಹತೋಟಿಯಲ್ಲಿಡಬಹುದು. ಆಗ ದೈಹಿಕ ಮತ್ತು ಮಾನಸಿಕ ಆರೋಗ್ಯವು ನಮ್ಮದಾಗುತ್ತದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

3. ಉಪಚಾರ ಮಾಡುವಾಗ ನ್ಯೂನತೆ ಉಂಟಾಗಿ, ಅಗೌರವ ತೋರಿದಂತಾಯಿತು (4)
5. ನಾಲ್ಕು ಯುಗಗಳಲ್ಲಿ ಈಗಿನದ್ದು (4)
6. ಮನುಜನ ಹಾಗೆಯೆ ಕಂಡನೇ ರಾಕ್ಷಸ (3)
8. ಹೇಳುವಿಕೆ ಅಥವಾ ನಿರೂಪಣೆ (3)
10. ನೂಲು ತೆಗೆಯುವ ಒಂದು ಸಾಧನ (3)
11. ಸುತ್ತ ನೋಡುತ್ತಿದ್ದಾನೆ ಮಗ (2)
12. ಧ್ವನಿ ಅಥವಾ ಕೂಗು (2)
13. ಹೊಯಿಗೆ ಅಥವಾ ಮರಳಿಗೆ ಮತ್ತೊಂದು ಹೆಸರು (3)
16. ಎರಡನೆಯ ಸ್ಥಾನ ಪಡೆದವರಿಗೆ ಸಿಕ್ಕಿದ್ದು ಬೆಳ್ಳಿ (3)
18. ಹಿಮಾಲಯದಲ್ಲಿರುವ ಒಂದು ಪವಿತ್ರ ಸರೋವರ (3)
20. ದಿನನಿತ್ಯ ಬಳಸುವ ಕಾಯಿಪಲ್ಲೆ (4)
21. ನಿಶ್ಚಿತವಾದದ್ದಲ್ಲ (4)

ಮೇಲಿಂದ ಕೆಳಕ್ಕೆ

1. ಮನಸ್ಸನ್ನು ಸೆಳೆಯುವಂಥ (4)
2. ವಾಲಿಯ ಮಗ (3)
3. ಹಿರಿಯವನು, ಅಣ್ಣ (3)
4. ಇತಿಹಾಸಕ್ಕೆ ಸಂಬಂಧಪಟ್ಟದ್ದು (4)
7. ಮಾತು ಅಥವಾ ಭಾಷೆಯೂ ಆಗಬಲ್ಲುದು (2)
9. ಬೆಳಗಿನ ಜಾವ (3)
10. ಈ ಲೋಹದಲ್ಲಿ ಮದುವೆಯ ಗಂಡೂ ಇದ್ದಾನೆ (3)
14. ಮೋಹಕ ನಗೆಯುಳ್ಳವಳು (4)
15. ಎರಡಕ್ಷರದಲ್ಲಿ ಮಂದಿ (2)
17. ಯಾಮಾರಿಸುವುದಲ್ಲ, ಸಿದ್ಧಪಡಿಸು (4)
18. ಬೀಸುತ ಬಂದಿದೆ ಗಾಳಿ (3)
19. ನಿರಂತರ, ಎಡೆಬಿಡದೆ (3)

ಸರಿಯುತ್ತರಗಳು

ಶ್ರೀ ರಾಮನ ಭಕ್ತ ಹನುಮಂತನ ಅಪ್ರತಿಮ ಭಕ್ತಿಯ ಪರಾಕಾಷ್ಠೆ



ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅಯೋಧ್ಯೆಯ ರಾಜದರ್ಬಾರು ಅಂದು ಹಿಂದೆಂದೂ ಕಾಣದ ಸಡಗರಕ್ಕೆ ಸಾಕ್ಷಿಯಾಗಿತ್ತು. ರಾವಣನ ಸಂಹಾರದ ನಂತರ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನ ಪಟ್ಟಾಭಿಷೇಕ ಮಹೋತ್ಸವ ಮುಗಿದಿತ್ತು. ರಾಮನು ತನಗೆ ಸಹಾಯ ಮಾಡಿದ ಪ್ರತಿಯೊಬ್ಬರಿಗೂ ಕೃತಜ್ಞತೆ ಸಲ್ಲಿಸುತ್ತಾ, ಅಮೂಲ್ಯವಾದ ಉಡುಗೊರೆಗಳನ್ನು ನೀಡುತ್ತಿದ್ದನು.

ಕೊನೆಯಲ್ಲಿ, ಪ್ರೀತಿಯ ಸಂಕೇತವಾಗಿ ಸೀತೆಯು ತನ್ನ ಕೊರಳಿನಲ್ಲಿದ್ದ ದಿವ್ಯವಾದ ಮುಕ್ತಹಾರವನ್ನು ತೆಗೆದಳು. ಸೀತೆಯು ಆ ಹಾರವನ್ನು ಹನುಮಂತನ ಕೈಗಿಟ್ಟು, ''ಇದು ನಿನ್ನ ಭಕ್ತಿಗೆ ನನ್ನ ಉಡುಗೊರೆ'' ಎಂದಳು. ಇಡೀ ಸಭೆ 'ಹನುಮಂತನ ಭಾಗ್ಯವೇ ಭಾಗ್ಯ!' ಎಂದು ಉದ್ಗರಿಸಿತು.

ಹಾರವನ್ನು ಸ್ವೀಕರಿಸಿದ ಹನುಮಂತನು ಅದನ್ನು ಕಣ್ಣಿಗೆ ಒತ್ತಿಕೊಂಡನು. ಆದರೆ ಮರುಕ್ಷಣವೇ ಆತನ ನಡವಳಿಕೆ ಬದಲಾಯಿತು. ಹನುಮಂತನು ಹಾರದಿಂದ ಒಂದು ಮುತ್ತನ್ನು ಬೇರ್ಪಡಿಸಿದನು. ಅದನ್ನು ತನ್ನ ಕಣ್ಣಿಗೆ ಹತ್ತಿರ ತಂದು ಸುದೀರ್ಘವಾಗಿ ಪರೀಕ್ಷಿಸಿದನು. ನಂತರ ಹಲ್ಲಿನಿಂದ 'ಕಟಕ್' ಎಂದು ಕಚ್ಚಿ ಅದನ್ನು ಎರಡು ಹೋಳು ಮಾಡಿದನು. ತನ್ನ ಕಿವಿಯ ಹತ್ತಿರ ಹಿಡಿದು ಏನನ್ನೋ ಆಲಿಸಿದನು. ಮುಖದಲ್ಲಿ ನಿರಾಸೆ ಮೂಡಿತು. ಆ ಮುತ್ತನ್ನು ಎಸೆದುಬಿಟ್ಟನು. ಹೀಗೆ ಒಂದಾದ ನಂತರ ಒಂದರಂತೆ ಆ ಅಮೂಲ್ಯ ಮುತ್ತುಗಳನ್ನು ಒಡೆದು ಎಸೆಯತೊಡಗಿದನು.

ಇದನ್ನು ಕಂಡು ಸಭೆಯಲ್ಲಿದ್ದ ಮಂತ್ರಿಗಳು ಅಸಮಾಧಾನಗೊಂಡರು. ಈ ವಾನರನಿಗೆ ಮರ್ಯಾದೆ ತಿಳಿಯದು. ರಾಜಮಾತೆ ನೀಡಿದ ಪ್ರಸಾದವನ್ನು ಹೀಗೆ ಹಲ್ಲಿನಿಂದ ಕಚ್ಚಿ ಬೀದಿಗೆ ಎಸೆಯುತ್ತಿದ್ದಾನಲ್ಲ? ಮಂಗನ ಕೈಗೆ ಮಾಣಿಕ್ಯ ಕೊಟ್ಟರೆ ಇದೇ ಗತಿ! ಎಂದು ಹೀಯಾಳಿಸಿದರು. ಲಕ್ಷ್ಮಣನಿಗೂ ತನ್ನ ಅಣ್ಣನಿಗೆ ಮತ್ತು ಅತ್ತಿಗೆಗೆ ಆದ ಅಪಮಾನವನ್ನು ಸಹಿಸಲು ಸಾಧ್ಯವಾಗಲಿಲ್ಲ. ಆತ ಕೋಪದಿಂದ ಕೇಳಿದ: ''ಹನುಮಂತಾ! ಈ ಮುತ್ತುಗಳು ಸಾಮಾನ್ಯವಾದುದಲ್ಲ. ಇವುಗಳ ಬೆಲೆ ನಿನಗೆ ತಿಳಿದಿದೆಯೇ? ನೀನು ಮಾಡುತ್ತಿರುವುದು ಅಕ್ಷಮ್ಯ ಅಪರಾಧವಲ್ಲವೇ?''

ಹನುಮಂತನು ವಿನಯದ ಸಾಕಾರಮೂರ್ತಿಯಾಗಿ ಎದ್ದು ನಿಂತು ಕೈಮುಗಿದು ಹೇಳಿದ: ''ಕ್ಷಮಿಸಿ ಸೌಮಿತ್ರಿ, ನನಗೆ ಮುತ್ತಿನ ಲೌಕಿಕ ಬೆಲೆಯ ಬಗ್ಗೆ ಕಾಳಜಿಯಿಲ್ಲ. ನಾನು ಈ ಮುತ್ತುಗಳನ್ನು ಒಡೆದು ನೋಡುತ್ತಿರುವುದು ಅವುಗಳ ಒಳಗಿನ ಸತ್ವಕ್ಕಾಗಿ. ಯಾವ ವಸ್ತುವಿನಲ್ಲಿ 'ರಾಮ' ಎಂಬ ಎರಡಕ್ಷರದ ಮಂತ್ರವಿಲ್ಲವೋ, ಅಂಥ ವಸ್ತು ನನಗೆ ಕೇವಲ ಕಸಕ್ಕೆ ಸಮಾನ. ನಾನು ಪ್ರತಿ ಮುತ್ತಿನಲ್ಲೂ ನನ್ನ ರಾಮನ ನಾಮ ಕೇಳಿಸುತ್ತದೆಯೇ ಎಂದು ಆಲಿಸಿದೆ. ಆದರೆ ಈ ಜಡವಾದ ಮುತ್ತುಗಳಲ್ಲಿ ರಾಮನ ಹೆಸರಿಲ್ಲ. ರಾಮನ ಹೆಸರಿಲ್ಲದ ವಸ್ತು ಅದೆಷ್ಟೇ ಬೆಲೆಬಾಳುವ ಚಿನ್ನವಾಗಿದ್ದರೂ ಅದು ನನಗೆ ಹೊರೆ ಮಾತ್ರ''. ಸೀತೆಗೆ ಆಗ ತಾನು ಮಾಡಿದ ತಪ್ಪಿನ ಅರಿವಾಗಿತ್ತು. ಅವಳು ಅದನ್ನು ಶ್ರೀರಾಮನ ಹೆಸರಿನಿಂದ ನೀಡುವ ಬದಲು 'ನನ್ನ ಉಡುಗೊರೆ' ಎಂದು ನೀಡಿದ್ದಳು. ಆಗ ಸಭೆಯಲ್ಲಿದ್ದವರೊಬ್ಬರು ''ಹನುಮಂತಾ, ಹಾಗಿದ್ದರೆ ನಿನ್ನ ದೇಹದೊಳಗೆ ರಾಮನಿದ್ದಾನೆಯೇ?'' ಎಂದು ಕೇಳಿಬಿಟ್ಟರು.

ಆ ಮಾತು ಹನುಮಂತನ ಅಂತರಂಗವನ್ನು ಬಡಿದೆಬ್ಬಿಸಿತು. ಹನುಮಂತನು ಕಿಂಚಿತ್ತೂ ಕೋಪಗೊಳ್ಳದೆ, ''ನೋಡಿ ಹಾಗಿದ್ದರೆ...'' ಎನ್ನುತ್ತಾ ತನ್ನ ಎರಡು ಕೈಗಳಿಂದ ಎದೆಯನ್ನು ಸೀಳಿದನು! ಹನುಮಂತನ ಹರಿದ ಎದೆಯ ಒಳಗೆ, ರಕ್ತಸಿಕ್ತವಾದ ಮಾಂಸಖಂಡಗಳ ನಡುವೆ, ಶ್ರೀರಾಮ ಮತ್ತು ಸೀತಾದೇವಿಯರು ಕುಳಿತಿರುವ ದೃಶ್ಯ ಗೋಚರವಾಯಿತು. ಅಷ್ಟೇ ಅಲ್ಲ, ಹನುಮಂತನ ಪ್ರತಿ ನರಗಳಲ್ಲಿ, ಪ್ರತಿ ರಕ್ತದ ಹನಿಯ ಸದ್ದಿನಲ್ಲಿ 'ರಾಮ... ರಾಮ... ರಾಮ...' ಎಂಬ ಝೇಂಕಾರವು ಇಡೀ ಸಭೆಗೆ ಕೇಳಿಸತೊಡಗಿತು. ಸಭೆಯಲ್ಲಿದ್ದವರೆಲ್ಲರೂ ಆಶ್ಚರ್ಯದಿಂದ ಆಸನದಿಂದ ಎದ್ದು ನಿಂತರು. ಕೆಲವರು ಕಣ್ಣೀರು ಹಾಕುತ್ತಾ ಹನುಮಂತನ ಪಾದಕ್ಕೆ ನಮಸ್ಕರಿಸಿದರು.

ರಾಮನು ಸಿಂಹಾಸನದಿಂದ ಇಳಿದು ಬಂದು ಹನುಮಂತನ ಹರಿದ ಎದೆಯನ್ನು ತನ್ನ ಮೃದುವಾದ ಹಸ್ತದಿಂದ ಸವರಿದನು. ಮರುಕ್ಷಣವೇ ಗಾಯ ಮಾಯವಾಗಿ ಹನುಮಂತನು ಮೊದಲಿನಂತಾದನು. ರಾಮನು ಗದ್ಗದಿತನಾಗಿ ನುಡಿದ: ''ಮಾರುತಿ, ನಿನಗೆ ನನ್ನನ್ನು ಬಿಟ್ಟರೆ ಬೇರೆ ಲೋಕವಿಲ್ಲ, ನನಗೆ ನಿನ್ನನ್ನು ಬಿಟ್ಟರೆ ಬೇರೆ ಭಕ್ತನಿಲ್ಲ. ಯುಗಾಂತರದವರೆಗೂ ನಿನ್ನ ಈ ಭಕ್ತಿ ಅಮರವಾಗಿರಲಿ''.

ಭಕ್ತಿ ಅಂತರಂಗದಲ್ಲಿ ಹರಿದಾಗ ಅಲ್ಲಿ ಭಗವಂತ ನೆಲೆಸಿರುತ್ತಾನೆ. 'ನಾನು' ಎನ್ನುವ ಅಹಂಕಾರದಲ್ಲಿ ಅವನಿರುವುದಿಲ್ಲ. ಆದ್ದರಿಂದಲೇ ಯಾರಿಗಾದರೂ ಸಹಾಯ ಮಾಡುವಾಗಲು ಅದು ಭಗವಂತನ ಪ್ರೇರಣೆ ಎನ್ನುವ ವಿನಮ್ರತೆ ನಮಗಿದ್ದಾಗ ಮಾತ್ರ ಅದರ ಪುಣ್ಯದ ಫಲ ನಮಗೆ ದಕ್ಕಬಹುದು.

ಸಮಾಚಾರ ಸಣ್ಣದಲ್ಲ

ಯಶ್ ದಯಾಳ್ ಗೃಹಸ್ಥಾಶ್ರಮಕ್ಕೆ

ದೆಹಲಿ: ಆರ್‌ಸಿಬಿ ತಂಡದ ವೇಗಿ ಯಶ್ ದಯಾಳ್ ಕಳೆದ ಫೆ.4ರಂದು ನೋಯ್ಡಾದಲ್ಲಿ ವ್ಲಾಗರ್ ಹಾಗೂ ಇನ್‌ಫ್ಲೂಯೆನ್ಸರ್ ಶ್ವೇತಾ ಪುಂಡಿರ್ ಅವರನ್ನು ವಿವಾಹವಾಗಿದ್ದಾರೆ ಎಂಬ ಸುದ್ದಿ ಹೊರಬಿದ್ದಿದೆ. ಈ ವಿವಾಹ ಕಾರ್ಯಕ್ರಮದ ಬಗ್ಗೆ ಎಲ್ಲಿಯೂ ವಿಷಯ ಬಹಿರಂಗವಾಗಿರಲಿಲ್ಲ. ಯಶ್ ದಯಾಳ್ ಸ್ವತಃ ಈ ವಿಷಯದ ಬಗ್ಗೆ ಮೌನ ವಹಿಸಿದ್ದರೂ, ಅವರ ಪತ್ನಿ ಶ್ವೇತಾ ಪುಂಡಿರ್ ಇನ್‌ಸ್ಟಾಗ್ರಾಮ್‌ನಲ್ಲಿ ವಿಡಿಯೊವನ್ನು ಹಂಚಿಕೊಳ್ಳುವ ಮೂಲಕ ಕುತೂಹಲಕ್ಕೆ ತೆರೆ ಎಳೆದಿದ್ದಾರೆ. ಶ್ವೇತಾ ಪುಂಡಿರ್ ಸೋಶಿಯಲ್ ಮೀಡಿಯಾದಲ್ಲಿ ಇನ್‌ಫ್ಲೂಯೆನ್ಸರ್ ಮತ್ತು ವ್ಲಾಗರ್ ಆಗಿದ್ದು, ಇನ್‌ಸ್ಟಾಗ್ರಾಮ್‌ನಲ್ಲಿ 6 ಲಕ್ಷಕ್ಕೂ ಹೆಚ್ಚು ಹಿಂಬಾಲಕರನ್ನು ಹೊಂದಿದ್ದಾರೆ. ಅವರು ಇಂಟರ್ ಕಾಂಟಿನೆಂಟಲ್ ಲೆಜೆಂಡ್ಸ್ ಲೀಗ್‌ನಲ್ಲೂ ಕಾರ್ಯ ನಿರ್ವಹಿಸಿದ್ದು, ಅಲ್ಲಿ ಗಮನಾರ್ಹ ಫಾಲೋವರ್ಸ್ ಅನ್ನು ಗಳಿಸಿದ್ದರು.

ಸನ್‌ರೈಸರ್ಸ್ ವಿರುದ್ಧ ಗಾವಸ್ಕರ್ ಆಕ್ರೋಶ



ಮುಂಬೈ: ದಿ ಹಂಡ್ರೆಡ್ ಕ್ರಿಕೆಟ್ ಟೂರ್ನಮೆಂಟ್ ಹರಾಜಿನಲ್ಲಿ ಪಾಕಿಸ್ತಾನಿ ಆಟಗಾರ ಅಬ್ರಾರ್ ಅಹ್ಮದ್ ಅವರನ್ನು ಆಯ್ಕೆ ಮಾಡಿಕೊಂಡಿರುವುದಕ್ಕಾಗಿ ಭಾರತದ ಒಡೆತನದಲ್ಲಿರುವ ಸನ್ ರೈಸರ್ಸ್ ಫ್ರಾಂಚೈಸಿ ವಿರುದ್ಧ ಭಾರೀ ಟೀಕೆಗಳು ನಿರಂತರವಾಗಿ ವ್ಯಕ್ತವಾಗುತ್ತಿವೆ. ಈ ಸಂಬಂಧ ಸನ್‌ರೈಸರ್ಸ್ ಮಾಲೀಕರ ವಿರುದ್ಧ ಭಾರತ ಕ್ರಿಕೆಟ್‌ನ ದಿಗ್ಗಜ ಸುನಿಲ್ ಗಾವಸ್ಕರ್ ವಾಗ್ದಾಳಿ ನಡೆಸಿದ್ದು, ಭಾರತೀಯ ಒಡೆತನದ ತಂಡವು ಪಾಕಿಸ್ತಾನಿ ಆಟಗಾರನನ್ನು ಖರೀದಿಸಿದ್ದು ಆಶ್ಚರ್ಯ ತಂದಿದೆ. ನವೆಂಬರ್ 2008ರಲ್ಲಿ ಮುಂಬೈ ಭಯೋತ್ಪಾದಕ ದಾಳಿ ನಂತರ ಐಪಿಎಲ್ ಮಾಲೀಕರು ಪಾಕ್ ಆಟಗಾರರನ್ನು ಸಂಪೂರ್ಣವಾಗಿ ಹೊರಗಿಟ್ಟಿದ್ದಾರೆ. ಪಾಕ್ ಆಟಗಾರರನ್ನು ಖರೀದಿಸಿದರೇ ಸಂಭಾವನೆಯ ಕನಿಷ್ಠ ಒಂದು ಭಾಗವಾದರೂ ಆ ದೇಶದ ಸರಕಾರಕ್ಕೆ ತೆರಿಗೆ ರೂಪದಲ್ಲಿ ಹೋಗುತ್ತದೆ. ಆ ಹಣದಿಂದ ಅವರು ಶಸ್ತ್ರಾಸ್ತ್ರಗಳನ್ನು ಖರೀದಿಸುತ್ತಾರೆ, ನಂತರ ಅವುಗಳನ್ನು ಭಾರತದ ವಿರುದ್ಧ ಬಳಸಲಾಗುತ್ತದೆ ಎಂದು ಸುನಿಲ್ ಗಾವಸ್ಕರ್ ಹೇಳಿದ್ದಾರೆ.

ಆರ್‌ಸಿಬಿ ತವರು ಕ್ರೀಡಾಂಗಣದ ಪಂದ್ಯಗಳಿಗೆ ಸರಕಾರದಿಂದ ಅಧಿಕೃತ ಅನುಮತಿ | ಬೆಂಗಳೂರಲ್ಲಿನ್ನು ಐಪಿಎಲ್ ಕಳೆ

ಚಿನ್ನಸ್ವಾಮಿಯಲ್ಲಿ ಐಪಿಎಲ್ ಉದ್ಘಾಟನೆ ಪಕ್ಕಾ

ಬೆಂಗಳೂರು: ಕ್ರಿಕೆಟ್ ಪ್ರೇಮಿಗಳು ಕಾತುರದಿಂದ ಕಾಯುತ್ತಿದ್ದ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಐಪಿಎಲ್ ಪಂದ್ಯಗಳ ಆಯೋಜನೆಗೆ ಸೋಮವಾರ ಸರಕಾರ ಅಧಿಕೃತ ಅನುಮತಿ ನೀಡಿದೆ. ಗೃಹ ಸಚಿವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ, ಆರ್‌ಸಿಬಿ ಮತ್ತು ಡಿಎನ್‌ಎ ಪ್ರತಿನಿಧಿಗಳು ಭಾಗಿಯಾಗಿದ್ದ ಮಹತ್ವದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ತಜ್ಞರ ಸಮಿತಿಯ ವರದಿ ಆಧರಿಸಿ ಕ್ರೀಡಾಂಗಣದ ಸಿದ್ಧತೆ ಮತ್ತು ಸುರಕ್ಷತಾ ಕ್ರಮಗಳ ಕುರಿತು ಸಭೆಯಲ್ಲಿ ವರದಿ ಮಂಡಿಸಲಾಯಿತು. ಈ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ರಾಜ್ಯ ಗೃಹ ಸಚಿವರು, ಮುಂಬರುವ ಐಪಿಎಲ್ ಪಂದ್ಯಗಳನ್ನು ನಡೆಸಲು ಸರಕಾರದ ಪರ ಅಧಿಕೃತ ಅನುಮೋದನೆ ನೀಡಿದ್ದಾರೆ.

2026ರ ಐಪಿಎಲ್ ಟೂರ್ನಿ ಮಾರ್ಚ್ 28ರಿಂದ ಪ್ರಾರಂಭಗೊಳ್ಳಲಿದೆ. ಈ ಸಂಬಂಧ ಮೊದಲ ಹಂತದ ವೇಳಾಪಟ್ಟಿಯನ್ನು ಸಹ ಬಿಡುಗಡೆ ಮಾಡಲಾಗಿದೆ. ಇದೀಗ ಕೆಲವು ಚುನಾವಣಾ ವೇಳಪಟ್ಟಿ ಪ್ರಕಟಗೊಂಡಿರುವ ಕಾರಣ ಇನ್ನು ಕೆಲವೇ ದಿನಗಳಲ್ಲಿ ಎರಡನೇ ಹಂತದ ವೇಳಾಪಟ್ಟಿಯೂ ಪ್ರಕಟವಾಗುವ ನಿರೀಕ್ಷೆ ಇದೆ. ಈ ಸಲದ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ಮತ್ತು ಹೈದರಾಬಾದ್ ತಂಡಗಳು ಮುಖಾಮುಖಿ ಆಗುತ್ತಿದ್ದು, ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಆತಿಥ್ಯ ವಹಿಸಿಕೊಳ್ಳುತ್ತಿದೆ.

ಕಳೆದ ವರ್ಷ ಜೂನ್ 4ರಂದು ಆರ್‌ಸಿಬಿ ತಂಡದ ಟ್ರೋಫಿ ಸಂಭ್ರಮಾಚರಣೆ ವೇಳೆ ಕ್ರೀಡಾಂಗಣದಲ್ಲಿ ಸಂಭವಿಸಿದ ಭೀಕರ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟು, ಹಲವಾರು ಮಂದಿ ಗಾಯಗೊಂಡಿದ್ದರು. ಆ ದುರಂತದ ಬಳಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಎಲ್ಲ ರೀತಿಯ ಕ್ರಿಕೆಟ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾ ಗಿತ್ತು.

ಕೈತಪ್ಪಿದ ಪಂದ್ಯಗಳು: ದುಲೀಪ್ ಟ್ರೋಫಿ, ಭಾರತ: ಎ-ದ.ಆಫ್ರಿಕಾ: ಎ ಸರಣಿ, ವಿಜಯ್ ಹಜಾರೆ ಟ್ರೋಫಿ ಮತ್ತು 2025ರ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯಗಳೆಲ್ಲವೂ ಚಿನ್ನಸ್ವಾಮಿ ಮೈದಾನ ದಿಂದ ಕೈತಪ್ಪಿ ಹೋಗಿದ್ದವು.

ಕೆಎಸ್‌ಸಿಎ ಧನ್ಯವಾದ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳಿಗೆ ಅವಕಾಶ ನೀಡಿದ ರಾಜ್ಯ ಸರಕಾರದ ನಿರ್ಧಾರಕ್ಕೆ ಪ್ರತಿಕ್ರಿಯಿಸಿದ ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ, 'ವೆಂಕಟೇಶ್ ಪ್ರಸಾದ್ ನೇತೃತ್ವದಲ್ಲಿ ಕೆಎಸ್‌ಸಿಎ ತಂಡವು ಸರಕಾರದ ವಿವಿಧ ಇಲಾಖೆಗಳು ಮತ್ತು ಶಾಸನಬದ್ಧ ಪ್ರಾಧಿಕಾರಗಳೊಂದಿಗೆ ನಿರಂತರವಾಗಿ ಕಾರ್ಯನಿರ್ವಹಿಸಿದೆ. ಐಪಿಎಲ್ ಪಂದ್ಯ ಗಳನ್ನು ಅತ್ಯಂತ ಸುರಕ್ಷಿತವಾಗಿ ಮತ್ತು ವೃತ್ತಿಪರ ವಾಗಿ ಆಯೋಜಿಸಲು ಆರ್‌ಸಿಬಿ ತಂಡಕ್ಕೆ ನಾವು ಸಂಪೂರ್ಣ ಸಹಕಾರ ನೀಡಲಿದ್ದೇವೆ. ಕ್ರಿಕೆಟ್ ಅಭಿಮಾನಿಗಳಿಗೆ ಇದೊಂದು ಸ್ಮರಣೀಯ ಅನುಭವವಾಗಿರಲಿದೆ. ರಾಜ್ಯ ಸರಕಾರದ ಸಿಎಂ, ಡಿಸಿಎಂ ಮತ್ತು ಗೃಹ ಸಚಿವರಿಗೆ ಧನ್ಯವಾದಗಳು' ಎಂದಿದ್ದಾರೆ.

ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ಆಯೋಜನೆ | ಕ್ರೀಡಾಜ್ಯೋತಿ ಬೆಳಗುವ ಮೂಲಕ ಉದ್ಘಾಟನೆ

ವಿಶೇಷ ಚೇತನರ ಅಥ್ಲೆಟಿಕ್ಸ್‌ಗೆ ಚಾಲನೆ

ಮಡಿಕೇರಿ: ಬದುಕಿನ ಸಣ್ಣ ಪುಟ್ಟ ಅಂಶಗಳಲ್ಲೂ ಸಂತಸವನ್ನು ಕಾಣುವ ಮನೋಭಾವವನ್ನು ನಾವಿಂದು ಮರೆಯುತ್ತಿದ್ದರೂ, ವಿಶೇಷ ಚೇತನರು ತಮ್ಮ ಯಾವುದೇ ತಪ್ಪುಗಳ ಬಗ್ಗೆಯೂ ಯೋಚಿಸದೆ, ಪ್ರತಿಯೊಂದು ವಿಚಾರದಲ್ಲೂ ಸಂತೋಷವನ್ನು ಕಾಣುತ್ತಿದ್ದಾರೆಂದು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ಅಭಿಪ್ರಾಯಪಟ್ಟರು.

ಸುಂಟಿಕೊಪ್ಪದ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರ ಸ್ವಸ್ಥ ಸಂಸ್ಥೆಯ ವತಿಯಿಂದ ನಗರದ ಜನರಲ್ ಕೆ.ಎಸ್. ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿತ ರಾಜ್ಯ ಮಟ್ಟದ ವಿಶೇಷ ಚೇತನರ ಅಥ್ಲೆಟಿಕ್ಸ್‌ನ ಕ್ರೀಡಾ ಜ್ಯೋತಿಯನ್ನು ಬೆಳಗುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡಾ ಚಟುವಟಿಕೆ ಎನ್ನುವುದು ನಾನು ಮತ್ತು ನನ್ನದು ಎನ್ನುವ ವಿಚಾರಗಳನ್ನು ಮೀರಿ ನಾವು ಎನ್ನುವ ಭಾವವನ್ನು ಮೂಡಿಸಿ, ಒಂದು ತಂಡವಾಗಿ ಬೆರೆಯುವ, ಪರಸ್ಪರರನ್ನು ಅರಿತುಕೊಳ್ಳುವ, ಒಗ್ಗೂಡುವ ಮನೋಭಾವವನ್ನು ಮೂಡಿಸುತ್ತದೆ, ಮಾತ್ರವಲ್ಲ ಬದುಕಿಗೊಂದು ಅರ್ಥವನ್ನು ನೀಡುತ್ತದೆಂದು ನುಡಿದರು.

ಕೂರ್ಗ್ ಫೌಂಡೇಷನ್‌ನ ಟ್ರಸ್ಟಿಗಳು ಹಾಗೂ ಸ್ವಸ್ಥ ಸಂಸ್ಥೆಯ ಸ್ಥಾಪಕರಾದ ಗಂಗಾ ಚಂಗಪ್ಪ ಮಾತನಾಡಿ, ವಿಶೇಷ ಚೇತನ ಮಕ್ಕಳು ಇಂದು ಅತ್ಯಂತ ಉತ್ಸಾಹದಿಂದ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿ, ಇದಕ್ಕೆ ಪೋಷಕರ ಪ್ರೋತ್ಸಾಹವೇ ಕಾರಣವೆಂದು ಹೇಳಿದರು.

ಟಾಟಾ ಕಾಫಿ ಸಂಸ್ಥೆಯ ಸೀನಿಯರ್ ಜನರಲ್ ಮೇನೇಜರ್ ಕೆ.ಜಿ. ರಾಜೀವ್ ಇದೇ ಸಂದರ್ಭದಲ್ಲಿ ಮಾತನಾಡಿದರು. ಹಿರಿಯ ಕಾಫಿ ಬೆಳೆಗಾರರಾದ ಬೋಸ್ ಮಂದಣ್ಣ, ಬೈಲುಕುಪ್ಪೆಯ ಬೋಧಿಸತ್ವ ಸಂಘಟನೆಯ ಅಧ್ಯಕ್ಷರಾದ ಕರ್ಮ ರಿಂಪೋಚಿ ಕ್ರೀಡಾಕೂಟಕ್ಕೆ ಶುಭ ಕೋರಿದರು. ಕ್ರೀಡಾ ಚಟುವಟಿಕೆಗಳಲ್ಲಿ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿರುವ ವಿಶೇಷ ಚೇತನರಾದ ದರ್ಶನ್ ವೈ.ಎಂ ಮತ್ತು ಸಂಗೀತ ಬಿ.ಎಂ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕೊಡಗು ಎಸ್.ಪಿ. ಆರ್.ಎನ್. ಬಿಂದುಮಣಿ ರಾಜ್ಯಮಟ್ಟದ ವಿಶೇಷ ಚೇತನರ ಅಥ್ಲೆಟಿಕ್ಸ್ ಉದ್ಘಾಟಿಸಿದರು.

ಬಾಂಗ್ಲಾ ವಿರುದ್ಧ ಪಾಕ್ ದೂರು

ಢಾಕಾ: ಬಾಂಗ್ಲಾದೇಶ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯನ್ನು ಪಾಕಿಸ್ತಾನ ತಂಡ 1-2 ಅಂತರದಿಂದ ಸೋತ ಬೆನ್ನಲ್ಲೇ ಪಾಕ್ ತಂಡವು ಮ್ಯಾಚ್ ರೆಫರಿ ನೀಯಮೂರ್ ರಶೀದ್ ಅವರಿಗೆ ಅಧಿಕೃತ ದೂರು ನೀಡಿದ್ದಾರೆ. ಈ ದೂರಿನಲ್ಲಿ ಬಾಂಗ್ಲಾದೇಶ ತಂಡವು ರಿವ್ಯೂ ತೆಗೆದುಕೊಳ್ಳಲು ನಿಗದಿತ ಮಿತಿಗಿಂತ ಹೆಚ್ಚು ಸಮಯ ತೆಗೆದುಕೊಂಡಿದೆ ಎಂದು ಆರೋಪಿಸಿದೆ.

ಮಾರ್ಚ್ 15ರಂದು ಢಾಕಾದಲ್ಲಿ ನಡೆದ ಬಾಂಗ್ಲಾದೇಶ ವಿರುದ್ಧದ ಪಂದ್ಯದ ಕೊನೆಯ ಓವರ್‌ನಲ್ಲಿ ಪಾಕಿಸ್ತಾನಕ್ಕೆ ಗೆಲ್ಲಲು 2 ಎಸೆತಗಳಲ್ಲಿ 12 ರನ್‌ಗಳ ಅಗತ್ಯವಿತ್ತು. ಈ ವೇಳೆ ಬೌಲರ್ ರಿಶಾದ್ ಹೊಸೈನ್ ಎಸೆದ 5ನೇ ಎಸೆತವನ್ನು ಅಂಪೈರ್ ಕುಮಾರ್ ಧರ್ಮಸೇನ ವೈಡ್ ಎಂದು ಘೋಷಿಸಿದ್ದರು. ವೈಡ್ ಎಂದು ಘೋಷಿಸಿದರೂ ಬಾಂಗ್ಲಾದೇಶ ತಂಡವು ಎಲ್‌ಬಿಡಬ್ಲ್ಯೂಗಾಗಿ ರಿವ್ಯೂ ತೆಗೆದುಕೊಂಡಿತು. ಈ ವೇಳೆ ಚೆಂಡು ಪ್ಯಾಡ್‌ಗೆ ತಗುಲಿರುವುದು ಕಂಡುಬಂದಿದೆ. ಇದಾಗ್ಯೂ ಶಾಹೀನ್ ಶಾ ಅಫ್ರಿದಿ ಎಲ್‌ಬಿಡಬ್ಲ್ಯೂ ಆಗಿರಲಿಲ್ಲ, ಹೀಗಾಗಿ ವೈಡ್ ಅನ್ನು ಹಿಂಪಡೆದು ಫೀಲ್ಡ್ ಅಂಪೈರ್ ನಾಟೌಟ್ ಎಂದು ತೀರ್ಪು ನೀಡಿದ್ದರು.ಈ ರಿವ್ಯೂ ತೆಗೆದುಕೊಳ್ಳಲು ಬಾಂಗ್ಲಾದೇಶ ತಂಡದ ನಾಯಕ ಹೆಚ್ಚಿನ ಸಮಯ ತೆಗೆದುಕೊಂಡಿದ್ದಾರೆ ಎಂದು ಪಾಕಿಸ್ತಾನ ಆರೋಪಿಸಿದೆ. ಐಸಿಸಿ ನಿಯಮದ ಪ್ರಕಾರ ರಿವ್ಯೂ ಕೇಳಲು ಕೇವಲ 15 ಸೆಕೆಂಡುಗಳ ಕಾಲಾವಕಾಶವಿರುತ್ತದೆ. ಆದರೆ ಬಾಂಗ್ಲಾದೇಶ ಈ ಮಿತಿಗಿಂತ ಹೆಚ್ಚು ಸಮಯ ತೆಗೆದುಕೊಂಡಿದೆ. ಕ್ರೀಡಾಂಗಣದ ಬಿಗ್‌ಸ್ಕ್ರೀನ್ ಮೇಲೆ ರಿಪ್ಲೇ ನೋಡಿದ ನಂತರವೇ ಬಾಂಗ್ಲಾದೇಶ ತಂಡದ ನಾಯಕ ಮೆಹದಿ ಹಸನ್ ಮಿರಾಝ್ ರಿವ್ಯೂ ನಿರ್ಧಾರ ಮಾಡಿದ್ದಾರೆ, ಇದು ನಿಯಮಬಾಹಿರ ಎಂದು ಪಾಕಿಸ್ತಾನ ಆರೋಪಿಸಿದೆ. ಈ ಬಗ್ಗೆ ಮ್ಯಾಚ್ ರೆಫರಿ ನೀಯಮೂರ್ ರಶೀದ್ ಅವರಿಗೆ ಅಧಿಕೃತ ದೂರು ನೀಡಿ ಬಾಂಗ್ಲಾದೇಶ ತಂಡದ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನ್ ತಂಡ ಆಗ್ರಹಿಸಿದೆ.

ತಿಂಗಳ ಆಟಗಾರ ಪ್ರಶಸ್ತಿ: ಭಾರತೀಯರಿಗಿಲ್ಲ ಸ್ಥಾನ

ದುಬೈ: ಭಾರತ ತಂಡ ತನ್ನ ತವರು ನೆಲದಲ್ಲಿ ಟಿ20 ವಿಶ್ವಕಪ್ ಗೆದ್ದಿದ್ದರೂ, ಫೆಬ್ರವರಿ ತಿಂಗಳ ಐಸಿಸಿ ಆಟಗಾರ ಪ್ರಶಸ್ತಿಗೆ ಯಾವುದೇ ಭಾರತೀಯ ಕ್ರಿಕೆಟಿಗರೂ ನಾಮನಿರ್ದೇಶನಗೊಂಡಿಲ್ಲ. ಗೆಲುವಿನ ನಂತರ, ಇಶಾನ್ ಕಿಶನ್, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ ಮತ್ತು ಜಸ್ಪ್ರೀತ್ ಬುಮ್ರಾ ಅವರನ್ನು ಐಸಿಸಿಯ ಟೂರ್ನಮೆಂಟ್ ತಂಡದಲ್ಲಿ ಹೆಸರಿಸಲಾಯಿತು. ಆದರೆ ಅವರಲ್ಲಿ ಯಾರೂ ಫೆಬ್ರವರಿ ತಿಂಗಳ ಆಟಗಾರ ಪ್ರಶಸ್ತಿಗೆ ಆಯ್ಕೆಯಾಗಲಿಲ್ಲ. ಪಾಕಿಸ್ತಾನದ ಸಾಹಿಬ್ಜಾದಾ ಫರ್ಹಾನ್, ಇಂಗ್ಲೆಂಡ್‌ನ ವಿಲ್ ಜ್ಯಾಕ್ಸ್ ಮತ್ತು ಅಮೆರಿಕದ ಶಾಡ್ಲಿ ವ್ಯಾನ್ ಶಾಲ್ಕ್‌ವಿಕ್ ನಾಮನಿರ್ದೇಶನಗೊಂಡಿದ್ದಾರೆ.

ಫರ್ಹಾನ್ 160.25 ಸ್ಟ್ರೈಕ್‌ರೇಟ್ ಮತ್ತು 76.60ರ ಸರಾಸರಿಯಲ್ಲಿ 383 ರನ್ ಗಳಿಸುವ ಮೂಲಕ ಟೂರ್ನಮೆಂಟ್‌ನ ಅತೀ ಹೆಚ್ಚು ರನ್ ಗಳಿಸಿದ ಆಟಗಾರನಾಗಿ ಸ್ಥಾನ ಪಡೆದು, ವಿರಾಟ್ ಕೊಹ್ಲಿ ಅವರ ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ದಾಖಲೆಯನ್ನು ಮುರಿದಿದ್ದಾರೆ. ಪುರುಷರ ಟಿ20 ವಿಶ್ವಕಪ್‌ನಲ್ಲಿ ಎರಡು ಶತಕಗಳನ್ನು ಗಳಿಸಿದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಇಂಗ್ಲೆಂಡ್ ತಂಡ ಸೆಮಿಫೈನಲ್ ತಲುಪುವಲ್ಲಿ ಜ್ಯಾಕ್ಸ್ ಪ್ರಮುಖ ಪಾತ್ರ ವಹಿಸಿದರು, 173.21 ಸ್ಟ್ರೈಕ್‌ರೇಟ್‌ನಲ್ಲಿ 194 ರನ್ ಗಳಿಸಿದರಲ್ಲದೆ, 11 ವಿಕೆಟ್‌ಗಳನ್ನು ಪಡೆದರು. ಆಲ್‌ರೌಂಡ್ ಪ್ರದರ್ಶನದಿಂದಾಗಿ ಒಂದೇ ಆವೃತ್ತಿಯಲ್ಲಿ 4 ಪಂದ್ಯಶ್ರೇಷ್ಠ ಪ್ರಶಸ್ತಿಗಳನ್ನು ಗೆದ್ದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ವಿಟಾಕೀಸ್

ವೆಬ್‌ಸೀರೀಸ್ ಅಂಗಳದಲ್ಲಿ ಡಾಲಿ

ಪರಭಾಷೆಯಂತೆಯೇ ಕನ್ನಡದಲ್ಲಿಯೂ ಹಲವು ವೆಬ್ ಸೀರೀಸ್‌ಗಳು ಮೂಡಿಬರುತ್ತಿವೆ. ಪ್ರೇಕ್ಷಕರನ್ನು ಸೆಳೆಯುತ್ತಿವೆ. ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಈಗಾಗಲೇ ಮಾರಿಗಲ್ಲು ಎಂಬ ಅದ್ಭುತ ವೆಬ್ ಸರಣಿಯನ್ನು ನಿರ್ಮಾಣ ಮಾಡಿದ್ದಾರೆ. ಇದು ಕಂದಂಬರ ಕಾಲದ ನಿಧಿಯನ್ನು ಹುಡುಕುವ ಥ್ರಿಲ್ಲರ್ ಸ್ಟೋರಿಯನ್ನು ಒಳಗೊಂಡಿದೆ. ಇದರ ಜತೆಗೆ ಮತ್ತಷ್ಟು ಕಥೆಗಳನ್ನು ಕೇಳಿದ್ದಾರೆ. ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ವೇದಿಕೆ ಕಲ್ಪಿಸಿದ್ದಾರೆ. ಅಂತೆಯೇ ನಿರ್ದೇಶಕ ತರುಣ್ ಸುಧೀರ್, ರಾಕ್ಷಸ ವೆಬ್ ಸರಣಿಯನ್ನು ನಿರ್ಮಾಣ ಮಾಡಿ ಸೈ ಎನಿಸಿ ಕೊಂಡಿದ್ದಾರೆ. ರಾಕ್ಷಸ ವೆಬ್ ಸೀರೀಸ್ ಪ್ರೇಕ್ಷಕರನ್ನು ಸೆಳೆದಿದ್ದು, ಇಂದಿಗೂ ಟ್ರೆಂಡಿಂಗ್‌ನಲ್ಲಿದೆ. ಈಗ ಡಾಲಿ ಧನಂಜಯ ಕೂಡ ವೆಬ್ ಸರಣಿಗೆ ಎಂಟ್ರಿಕೊಟ್ಟಿದ್ದಾರೆ. ಅದು ನಿರ್ಮಾಪಕರಾಗಿ. ಹೌದು ಈಗಾಗಲೇ ಕನ್ನಡದಲ್ಲಿ ಹಲವು ಸಿನಿಮಾಗಳನ್ನು ನಿರ್ಮಿಸಿ ಯಶಸ್ವಿಯಾಗಿರುವ ಡಾಲಿ ಧನಂಜಯ ಈಗ ವೆಬ್ ಸೀರೀಸ್ ಅಂಗಳಕ್ಕೂ ಎಂಟ್ರಿಕೊಟ್ಟಿರು ವುದು ಖುಷಿಕೊಟ್ಟಿದೆ. ಡಾಲಿ ನಿರ್ಮಿಸುತ್ತಿರುವ ವೆಬ್ ಸರಣಿಯ ಪ್ರೋಮೊ ರಿಲೀಸ್ ಆಗಿದೆ. ಅದ ರಲ್ಲಿ ಇದು ಬರೀ ತಾಯ್ತ ಅಲ್ಲ ಕಲಾ, ಪಕ್ಕಾ ಹಣೆ ಬರನೇ ಬದ್ಲಾಯಿಸಂಗ್ ಅದೇ, ವಸಿ ನೋಡುರ್ಲಾ.. ಎಂಬ ಅಪ್ಪಟ ಹಳ್ಳಿ ಸೊಗಡಿನ ಸಾಲುಗಳು ಗಮನಸೆಳೆಯುತ್ತವೆ. ಇದನ್ನು ಗಮನಿಸಿ ದರೆ ಇದು ಕಾಮಿಡಿ ಜತೆಗೆ ಹಾರರ್, ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬರಲಿದೆ ಎಂಬ ಕುತೂಹಲ ಏದೆ. ಪ್ರೋಮೊದಲ್ಲಿ ತಾಯತ ಕಾಣಿಸಿರುವುದರಿಂದ ಈ ವೆಬ್ ಸರಣಿ ತಾಯತ ಎಂಬ ಶೀರ್ಷಿಕೆ ಯಲ್ಲಿಯೇ ಮೂಡಿಬರಲಿದೆಯೆ ಎಂಬ ಕುತೂ ಹಲವೂ ಇದೆ. ಅದಕ್ಕೆ ಇನ್ನೂ ಉತ್ತರ ಸಿಗಬೇಕಿದೆ. ಒಟ್ಟಾರೆ ಕನ್ನಡದಲ್ಲಿಯೂ ಒಳ್ಳೆಯ ಕಥೆಯನ್ನು ಒಳಗೊಂಡ ವೆಬ್ ಸೀರೀಸ್‌ಗಳು ನಿರ್ಮಾಣವಾಗುತ್ತಿ ರುವುದು ಖುಷಿಕೊಟ್ಟಿದೆ.

ಲವ್ ಮಾಕ್ಟೇಲ್‌ನ ಮುದ್ದು ಮಗಳೆ

ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶನ ಮಾಡಿರುವ ಲವ್ ಮಾಕ್ಟೇಲ್ 3 ಯುಗಾದಿ ಹಬ್ಬದಂದು ತೆರೆಗೆ ಬರಲಿದೆ. ಇತ್ತೀಚೆಗೆ ಟ್ರೇಲರ್ ಬಿಡುಗಡೆ ಮಾಡಿದ್ದ ಚಿತ್ರತಂಡ ಮುದ್ದು ಮಗಳೇ... ಎಂಬ ಲಿರಿಕಲ್ ವೀಡಿಯೊ ಸಾಂಗ್ ಬಿಡುಗಡೆ ಮಾಡಿದ್ದು, ಸಿನಿಮಾದ ಬಗ್ಗೆ ಮತ್ತಷ್ಟು ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಅಪ್ಪ ಮಗಳ ಬಾಂಧವ್ಯ ಸಾರುವ ಸಾಹಿತ್ಯ, ಅದಕ್ಕೊಪ್ಪುವ ಸಂಗೀತದ ಮೂಲಕ ಈ ಹಾಡು ಸಂಗೀತ ಪ್ರಿಯರನ್ನು ಸೆಳೆದಿದೆ. ನಕ್ಕರೂ ಚೆಂದ ಅತ್ತರೂ.. ಚೆಂದ ಮುದ್ದಾದ ಬಂಧ.. ಈ ನನ್ನ ಕಂದ.. ಎಂಬ ಮಮತೆಯ ಸಾಲುಗಳಿರುವ ಈ ಹಾಡಿಗೆ ಅರುಣ್ ನಾಯಕ್ ಸಾಹಿತ್ಯ ಬರೆದಿದ್ದು, ನಕುಲ್ ಅಭಯಂಕರ್ ಸಂಗೀತ ಸಂಯೋಜಿಸಿದ್ದಾರೆ. ಖ್ಯಾತ ಗಾಯಕ ವಿಜಯ್ ಪ್ರಕಾಶ್ ದನಿಯಲ್ಲಿ ಈ ಹಾಡು ಮಧುರವಾಗಿ ಮೂಡಿಬಂದಿದೆ. ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳಲ್ಲಿಯೂ ನಕುಲ್ ಅಭಯಂಕರ್ ಸಂಗೀತ ಮೋಡಿ ಮಾಡಿದೆ. ಈ ಹಾಡು ಒಟ್ಟಾರೆ ಕಥೆಯ ಸೂಕ್ಷ್ಮ ಬಿಂದುವೊಂದನ್ನು ಪ್ರೇಕ್ಷಕರಿಗೆ ಮನ ಮುಟ್ಟುವಂತೆ ಸಾರಿದೆ. ಲವ್ ಮಾಕ್ಟೇಲ್ 1, ಹಾಗೂ ಲವ್ ಮಾಕ್ಟೇಲ್ 2 ಸಿನಿಮಾದ ಯಶಸ್ಸಿನ ಬಳಿಕ ಈಗ ಲವ್ ಮಾಕ್ಟೇಲ್ 3 ಮೂಡಿಬರುತ್ತಿದ್ದು, ಈ ಚಿತ್ರವೂ ಸೂಪರ್ ಹಿಟ್ ಆಗುವ ನಿರೀಕ್ಷೆ ಇದೆ. ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿದ್ದು, ಮಿಲನಾ ನಾಗರಾಜ್, ಸಂವೃತಾ, ಅಮೃತಾ ಅಯ್ಯಂಗಾರ್ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ದಿಲೀಪ್ ರಾಜ್, ಶ್ವೇತಾ ಪ್ರಸಾದ್, ರಚೆಲ್ ಡೇವಿಡ್, ನಯೇರಾ, ಜಗದೀಶ್, ಅಭಿಲಾಶ್, ಗಿರಿರಾಜ್, ದಳಪತಿ ಮುಂತಾದವರು ತಾರಾಗಣದಲ್ಲಿದ್ದಾರೆ. ಕ್ರಿಸ್‌ಮಿ ಬ್ಯಾನರಿನಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಶ್ರೀಕ್ರೇಜಿ ಮೈಂಡ್ಸ್ ಛಾಯಾಗ್ರಹಣ ಮತ್ತು ಸಂಕಲನ, ನಕುಲ್ ಅಭಯಂಕರ್ ಸಂಗೀತ ನಿರ್ದೇಶನ, ಅಮರ್ ಮತ್ತು ಜೋನಾ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಅಪ್ಪು ಹುಟ್ಟುಹಬ್ಬದ ಸಂಭ್ರಮ

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಮ್ಮನ್ನೆಲ್ಲಾ ಅಗಲಿ ಐದು ವರ್ಷಗಳೇ ಕಳೆದಿವೆ. ಪ್ರೀತಿಯ ಅಪ್ಪು ನಮ್ಮೊಂದಿಗಿಲ್ಲ ಎಂಬ ಕೊರಗು ಎಲ್ಲರಲ್ಲಿಯೂ ಇದೆ. ಆದರೆ ಅಪ್ಪು ಎಲ್ಲಿಯೂ ಹೋಗಿಲ್ಲ, ಪ್ರತಿ ಅಭಿಮಾನಿಯ ಹೃದಯದಲ್ಲಿ ಚಿರಸ್ಥಾಯಿಯಾಗಿ ನೆಲೆಸಿದ್ದಾರೆ. ಮಾರ್ಚ್ 17 ರಂದು ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬ ಸಂಭ್ರಮ. ಅಪ್ಪು ಬರ್ತ್‌ಡೇಯನ್ನು ಸಂಭ್ರಮದಿಂದ ಆಚರಿಸಲು ಅಭಿಮಾನಿಗಳು ಸಿದ್ಧತೆ ನಡೆಸಿದ್ದಾರೆ. ಹುಟ್ಟು ಹಬ್ಬದ ದಿನ ಕಂಠೀರವ ಸ್ಟುಡಿಯೊದಲ್ಲಿರುವ ಅಪ್ಪು ಸಮಾಧಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ನೆರವೇರಿಸಲಾಗುತ್ತದೆ. ಜತೆಗೆ ಅನ್ನದಾನ, ನೇತ್ರದಾನ, ರಕ್ತದಾನ ಹೀಗೆ ಹಲವು ಸಮಾಜಮುಖಿ ಕಾರ್ಯಗಳು ಕೂಡ ನೆರವೇರಲಿವೆ. ಅಪ್ಪು ಅಭಿನಯದ ಸಿನಿಮಾಗಳು ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ಅವರ ಚಿತ್ರಗಳು ಇಂದಿಗೂ ಗೋಲ್ಡನ್ ಸಿನಿಮಾಗಳ ಸಾಲಿನಲ್ಲಿ ಸೇರಿವೆ. ಹಾಗಾಗಿ ಪುನೀತ್ ರಾಜ್‌ಕುಮಾರ್ ಅಭಿನಯದ ಸಿನಿಮಾಗಳನ್ನು ರೀ ರಿಲೀಸ್ ಮಾಡಬೇಕು ಎಂಬ ಒತ್ತಾಯ ಅಭಿಮಾನಿಗಳಲ್ಲಿದೆ. ಅಂತೆಯೇ ಕಳೆದ ವಾರ ಅಪ್ಪು ಅಭಿನಯದ ಆಕಾಶ್ ಚಿತ್ರ ತೆರೆಗೆ ಬಂದಿತ್ತು. ಈ ಸಿನಿಮಾ ಹೌಸ್ ಫುಲ್ ಪ್ರದರ್ಶನ ಕಂಡಿತ್ತು. ರಾಘವೇಂದ್ರ ರಾಜ್‌ಕುಮಾರ್, ರಮ್ಯಾ ಹೀಗೆ ಹಲವರು ಆಕಾಶ್ ಚಿತ್ರವನ್ನು ನೋಡಿ ಸಂತಸಗೊಂಡಿದ್ದರು. ಹಾಗಾಗಿ ಮುಂದಿನ ವಾರ ಪುನೀತ್ ರಾಜ್‌ಕುಮಾರ್ ಅವರು ಅಭಿನಯಿಸಿರುವ ಮತ್ತಷ್ಟು ಸಿನಿಮಾಗಳು ತೆರೆಗೆ ಬರಲಿವೆ. ಪುನೀತ್ ರಾಜ್‌ಕುಮಾರ್ ನಟನೆಯ ಜತೆಗೆ ಸಿನಿಮಾ ನಿರ್ಮಾಣದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಪ್ಪು, ತಮ್ಮ ಪಿಆರ್‌ಕೆ ನಿರ್ಮಾಣ ಸಂಸ್ಥೆಯಲ್ಲಿ ಕವಲು ದಾರಿ ಸೇರಿದಂತೆ ಹಲವು ಹಿಟ್ ಸಿನಿಮಾಗಳನ್ನು ನಿರ್ಮಿಸಿದ್ದರು. ಆ ಮೂಲಕ ಹೊಸ ಪ್ರತಿಭೆಗಳಿಗೂ ವೇದಿಕೆ ಕಲ್ಪಿಸಿದ್ದರು.

ಮ್ಯಾರೇಜ್ ಪಾರ್ಟಿಯಲ್ಲಿ ಕಾಮಿಡಿ ಕಿಕ್

ಅಧಿಪತ್ರ ಚಿತ್ರದ ಮೂಲಕ ನಿರ್ದೇಶನಾಗಿ ಗುರುತಿಸಿಕೊಂಡ ಚಯನ್ ಶೆಟ್ಟಿ, ಸ್ಯಾಂಡಲ್‌ವುಡ್‌ನಲ್ಲಿ ಭರವಸೆ ಮೂಡಿಸಿದ್ದಾರೆ. ತಮ್ಮ ಚೊಚ್ಚಲ ಚಿತ್ರಕ್ಕೆ ಸಿಕ್ಕ ಪ್ರಶಂಸೆಯ ಬಳಿಕ ಮತ್ತೊಂದು ಮನರಂಜನಾತ್ಮಕ ಕಥೆಯೊಂದಿಗೆ ಬರುತ್ತಿದ್ದಾರೆ. ಈ ಬಾರಿ ಮ್ಯಾರೇಜ್ ಪಾರ್ಟಿಯ ಸಾರಥ್ಯ ವಹಿಸಿಕೊಂಡಿದ್ದಾರೆ. ಮ್ಯಾರೇಜ್ ಪಾರ್ಟಿಯ ಮೊದಲ ಹಂತದ ಚಿತ್ರೀಕರಣ ಸದ್ದಿಲ್ಲದೆ ಮುಕ್ತಾಯವಾಗಿದೆ. ಮ್ಯಾರೇಜ್ ಪಾರ್ಟಿ ಹಾಸ್ಯ ಪ್ರಧಾನ ಸಿನಿಮಾವಾಗಿದ್ದು, ಕಾಮಿಡಿ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶವೂ ಚಿತ್ರದಲ್ಲಿ ಅಡಕವಾಗಿದೆ. ಒಂದು ಊರಿನಲ್ಲಿ ನಡೆಯುವ ಘಟನೆಯನ್ನು ಆಧರಿಸಿ, ಅದರ ಸುತ್ತ ಹಾಸ್ಯ ಬೆರೆಸಿ ತೆರೆಗೆ ತರಲಾಗುತ್ತಿದೆ. ಮ್ಯಾರೇಜ್ ಪಾರ್ಟಿಯಲ್ಲಿ ಹಾಸ್ಯ ನಟರ ಬಳಗವೇ ಇದೆ. ಈ ಚಿತ್ರದಲ್ಲಿ ವಿನೀತ್ ಕುಮಾರ್ ನಾಯಕನಾಗಿ ನಟಿಸುತ್ತಿದ್ದಾರೆ. ಈಗಾಗಲೇ ಹಲವು ತುಳು ಸಿನಿಮಾಗಳಲ್ಲಿ ಅಭಿನಯಿಸಿರುವ ವಿನೀತ್, ಮ್ಯಾರೇಜ್ ಪಾರ್ಟಿಯ ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಲಿದ್ದಾರೆ. ಪ್ರಕಾಶ್ ತುಮ್ಮಿನಾಡು, ದೀಪಕ್ ರೈ, ನವೀನ್ ಡಿ ಪಡೀಲ್, ರಕ್ಷಿತಾ, ನಮಿತಾ ಕಿರಣ್, ರಾಮದಾಸ್, ರಘು ಪಾಂಡೇಶ್ವರ, ಪುಷ್ಪರಾಜ್ ಬೋಳಾರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಕುಂದಾಪುರದ ಸುತ್ತಮುತ್ತ ಮ್ಯಾರೇಜ್ ಪಾರ್ಟಿಯ ಚಿತ್ರೀಕರಣ ನಡೆಸಲಾಗುತ್ತಿದೆ. ಈಗಾಗಲೇ ಮೊದಲ ಹಂತದಲ್ಲಿ ಇಪ್ಪತ್ತು ದಿನಗಳ ಕಾಲ ಚಿತ್ರೀಕರಣ ನಡೆಸಿರುವ ಚಿತ್ರತಂಡ, 2ನೇ ಹಂತದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದೆ. ಮೂಲತಃ ಕುಂದಾಪುರದವರೇ ಆಗಿರುವ ನಿರ್ದೇಶಕ ಚಯನ್ ಶೆಟ್ಟಿ ತಮ್ಮೂರಿನಲ್ಲಿ ನಡೆ ಯುವ ಮಜವಾದ ಕಥೆಯೊಂದನ್ನು ಮ್ಯಾರೇಜ್ ಸ್ಟೋರಿ ಮೂಲಕ ಕಟ್ಟಿಕೊಡುತ್ತಿದ್ದಾರೆ. ವರಾಹಿ ಫಿಲಂಸ್ ಬ್ಯಾನರಿನಲ್ಲಿ ವಿ.ಸಂತೋಷ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಶ್ರೀಕಾಂತ್ ಛಾಯಾಗ್ರಹಣ, ರಿತ್ವಿಕ್ ಮುರಳೀ ಧರ್ ಸಂಗೀತ ನಿರ್ದೇಶನ, ಸು ಫ್ರಂ ಸೋ ಖ್ಯಾತಿಯ ನಿತಿನ್ ಶೆಟ್ಟಿ ಸಂಕಲನ ಈ ಚಿತ್ರಕ್ಕಿದೆ. ಪ್ರಮೋದ್ ಮರವಂತೆ ಮತ್ತು ತ್ರಿಲೋಕ್ ಚಿತ್ರದ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಮ್ಯಾರೇಜ್ ಪಾರ್ಟಿ ಕನ್ನಡದ ಜತೆಗೆ ಮಲೆಯಾಳಂನಲ್ಲಿಯೂ ನಿರ್ಮಾಣವಾಗುತ್ತಿದೆ.

ಬದಲಾಯ್ತು ಸಲ್ಲು ಚಿತ್ರದ ಟೈಟಲ್

ಸಲ್ಮಾನ್ ಖಾನ್ ಸಿಕಂದರ್ ಬಳಿಕ ಬ್ಯಾಟಲ್ ಆಫ್ ಗಲ್ವಾನ್ ಚಿತ್ರದ ಮೂಲಕ ತೆರೆಯಲ್ಲಿ ಅಬ್ಬರಿಸಲು ಸಿದ್ಧವಾಗಿದ್ದರು. ಇನ್ನೇನು ಸಿನಿಮಾ ಕೂಡ ತೆರೆಗೆ ಬರಲು ರೆಡಿಯಾಗಿತ್ತು. ಆದರೆ ಚಿತ್ರತಂಡ ಧಿಡೀರ್ ಅಂತ ಸಿನಿಮಾದ ಶೀರ್ಷಿಕೆಯನ್ನು ಬದಲಾಯಿಸಿದ್ದು, ಮಾತೃಭೂಮಿ ಎಂಬ ಟೈಟಲ್ ಇಟ್ಟಿದೆ. ಗಲ್ವಾನ್ ಸಂಘರ್ಷದ ಕುರಿತ ಕಥೆ ಚಿತ್ರದಲ್ಲಿತ್ತು. ಹಾಗಾಗಿ ಚಿತ್ರಕ್ಕೆ ಬ್ಯಾಟಲ್ ಆಫ್ ಗಲ್ವಾನ್ ಎಂಬ ಟೈಟಲ್ ಇಟ್ಟಿತ್ತು. ಆದರೀಗ ಅದನ್ನು ಬದಲಾಯಿಸಿ ಮಾತೃಭೂಮಿ ಎಂಬ ಶೀರ್ಷಿಕೆ ಇಟ್ಟಿದೆ. ಸದ್ಯ ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ಸಲ್ಲು ಮುಳ್ಳುಸುತ್ತಿರುವ ಕಂಬವನ್ನು ಕೈಯಿಂದ ತಡೆ ಹಿಡಿದಿದ್ದಾರೆ. ಅವರ ಕೈ ರಕ್ತಸಿಕ್ತವಾಗಿದೆ. ಇದನ್ನು ನೋಡಿದರೆ ಚಿತ್ರದಲ್ಲಿ ಆ್ಯಕ್ಷನ್‌ಗೆ ಹೆಚ್ಚು ಒತ್ತು ನೀಡಲಾಗಿದೆ ಎಂಬುದು ತಿಳಿಯುತ್ತದೆ. ಅಪೂರ್ವ ಲಖಿಯ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ.

ಈ ಚಿತ್ರದಲ್ಲಿ ಸಲ್ಮಾನ್ ಖಾನ್ ಜತೆಯಾಗಿ ಚಿತ್ರಾಂಗದಾ ಸಿಂಗ್, ಅಭಿಲಾಷ್ ಚೌದರಿ ಮುಂತಾದವರು ಅಭಿನಯಿಸಿದ್ದಾರೆ. ಸಲ್ಮಾನ್ ಖಾನ್ ಫಿಲಂಸ್ ಬ್ಯಾನರ್‌ನಲ್ಲಿ ಈ ಚಿತ್ರ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ.